ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಯುವ ಪತ್ನಿ ಶ್ರೀದೇವಿ ವಿರುದ್ಧ ಮಾನನಷ್ಟ ಖಟ್ಲೆ ದಾಖಲಿಸಿದ ಸಪ್ತಮಿ ಗೌಡ

ಯುವ ತಮ್ಮ ಪತ್ನಿಯಿಂದ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಪ್ರತಿಕ್ರಿಯಿಸಿದ್ದ ಪತ್ನಿ ಶ್ರೀದೇವಿ ಬೈರಪ್ಪ ಅವರು ಸಪ್ತಮಿ ಗೌಡರ ಹೆಸರು ಪ್ರಸ್ತಾಪಿಸಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಪ್ತಮಿ ಗೌಡ, ವಿನಾ ಕಾರಣ ತಮ್ಮ ಹೆಸರನ್ನು ಎಳೆದು ತರಲಾಗಿದೆ ಎಂದು ಆರೋಪಿಸಿ ಶ್ರೀದೇವಿ ಭೈರಪ್ಪ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಜತೆಗೆ ತಮ್ಮ ಹೆಸರು ಬಳಸದಂತೆ ನಿರ್ಬಂಧಕಾಜ್ಞೆ ಕೋರಿದ್ದರು. ಈ ಮನವಿಯನ್ನು ಪುರಸ್ಕರಿಸಿರುವ ನ್ಯಾಯಾಲಯ ನಿರ್ಬಂಧಕಾಜ್ಞೆ ನೀಡಿ ಆದೇಶ ಹೊರಡಿಸಿದ್ದು, ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದೆ.


### ಪುಟ ತೆರೆದಂತೆ...

ಬಿಜೆಪಿಗೆ ಬಲ ತುಂಬಿದ ಜೆಡಿಎಸ್
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ನಾಳಿನ ಗುಟ್ಟು ಬಿಟ್ಟುಕೊಡದ ರಹಸ್ಯದಲ್ಲಿ ಬದುಕಿನ ಮಜಾ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7


### ಮಾತಂದ್ರೆ ಮಾತು

ಕೇಂದ್ರೀಯ ಪಠ್ಯಪುಸ್ತಕಗಳ ಸಮಾಜಶಾಸ್ತ್ರ ವಿಭಾಗದಲ್ಲಿ ಇಂಡಿಯಾ ಬದಲಿಗೆ ಭಾರತ್ ಪದಬಳಕೆ ಬಗ್ಗೆ ಉನ್ನತಮಟ್ಟದ ಸಮಿತಿ ಶಿಫಾರಸ್ಸಿನ ಬಗ್ಗೆ ಈಗ ಚರ್ಚೆ ಅನಗತ್ಯ. ಸಂವಿಧಾನದ ಪ್ರಕಾರ ಎರಡೂ ಪದಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು. ನಾವು ಸಂವಿಧಾನವನ್ನು ಅನುಸರಿಸುತ್ತೇವೆ. ಇಂಡಿಯಾ ಮತ್ತು ಭಾರತ್ ಪದಗಳ ಬಗ್ಗೆ ನಮಗೆ ವಿರೋಧವೇನಿಲ್ಲ.

**ದಿನೇಶ್ ಪ್ರಸಾದ್ ಸಕ್ಲಾನಿ**
ಎನ್‌ಸಿಇಆರ್‌ಟಿಸಿ ನಿರ್ದೇಶಕ

### ದಾರಿದೀಪೋಕ್ತಿ

ನೀವು ಹಿಂದಕ್ಕೆ ಹೋಗಿ, ಆರಂಭವನ್ನು ಬದಲು ಮಾಡುವುದು ಸಾಧ್ಯವಿಲ್ಲ. ಆದರೆ ನೀವು ಇರುವಲ್ಲಿಂದಲೇ ಆರಂಭ ಮಾಡಿ, ಅಂತ್ಯವನ್ನು ಮಾರ್ಪಡಿಸುವುದು ಸಾಧ್ಯವಿದೆ. ವ್ಯರ್ಥವಾಗಿ ಹೋದ ದಿನಗಳ ಬಗ್ಗೆ ಕೊರಗದೇ, ನಮ್ಮ ಮುಂದಿನ ಬದುಕನ್ನು ಮಾರ್ಪಡಿಸಿಕೊಳ್ಳುವುದು ಜಾಣತನ.

### ವಕ್ರತುಂಡೋಕ್ತಿ

ಯಾವ ಪುಸ್ತಕದ ಕೆಲವು ಒಳ್ಳೆಯ ಸಾಲುಗಳನ್ನು ಪದೇ ಪದೇ ಓದಿ, ಇನ್ನುಳಿದ ಪುಟಗಳನ್ನು ಓದದೇ ಬಿಡುವುದಕ್ಕೆ ಉತ್ತಮ ಕೃತಿ ಎಂದು ಹೇಳಬಹುದು.

## ಬಿಜೆಪಿ ಪ್ರತಿಭಟನೆ ವೇಳೆ ಹೃದಯಾಘಾತದಿಂದ ಭಾನುಪ್ರಕಾಶ್ ಸಾವು



**ಶಿವಮೊಗ್ಗ:** ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರುದ್ಧ ಶಿವಮೊಗ್ಗದಲ್ಲಿ ಬಿಜೆಪಿ ಸೋಮವಾರ ಮಧ್ಯಾಹ್ನ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿಧಾನಪರಿಷತ್ತಿನ ಮಾಜಿ ಸದಸ್ಯ ಎಂ.ಬಿ.ಭಾನುಪ್ರಕಾಶ್ ಹಠಾತ್ತನೇ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿದ್ದಾರೆ. ಅವರಿಗೆ 69 ವರ್ಷ ವಯಸ್ಸಾಗಿತ್ತು. ಭಾನುಪ್ರಕಾಶ್‌ಗೆ ಪತ್ನಿ ಮತ್ತು ಪುತ್ರ ಇದ್ದಾರೆ.

## 4 ರಾಜ್ಯಗಳ ಚುನಾವಣಾ ಉಸ್ತುವಾರಿಗಳ ನೇಮಕ

**ನವದೆಹಲಿ:** ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ 4 ರಾಜ್ಯಗಳ ಉಸ್ತುವಾರಿಗಳಾಗಿ ಬಿಜೆಪಿ ಸೋಮವಾರ ನೇಮಕ ಮಾಡಿದೆ. ಭೂಪೇಂದ್ರ ಯಾದವ್ ಮಹಾರಾಷ್ಟ್ರದ ಉಸ್ತುವಾರಿಯಾಗಿದ್ದರೆ, ಅಶ್ವಿನಿ ವೈಷ್ಣವ್ ಸಹ ಉಸ್ತುವಾರಿಯಾಗಿದ್ದಾರೆ. ಹರ್ಯಾಣಕ್ಕೆ ಧರ್ಮೇಂದ್ರ ಪ್ರಧಾನ್ ಉಸ್ತುವಾರಿ-ತ್ರಿಪುರಾ ಬಿಪ್ಲವ್ ಕುಮಾರ್ ಸಹಉಸ್ತುವಾರಿ, ಜಾರ್ಖಂಡ್‌ಗೆ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಉಸ್ತುವಾರಿಯಾಗಿದ್ದಾರೆ.

### ಫನ್‌ತರಂಗ
- ರಘುಪತಿ ಶೃಂಗೇರಿ -

ದಕ್ಷಿಣ ಆಫ್ರಿಕಾದಲ್ಲಿ ಸಮ್ಮಿಶ್ರ ಸರ್ಕಾರ
ಸುದ್ದಿ

ಪೊಲೀಸರ ಖಡಕ್ ವಿಚಾರಣೆಗೆ ಕುಗ್ಗಿದ ಜಗ್ಗುದಾದ, ಸಹಾಯಕ್ಕಾಗಿ ದುಂಬಾಲು

ಸ್ಟೋನಿ ಬ್ರೂಕ್ ಪಬ್ ಪಾರ್ಟಿ: ದರ್ಶನ್ ಸಮ್ಮುಖದಲ್ಲಿಯೇ ನಟ ಚಿಕ್ಕಣ್ಣ ವಿಚಾರಣೆ

ಕರೆಂಟ್ ಶಾಕ್‌ಗೆ ಬಳಸಿದ ಮೆಗ್ಗರ್ ಪತ್ತೆ, ಸ್ವಾಮಿ ಮೊಬೈಲ್‌ಗೆ ಮುಂದುವರಿದ ಶೋಧ

# ಮಂಡಿಯೂರಿದ ಗಜ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಅಭಿಮಾನಿ ರೇಣುಕಾಸ್ವಾಮಿ ಬರ್ಬರ ಕೊಲೆ ಸಂಬಂಧ ದರ್ಶನ್ ಮತ್ತು ಸಂಗಡಿಗರ ವಿಚಾರಣೆ ಮುಂದುವರಿದಿದ್ದು, ಕಳೆದ ಎರಡು ವಾರದಿಂದ ಸತತ ವಿಚಾರಣೆ ಹಾಗೂ ದಿನದಿಂದ ದಿನಕ್ಕೆ ಸಾಕ್ಷಿಗಳು ಗಟ್ಟಿಯಾಗುತ್ತಿರುವ ಹಿನ್ನೆಲೆಯಲ್ಲಿ ಕುಗ್ಗಿ ಹೋಗಿರುವ ದರ್ಶನ್, ಪೊಲೀಸರ ಎದುರು ತನ್ನ ಕೃತ್ಯದ ಬಗ್ಗೆ 'ತಪ್ಪೊಪ್ಪಿಕೊಂಡಿದ್ದಾರೆ' ಎನ್ನಲಾಗಿದೆ. ಪೊಲೀಸ್ ಕಸ್ಟಡಿಯ ಆರಂಭದ ದಿನದಲ್ಲಿ 'ನನಗೇನು ಗೊತ್ತಿಲ್ಲ' ಎಂದು ಹೇಳುತ್ತಿದ್ದ ದರ್ಶನ್ ಇದೀಗ, ಪ್ರಕರಣದ ಉರುಳು ಗಟ್ಟಿಯಾಗುತ್ತಿದ್ದಂತೆ 'ಸಿಟ್ಟಿನಲ್ಲಿ ತಪ್ಪು ಮಾಡಿದ್ದೇನೆ' ಎಂದು ಅವಲತ್ತುಕೊಂಡಿದ್ದಾರೆ ಎನ್ನಲಾಗಿದೆ.

ಈ ಸಂಕೋಲೆಯಿಂದ ಹೊರ ಬರಲು ಸಹಾಯ ಮಾಡುವಂತೆ ಪೊಲೀಸ್ ಅಧಿಕಾರಿಗಳಿಗೆ ದರ್ಶನ್ ದುಂಬಾಲು ಬಿದ್ದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಮುಂಗೋಪದಿಂದ ತಪ್ಪು ಮಾಡಿಬಿಟ್ಟೆ. ಅನಗತ್ಯವಾಗಿ ನಾನು ಕೇಸಲ್ಲಿ ಸಿಕ್ಕಿಬಿದ್ದೆ. ಸ್ನೇಹಿತರನ್ನು ನಂಬಿ ನಾನು ಹಾಳಾದೆ' ಎಂದು ದರ್ಶನ್, ಪೊಲೀಸರ ಮುಂದೆ ಹೇಳುತ್ತಿರುವುದಾಗಿ ಉನ್ನತ ಮೂಲಗಳು ತಿಳಿಸಿದ್ದು, ಒಂದು ಹಂತದಲ್ಲಿ ವಿಚಾರಣೆ ನಡೆಸುತ್ತಿದ್ದ ಪೊಲೀಸರ ಕಾಲಿಗೆ ಬೀಳಲು ಮುಂದಾಗಿದ್ದರು ಎನ್ನಲಾಗಿದೆ.

ಈ ನಡುವೆ ಸೋಮವಾರವೂ ವಿಚಾರಣೆ ಮುಂದುವರಿದಿದ್ದು, ಕೊಲೆಗೆ ಮುನ್ನ ದರ್ಶನ್ ಮತ್ತು ಸಂಗಡಿಗರು ಪಾರ್ಟಿ ನಡೆಸಿದ ರಾಜರಾಜೇಶ್ವರಿ ನಗರದ ಸ್ಟೋನಿ ಬ್ರೂಕ್ ಪಬ್‌ಗೆ ತೆರಳಿ ಸ್ಥಳ ಮಹಜರು ಮಾಡಲಾಗಿದೆ. ಮತ್ತೊಬ್ಬ ಆರೋಪಿ ಧನರಾಜ್ ಮನೆಯಲ್ಲಿ ರೇಣುಕಾಸ್ವಾಮಿಗೆ ಶಾಕ್ ಕೊಡಲು ಬಳಸಿದ್ದ ಎಲೆಕ್ಟ್ರಿಕ್ ಮೆಗ್ಗರ್ ಅನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಆರೋಪಿಗಳು ರೇಣುಕಾಸ್ವಾಮಿಯ ಶವವನ್ನು ಬಿಸಾಡಿದ ಸುಮನಹಳ್ಳಿಯ ಚರಂಡಿ ಬಳಿ ಆತನ ಮೊಬೈಲ್ ಅನ್ನು ಎಸೆದಿದ್ದಾರೆ ಎನ್ನಲಾಗಿದ್ದು, ಮೊಬೈಲ್ ಪತ್ತೆಗೆ ಹುಡುಕಾಟ ಮುಂದುವರಿದಿದೆ.

→ 4

- ಮೂರ್ಛೆ ಹೋದ ರೇಣುಕಸ್ವಾಮಿಗೆ ಪ್ರಜ್ಞೆ ತರಿಸಲು ಕರೆಂಟ್ ಶಾಕ್
- ಸ್ಟೋನಿ ಬ್ರೂಕ್ ಪಬ್‌ನಲ್ಲಿ ಪಾರ್ಟಿ ಮಾಡುವಾಗಲೇ ಸಿದ್ಧವಾಗಿದ್ದ ಪ್ಲ್ಯಾನ್
- ಜೈಲು ಸೇರಿ ವಾರ ಕಳೆದರೂ, ನೋಡಲು ಬಾರದ ಕುಟುಂಬ ಸದಸ್ಯರು
- ದರ್ಶನ್ ಪರ ವಕೀಲರ ಜತೆ ವಿಜಯಲಕ್ಷ್ಮಿ ಮಾತುಕತೆ

### ಚಿಕ್ಕಣ್ಣನಿಗೆ ಸಂಕಷ್ಟ

ರೇಣುಕಾಸ್ವಾಮಿ ಕೊಲೆಯಾದ ದಿನ ಸ್ಟೋನಿ ಬ್ರೂಕ್ ಪಬ್‌ನಲ್ಲಿ ನಡೆದ ಪಾರ್ಟಿಯಲ್ಲಿ ಚಿಕ್ಕಣ್ಣ ಭಾಗವಹಿಸಿದ್ದ ಹಿನ್ನೆಲೆಯಲ್ಲಿ ಪೊಲೀಸರು, ಸೋಮವಾರ ಅವರನ್ನು ಕರೆಸಿ ಮಾಹಿತಿ ಸಂಗ್ರಹಿಸಿದ್ದಾರೆ.

### ಪಬ್‌ನಲ್ಲಿಯೇ ವಿಷಯ ತಿಳಿದ ದಾಸ

ಸ್ನೇಹಿತರೊಂದಿಗೆ ಪಾರ್ಟಿ ಮಾಡುತ್ತಿರುವಾಗಲೇ ಪಬ್‌ಗೆ ಆಗಮಿಸಿದ ಪವನ್, ರೇಣುಕಸ್ವಾಮಿಯನ್ನು ಕರೆದುಕೊಂಡು ಬಂದಿರುವ ವಿಷಯ ತಿಳಿಸಿದ್ದಾನೆ. ಈ ವೇಳೆ ಆತನನ್ನು ಶೆಡ್‌ನಲ್ಲಿ ಕೂಡಿಹಾಕಲು ದರ್ಶನ್ ಸೂಚನೆ ನೀಡಿದ್ದಾರೆ. ಪಬ್‌ನಿಂದ ಪವಿತ್ರಾಗೌಡ ಮನೆಗೆ ಹೋಗಿ, ವಾಪಸ್ ಶೆಡ್‌ಗೆ ಬರುವ ವೇಳೆಗಾಗಲೇ ದರ್ಶನ್ ಸಹಚರರು ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದರು. ದರ್ಶನ್ ಬರುತ್ತಿದ್ದಂತೆ ಪ್ರಜ್ಞೆ ತಪ್ಪಿದ್ದ ರೇಣುಕಾಸ್ವಾಮಿಯನ್ನು ಎಚ್ಚರಗೊಳಿಸಲು ಆರೋಪಿಗಳು ಕರೆಂಟ್ ಶಾಕ್ ಕೊಟ್ಟಿದ್ದರು ಎನ್ನಲಾಗಿದೆ.

ರೇಣುಕಸ್ವಾಮಿ ಕುಟುಂಬದಲ್ಲಿ, ಜನರಲ್ಲಿ, ಮಾಧ್ಯಮಗಳಲ್ಲಿ ಮತ್ತು ದರ್ಶನ್ ಅಭಿಮಾನಿಗಳಲ್ಲಿ ಏನೇನೋ ಆತಂಕ, ಅನುಮಾನಗಳು ಕಾಡುತ್ತಿದೆ. ಊಹಾ ಪೋಹಗಳು ಹುಟ್ಟಿಕೊಳ್ಳುತ್ತಿದೆ. ಆದ್ದರಿಂದ ಪ್ರಕರಣದ ವಿಚಾರಣೆಯ ವಿಡಿಯೊ ದಾಖಲೆಗಳನ್ನು ಪೊಲೀಸರು ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಹಂಚಿಕೊಳ್ಳಬೇಕು. ಪಾರದರ್ಶಕವಾಗಿ ವಿಚಾರಣೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಬೇಕು.
- **ಉಪೇಂದ್ರ**, ನಟ

ಚಿತ್ರದುರ್ಗದ ರೇಣುಕಸ್ವಾಮಿ ಪ್ರಕರಣದಲ್ಲಿ ತನಿಖೆ ನಡೆಯುತ್ತಿದೆ. ತನಿಖೆ ನಡೆಸಲು ಸಮಯ ನಿಗದಿ ಮಾಡಲು ಆಗುವುದಿಲ್ಲ. ಈ ಹಂತದಲ್ಲಿ ವಿಚಾರಣೆ ಹೇಗೆ ನಡೆಯುತ್ತಿದೆ ಎಂದು ಹೇಳಲು ಬರುವುದಿಲ್ಲ. ದರ್ಶನ್ ಸೇರಿದಂತೆ ಯಾರ ಬಗ್ಗೆಯೂ ಮೃದು ಧೋರಣೆ ಇಲ್ಲ.
- **ಡಾ.ಜಿ. ಪರಮೇಶ್ವರ್**, ಗೃಹ ಸಚಿವ

ಪ.ಬಂಗಾಳ: ಕಾಂಚನ್‌ಜಂಗಾ ಎಕ್ಸ್‌ಪ್ರೆಸ್ ದುರಂತ

# ನಿಂತಿದ್ದ ರೈಲಿಗೆ ಗೂಡ್ಸ್ ರೈಲು ಡಿಕ್ಕಿ; 15 ಸಾವು

- ಪಶ್ಚಿಮ ಬಂಗಾಳದ ಜಲ್ಪಾಯಿಗುರಿ ರಂಗಪಾಣಿ ನಿಲ್ದಾಣ ಬಳಿ ಅವಘಡ
- 3 ಬೋಗಿ ಹಳಿ ತಪ್ಪಿ ಸಾವು ನೋವು, 60ಕ್ಕೂ ಹೆಚ್ಚು ಮಂದಿಗೆ ಗಾಯ
- ಮೃತರ ಕುಟುಂಬಕ್ಕೆ ತಲಾ 10 ಲಕ್ಷ, ಗಾಯಾಳುಗಳಿಗೆ 5 ಲಕ್ಷ ರು. ಪರಿಹಾರ




**ಡಾರ್ಜಿಲಿಂಗ್:** ಪಶ್ಚಿಮ ಬಂಗಾಳದ ಜಲ್ಪಾಯ್‌ಗುರಿ ಜಿಲ್ಲೆಯ ನರಂಗಪಾಣಿ ನಿಲ್ದಾಣದಲ್ಲಿ ನಿಂತಿದ್ದ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಗೂಡ್ಸ್ ರೈಲು ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ 15 ಮಂದಿ ಮೃತಪಟ್ಟಿದ್ದಾರೆ. ಸುಮಾರು 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಕಾಂಚನಜುಂಗಾ ಎಕ್ಸ್‌ಪ್ರೆಸ್ ರೈಲು ನಿಲುಗಡೆಯಾಗಿದ್ದ ಹಳಿಯಲ್ಲಿ ವೇಗವಾಗಿ ಬಂದ ಗೂಡ್ಸ್ ರೈಲು ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದು, ಡಿಕ್ಕಿಯ ರಭಸಕ್ಕೆ ಪ್ರಯಾಣಿಕ ರೈಲಿನ 3 ಬೋಗಿಗಳು ಹಳಿ ತಪ್ಪಿ ಅದರಲ್ಲಿದ್ದ 15 ಪ್ರಯಾಣಿಕರು ಸಾವಿಗೀಡಾದರು. ಮೃತರಲ್ಲಿ ಗೂಡ್ಸ್ ರೈಲು ಚಾಲಕ ಮತ್ತು ಸಹ ಚಾಲಕನೂ ಸೇರಿದ್ದಾರೆ. ಗಾಯಾಳುಗಳಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ.

ಅಗರ್ತಲಾದಿಂದ ಸೀಲ್ದಾ ನಿಲ್ದಾಣಕ್ಕೆ ಸಾಗು ತ್ತಿದ್ದ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ಪ್ಯಾಸೆಂಜರ್ ರೈಲು ಬೆ. 9 ಗಂಟೆ ಸಮಯದಲ್ಲಿ ರಂಗಪಾಣಿ ನಿಲ್ದಾಣದಲ್ಲಿ ನಿಲುಗಡೆಯಾಗಿತ್ತು. ಆದರೆ ಸಿಗ್ನಲ್ ದೋಷದ ಕಾರಣ ಗೂಡ್ಸ್ ರೈಲು ಚಾಲಕನಿಗೆ ಇದರ ಮಾಹಿತಿ ಇರಲಿಲ್ಲ. ರೈಲುಗಳ ಡಿಕ್ಕಿ ತಪ್ಪಿಸುವ 'ಕವಚ' ಸರಕ್ಷತೆಯೂ ಇಲ್ಲದ ಕಾರಣ ಗೂಡ್ಸ್ ರೈಲು ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ರೈಲಿನ 3 ಬೋಗಿಗಳು ಹಳಿ ತಪ್ಪಿ ಸಾವುನೋವಿಗೆ ಕಾರಣ. ಮುಂಬದಿ ಬೋಗಿಗಳ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ.

→ 4

### ಅಪಘಾತಕ್ಕೆ ಕಾರಣ

ಗೂಡ್ಸ್ ರೈಲು ಚಾಲಕ ರೆಡ್ ಸಿಗ್ನಲ್ ದೀಪ ಸರಿಯಾಗಿ ಗೋಚರಿಸದ ಕಾರಣ ಚಾಲಕ ಸಿಗ್ನಲ್ ದಾಟಿ ಬಂದಿರಬಹುದು ಎನ್ನಲಾಗಿದೆ. ಆದರೆ ರಾಣಿ ಪತ್ರಾದ ಸ್ಟೇಶನ್ ಮಾಸ್ಟರ್ ಗೂಡ್ಸ್ ರೈಲು ಮುಂದಕ್ಕೆ ಚಲಿಸಲು ಹಸಿರು ಸಿಗ್ನಲ್ ತೋರಿದ್ದರೆಂಬ ಮಾತುಗಳು ಕೇಳಿ ಬಂದಿವೆ. ಕಳೆದ ವರ್ಷ ಇದೇ ತಿಂಗಳಲ್ಲಿ ಒರಿಸ್ಸಾದ ಬಾಲಸೋರ್‌ನಲ್ಲಿ ನಡೆದ ಅಪಘಾತದಲ್ಲಿ 293 ಮಂದಿ ಮೃತಪಟ್ಟಿದ್ದರು.

### ಪ್ರಧಾನಿ ಸಂತಾಪ 10 ಲಕ್ಷ ರು. ಪರಿಹಾರ

ರೈಲ್ವೆ ಅಪಘಾತಕ್ಕೆ ಪ್ರಧಾನಿ ಮೋದಿ ಆಘಾತ ವ್ಯಕ್ತಪಡಿಸಿದ್ದು, ಪ್ರೀತಿ ಪಾತ್ರರನ್ನು ಕಳೆದುಕೊಂಡವರಿಗೆ ದುಃಖ ಭರಿಸುವ ಶಕ್ತಿ ಸಿಗಲಿ. ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದ್ದಾರೆ. ಸಾವನ್ನಪ್ಪಿದವರ ಕುಟುಂಬಕ್ಕೆ ತಲಾ 10 ಲಕ್ಷ ರು. ಪರಿಹಾರ ಘೋಷಣೆ ಮಾಡಲಾಗಿದೆ.

ಇಂಧನ ದರ ಇಳಿಸದಿದ್ದರೆ ರಸ್ತೆ ತಡೆ: ವಿಜಯೇಂದ್ರ
ಇಂದು ಜೆಡಿಎಸ್‌ನಿಂದ ಸರಕಾರದ ವಿರುದ್ಧ ಪ್ರತಿಭಟನೆ

# ಬೆಲೆ ಏರಿಕೆ ಖಂಡಿಸಿ ಬೀದಿಗಿಳಿದ ಬಿಜೆಪಿ

**ಬೆಂಗಳೂರು:** ಪೆಟ್ರೋಲ್-ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ ಸೋಮವಾರ ರಾಜ್ಯಾದ್ಯಂತ ಪ್ರತಿಭಟನೆ ನಡೆಸಿದ್ದು, ಮುಂದಿನ ದಿನಗಳಲ್ಲಿ ಹೋರಾಟದ ಸ್ವರೂಪವನ್ನು ಇನ್ನಷ್ಟು ತೀವ್ರಗೊಳಿಸಲು ತೀರ್ಮಾನಿಸಿದೆ.

ಸೋಮವಾರ ಬೆಳಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಅಶೋಕ್ ನೇತೃತ್ವದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಬಿಜೆಪಿ ನಾಯಕರು, ದರ ಏರಿಕೆಯನ್ನು ಇಳಿಸದಿದ್ದರೆ ಮುಂದಿನ ದಿನದಲ್ಲಿ ರಸ್ತೆ ತಡೆಯುವ ಮೂಲಕ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

→ 4



ಜನವಿರೋಧಿ ಸರಕಾರದ ವಿರುದ್ಧ ಬಿಜೆಪಿ ಹೋರಾಟ ಕೈಗೆತ್ತಿಕೊಂಡಿದೆ. ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಗೆಲ್ಲದ ಕಾರಣ ಕಾಂಗ್ರೆಸ್ ಮುಖಂಡರು ಹತಾಶರಾಗಿದ್ದಾರೆ. ಪಕ್ಷದ ಶಾಸಕರೇ ಗ್ಯಾರಂಟಿ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಇದೀಗ ಹಣ ಹೊಂದಿಸಲು ಪೆಟ್ರೋಲ್-ಡೀಸೆಲ್ ದರ ಏರಿಕೆ ಮಾಡಿದ್ದಾರೆ.
- **ಬಿ.ವೈ. ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

### ಇಂದು ಜೆಡಿಎಸ್ ಪ್ರತಿಭಟನೆ

ಬಿಜೆಪಿ ಮೈತ್ರಿ ಪಕ್ಷ ಜೆಡಿಎಸ್ ಮಂಗಳವಾರ ಪ್ರತ್ಯೇಕವಾಗಿ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಲಿದೆ. ಪೆಟ್ರೋಲ್, ಡೀಸೆಲ್ ದರವನ್ನು ಇಳಿಸುವಂತೆ ಆಗ್ರಹಿಸಿ ಬೆಳಗ್ಗೆ 10.30ಕ್ಕೆ ಸ್ವಾತಂತ್ರ್ಯ ಉದ್ಯಾನವನದಿಂದ ವಿಧಾನಸೌಧದವರೆಗೆ ಮೆರವಣಿಗೆ ನಡೆಸಲು ಪಕ್ಷ ನಿರ್ಧರಿಸಿದೆ. ಪ್ರತಿಭಟನೆಯಲ್ಲಿ ಸಂಸದರು, ಶಾಸಕರು, ಮಾಜಿ ಸಚಿವರು ಸೇರಿದಂತೆ ಹಲವು ಮುಖಂಡರು ಭಾಗವಹಿಸಲಿದ್ದಾರೆ ಎಂದು ಜೆಡಿಎಸ್ ತಿಳಿಸಿದೆ.

# ಕೇಂದ್ರದ ವಿರುದ್ಧ ಪ್ರತಿಭಟಿಸಲಿ

ಇಂಧನ ದರ ಏರಿಕೆಗೆ ಕೇಂದ್ರ ಸರಕಾರವೇ ಕಾರಣ ಎಂದ ಸಿದ್ದರಾಮಯ್ಯ

**ಬೆಂಗಳೂರು:** ದರ ಏರಿಕೆ ಖಂಡಿಸಿ ಬಿಜೆಪಿ ಒಂದೆಡೆ ಪ್ರತಿಭಟನೆ ನಡೆಸುತ್ತಿದ್ದರೆ, ಇತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದರ ಏರಿಕೆಗೆ ಕೇಂದ್ರ ಬಿಜೆಪಿ ಸರಕಾರವೇ ಕಾರಣ ವೆಂದು ವಾಗ್ದಾಳಿ ನಡೆಸಿದ್ದು, ಪೆಟ್ರೋಲ್- ಡೀಸೆಲ್ ದರ ಏರಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೆಟ್ರೋಲ್-ಡೀಸೆಲ್ ಏರಿಕೆ ವಿರುದ್ಧ ಪ್ರತಿಭಟನೆ ನಡೆಸುವ ನೈತಿಕತೆ ಬಿಜೆಪಿಗರಿಗಿಲ್ಲ. ದೇಶದಲ್ಲಿ ಪೆಟ್ರೋಲ್-ಡೀಸೆಲ್ ದರ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದೇ ಪ್ರಧಾನಿ ನರೇಂದ್ರ ಮೋದಿ ಅವರ ಕಾಲದಲ್ಲಿ ಎಂದು ಟೀಕಿಸಿದ್ದಾರೆ.

→ 4

- ಜಿಎಸ್‌ಟಿ ಬಂದ ಬಳಿಕ ರಾಜ್ಯಗಳ ಸಂಪನ್ಮೂಲ ಕ್ರೋಢೀಕರಣಕ್ಕೆ ಅಡ್ಡಿ
- ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಹೊಂದಿಸಲಷ್ಟೇ ತೈಲ ದರ ಹೆಚ್ಚಳ
- ಕಚ್ಚಾ ತೈಲದ ದರ ಇಳಿಕೆಯಾದರೂ ಕೇಂದ್ರ ಸರಕಾರ ಬೆಲೆ ಇಳಿಸಿಲ್ಲ
- ಯುಪಿಎ ಅವಧಿಯಲ್ಲಿ 72 ರು.ಗಳಿದ್ದ ಪೆಟ್ರೋಲ್ ದರ 100ಕ್ಕೇರಿಸಿದ್ದು ಮೋದಿ
- ಬಿಜೆಪಿಯವರ ಬಡವರ ವಿರೋಧಿ; ಅದಕ್ಕೆ ಗ್ಯಾರಂಟಿ ಯೋಜನೆ ಬಗ್ಗೆ ಮಾತನಾಡುತ್ತಾರೆ



ರಾಜ್ಯ ಸರಕಾರ ಈ ವರ್ಷ ಗ್ಯಾರಂಟಿ ಯೋಜನೆಗಳಿಗೆ 60 ಸಾವಿರ ಕೋಟಿ ರು. ಅನುದಾನವನ್ನು ಮೀಸಲಿಟ್ಟಿದೆ. ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ಹೆಚ್ಚಳದಿಂದ ಮೂರು ಸಾವಿರ ಕೋಟಿ ರು. ಆದಾಯ ಬರುತ್ತದೆ. ಆದರೆ ಬಿಜೆಪಿಯವರಿಗೆ ಆರ್ಥಿಕತೆ ಗೊತ್ತಿಲ್ಲದೇ, ಗ್ಯಾರಂಟಿ ಯೋಜನೆ ಅನುದಾನ ಕೊಡಲು ಪೆಟ್ರೋಲ್ ದರ ಏರಿಸಿದ್ದೇವೆ ಎನ್ನುತ್ತಿದ್ದಾರೆ. ಇದು ಅಪ್ಪಟ ಸುಳ್ಳು
- **ಸಿದ್ದರಾಮಯ್ಯ**, ಮುಖ್ಯಮಂತ್ರಿ

ರೈತರ ಖಾತೆಗೆ ಹಣ ಬಿಡುಗಡೆ

## ಕಾಶಿಗೆ ಇಂದು ಪ್ರಧಾನಿ ಭೇಟಿ

**ಲಖನೌ:** ಮೂರನೇ ಅವಧಿಗೆ ಪ್ರಧಾನಿಯಾಗಿ ಆಯ್ಕೆಯಾದ ಬಳಿಕ ಮೋದಿ ತಮ್ಮ ಸ್ವಕ್ಷೇತ್ರ ವಾರಾಣಸಿಗೆ ಮಂಗಳವಾರ ಮೊದಲ ಬಾರಿಗೆ ಭೇಟಿ ನೀಡಲಿದ್ದಾರೆ. ಪ್ರಧಾನಿಯನ್ನು ಡಮರುಗ, ಶಂಖನಾದ ಮತ್ತು ಮಂತ್ರಪಠಣದ ಮೂಲಕ ಅದ್ದೂರಿಯಾಗಿ ಬರಮಾಡಿಕೊಳ್ಳಲು ಕಾಶಿ ವಿಶ್ವನಾಥ ಮಂದಿರ ಟ್ರಸ್ಟ್ ಸಿದ್ಧತೆ ನಡೆಸಿದೆ. ಈ ವೇಳೆ ಕಿಸಾನ್ ಸಮ್ಮೇಳನದಲ್ಲಿ ಭಾಗಿಯಾಗಲಿರುವ ಪ್ರಧಾನಿ, ರೈತರಿಗೆ 17ನೇ ಕಂತಿನ ಕಿಸಾನ್ ಸಮ್ಮಾನ್ ನಿಧಿಯನ್ನು ಬಿಡುಗಡೆ ಮಾಡಲಿದ್ದಾರೆ.

## ಜಾರ್ಖಂಡ್‌ನಲ್ಲಿ 4 ನಕ್ಸಲರ ಹತ್ಯೆ

**ರಾಯಪುರ:** ಜಾರ್ಖಂಡ್‌ನ ಪಶ್ಚಿಮ ಸಿಂಗಭೂಮ್ ಜಿಲ್ಲೆಯ ಅರಣ್ಯದಲ್ಲಿ ಸೋಮವಾರ ಬೆಳಗ್ಗೆ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ನಾಲ್ವರು ನಕ್ಸಲೀಯರನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಚೈಬಾಸಾದಲ್ಲಿ ಭದ್ರತಾ ಪಡೆಗಳು ಕಾರ್ಯಾಚರಣೆ ಕೈಗೊಂಡ ವೇಳೆ ನಕ್ಸಲರು ಗುಂಡು ಹಾರಿಸಿದ್ದಾರೆ. ಪ್ರತಿದಾಳಿ ನಡೆಸಿದ ಪಡೆಗಳು ನಾಲ್ವರನ್ನು ಹತ್ಯೆಗೈದಿವೆ.

## ನೀರಿನ ದರ ಹೆಚ್ಚಿಸಲು ಜಲಮಂಡಳಿ ಸಜ್ಜು

**ಬೆಂಗಳೂರು:** ತೈಲಬೆಲೆ ಏರಿಕೆಯ ಬೆನ್ನಲ್ಲೇ ನೀರಿನ ದರ ಏರಿಕೆಯ ಬಿಸಿ ತಟ್ಟುವ ಸಾಧ್ಯತೆಯಿದೆ. ಚುನಾವಣೆಯ ಬಳಿಕ ನೀರಿನ ದರ ಹೆಚ್ಚಳದ ಸುಳಿವನ್ನು ಸರಕಾರವು ನೀಡಿತ್ತು. ಆದರೆ ಇದೀಗ 10 ವರ್ಷಗಳ ಬಳಿಕ ನೀರಿನ ದರ ಹೆಚ್ಚಳಕ್ಕೆ ಚಿಂತನೆ ನಡೆಸಲಾಗಿದ್ದು, ಜಲಮಂಡಳಿ ದರ ಏರಿಕೆಯ ಪ್ರಸ್ತಾವನೆಯನ್ನು ಸರಕಾರದ ಮುಂದಿಟ್ಟಿದೆ. ಡಿಸಿಎಂ ಶಿವಕುಮಾರ್ ಭೇಟಿ ವೇಳೆಯಲ್ಲಿ ದರ ಪರಿಷ್ಕರಣೆಯ ಕುರಿತಂತೆ ಸುಳಿವು ನೀಡಿದ್ದರು.

## ಮಣಿಪುರ ಪರಿಸ್ಥಿತಿ ಅಮಿತ್ ಶಾ ಸಭೆ

**ನವದೆಹಲಿ;** ಜನಾಂಗೀಯ ಸಂಘರ್ಷದಲ್ಲಿ ಭಾರಿ ಸಾವು-ನೋವಿಗೆ ಸಾಕ್ಷಿಯಾದ ಮಣಿಪುರ ಪರಿಸ್ಥಿತಿ ಕುರಿತು ಕೇಂದ್ರ ಗೃಹಸಚಿವ ಅಮಿತ್ ಶಾ ಸೋಮವಾರ ಉನ್ನತ ಮಟ್ಟದ ಸಭೆ ನಡೆಸಿದರು. ಹಿಂಸಾಚಾರ ಮರುಕಳಿಸದಂತೆ ರಾಜ್ಯದಲ್ಲಿ ಕೇಂದ್ರೀಯ ಪಡೆಗಳನ್ನು ಹೆಚ್ಚಿಸುವಂತೆ ಶಾ ಅಧಿಕಾರಿಗಳಿಗೆ ಸೂಚಿಸಿದರು. ಸೌಹಾರ್ದ ವಾತಾವರಣ ಮೂಡಿಸಲು ಭರವಸೆ ನೀಡಿದರು.

## ಬಹುಮಹಡಿ ಪಾರ್ಕಿಂಗ್ ಚಾಲನೆ

**ಬೆಂಗಳೂರು:** ನಗರದ ಪಾರ್ಕಿಂಗ್ ಸಮಸ್ಯೆಗೆ ಪರಿಹಾರವಾಗಿ ಆರಂಭಿಸಲಾದ ಫ್ರೀಡಂ ಪಾರ್ಕ್ ಬಳಿಯ ಬಹುಮಹಡಿ ಪಾರ್ಕಿಂಗ್ ಸಂಕೀರ್ಣವು ಜೂ.20ರಂದು ಉದ್ಘಾಟನೆಯಾಗಲಿದೆ. ಕಳೆದ ನಾಲ್ಕು ವರ್ಷಗಳಿಂದ ಈ ಬಹುಮಹಡಿ ಪಾರ್ಕಿಂಗ್ ಸಂಕೀರ್ಣವು ಖಾಲಿ ಬಿದ್ದಿತ್ತು. ಜೂ.20ರಂದು ಈ ಸಂಕೀರ್ಣವು ಲೋಕಾರ್ಪಣೆಯಾಗುವುದರಿಂದ ಜನಬಿಡ ಪ್ರದೇಶಗಳಾದ ಮೆಜೆಸ್ಟಿಕ್, ವಿಧಾನಸೌಧ ಅಕ್ಕ-ಪಕ್ಕ ವಾಹನ ಪಾರ್ಕಿಂಗ್ ಸಮಸ್ಯೆಗೆ ಶೀಘ್ರ ಮುಕ್ತಿ ದೊರೆಯಲಿದೆ.

# ವಯನಾಡ್‌ನಲ್ಲಿ ಪ್ರಿಯಾಂಕಾ ಸ್ಪರ್ಧೆ

ರಾಯ್‌ಬರೇಲಿಗೆ ರಾಹುಲ್ ಜೈ, ವಯನಾಡ್‌ಗೆ ಗುಡ್‌ಬೈ, ಸಹೋದರಿ ಎಂಟ್ರಿ

**ದೆಹಲಿ:** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಪ್ರಿಯಾಂಕಾ ಗಾಂಧಿ ವಾದ್ರಾ, ಅವರನ್ನು ಕೊನೆಗೂ ಚುನಾವಣಾ ರಾಜಕೀಯಕ್ಕಿಳಿಸಲು ಗಾಂಧಿ ಪರಿವಾರ ನಿರ್ಧರಿಸಿದೆ. ಸಹೋದರ ರಾಹುಲ್ ಗಾಂಧಿ ಅವರು ತೆರವು ಮಾಡಲಿರುವ ವಯನಾಡು ಲೋಕಸಭಾ ಕ್ಷೇತ್ರದಿಂದ ಪ್ರಿಯಾಂಕಾ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ನಿರ್ಧರಿಸಿದೆ.

ತಮ್ಮ ನಿವಾಸದಲ್ಲಿ ನಡೆದ ಕಾಂಗ್ರೆಸ್ ನಾಯಕರ ಉನ್ನತ ಮಟ್ಟದ ಸಭೆಯ ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸುದ್ದಿಗೋಷ್ಠಿ ನಡೆಸಿ ಪಕ್ಷದ ನಿರ್ಧಾರವನ್ನು ಪ್ರಕಟಿಸಿದರು. ಕಾಂಗ್ರೆಸ್ ಭದ್ರ ಕೋಟೆ ರಾಯ್ ಬರೇಲಿಯಿಂದ ಮೊದಲ ಬಾರಿ ಮತ್ತು ವಯನಾಡು ಕ್ಷೇತ್ರದಿಂದ ರಾಹುಲ್ ಗಾಂಧಿ ಅವರು ಸತತ ಎರಡನೇ ಬಾರಿ ಜಯ ಸಾಧಿಸಿದ್ದರು. ಇದೀಗ ವಯನಾಡು ಕ್ಷೇತ್ರ ಬಿಟ್ಟು, ರಾಯ್ ಬರೇಲಿ ಕ್ಷೇತ್ರ ಉಳಿಸಿಕೊಳ್ಳಲು ರಾಹುಲ್ ಗಾಂಧಿ ನಿರ್ಧರಿಸಿದ್ದಾರೆ. 52 ರ ಹರೆಯದ ಪ್ರಿಯಾಂಕಾ ವಾದ್ರಾ, ಉಪ ಚುನಾವಣೆಯಲ್ಲಿ ಕೇರಳದ ಈ ಕ್ಷೇತ್ರದಿಂದ ಕಣಕ್ಕಿಳಿದು ಸಂಸತ್ ಪ್ರವೇಶಿಸಲು ಮುಂದಾಗಿದ್ದಾರೆ.

ಪಕ್ಷದ ನಿರ್ಧಾರದ ಬಗ್ಗೆ ಮಾತನಾಡಿದ ಪ್ರಿಯಾಂಕಾ, ''ನನಗೆ ವಯನಾಡು ಕ್ಷೇತ್ರವನ್ನು ಪ್ರತಿನಿಧಿಸಲು ಅವಕಾಶ ಸಿಕ್ಕಿರುವುದು ಹೆಮ್ಮೆ ಎನಿಸುತ್ತಿದೆ. ಅಲ್ಲಿಯ ಜನರಿಗೆ ರಾಹುಲ್ ಅನುಪಸ್ಥಿತಿ ಕಂಡು ಬರದಂತೆ ನೋಡಿಕೊಳ್ಳುತ್ತೇನೆ. ವಯನಾಡು ಮತ್ತು ರಾಯ್ ಬರೇಲಿ ಎರಡೂ ಕ್ಷೇತ್ರಗಳ ಪ್ರತಿನಿಧಿಯಾಗಿ ಸಹೋದರನಿಗೆ ಸಹಕಾರ ನೀಡಿ ಕೆಲಸ ಮಾಡುತ್ತೇನೆ'' ಎಂದು ಹೇಳಿದರು.

ರಾಹುಲ್ ಮಾತನಾಡಿ ''ವಯನಾಡು ಕ್ಷೇತ್ರ ತೊರೆಯುತ್ತಿರುವುದು ಕಠಿಣ ನಿರ್ಧಾರ. ನನ್ನ ಮನೆಯ ಬಾಗಿಲು ವಯನಾಡಿನ ಜನರಿಗಾಗಿ ಸದಾ ತೆರೆದಿರುತ್ತದೆ. ಅಲ್ಲಿನ ಪ್ರತಿಯೊಬ್ಬ ಪ್ರಜೆಯನ್ನೂ ನಾನು ಪ್ರೀತಿಸುತ್ತೇನೆ' ಎಂದು ಹೇಳಿದರು.

ಪ್ರಿಯಾಂಕಾ ಸ್ಪರ್ಧೆಗೆ ಪಕ್ಷ ನಾಯಕರಿಂದ ಬಹಳಷ್ಟು ಒತ್ತಡವಿದ್ದರೂ ಈ ತನಕ ಗಾಂಧಿ ಪರಿವಾರ ಅವರನ್ನು ಚುನಾವಣೆ ಕಣದಿಂದ ದೂರವಿಟ್ಟಿತ್ತು. ನೆಹರೂ, ಇಂದಿರಾ, ಸಂಜಯ್,ರಾಜೀವ್, ಸೋನಿಯಾ, ರಾಹುಲ್ ಬಳಿಕ ಪ್ರಿಯಾಂಕಾ ಕುಟುಂಬದ ಏಳನೇ ಕುಡಿಯಾಗಿ ಲೋಕಸಭೆಗೆ ಸ್ಪರ್ಧಿಸಲು ಮುಂದಾಗಿದ್ದಾರೆ.

## ಫುಟ್‌ಬಾಲ್ ಕೋಚ್ ವಜಾ

**ನವದೆಹಲಿ:** 2026ರ ವಿಶ್ವಕಪ್ ಫುಟ್ಬಾಲ್ ಟೂರ್ನಿಯ ಅರ್ಹತಾ ಪಂದ್ಯಾವಳಿಯಲ್ಲಿ ಕಳಪೆ ಪ್ರದರ್ಶನ ಮತ್ತು ಫಿಫಾ ರ್‍ಯಾಂಕಿಂಗ್‌ನಲ್ಲಿ ಕುಸಿದ ಹಿನ್ನೆಲೆಯಲ್ಲಿ ಭಾರತ ಪುರುಷರ ಫುಟ್‌ಬಾಲ್ ತಂಡದ ಮುಖ್ಯ ತರಬೇತುದಾರನ ಹುದ್ದೆಯಿಂದ ಇಗೊರ್ ಸ್ಟಿಮ್ಯಾಕ್‌ರನ್ನು ವಜಾಮಾಡಲಾಗಿದೆ.

ಭಾನುವಾರ ಅಖಿಲ ಭಾರತ ಫುಟ್‌ಬಾಲ್ ಒಕ್ಕೂಟದ ವರ್ಚುವಲ್ ಸಭೆಯ ನಂತರ ಸ್ಟಿಮ್ಯಾಕ್ ವಜಾ ಬಗ್ಗೆ ಸೋಮವಾರ ನಿರ್ಧಾರ ಹೊರಬಿದ್ದಿದೆ. ಎಐಎಫ್‌ಎಫ್ ಉಪಾಧ್ಯಕ್ಷ ಎನ್‌ಎ ಹ್ಯಾರಿಸ್, ಹಣಕಾಸು ಸಮಿತಿಯ ಅಧ್ಯಕ್ಷ ಮೆನ್ಲಾ ಎತೆನ್ಪಾ, ತಾಂತ್ರಿಕ ಸಮಿತಿಯ ಅಧ್ಯಕ್ಷ ಐ.ಎಂ ವಿಜಯನ್ ಸೇರಿದಂತೆ ಹಲವು ಪದಾಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು. ವಿಶ್ವಕಪ್ ಟೂರ್ನಿಯ ಅರ್ಹತಾ ಪಂದ್ಯಾವಳಿಯಲ್ಲಿ ಭಾರತ 3ನೇ ಸುತ್ತಿಗೆ ಪ್ರವೇಶಿಸಲು ವಿಫಲವಾಗಿತ್ತು.

ಸುಮಾರು ಮೂರು ತಾಸು ವಿಚಾರಣೆಯಲ್ಲಿ ಭಾಗಿ
ಇನ್ನಷ್ಟು ಪ್ರಶ್ನೆಗಳಿಗೆ ಉತ್ತರಕ್ಕೆ ಮತ್ತೊಮ್ಮೆ ಹಾಜರಾಗಲು ಸೂಚನೆ

# ಬಿಎಸ್‌ವೈ ವಿಚಾರಣೆ ಪೂರ್ಣ



**ಬೆಂಗಳೂರು:** ಬಂಧನ ಭೀತಿಯಿಂದ ಪಾರಾಗಿರುವ ಮಾಜಿ ಸಿಎಂ ಯಡಿಯೂರಪ್ಪ ಅವರು ಸಿಐಡಿ ಮುಂದೆ ವಿಚಾರಣೆಗೆ ಹಾಜರಾಗಿ, ವಾಪಸಾಗಿದ್ದಾರೆ.

ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳದ ಆರೋಪದಲ್ಲಿ ಯಡಿಯೂರಪ್ಪ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿತ್ತು. ವಿಚಾರಣೆಗೆ ಹಾಜರಾಗಿಲ್ಲವೆಂದು ಬಂಧನ ವಾರಂಟ್ ಹೊರಡಿಸಲಾಗಿತ್ತು. ಆದರೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದ್ದರಿಂದ, ಯಡಿಯೂರಪ್ಪ ಅವರು ಸಿಐಡಿ ಕಚೇರಿಗೆ ಸೋಮವಾರ ತೆರಳಿ ವಿಚಾರಣೆ ಎದುರಿಸಿದರು. ಮೂರು ಗಂಟೆ ಕಾಲ ವಿಚಾರಣೆಯಲ್ಲಿ ಹಲವು ಮಾಹಿತಿಗಳನ್ನು ಸಿಐಡಿ ಅಧಿಕಾರಿಗಳು ಸಂಗ್ರಹಿಸಿದ್ದಾರೆ ಎಂದು ತಿಳಿದುಬಂದಿದೆ.

ದೂರುದಾರರಾಗಿದ್ದ ತಾಯಿ ಮತ್ತು ಅವರ ಮಗಳು ನಿಮ್ಮ ಬಳಿ ಯಾವಾಗ ಬಂದಿದ್ದರು?, ಏನು ಸಹಾಯ ಕೇಳಿಕೊಂಡು ಬಂದಿದ್ದರು?, ಅಂದು ಏನು ಘಟನೆ ನಡೆಯಿತು? ಎಂಬಿತ್ಯಾದಿ ಪ್ರಶ್ನೆಗಳನ್ನು ಅಧಿಕಾರಿಗಳು ಕೇಳಿ ಮಾಹಿತಿ ಪಡೆದಿದ್ದಾರೆ ಎಂದು ತಿಳಿದುಬಂದಿದೆ. ಫೆಬ್ರವರಿ 2 ರಂದು ನಡೆದಿದೆ ಎನ್ನಲಾದ ಘಟನೆ ಬಗ್ಗೆ ಅಪ್ರಾಪ್ತ ಬಾಲಕಿಯ ತಾಯಿ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಯಡಿಯೂರಪ್ಪನವರ ವಿರುದ್ಧ ದೂರು ಸಲ್ಲಿಸಿದ್ದರು.

### ಏನಿದು ಪ್ರಕರಣ?

ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಸಂತ್ರಸ್ತೆಯ ತಾಯಿ ಮಾರ್ಚ್ 3 ರಂದು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ತಮ್ಮ ಮಗಳಿಗೆ ಯಡಿಯೂರಪ್ಪ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಅವರು ದೂರಿನಲ್ಲಿ ಆರೋಪಿಸಿದ್ದರು. ಈ ಬಗ್ಗೆ ಪೊಲೀಸರು ಪೋಕ್ಸೋ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಿದ್ದರು. ಬಳಿಕ ಪ್ರಕರಣವನ್ನು ರಾಜ್ಯ ಸರಕಾರ ಸಿಐಡಿಗೆ ವಹಿಸಿತ್ತು.

→ 4

## ಸಮಾಚಾರ ಸಣ್ಣದಲ್ಲ

### ಏಕಾದಶ ರುದ್ರ ನೃತ್ಯರೂಪಕ 22ರಂದು

**ಬೆಂಗಳೂರು:** ಕಲಾಸಿಂಧು ಅಕಾಡೆಮಿ ವತಿಯಿಂದ ಜೂ.22ರಂದು ಸಂಜೆ 6.00 ಗಂಟೆಗೆ ನಗರದ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಏಕಾದಶ ರುದ್ರ ನೃತ್ಯರೂಪಕವನ್ನು ಆಯೋಜಿಸಲಾಗಿದೆ. ಐದು ಬಗೆಯ ಭಾರತೀಯ ಶಾಸ್ತ್ರೀಯ ನೃತ್ಯ ಪ್ರಕಾರಗಳ ಸಂಗಮ ಕಾರ್ಯಕ್ರಮ ಇದಾಗಿದ್ದು, ಭರತನಾಟ್ಯ (ಗುರು ಪೂರ್ಣಿಮಾ ಗುರುರಾಜ), ಕುಚಿಪುಡಿ (ಗುರು ಸಂಜಯ್ ಶಾಂತಾರಾಂ), ಮೋಹಿನಿಯಾಟಮ್ (ಗುರು ಗೋಪಿಕಾ ವರ್ಮ), ಕಥಕ್ ( ಗುರು ಮೈಸೂರು ಬಿ. ನಾಗರಾಜ್) ಮತ್ತು ಸಮುದ್ರನಟನಂ (ಗುರು ಮಧು ಗೋಪೀನಾಥ್), ವಿದುಷಿ ಪೂರ್ಣಿಮಾ ಕೈವಾರ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ ಈ ನೃತ್ಯ ರೂಪಕದಲ್ಲಿ , ಸುಮಾರು ಐವತ್ತಕ್ಕೂ ಹೆಚ್ಚಿನ ರಾಷ್ಟ್ರೀಯ ಮಟ್ಟದ ಕಲಾವಿದರು ಆ ಮಹಾದೇವನ ಭವ್ಯವ್ಯಕ್ತಿತ್ವವನ್ನು ತಮ್ಮ ನರ್ತನದ ಮೂಲಕ ಕಟ್ಟಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಪ್ರಶಸ್ತಿಗೆ ಲೇಖಕರಿಂದ ಪುಸ್ತಕಗಳ ಆಹ್ವಾನ

**ಬೆಂಗಳೂರು:** ಬೆಂಗಳೂರು ಕೃಷಿ ವಿವಿಯು ಕನ್ನಡದಲ್ಲಿ ಕೃಷಿ ಬರವಣಿಗೆಯನ್ನು ಪ್ರೋತ್ಸಾಹಿಸಲು ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ ನೀಡುತ್ತಿದ್ದು 2023ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಲೇಖಕರಿಂದ ಆಹ್ವಾನಿಸಿದೆ. ಪ್ರಶಸ್ತಿಯು 10,000 ರು.ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಲೇಖಕರು ನಿಗದಿತ ನಮೂನೆಯಲ್ಲಿ ಪ್ರಶಸ್ತಿಗೆ ಸಲ್ಲಿಸುವ ಮೂರು ಪ್ರತಿಗಳನ್ನು ತಮ್ಮ ಸ್ವವಿವರಗಳೊಂದಿಗೆ ಜು.15ರೊಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು 560065 ಇವರಿಗೆ ಕಳುಹಿಸುವುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080-23330153 ಸಂಪರ್ಕಿಸಬಹುದು ಎಂದು ವಿವಿ ಪ್ರಕಟಣೆ ತಿಳಿಸಿದೆ.

### ದರ ಏರಿಕೆ ವಿರೋಧಿಸಿ ಎಎಪಿ ಪ್ರತಿಭಟನೆ

**ಬೆಂಗಳೂರು:** ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಚಿಲ್ಲರೆ ಮಾರಾಟ ದರವನ್ನು ಹೆಚ್ಚಿಸಿರುವ ರಾಜ್ಯ ಸರಕಾರದ ಕ್ರಮವನ್ನು ಖಂಡಿಸಿ ಎಎಪಿ ಪಕ್ಷ ಮಂಗಳವಾರ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ. ಸುದ್ದಿಗೋಷ್ಠಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮೋಹನ ದಾಸರಿ ಮಾತನಾಡಿ, ಮಂಗಳವಾರ ಬೆಳಗ್ಗೆ 11 ಗಂಟೆಗೆ ಸ್ವಾತಂತ್ರ ಉದ್ಯಾನವನದಲ್ಲಿ ಪ್ರತಿಭಟನೆ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಪಬ್‌ನಲ್ಲಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಜತೆ ಪಾರ್ಟಿ ಮಾಡಿದ್ದ ಚಿಕ್ಕಣ್ಣಗೆ ಸಂಕಷ್ಟ | ಕೊಲೆಯಾದ ದಿನ ಯಾರನ್ನೆಲ್ಲ ಭೇಟಿಯಾಗಿದ್ದರು ಎನ್ನುವ ಬಗ್ಗೆ ಮಾಹಿತಿ ಸಂಗ್ರಹ | ಜೈಲು ಸೇರಿ ಎರಡು ವಾರ ಕಳೆದರೂ, ಭೇಟಿಗೆ ಬಾರದ ಕುಟುಂಬಸ್ಥರು

# ಡಿ ಗ್ಯಾಂಗ್ ಜತೆಗಿದ್ದವರಿಗೆ ಠಾಣೆಯ ದರ್ಶನ?

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಆಪ್ತವಲಯದ ಬಹುತೇಕರಿಗೆ ಕಂಟಕ ಶುರುವಾಗಿದ್ದು, ಕೊಲೆಯಾದ ಹಿಂದೆ-ಮುಂದಿನ ದಿನ ಯಾರೆಲ್ಲ ದರ್ಶನ್ ಭೇಟಿಯಾಗಿದ್ದವರೋ ಅವರಿಗೆಲ್ಲ ಠಾಣೆಯ ದರ್ಶನ ಭಾಗ್ಯ ಸಿಗುವುದು ಖಚಿತವಾಗಿದೆ.

ರೇಣುಕಾಸ್ವಾಮಿ ಕಿಡ್ನಾಪ್ ಮಾಡಿಕೊಂಡು ಬಂದಾಗ ದರ್ಶನ್ ಸ್ಟೋನಿ ಬ್ರೂಕ್ ಪಬ್‌ನಲ್ಲಿ ಸ್ನೇಹಿತರೊಂದಿಗೆ ಪಾರ್ಟಿ ಮಾಡುತ್ತಿದ್ದರಂತೆ. ಈ ಪಾರ್ಟಿಯಲ್ಲಿ ಹಾಸ್ಯ ನಟ ಚಿಕ್ಕಣ್ಣ ಇರುವುದು ಖಚಿತವಾಗಿರುವುದರಿಂದ, ಅನ್ನಪೂರ್ಣೇಶ್ವರಿ ಠಾಣಾ ಪೊಲೀಸರು ಸೋಮವಾರ ಚಿಕ್ಕಣ್ಣ ವಿಚಾರಣೆ ನಡೆಸಿದರು. ಬಳಿಕ ಸ್ಟೋನಿ ಬ್ರೂಕ್ ಮಹಜರಿಗೆ ಚಿಕ್ಕಣ್ಣ ಅವರನ್ನು ಕರೆದುಕೊಂಡು ಹೋಗಿದ್ದಾರೆ.

ಈ ನಡುವೆ ದರ್ಶನ್ ಹಾಗೂ ಸಹಚರರನ್ನು ನಿತ್ಯ ವಿಚಾರಣೆಗೆ ಒಳಪಡಿಸುತ್ತಿದ್ದು, ದರ್ಶನ್ ಸೇರಿದಂತೆ ಬಹುತೇಕರು ಈ ವಿಚಾರಣೆಯಿಂದ ಬೇಸತ್ತಿದ್ದಾರೆ. ದರ್ಶನ್ ಒಂದು ಹಂತದಲ್ಲಿ ತಪ್ಪಾಗಿದೆ, ಬಿಟ್ಟುಬಿಡಿ ಎಂದು ಬೇಡಿಕೊಳ್ಳುವ ಹಂತಕ್ಕೆ ತಲುಪಿದ್ದಾರೆ ಎಂದು ತಿಳಿದುಬಂದಿದೆ. ಸೋಮವಾರವೂ ವಿಚಾರಣೆ ಮುಂದುವರೆಸಿರುವ ಪೊಲೀಸರು, ರೇಣುಕಸ್ವಾಮಿಗೆ ಕರೆಂಟ್ ಶಾಕ್ ಕೊಡಲು ಬಳಸಿದ್ದ ಮೆಗ್ಗರ್ ಅನ್ನು ವಶಕ್ಕೆ ಪಡೆದಿದ್ದಾರೆ.

**ಚಿಕ್ಕಣ್ಣ ಹೇಳಿಕೆ ದಾಖಲಿಸಿಕೊಂಡ ಪೊಲೀಸರು**

ಕೊಲೆ ಪ್ರಕರಣ ಸಂಬಂಧ ವಿಚಾರಣೆಗೆ ಬರುವಂತೆ ಸೂಚಿಸಿ ಚಿಕ್ಕಣ್ಣಗೆ ಸೋಮವಾರ ಬೆಳಗ್ಗೆ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು. ಸಂಜೆ 4 ಗಂಟೆ ಸುಮಾರಿಗೆ ವಿಚಾರಣೆಗೆ ಬರುತ್ತಿದ್ದಂತೆ ಚಿಕ್ಕಣ್ಣ ಅವರನ್ನು ರಾಜರಾಜೇಶ್ವರಿ ನಗರದಲ್ಲಿರುವ ಸ್ಟೋನಿ ಬ್ರೂಕ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ಆರೋಪಿ ದರ್ಶನ್ ಹಾಗೂ ಅದರ ಮಾಲೀಕರೂ ಆಗಿರುವ ಆರೋಪಿ ವಿನಯ್ ಜತೆಗೆ ಕರೆದೊಯ್ದು ಸ್ಥಳ ಮಹಜರು ನಡೆಸಿದರು. ಅಲ್ಲಿಂದ ಚಿಕ್ಕಣ್ಣ ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಕರೆ ತಂದ ಪೊಲೀಸರು ವಿಚಾರಣೆ ನಡೆಸಿದರು.

ಕೃತ್ಯ ಎಸಗುವುದಕ್ಕೂ ಮುನ್ನ ರಾಜರಾಜೇಶ್ವರಿ ನಗರದ ರೆಸ್ಟೋರೆಂಟ್‌ನಲ್ಲಿ ಜೂನ್ 8ರ ಸಂಜೆ ಪಾರ್ಟಿ ಆಯೋಜಿಸಲಾಗಿತ್ತು. ಈ ಪಾರ್ಟಿಯಲ್ಲಿ ದರ್ಶನ್ ಜತೆಗೆ ಚಿಕ್ಕಣ್ಣ ಇದ್ದರು ಎಂಬುದಕ್ಕೆ ಪುರಾವೆ ಲಭಿಸಿದ್ದು ಅದರ ಆಧಾರದಲ್ಲಿ ನೋಟಿಸ್ ಜಾರಿ ಮಾಡಲಾಗಿತ್ತು. ಪಾರ್ಟಿ ವೇಳೆ ಕೃತ್ಯದ ಬಗ್ಗೆ ಏನಾದರೂ ಚರ್ಚೆ ನಡೆದಿತ್ತೇ? ಪಾರ್ಟಿಯಲ್ಲಿ ಯಾರು ಭಾಗಿಯಾಗಿದ್ದರು ಎಂಬುದರ ಬಗ್ಗೆ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಪಾರ್ಟಿಯಲ್ಲಿ ಇದ್ದವರನ್ನು ಗುರುತಿಸುವಂತೆ ಬಂಧಿತ ಆರೋಪಿಗಳ ಚಿತ್ರ ತೋರಿಸಿ ಹೇಳಿಕೆ ಪಡೆಯಲಾಗಿದೆ. ಶೆಡ್‌ಗೆ ಚಿಕ್ಕಣ್ಣ ತೆರಳಿದ್ದರು ಎಂಬುದಕ್ಕೆ ಸಾಕ್ಷ್ಯಾಧಾರಗಳು ಸಿಕ್ಕಿಲ್ಲ. ಪಾರ್ಟಿಯಲ್ಲಿದ್ದರು ಎಂಬುದಕ್ಕೆ ಸಿ.ಸಿ. ಟಿ.ವಿ ಕ್ಯಾಮೆರಾದ ದೃಶ್ಯಾವಳಿಗಳು ಸಿಕ್ಕಿವೆ. ಅಲ್ಲದೇ ಬಂಧಿತರು ಚಿಕ್ಕಣ್ಣ ಹೆಸರು ಬಾಯಿಬಿಟ್ಟಿದ್ದರು ಮೂಲಗಳು ತಿಳಿಸಿವೆ.

**ಇಂದು ಮೈಸೂರಿನಲ್ಲಿ ಸ್ಥಳ ಮಹಜರು:** ಬೆಂಗಳೂರಿನಲ್ಲಿ ತನಿಖೆ ಮುಗಿಸಿರೋ ಪೊಲೀಸರು ಮಂಗಳವಾರ ಮೈಸೂರಲ್ಲಿ ಸ್ಥಳ ಮಹಜರು ನಡೆಸಲಿದ್ದಾರೆ. ದರ್ಶನ್ ಉಳಿದುಕೊಂಡಿದ್ದ ಹೋಟೆಲ್, ಅರೆಸ್ಟ್ ಆಗೋ ಮುನ್ನ ದರ್ಶನ್ ಹೋಗಿದ್ದ ಜಿಮ್ ಹಾಗೂ ಹೋಟೆಲ್ ಮುಂಭಾಗ ಇರೋ ಕಾರಿನ ಮಹಜರು ನಡೆಸಲಿದ್ದಾರೆ. ಹತ್ಯೆ ಬಳಿಕ ಮೈಸೂರಿಗೆ ಹೋಗಲು ಬಳಸಿದ್ದ ಐಷಾರಾಮಿ ಕಾರನ್ನೂ ಪೊಲೀಸರು ವಶಕ್ಕೆ ಪಡೆಯೋ ಸಾಧ್ಯತೆಗಳಿವೆ.

**ಮೊಬೈಲ್‌ಗೆ ಮುಂದುವರಿದ ಹುಡುಕಾಟ:** ಇನ್ನು ಇಡೀ ಪ್ರಕರಣಕ್ಕೆ ರೇಣುಕಸ್ವಾಮಿ ಮಾಡಿರುವ ಚಾಟಿಂಗ್ ಕಾರಣವಾಗಿರುವುದರಿಂದ, ಇದೀಗ ರೇಣುಕಾಸ್ವಾಮಿ ಮೊಬೈಲ್‌ಗಾಗಿ ಹುಡುಕಾಟ ನಡೆದಿದೆ. ಶವ ಎಸೆಯುವ ಸಮಯದಲ್ಲಿ ಮೊಬೈಲ್ ಅನ್ನು ಆರೋಪಿಗಳು ರಾಜಕಾಲುವೆಗೆ ಎಸೆದಿದ್ದಾರೆ. ಆದ್ದರಿಂದ ಇದೀಗ ಸುಮನಹಳ್ಳಿ ರಾಜಕಾಲುವೆ ಬಳಿ ರೇಣುಕಸ್ವಾಮಿಯ ಮೊಬೈಲ್ ಶೋಧಕಾರ್ಯ ಮುಂದುವರೆದಿದೆ. ಆರೋಪಿ ಪ್ರದೋಶ್‌ನನ್ನು ಪೊಲೀಸರು ಕರೆದೊಯ್ದು ಸುಮಾರು ಒಂದು ಗಂಟೆಗಳ ಕಾಲ ಸುಮನಹಳ್ಳಿ ಬಳಿಯ ಚರಂಡಿಯಲ್ಲಿ ಹುಡುಕಿದರು. ಆದರೆ ಮೊಬೈಲ್ ಸಿಕ್ಕಿಲ್ಲ ಎನ್ನಲಾಗಿದೆ.

ಇಡೀ ಘಟನೆಯಿಂದ ವಿಜಯಲಕ್ಷ್ಮಿ ಅವರು ಮಾನಸಿಕವಾಗಿ ಕುಗ್ಗಿದ್ದಾರೆ. ಈ ನಡುವೆ ಪೊಲೀಸ್ ಆಯುಕ್ತರು ಹಾಗೂ ಕೆಲವು ಮಾಧ್ಯಮಗಳು, ಪವಿತ್ರಾ ಗೌಡ ಅವರನ್ನು ದರ್ಶನ್ ಪತ್ನಿ ಎಂದು ಹೇಳುತ್ತಿರುವುದು ವಿಜಯಲಕ್ಷ್ಮಿ ಅವರಿಗೆ ತೀವ್ರ ಬೇಸರ ತಂದಿದೆ. ವಿಜಯಲಕ್ಷ್ಮಿ ಅವರೊಬ್ಬರೇ ದರ್ಶನ್ ಏಕೈಕ ಕಾನೂನುದಬದ್ಧ ಪತ್ನಿ, ಪವಿತ್ರಾ ಗೌಡ ಅಲ್ಲ, ಮಾಧ್ಯಮಗಳು ಪವಿತ್ರಾ ಅವರನ್ನು ದರ್ಶನ್ ಪತ್ನಿ ಎಂದು ಹೇಳಬಾರದು.

-**ಅನಿಲ್ ಬಾಬು,** ದರ್ಶನ್ ಪರ ವಿಜಯಲಕ್ಷ್ಮಿ ಅವರಿಂದ ನೇಮಿಸಲ್ಪಟ್ಟಿರುವ ವಕೀಲ

### ದರ್ಶನ್ ನೋಡಲು ಬಾರದ ಕುಟುಂಬಸ್ಥರು

ಈ ನಡುವೆ ದರ್ಶನ್ ಜೈಲು ಪಾಲಾಗಿ ಎರಡು ವಾರ ಕಳೆಯುತ್ತಾ ಬಂದರೂ, ದರ್ಶನ್‌ನನ್ನು ನೋಡಲು ಪತ್ನಿ ವಿಜಯಲಕ್ಷ್ಮೀ, ಪುತ್ರ ಹಾಗೂ ದರ್ಶನ್ ತಾಯಿಯಾಗಲಿ ಬಂದಿಲ್ಲ. ದರ್ಶನ್ ಪರ ವಾದ ಮಂಡಿಸಲು ವಕೀಲರನ್ನು ವಿಜಯಲಕ್ಷ್ಮೀ ನೇಮಿಸಿದ್ದರೂ, ದರ್ಶನ್ ಜತೆ ಮಾತನಾಡಲು ಠಾಣೆಗಾಗಲಿ, ನ್ಯಾಯಾಲಯದ ಬಳಿಯಾಗಲಿಲ್ಲ. ಇನ್ನು ಸಹೋದರನೊಂದಿಗೂ ಜಗಳವಾಡಿಕೊಂಡಿದ್ದರಿಂದ ಕುಟುಂಬದ ಯಾರೂ ಭೇಟಿಯಾಗಲು ಬಂದಿಲ್ಲವೆಂದು ತಿಳಿದುಬಂದಿದೆ.

ವಿಡಿಯೊಗಳನ್ನು ಬಿಡುಗಡೆಗೊಳಿಸಬೇಕು | ನೂರಾರು ಊಹಾಪೋಹಗಳು ಹುಟ್ಟಿಕೊಳ್ಳುತ್ತಿದ್ದು, ಇದಕ್ಕೆ ಉತ್ತರ ಸಿಗಬೇಕಿದೆ

## ಕೊಲೆ ಪ್ರಕರಣ ಪಾರದರ್ಶಕವಾಗಿ ತನಿಖೆಯಾಗಲಿ: ಉಪೇಂದ್ರ

**ಬೆಂಗಳೂರು:** ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ನ್ಯಾಯಾಂಗ ಬಂಧನದಲ್ಲಿದ್ದಾರೆ. ಇತ್ತ ದರ್ಶನ್ ವಿರುದ್ಧ ಅಸಮಾಧಾನವೂ ವ್ಯಕ್ತವಾಗುತ್ತಿದೆ. ಹಲವು ನಟ ನಟಿಯರು ತಪ್ಪಿತಸ್ಥರಿಗೆ ಶಿಕ್ಷೆ ಆಗಲಿ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿಂತರೆ ನಟ ಉಪೇಂದ್ರ ಕೂಡ ಸೋಷಿಯಲ್ ಮೀಡಿಯಾದಲ್ಲಿ ಅಭಿಮತ ಹಂಚಿಕೊಂಡಿದ್ದಾರೆ.

ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ದರ್ಶನ್ ಬಂಧನ ರೇಣುಕಸ್ವಾಮಿ ಕೊಲೆ ಪ್ರಕರಣ ಮತ್ತು ಅದರ ವಿಚಾರಣೆ ಇಡೀ ಕರ್ನಾಟಕ ಮಾತ್ರವಲ್ಲ ಇಡೀ ಭಾರತವೇ ಬೆರಗಾಗಿ ನೋಡುತ್ತಿದೆ. ಈ ಹೈ ಪ್ರೊಫೈಲ್ ಕೇಸಿನ ವಿಚಾರಣೆಯಲ್ಲಿ ನಿಷ್ಪಕ್ಷಪಾತವಾದ ನಿರ್ಣಯ ಮತ್ತು ನ್ಯಾಯಕ್ಕಾಗಿ ಕಾಯುತ್ತಿದ್ದಾರೆ. ರೇಣುಕಾ ಸ್ವಾಮಿ ಕುಟುಂಬದಲ್ಲಿ, ಜನರಲ್ಲಿ, ಮಾಧ್ಯಮಗಳಲ್ಲಿ ಮತ್ತು ದರ್ಶನ್ ಅಭಿಮಾನಿಗಳಲ್ಲಿ ಏನೇನೋ ಆತಂಕ, ಅನುಮಾನಗಳು ಕಾಡುತ್ತಿದೆ.

ಊಹಾಪೋಹಗಳು ಹುಟ್ಟಿಕೊಳ್ಳುತ್ತಿದೆ. ಯಾವುದೇ ಕೇಸ್ ಆದರೂ ಆ ಕೇಸ್‌ನ ವಿಚಾರಣೆಯ ವಿಡಿಯೊ ದಾಖಲೆಗಳನ್ನು ಮತ್ತು ಸಾಕ್ಷಿಗಳ ಎಲ್ಲಾ ವಿವರಗಳನ್ನು ಆಗಾಗ ಪೊಲೀಸರು ಸಂಬಂಧಪಟ್ಟ ವ್ಯಕ್ತಿಗಳ ಕುಟುಂಬದವರ ಜತೆ ಹಂಚಿಕೊಳ್ಳಬೇಕು ಮತ್ತು ಅದು ಕಾನೂನಾಗಬೇಕು. ಅದೇ ರೀತಿ ಒಬ್ಬ ಸಾರ್ವಜನಿಕ ವ್ಯಕ್ತಿಯ ಬಗ್ಗೆ ಕೇಸ್ ಆಗಿದ್ದರೆ ಆ ಕೇಸಿನ ವಿಚಾರಣೆಯ ವಿಡಿಯೊ ದಾಖಲೆಗಳನ್ನು ಮತ್ತು ಸಾಕ್ಷಿಗಳ ಎಲ್ಲಾ ವಿವರಗಳನ್ನು ಪೊಲೀಸರು ಆಗಾಗ ಸಾರ್ವಜನಿಕವಾಗಿ ತೆರೆದಿಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಒಬ್ಬ ಸಾರ್ವಜನಿಕ ವ್ಯಕ್ತಿಯ ವಿಚಾರಣೆ ಸಾರ್ವಜನಿಕವಾಗಿ, ಸಂಪೂರ್ಣ ಪಾರದರ್ಶಕತೆಯಿಂದ ಆಗಬೇಕು, ಸಾಕ್ಷಿ ನಾಶ, ಪ್ರಭಾವಿಗಳ ಹಸ್ತಕ್ಷೇಪ, ಭ್ರಷ್ಟಾಚಾರ ಇವಕ್ಕೆಲ್ಲಾ ತೆರೆ ಎಳೆದಂತಾಗುತ್ತದೆ. ಆಗ ರೇಣುಕಸ್ವಾಮಿ ಕುಟುಂಬಕ್ಕೆ, ಜನರಿಗೆ, ಮಾಧ್ಯಮಗಳಿಗೆ ಮತ್ತು ದರ್ಶನ್ ಅಭಿಮಾನಿಗಳಿಗೆ ಮನಸಿನಲ್ಲಿ ಗೊಂದಲಗಳಿಲ್ಲದೆ ಪೊಲೀಸ್ ಮತ್ತು ಮಾಧ್ಯಮಗಳ ಬಗ್ಗೆ ಇನ್ನೂ ಗೌರವ ಹೆಚ್ಚಾಗುತ್ತದೆ ಮತ್ತು ನ್ಯಾಯ ಸಿಗುತ್ತದೆ ಎಂಬ ನಂಬಿಕೆ ಬರುತ್ತದೆ ಎಂದು ಉಪೇಂದ್ರ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ.



### ಆರೋಪಿ ಮನೆಯಲ್ಲಿ ಒಡವೆ ಪತ್ತೆ

ರೇಣುಕಾಸ್ವಾಮಿ ಧರಿಸಿದ್ದ ಒಡವೆಗಳನ್ನು ಆರೋಪಿ ರಾಘವೇಂದ್ರ ಕಳ್ಳತನ ಮಾಡಿದ್ದ ಎಂದು ಹೇಳಲಾಗಿತ್ತು. ಇದೀಗ ರಾಘವೇಂದ್ರ ಮನೆಯಲ್ಲಿ ರೇಣುಕಾಸ್ವಾಮಿ ಉಂಗುರ, ಚೈನ್ ವಶಕ್ಕೆ ಪಡೆಯಲಾಗಿದೆ. ರಾಘವೇಂದ್ರ ಪತ್ನಿ ಬಳಿಯಿದ್ದ ಚಿನ್ನಾಭರಣಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಭಾನುವಾರ ಮಹಜರು ಸಮಯದಲ್ಲಿ 4.5 ಲಕ್ಷ ಹಣ, ಒಡವೆ ಹಾಗೂ ಬಟ್ಟೆಗಳನ್ನು ಸೀಜ್ ಮಾಡಲಾಗಿದೆ. ರೇಣುಕಾಸ್ವಾಮಿ ಶೆಡ್ ಒಳಗೆ ಹೋಗುವ ಮುನ್ನ ಕಾರಿನಲ್ಲಿ ಒಡವೆ ಬಿಚ್ಚಿಟ್ಟಿದ್ದ. ತನ್ನ ಮೇಲೆ ಹಲ್ಲೆ ಮಾಡಬಹುದು ಎಂದು ಮೊದಲೇ ಊಹಿಸಿದ್ದ ರೇಣುಕಾಸ್ವಾಮಿ, ಹಲ್ಲೆ ವೇಳೆ ಒಡವೆಗಳನ್ನು ಕಿತ್ತುಕೊಳ್ಳಬಹುದು ಎಂದು ಊಹಿಸಿ ಉಂಗುರ ಹಾಗೂ ಚೈನ್ ಬಿಚ್ಚಿಟ್ಟಿದ್ದ. ಕಾರಿನಲ್ಲಿ ಚಿತ್ರದುರ್ಗಕ್ಕೆ ಹೋದ ಬಳಿಕ ರಾಘವೇಂದ್ರ ಪತ್ನಿಗೆ ಜಗ್ಗ ಹಾಗೂ ಅನುಕುಮಾರ್ ಒಡವೆ ನೀಡಿದ್ದರು ಎನ್ನಲಾಗಿದೆ.

### ರಕ್ತಸಿಕ್ತ ಬಟ್ಟೆಗಳೇ ಸಾಕ್ಷಿ

ಇಡೀ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿ ಬಟ್ಟೆಗಳು ಸಿಕ್ಕಿವೆ. ಮಹಜರು ವೇಳೆ, ಕೊಲೆ ನಡೆದ ದಿನದಂದು ದರ್ಶನ್ ಹಾಗೂ ಪವಿತ್ರಾ ಗೌಡ ಧರಿಸಿದ್ದ ಬಟ್ಟೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಬಟ್ಟೆಗಳನ್ನು ಡ್ರೈ ಕ್ಲೀನಿಂಗ್‌ಗೆ ಕೊಟ್ಟಿದ್ದರೂ ರಕ್ತದ ಕಲೆಗಳು ಪತ್ತೆಯಾಗಿವೆ. ಇದೇ ತನಿಖೆಗೆ ಸಹಕಾರಿಯಾಗಲಿದೆ. ಇನ್ನೂ ರಕ್ತದ ಕಲೆಗಳು ಇಲ್ಲದಿದ್ದರೂ, ಚಿತ್ರದುರ್ಗದ ರಾಘವೇಂದ್ರ ತಾನೇ ಬಟ್ಟೆಯನ್ನು ಎರಡೆರಡು ಬಾರಿ ಒಗೆದು ಹಾಕಿದ್ದ. ಮತ್ತೊಂದು ಕಡೆ ಜಗ್ಗ ಬಟ್ಟೆಯನ್ನು ಎತ್ತಿ ಬಿಸಾಡಿದ್ದ. ಈ ಬಟ್ಟೆಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದು, ತನಿಖೆ ನಡೆಸುತ್ತಿದ್ದಾರೆ.



ದರ್ಶನ್ ಬರುವ ವೇಳೆಗೆ ಪ್ರಜ್ಞೆ ತಪ್ಪಿದ್ದ ರೇಣುಕಾಸ್ವಾಮಿ

## ರೇಣುಕಾಸ್ವಾಮಿ ಎಬ್ಬಿಸಲು ಕರೆಂಟ್ ಕೊಟ್ಟಿದ್ದ ಡಿ ಗ್ಯಾಂಗ್

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರಿಗೆ ದರ್ಶನ್ ಅಂಡ್ ಗ್ಯಾಂಗ್ ನಡೆಸಿದ ಹೀನ ಕೃತ್ಯಗಳು ಬೆಳಕಿಗೆ ಬರುತ್ತಿವೆ. ಕೃತ್ಯದಲ್ಲಿ ಬಂಧಿತನಾಗಿರುವ ಧನರಾಜ್ ಜತೆಗೆ ಆತನ ಸಹಚರರು ಎಲೆಕ್ಟ್ರಿಕಲ್ ಶಾಕ್ ನೀಡಿದ್ದರು ಎಂಬುದು ವಿಚಾಚರಣೆ ವೇಳೆ ಬಯಲಾಗಿದೆ.

ಪ್ರಕರಣದಲ್ಲಿ 9ನೇ ಆರೋಪಿಯಾಗಿರುವ ಧನರಾಜ್, ನಟ ದರ್ಶನ್ ಮನೆಯಲ್ಲಿ ಸಾಕು ನಾಯಿಗಳನ್ನು ನೋಡಿಕೊಳ್ಳುತ್ತಿದ್ದ. ಇದಕ್ಕೂ ಮೊದಲು ಧನರಾಜ್ ಡಾಗ್ ಬ್ರೀಡಿಂಗ್ ಆಗಿದ್ದ. ದರ್ಶನ್ ಜತೆ ಆಪ್ತನಾದ ಬಳಿಕ ಇವರ ಮನೆಯಲ್ಲೇ ಕೆಲಸ ಮಾಡಿಕೊಂಡಿದ್ದ. ಧನರಾಜ್‌ನನ್ನು ಬಂಧಿಸಿದ ಪೊಲೀಸರು ವಿಚಾರಣೆಯಲ್ಲಿ ಹಲವಾರು ಮಾಹಿತಿಗಳನ್ನು ಕಲೆ ಹಾಕಿದ್ದಾರೆ.

ಧನರಾಜ್ ಎಲೆಕ್ಟ್ರಿಕ್ ಶಾಕ್ ನೀಡುವ ಮೆಗ್ಗಾರ್ ಅನ್ನು ಹಲವಾರು ತಿಂಗಳಿಂದ ಇಟ್ಟುಕೊಂಡಿದ್ದ. ಫೈನಾನ್ಸ್ ಸರಿಯಾಗಿ ಕಟ್ಟದ ಹಲವರಿಗೆ ಬಂಧಿತ ಆರೋಪಿಯಾಗಿರುವ ವಿನಯ್ ಶೆಡ್‌ನಲ್ಲಿ ಹಲ್ಲೆ ಮಾಡುತ್ತಿದ್ದ. ಈ ವೇಳೆ ಹಲ್ಲೆ ಮಾಡುವಾಗೆಲ್ಲಾ ಈ ಧನರಾಜ್ ಜೊತೆಗೆ ಇರುತ್ತಿದ್ದ. ಈ ಹಿಂದೆ ಹಲವಾರು ಜನರಿಗೆ ಹಲ್ಲೆ ಮಾಡುವಾಗ ಇದೇ ಮೆಗ್ಗಾರ್‌ನಿಂದ ಶಾಕ್ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

**ದರ್ಶನ್ ಬರುವ ಮೊದಲೇ ಪ್ರಜ್ಞೆ ತಪ್ಪಿದ್ದ ಸ್ವಾಮಿ**

ಇನ್ನು ಚಿತ್ರದುರ್ಗದಿಂದ ರೇಣುಕಾಸ್ವಾಮಿ ಅವರನ್ನು ಕರೆದುಕೊಂಡು ಬಂದ ದರ್ಶನ್ ಸಹಚರರು, ದರ್ಶನ್ ಬರುವ ಮೊದಲೇ ಥಳಿಸಿದ್ದಾರೆ. ಹೊಡೆತಕ್ಕೆ ದರ್ಶನ್ ಬರುವ ಮೊದಲೇ, ಪ್ರಜ್ಞೆ ತಪ್ಪಿದ್ದನಂತೆ. ದರ್ಶನ್ ಬರುತ್ತಿದ್ದಂತೆ ಆತನ ಮುಂದೆ ಹಿರೋಯಿಸಂ ತೋರಿಸಲು, ರೇಣುಕಸ್ವಾಮಿಯನ್ನು ಎಬ್ಬಿಸಲು ಮೆಗ್ಗರ್ ಮೂಲಕ ಶಾಕ್ ಕೊಟ್ಟಿದ್ದರೆಂದು ಇದೀಗ ತಿಳಿದುಬಂದಿದೆ.

**PUBLIC NOTICE**

This is to inform the General Public that **SMT.K.C.VISHALAKSHI W/o.Nagaraja.K.B**, is the owner of immovable property mentioned in the schedule hereunder and she lost the original Sale Deed dated 15/12/2015 Document No.14286/2015-16, of Book-1, stored in C.D.No.403, executed by Mr.Khaleel Sab in favour of Sri.J.B.Chandrappa, SRO Davanagere, pertaining to the schedule property. In case anybody having any claims or in possession of the said document, shall inform the under singed and handover the same within SEVEN DAYS from the date of publication of this notice.

**SCHEDULE PROPERTY**

All that piece and parcel of the land bearing Re-Sy.no.102/16, Eastern portion Block-2 measuring 8 guntas out of 2 acres, situated in Avaragolla Village, Kasaba Hobli, Davanagere Taluk, and bounded on the :
**East by :** land belongs to Sri.B.G.Vishwambara
**West by :** Remaining portion of land same land in Re-Sy.no.102/16,
**North by :** land belongs to Chandraiah,
**South by :** Road

**N. JAGADEESH KUMAR, Advocate,**
No.30/1, 2nd Floor, 7th Cross, Near NR Colony Bus Stand, Opp. Hotel Dwaraka, Bangalore-560019. Cell # 9341261700

**PUBLIC NOTICE**

My client **Mrs. CHITRALEKHA RAMAKRISHNAN and Mr. SRIDHAR ADHINARAYANAN,** have lost SALE DEED bearing No. BGR-1-2868-2009-10, of Book-I, Stored in CD No. BGRD30, dated: 11-12-2009, registered at the office of the sub registrar Begur, Bangalore and connected GPA executed by them in favour of **Mrs. SASIREKHA SHANMUGAM,** for registration above flat in their names Pertaining to the schedule property. Police lost report is also filed.

**SCHEDULE PROPERTY**

All that piece and parcel of the Residential Flat bearing No. 708, H Type, Eighth Floor, **Divya Jyothi Royal Heights Apartments,** buildup are of 1615 Sq.ft, carpet area of 1325 Sq.ft., and Plinth Area of 1486 Sq.ft., and 680 Sq.ft., of undivided share and interest in the land comprised in Schedule A Property along with one covered car parking space situated at **Sy. No. 155/1A1, Begur Village, Begur Hobli, Bangalore South, Bangalore** and bounded on, **East by:** Road and Singasandra Gadi and remaining Portion of the same land in Sy. No. 155/1A1, **West by:** Lands in Sy. No. 156/1, **North by:** Remaining Portion of the same land in Sy. no. 155/1A1 belonging to K. Ramamurthy, **South by:** Road and also the remaining portion of lands in Sy. No. 155/1A2.

Any person having any right over above flat or in possession of the document, may lodge or return the same to the under signed ***within 15 days*** from today, failing which my clients will go ahead with transaction.

*Sd/-*
**K.V. MANI,** *B.A. LL.B.,*
**Advocate & Notary,**
# 23/1, Hosur Road, Adugodi,
Bengaluru-560 030.
Mob: +91 7676959289 +91 8073612668.
Place:- Bengaluru Date:- 17/06/2024

## ತಾಯಿಗೆ ಚಿತ್ರಹಿಂಸೆ ನೀಡಿದ ಪ್ರಿಯಕರನ ಕೊಂದ ಮಗ

**ಬೆಂಗಳೂರು:** ನಿರ್ಮಾಣ ಹಂತದ ಕಟ್ಟಡದಲ್ಲಿ ದೊಣ್ಣೆಯಿಂದ ಹೊಡೆದು ವ್ಯಕ್ತಿಯ ಬರ್ಬರ ಕೊಲೆಮಾಡಿರುವ ಘಟನೆ ಪರಪ್ಪನ ಅಗ್ರಹಾರದ ಕೂಡ್ಲು ಬಳಿ ನಡೆದಿದೆ.

ಕೂಡ್ಲು ಗ್ರಾಮದ ಸಾಯಿ ಮೆಡೋಸ್ ಲೇಔಟ್‌ನ ಕೃಷ್ಣೋಜಿರಾವ್ (37) ಕೊಲೆಯಾದವರು, ಕೃತ್ಯ ನಡೆಸಿ ಪರಾರಿಯಾಗಿರುವ ಶಿವಕುಮಾರ್, ರಾಜೇಶ್ವರಿ ಬಂಧನಕ್ಕೆ ಶೋಧ ನಡೆಸಲಾಗಿದೆ.

ಮದುವೆಯಾಗಿದ್ದ ರಾಜೇಶ್ವರಿ ಪತಿಯಿಂದ ದೂರಾಗಿದ್ದು, ಕೆಲ ವರ್ಷಗಳಿಂದ ಕೃಷ್ಣೋಜಿರಾವ್ ಜತೆ ಅಕ್ರಮ ಸಂಬಂಧ ಹೊಂದಿದ್ದಳು. ಇವರಿಬ್ಬರು ಗಂಡ-ಹೆಂಡತಿ ಎಂದು ಹೇಳಿಕೊಂಡು ನಿರ್ಮಾಣ ಹಂತದ ಕಟ್ಟಡದಲ್ಲಿ ಗಾರೆ ಕೆಲಸ ಮಾಡಿಕೊಂಡು ಒಟ್ಟಿಗಿದ್ದು,ಅವರ ಜೊತೆ ರಾಜೇಶ್ವರಿಯ ಮಗ ಶಿವಕುಮಾರ್ ವಾಸವಿದ್ದನು. ಇತ್ತೀಚೆಗೆ ಕೃಷ್ಣೋಜಿರಾವ್ ದಿನನಿತ್ಯ ಕುಡಿದು ಬಂದು ರಾಜೇಶ್ವರಿಗೆ ಹಲ್ಲೆ ಮಾಡುತ್ತಿದ್ದು,ಇದರಿಂದಾಗಿ ರಾಜೇಶ್ವರಿ ಹಾಗೂ ಆಕೆಯ ಮಗ ಶಿವಕುಮಾರ್ ಬೇಸತ್ತಿದ್ದರು. ಭಾನುವಾರ ಸಂಜೆ ಕಂಠ ಪೂರ್ತಿ ಕುಡಿದು ಬಂದಿದ್ದ ಕೃಷ್ಣೋಜಿರಾವ್, ರಾಜೇಶ್ವರಿ ಜೊತೆಗೆ ಗಲಾಟೆ ಮಾಡಿ ಹಲ್ಲೆ ಮಾಡುತ್ತಿದ್ದು,ಈ ವೇಳೆ ಅಲ್ಲಿಗೆ ಬಂದ ರಾಜೇಶ್ವರಿ ಮಗ ಶಿವಕುಮಾರ್ ದೊಣ್ಣೆಯಿಂದ ಕೃಷ್ಣೋಜಿರಾವ್ ತಲೆಗೆ ಹೊಡೆದಿದ್ದ.

ಆಗ ಶಿವಕುಮಾರನ ತಾಯಿ ರಾಜೇಶ್ವರಿ ಅವನನ್ನು ಮುಗಿಸಿಬಿಡು ಎಂದಿದ್ದಾಳೆ. ಆಗ ಮತ್ತೆ ದೊಣ್ಣೆಯಿಂದ ಮುಖ ಹಾಗೂ ತಲೆಗೆ ಹೊಡೆದು ಕೊಂದುಹಾಕಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಪರಪ್ಪನ ಅಗ್ರಹಾರ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿ ತನಿಖೆಯನ್ನು ನಡೆಸುತ್ತಿದ್ದಾರೆ.

## ವಿಚಾರಣೆಗೆ ರೇವಣ್ಣ ಹಾಜರು

**ಬೆಂಗಳೂರು:** ಅಪಹರಣ ಪ್ರಕರಣದ ಆರೋಪಿಯಾಗಿರುವ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಸೋಮವಾರ ಎಸ್‌ಐಟಿ ತನಿಖಾಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಿದ್ದರು.

ರೇವಣ್ಣ ಹೇಳಿಕೆಯನ್ನು ತನಿಖಾಧಿಕಾರಿಗಳು ದಾಖಲಿಸಿಕೊಂಡರು. ಸಿಐಡಿ ಕಚೇರಿಗೆ ಬಂದ ಅವರನ್ನು ತನಿಖಾಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ಮೈಸೂರು ಜಿಲ್ಲೆಯ ಕೆ.ಆರ್.ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದ ಎಸ್‌ಐಟಿ ಅಧಿಕಾರಿಗಳು, ರೇವಣ್ಣ ಅವರನ್ನು ಮೇ 4ರಂದು ಬಂಧಿಸಿದ್ದರು. ಮರುದಿನವೇ ರೇವಣ್ಣ ಅವರನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿ, ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡಿದ್ದರು. ಕಸ್ಟಡಿ ಅವಧಿ ಮುಗಿದ ಮೇಲೆ ನ್ಯಾಯಾಲಯಕ್ಕೆ ರೇವಣ್ಣ ಅವರನ್ನು ಹಾಜರುಪಡಿಸಲಾಗಿತ್ತು. ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು.

ರೇವಣ್ಣ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು ಸೋಮವಾರ ಮಧ್ಯಾಹ್ನ ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾದರು.

ರೇವಣ್ಣ ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಎಸ್‌ಐಟಿ ಕಸ್ಟಡಿಯಲ್ಲಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ಅವರ ವಿಚಾರಣೆ ಸಹ ಮುಂದುವರಿದಿದೆ ಎಂದು ಮೂಲಗಳು ಹೇಳಿವೆ.

## ದರ್ಶನ್ ಅಭಿಮಾನಿ ಆತ್ಮಹತ್ಯೆ

**ಬೆಂಗಳೂರು:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತನಾಗಿರುವ ನಟ ದರ್ಶನ್ ಅವರ ಸ್ಥಿತಿ ಕಂಡು ನೊಂದ ಅಭಿಮಾನಿ ಮೋರಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡುವ ಘಟನೆ ಚನ್ನಪಟ್ಟಣ ತಾಲೂಕಿನ ಮಾಳೆ ದೊಡ್ಡಿಯಲ್ಲಿ ನಡೆದಿದೆ.ಮಾಳೆ ದೊಡ್ಡಿಯ ನಟ ದರ್ಶನ್ ಅಂದಾಭಿಮಾನಿ ಭೈರೇಶ್ ಆತ್ಮಹತ್ಯೆ ಮಾಡಿಕೊಂಡವರು. ತಮ್ಮ ಹೀರೋಗೆ ಈ ಸ್ಥಿತಿ ಬರಬಾರದಿತ್ತೆಂದು ನೊಂದು ಆತ್ಮಹತ್ಯೆ ಶಂಕೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಅನ್ನ ನೀರು ಬಿಟ್ಟಿದ್ದ ಭೈರೇಶ್ ದರ್ಶನ್‌ಗಾದ ಪರಿಸ್ಥಿತಿ ನೆನೆದು ಸಾಕಷ್ಟು ಮರುಗಿ ನಿತ್ರಾಣಗೊಂಡು ಮೋರಿಗೆ ಬಿದ್ದು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಭೈರೇಶ್ ಸಾವಿನ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ನಿಜವಾಗಲೂ ನೋವಿನಲ್ಲೇ ಆತ ಮೃತಪಟ್ಟಿದ್ದೇ ಎನ್ನುವ ಪ್ರಶ್ನೆ ಮೂಡಿದ್ದು, ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಬಿಬಿಎಂಪಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಆವರಣದಲ್ಲಿ ಸ್ಥಳೀಯ ಶಾಸಕ ಗೋಪಾಲಯ್ಯ, ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ಮಾಡಿ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾಜಿ ಬಿಬಿಎಂಪಿ ಸದಸ್ಯ ಎಂ.ಮಹದೇವ್, ವಾರ್ಡ್ ಅಧ್ಯಕ್ಷ ಡಾ.ನಾಗೇಂದ್ರ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## ಕಂಡ ಕನಸನ್ನು ನನಸು ಮಾಡಿದವರು ಹನುಮಂತಯ್ಯ

**ಬೆಂಗಳೂರು :** ಕಂಡ ಕನಸನ್ನು ನನಸು ಮಾಡಿದವರು ಎಲ್ ಹನುಮಂತಯ್ಯ ಎಂದು ಸಾಹಿತಿ ಶಿವಪ್ರಕಾಶ್ ಹೇಳಿದರು.

'ಭಾಗವತರು' ಸಾಂಸ್ಕೃತಿಕ ಸಂಘಟನೆ ವತಿಯಿಂದ ಡಾ.ಎಲ್.ಹನುಮಂತಯ್ಯ -65 ಬದುಕು ಮತ್ತು ಬರಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನಸು ಕಾಣುವವರಲ್ಲಿ ಸಾಹಿತಿಗಳೇ ಹೆಚ್ಚು. ಆದರೆ ಕಂಡ ಕನಸನ್ನು ನನಸು ಮಾಡಿ ತೋರಿದ ಅಪರೂಪದ ಸಾಹಿತಿ ಡಾ.ಎಲ್. ಹನುಮಂತಯ್ಯ. ಕನಸು ಕಾಣುವುದು ಸಾಮಾನ್ಯ, ಅದರಲ್ಲೂ ಸಾಹಿತಿಗಳಲ್ಲಿ ಸರ್ವೇ ಸಾಮಾನ್ಯ. ಆದರೆ ಕಂಡ ಕನಸನ್ನು ನನಸಾಗಿಸುವುದು ಅಪರೂಪ. ಆದರೆ ಹನುಮಂತಯ್ಯನವರು ಈ ಮಾತಿಗೆ ಭಿನ್ನವಾಗಿ ನಡೆದುಕೊಂಡವರು. ಸಾಹಿತಿಯಾಗಿ, ಹೋರಾಟಗಾರರಾಗಿ, ರಾಜಕಾರಣಿಯಾಗಿ ಅವರು ನಡೆದು ಬಂದ ದಾರಿ ವಿಭಿನ್ನ. ಸಾಹಿತ್ಯದಲ್ಲಿ ರಾಜಕೀಯವನ್ನಾಗಲಿ, ರಾಜಕೀಯದಲ್ಲಿ ಸಾಹಿತ್ಯವನ್ನಾಗಲಿ ಬೆರೆಸದೆ ಎರಡೂ ಕಡೆ ಶೋಷಿತರ ಪರವಾದ ಧ್ವನಿಯನ್ನು ಎತ್ತಿದ ಅಪರೂಪದ ವ್ಯಕ್ತಿ ಎಂದರು.

ದೂರದರ್ಶನ ಕೇಂದ್ರದ ಹಿರಿಯ ಕಾರ್ಯಕ್ರಮ ನಿರ್ವಾಹಕಿ ಎಚ್.ಎನ್.ಆರತಿ ಮಾತನಾಡಿ, ಹನುಮಂತಯ್ಯ ಅವರು ಬ್ಯಾಂಕ್ ನೌಕರರಾಗಿ ಬ್ಯಾಂಕ್‌ಗಳ ಇಂಗ್ಲೀಷ್‌ಮಯ ವಾತಾವರಣವನ್ನು ತಮ್ಮ ಹೋರಾಟದ ಮೂಲಕ ಕನ್ನಡಮಯವಾಗಿಸಿದ್ದನ್ನು ನೆನಪಿಸಿಕೊಂಡರು. ಈ ವೇಳೆ ಡಾ.ಎಲ್.ಹನುಮಂತಯ್ಯ ಅವರ 'ಮೂಲಮುಖಿ' ಹಾಗೂ 'ಆಕಾಶಕ್ಕೆ ಏಣಿ ಹಾಕು' ಕೃತಿಗಳು ಲೋಕಾರ್ಪಣೆಗೊಂಡವು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಭಾಗವತರು ಸಾಂಸ್ಕೃತಿಕ ಸಂಘಟನೆಯ ಕೆ.ರೇವಣ್ಣ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ, ಮಾಜಿ ಸಚಿವ ಪ್ರೊ.ಬಿ.ಕೆ. ಚಂದ್ರಶೇಖರ್ ಮತ್ತಿತರರು ಇದ್ದರು.

ವಿಜಯನಗರದ ಆದಿಚುಂಚನಗಿರಿ ಶಾಖ ಮಠದ ಪೀಠಾಧ್ಯಕ್ಷ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರನ್ನು ಕೇಂದ್ರ ಸಚಿವೆ ಕುಮಾರಿ ಶೋಭಾ ಕರಂದ್ಲಾಜೆ ಭೇಟಿ ಮಾಡಿ ಆಶೀರ್ವಾದ ಪಡೆದರು. ಈ ವೇಳೆ ಬಿಜೆಪಿ ಉತ್ತರ ಘಟಕದ ಅಧ್ಯಕ್ಷ ಎಸ್ ಹರೀಶ್, ಬಿಬಿಎಂಪಿ ಮಾಜಿ ಸದಸ್ಯರು, ಗಂಗಾಹನುಮಯ್ಯ ಸೇರಿದಂತೆ ಸ್ಥಳೀಯ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

## ಸಮಾಚಾರ ಸಣ್ಣದಲ್ಲ

### ನೀರಿನ ದರ ಪರಿಷ್ಕರಣೆ ಜಲಮಂಡಳಿ ಪ್ರಸ್ತಾವನೆ

**ಬೆಂಗಳೂರು:** ತೈಲಬೆಲೆ ಏರಿಕೆಯ ಬೆನ್ನಲ್ಲೇ ನೀರಿನ ದರ ಏರಿಕೆಯ ಬಿಸಿ ತಟ್ಟುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬಂದಿವೆ. ಲೋಕಸಭಾ ಚುನಾವಣೆಯ ಬಳಿಕ ನೀರಿನ ದರ ಹೆಚ್ಚಳದ ಸುಳಿವನ್ನು ರಾಜ್ಯ ಸರಕಾರವು ನೀಡಿತ್ತು. ಆದರೆ ಇದೀಗ 10 ವರ್ಷಗಳ ಬಳಿಕ ನೀರಿನ ದರ ಹೆಚ್ಚಳಕ್ಕೆ ಚಿಂತನೆ ನಡೆಸಲಾಗಿದ್ದು, ಜಲಮಂಡಳಿಯು ದರ ಏರಿಕೆಯ ಪ್ರಸ್ತಾವನೆಯನ್ನು ಈಗಾಗಲೇ ರಾಜ್ಯ ಸರಕಾರದ ಮುಂದಿಟ್ಟಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಜಲಮಂಡಳಿಯ ಭೇಟಿ ವೇಳೆಯಲ್ಲಿ ನೀರಿನ ದರ ಪರಿಷ್ಕರಣೆಯ ಕುರಿತಂತೆ ಸುಳಿವು ನೀಡಿದ್ದು, ಈಗ ಜಲಮಂಡಳಿಯ ದರ ಏರಿಕೆ ಪ್ರಸ್ತಾವನೆಗೆ ಒಪ್ಪಿಗೆ ನೀಡುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ಲೋಕಸಭಾ ಚುನಾವಣೆ ಬಳಿಕ ನೀರಿನ ದರ ಪರಿಷ್ಕರಣೆ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ಹೇಳಿದ್ದ ಸರಕಾರ ಇದೀಗ ದರ ಹೆಚ್ಚಳಕ್ಕೆ ಸಿದ್ಧತೆ ನಡೆಸಿದೆ. ಗೃಹಬಳಕೆ, ವಾಣಿಜ್ಯ ಸೇರಿದಂತೆ ಎಲ್ಲಾ ರೀತಿಯ ನೀರಿನ ಪೂರೈಕೆಯ ಮೇಲೆ ಶೇ.40ರಷ್ಟು ದರ ಏರಿಕೆಗೆ ಚರ್ಚೆ ನಡೆಸಲಾಗುತ್ತಿದ್ದು, ಸರಕಾರ ಒಪ್ಪಿಗೆ ಸೂಚಿಸಿದರೆ ದರ ಪರಿಷ್ಕರಿಸಲು ಜಲಮಂಡಳಿ ಸಿದ್ಧತೆ ನಡೆಸಿದೆ. ಈಗಾಗಲೆ ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಂಗಾಲಾಗಿರುವ ನಗರಿಗರಿಗೆ ಈಗ ನೀರಿನ ದರ ಏರಿಕೆಯಿಂದ ಮತ್ತಷ್ಟು ಸಮಸ್ಯೆಯಾಗಲಿದೆ.

### ಚೈತ್ರಾ-ಪ್ರತಿಭಾ ರಂಗಪ್ರವೇಶ

**ಬೆಂಗಳೂರು:** ವಿದ್ಯಮಾನ್ಯ ನಗರದ ಆರಾಧನಾ ನೃತ್ಯ ಮತ್ತು ಸಂಗೀತಶಾಲೆ ವತಿಯಿಂದ ಮೇಘಾ ಮತ್ತು ವಿದುಷಿ ಮಂದಾರ ಅವರ ನೇತೃತ್ವದಲ್ಲಿ



ಭಾನುವಾರ ಎ.ಡಿ.ಎ ರಂಗಮಂದಿರದಲ್ಲಿ ಚೈತ್ರಾ ಹಾಗೂ ಪ್ರತಿಭಾ ಅವರ ರಂಗಪ್ರವೇಶ ನಡೆಯಿತು. ಪುಷ್ಪಾಂಜಲಿ ಯೊಂದಿಗೆ ಪ್ರಾರಂಭವಾದ ನೃತ್ಯಾರಾಧನೆ ನಂತರ ಶ್ರೀ ಶಂಕರಾಚಾರ್ಯರ ಅರ್ಧ ನಾರೀಶ್ವರ ಸ್ತೋತ್ರವನ್ನು ಪ್ರಸ್ತುತ ಪಡಿಸಲಾ ಯಿತು. ಮಾತೃ ಸ್ವರೂಪಿಣಿ ಜಗನ್ಮಾತೆ, ಭಸ್ಮ ವಿಭೂಷಿತ ಪರಶಿವ, ಗಂಧ, ಚಂದನ ಲೇಪಿತೆ ಶಿವೆ, ಸರ್ಪಾಲಂಕಾರ ಶಿವ ಹೀಗೆ ಎರಡೂ ವಿರೋಧಿ ಶಕ್ತಿಗಳ ಸಂಗಮದ ಅಭಿನಯವನ್ನು ಚೈತ್ರ ಮತ್ತು ಪ್ರತಿಭಾರವರು ಬಹಳ ಸುಂದರವಾಗಿ ಅಭಿನಯಿಸಿ ದರು. ನಂತರದ ವರ್ಣ. ಶಂಕರ- ಮೀನಾಕ್ಷಿಯರ ಪರಿಣಯ. ಈ ನೃತ್ಯ 45 ನಿಮಿಷಗಳ ಅಭಿನಯ. ಡಾ. ಸುಪರ್ಣಾ ವೆಂಕಟೇಶ್ ಅವರ ನಾಟ್ಯ ಸಂಯೋಜನೆ ಅದ್ಭುತವಾಗಿ ಮೂಡಿಬಂತು. ಕಾರ್ಯಕ್ರಮಕ್ಕೆ ಅಭಿಷೇಕ್ ನಟುವಾಂಗ, ಮೇಘಾ, ಮೃದಂಗ ವಿದ್ವಾನ್ ವಿನಯ್ ನಾಗರಾಜ್, ಕೊಳಲು ವಿದ್ವಾನ್ ಮಹೇಶ್ ಸ್ವಾಮಿ, ವೀಣೆ ವಿದ್ವಾನ್ ಪ್ರಶಾಂತ್ ರುದ್ರಪಟ್ನ, ರಿದಂ ಪ್ಯಾಡ್ ವಿದ್ವಾನ್ ಕಾರ್ತಿಕ್ ಸಾಥ್ ನೀಡಿದರು.

### ಬಡವರ ಮೇಲೆ ತೆರಿಗೆ ಹಾಕಿ, ಜನತೆಗೆ ದ್ರೋಹ

**ಬೆಂಗಳೂರು:** ರಾಜ್ಯ ಸರಕಾರ ಗ್ಯಾರಂಟಿ ಕೊಡುವ ನೆಪದಲ್ಲಿ ಬಡವರ ಮೇಲೆ ತೆರಿಗೆ ಹಾಕಿ, ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡುವ ಮೂಲಕ ರಾಜ್ಯದ ಸಾಮಾನ್ಯ ಜನತೆಗೆ ದ್ರೋಹ ಮಾಡುತ್ತಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಗ್ಯಾರಂಟಿಗಳ ಹೆಸರಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯದೇ ರಾಜ್ಯದ ಪ್ರಗತಿ ಶೂನ್ಯವಾಗಿದ್ದು, ಆರ್ಥಿಕವಾಗಿ ದಿವಾಳಿಯಾಗಿದೆ. ಇದನ್ನು ಸರಿಪಡಿಸಲು ಹಲವಾರು ವರ್ಷಗಳೇ ಬೇಕು. ಇದಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರವೇ ನೇರ ಹೊಣೆ ಎಂದು ಆರೋಪಿಸಿದ್ದಾರೆ. ನೆರೆಯ ರಾಜ್ಯಗಳಲ್ಲಿನ ಮಿತ್ರ ಪಕ್ಷಗಳ ವ್ಯಾಪಾರಕ್ಕೆ ತೋದರೆಯಾಗದಂತೆ ಹಿತ ಕಾಯುವ ನೆಪದಲ್ಲಿ ಸಾಮಾನ್ಯರ ಮೇಲೆ ಹೊರೆ ಹಾಕಿ ಜನತೆಗೆ ದ್ರೋಹ ಮಾಡುತ್ತಿರುವುದು ರಾಜದ್ರೋಹ ಮಾಡಿದಂತೆ. ಪೆಟ್ರೋಲ್, ಡಿಸೇಲ್ ದರ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ರಾಜ್ಯದಲ್ಲಿ ಕಡಿಮೆ ಇದೆ ಎಂದು ಸಮರ್ಥಿಸಿಕೊಳ್ಳುತ್ತಿರುವ ಮುಖ್ಯಮಂತ್ರಿಗಳ ಜನ ವಿರೋಧಿ ನಡೆಯಿಂದ ಬಡವರ ಮೇಲೆ ಭಾರ ಹಾಕುವುದು ಯಾವ ನ್ಯಾಯ ಎಂದು ಬೊಮ್ಮಾಯಿ ಪ್ರಶ್ನಿಸಿದ್ದಾರೆ.

### ಪೆಟ್ರೋಲ್ ಶತಕ ಗಡಿ ದಾಟಿಸಿದ್ದೇ ಬಿಜೆಪಿ

**ಬೆಂಗಳೂರು:** ಬಿಜೆಪಿ ಸರಕಾರದ ಅವಧಿಯಲ್ಲೇ ಪೆಟ್ರೋಲ್ ಬೆಲೆ ಶತಕ ದಾಟಿದ್ದೂ, ಆದರೆ ಈಗ ಬಿಜೆಪಿ ನಾಯಕರು ಬೊಬ್ಬೆ ಹಾಕುತ್ತಿದ್ದಾರೆ ಎಂದು ಸಚಿವ ಜಮೀರ್ ಅಹ್ಮದ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇಂದ್ರ ಸರಕಾರದಿಂದ ಪ್ರತಿ ಲೀಟರ್ ಪೆಟ್ರೋಲ್‌ಗೆ 32.98 ರು, ಹಾಗೂ ಪ್ರತಿ ಲೀಟರ್ ಡೀಸೆಲ್‌ಗೆ 31.83 ರು. ಅಬಕಾರಿ ಸುಂಕ ಸಂಗ್ರಹಿಸುತ್ತಿದ್ದರೂ ಇದರ ಬಗ್ಗೆ ಬಿಜೆಪಿ ನಾಯಕರು ಯಾಕೆ ಧ್ವನಿ ಎತ್ತುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ. ಯುಪಿಎ ಸರಕಾರದ ಅವಧಿಯಲ್ಲಿ ಕಚ್ಚಾತೈಲ ಬೆಲೆ ಬ್ಯಾರಲ್‌ಗೆ 97.68 ಡಾಲರ್ ಇದ್ದಾಗಲೂ ಪೆಟ್ರೋಲ್ ಬೆಲೆ 68.31 ಹಾಗೂ ಡೀಸೆಲ್ ಬೆಲೆ 48.63ಕ್ಕೆ ದೊರೆಯುತ್ತಿತ್ತು. ಅಬಕಾರಿ ಸುಂಕ ಕೂಡ ಪೆಟ್ರೋಲ್‌ಗೆ 9.48 ರೂ.ಹಾಗೂ ಡೀಸೆಲ್ ಗೆ 3.56 ರು. ವಿಧಿಸಲಾಗಿತ್ತು. ಆದರೆ ಬಿಜೆಪಿ ಸರಕಾರದ ಅವಧಿಯಲ್ಲಿ ಕಚ್ಚಾತೈಲ ಬೆಲೆ 77.64 ಡಾಲರ್‌ಗೆ ಇಳಿಕೆಯಾಗಿದ್ದರೂ ಸಹ ಬಸವರಾಜ ಬೊಮ್ಮಾಯಿ ಸರಕಾರದಲ್ಲಿ ಪೆಟ್ರೋಲ್ ಬೆಲೆ 100 ರು, ಅಡುಗೆ ಅನಿಲ ಬೆಲೆ 419 ರು. ಇದ್ದದ್ದು 903 ರು. ತಲುಪಿದಾಗ ಇವರ ಧ್ವನಿ ಎಲ್ಲಿ ಅಡಗಿತ್ತು. ಈ ಕುರಿತು ಬಿಜೆಪಿ ನಾಯಕರು ಬಹಿರಂಗ ಚರ್ಚೆಗೆ ಬರುವಂತೆ ಜಮೀರ್ ಸವಾಲು ಹಾಕಿದರು. ನೆರೆಯ ತಮಿಳುನಾಡು, ಆಂಧ್ರ, ಮಹಾರಾಷ್ಟ್ರಕ್ಕೆ ಹೋಲಿಸಿದರೆ ರಾಜ್ಯದಲ್ಲಿ ತೆರಿಗೆ ಹೆಚ್ಚಳ ನಂತರವೂ ಪೆಟ್ರೋಲ್ ಲೀಟರ್‌ಗೆ 5 ರಿಂದ 7 ರು. ವರೆಗೆ ಕಡಿಮೆ ಇದೆ ಎಂದು ಸಚಿವರು ತಿಳಿಸಿದ್ದಾರೆ.

---

ಸೊಪ್ಪು, ಬೀನ್ಸ್, ಆಲೂಗಡ್ಡೆ ಬೆಲೆಯೂ ಏರಿಕೆ | ಗ್ರಾಹಕ ಜೇಬಿಗೆ ಕತ್ತರಿ

# ಪೂರೈಕೆ ಕುಸಿತ: ತರಕಾರಿ ಬೆಲೆ ಮತ್ತೆ ಗಗನಕ್ಕೆ

**ಹೂವಪ್ಪ ಐ ಹೆಚ್.** ಬೆಂಗಳೂರು

ಮಾರುಕಟ್ಟೆಯಲ್ಲಿ ಹಸಿರು ತರಕಾರಿ, ಸೊಪ್ಪು, ಬೀನ್ಸ್ ಬಳಿಕ ಇದೀಗ ಟೊಮೇಟೊ ಬೆಲೆ ದಿಢೀರ್ ಏರಿಕೆಯಾಗಿದೆ.

ಎಪಿಎಂಸಿ ಸಗಟು ಕೆಜಿಗೆ 50-60 ನಂತೆ ಮಾರಾಟವಾಗಿದೆ. ಕೋಲಾರ ನಾಸಿಕ್ ನಿಂದ ಬರುತ್ತಿದ್ದ ಟೊಮೇಟೊ ಕೋಲಾರ ಮಾರುಕಟ್ಟೆಗೆ ಬರುತ್ತಿಲ್ಲ ಸ್ಥಳೀಯ ಟೊಮೇಟೊ ಮಾರುಕಟ್ಟೆ ಗೆ ಅಂದಾಜು 120-140 ಸಾವಿರ ಬರುತ್ತಿದ್ದ ಬಾಕ್ಸ್ ಈಗ 70, 80 ಸಾವಿರ ಬಾಕ್ಸ್ ಮಾತ್ರ ಬರುತ್ತಿದೆ. ಮಳೆ ಹಾಗೂ ರೋಗಬಾಧೆ ಕಾರಣದಿಂದ ಮಾರುಕಟ್ಟೆಗೆ ಪೂರೈಕೆ ಗಣನೀಯವಾಗಿ ಕುಸಿದಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಶೀಘ್ರ ದರ 100-120 ಆದರೂ ಅಚ್ಚರಿ ಪಡಬೇಕಾಗಿಲ್ಲ ಎಂದು ವರ್ತಕರು ಹೇಳುತ್ತಾರೆ.

ಕಳೆದ ಎರಡು ವಾರಗಳ ಹಿಂದೆ ಬೆಂಗಳೂರಿನ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೇಟೊ ಬೆಲೆ ಕೆಜಿಗೆ 40-45 ರೂವರೆಗೆ ಇತ್ತು. ಆದರೆ ಈಗ ಉತ್ತಮ 70-80 ಕ್ಕೆ ಏರಿಕೆಯಾಗಿದೆ. ಮಧ್ಯಮ ಹಾಗೂ ಅತೀ ಮಾಧ್ಯಮ ದರ್ಜೆಯ ಟೊಮೆಟೋ ಕ್ರಮವಾಗಿ 50- 60 ಕ್ಕೆ ಮಾರಟವಾಗುತ್ತಿದೆ. ದಿನಬಳಕೆಯ ಟೊಮೇಟೊ ಬೆಲೆಯೇರಿಕೆ ಗ್ರಾಹಕರನ್ನು ಚಿಂತೆಗೀಡು ಮಾಡಿದೆ.

ಮಂಡ್ಯ, ಮೈಸೂರು, ಮದ್ದೂರು, ಕನಕಪುರ ಪ್ರದೇಶಗಳಿಂದ ಬೆಂಗಳೂರಿಗೆ ಬರುತ್ತಿದ್ದ ಟೊಮೇಟೊ ಪ್ರಮಾಣ ಬಹುತೇಕ ಇಳಿಕೆಯಾಗಿದೆ. ಚಿಕ್ಕಮಗಳೂರು, ಕಡೂರು ಕಡೆಯಿಂದ ಕಳೆದ ಎರಡು ವರ್ಷದಿಂದಲೂ ಟೊಮೇಟೊ ಸರಿಯಾಗಿ ಬರುತ್ತಿಲ್ಲ. ಇನ್ನು ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಮಳೆ, ರೋಗಬಾಧೆ ಕಾಟದಿಂದ ಪೂರೈಕೆ ಮುಕ್ಕಾಲು ಭಾಗದಷ್ಟು ಕಡಿಮೆಯಾಗಿದೆ ಎನ್ನುತ್ತಾರೆ ವ್ಯಾಪಾರಿಗಳು.

#### ಬಡವರಿಗೆ ಕಷ್ಟ

**ತರಕಾರಿಗಳನ್ನ ಖರೀದಿ ಮಾಡುವುದಾದರು ಹೇಗೆ ಹೇಳಿ. ಮನೆಗಳಲ್ಲಿ ಸಮಾರಂಭಗಳನ್ನು ಮಾಡುವುದಾದರು ಹೇಗೆ. ತರಕಾರಿಯಿಂದ ಹಿಡಿದು ದಿನಸಿವರೆಗೂ ಎಲ್ಲಾ ಬೆಲೆಯು ತುಂಬ ಜಾಸ್ತಿಯಾಗಿ ಹೋಗಿದೆ. ಹೀಗೆ ಮುಂದುವರೆದರೆ ಬಡಜನರ ಪರಿಸ್ಥಿತಿ ತುಂಬ ಕಷ್ಟವಾಗಲಿದೆ ಎಂದು ಗ್ರಾಹಕ ಶೋಭರಾಣಿ ಹೇಳುತ್ತಾರೆ.**

ಸದ್ಯ ಬೆಂಗಳೂರು ಮಾರುಕಟ್ಟೆಗೆ ಟೊಮೇಟೊಗೆ ಮಹಾರಾಷ್ಟ್ರದಿಂದ ಬರುತಿದ್ದ ಟೊಮೋಟೊ ಆವಕ ಬಾರಿ ಕಡಿಮೆಯಾಗಿದೆ. ಇದೀಗ ಕಳೆದ ನಾಲ್ಕು ದಿನಗಳಿಂದ ಅಲ್ಲೂ ಮಳೆಯಾಗುತ್ತಿದ್ದು, ಸಾಗಾಟ ಕಷ್ಟವಾಗಿದೆ. ಅಲ್ಲಿಯೂ ಕೆಜಿಗೆ 45 ದಾಟಿದೆ. ಸಗಟು ಮಾರುಕಟ್ಟೆ ಕಲಾಸಿಪಾಳ್ಯದಲ್ಲಿ 22ಕೆಜಿ ಟೊಮೇಟೊ ಕ್ರೇಟ್‌ಗೆ 1300-1500 ಗೆ ತಲುಪಿದೆ. ಅಂದರೆ ಹೋಲ್‌ಸೆಲ್ ದರವೇ ಕೆಜಿಗೆ 70 ತಲುಪಿದೆ.

> **ಇನ್ನು ತರಕಾರಿ ಬೆಲೆ ತುಂಬ ಜಾಸ್ತಿಯಾಗಿದೆ. ತರಕಾರಿ ಯಾವುದು ಸರಿಯಾಗಿ ಬರುತ್ತಿಲ್ಲ. ಹೊಸ ಬೆಳೆ ಬರುವವರೆಗೂ ಬೆಲೆ ಹೀಗೆ ಮುಂದುವರೆಯಲಿದೆ. ಆದರೆ ತರಕಾರಿಗಳ ಬೆಲೆ ಕೇಳಿ ಗ್ರಾಹಕರು ತರಕಾರಿಗಳನ್ನು ಖರೀದಿ ಮಾಡಲು ಹಿಂದುಮುಂದು ನೋಡುತ್ತಿದ್ದಾರೆ. ಒಂದು ಕೆಜಿ ಖರೀದಿಸುವವರು ಅರ್ಧ ಕೆಜಿ ಖರೀದಿ ಮಾಡುತ್ತಿದ್ದಾರೆ. ಇದರಿಂದ ವ್ಯಾಪಾರ ತುಂಬ ಕಡಿಮೆ ಆಗುತ್ತಿದೆ.**
>
> **- ಮುರುಳಿ, ತರಕಾರಿ ವ್ಯಾಪಾರಿ**

> **ಒಂದು ವಾರದಿಂದ ಮಳೆಯು ಬರುತ್ತಿದ್ದು, ಬಂದಂತಹ ಬೆಳೆಯು ಹಾಳಾಗುತ್ತಿದೆ. ಹೀಗಾಗಿ ಬರುವ ಅಲ್ಪ ತರಕಾರಿಗಳಿಗೆ ಹೆಚ್ಚಿನ ಬೇಡಿಕೆಯಾಗಿದೆ. ಇನ್ನು ಹೊಸ ಬೆಳೆ ಬರುವವರೆಗೂ ಬೆಲೆ ಇದೇ ರೀತಿ ಹೆಚ್ಚಾಗುವ ಸಾಧ್ಯತೆ ಇದ್ದು, ಮುಂದಿನ ದಿನಗಳಲ್ಲಿ ಮಳೆಯ ಅವಾಂತರ ಹೀಗೆ ಮುಂದುವರೆದರೆ ತರಕಾರಿಗಳ ಬೆಲೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ.**
>
> **- ಮಂಜುನಾಥ್, ಎಪಿಎಂಸಿ ತರಕಾರಿ ವ್ಯಾಪಾರಿ**

ಮುಂದಿನ ವಾರವೇ ಕೆಜಿ ದರ 120 ಆಗುವ ಸಾಧ್ಯತೆಯಿದೆ ಎಂದು ಟೊಮೋಟೊ ವ್ಯಾಪಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಾನಾ ಭಾಗಗಳಿಂದ ಬರುತ್ತಿದ್ದ ಒಟ್ಟಿನಲ್ಲಿ ಟೊಮೇಟೊ ರಫ್ತು ಕಡಿಮೆ ಆಗಿದ್ದ ಪರಿಣಾಮ ಟೊಮೇಟೊ ದರ ಏರಿಕೆಗೆ ಮುಖ್ಯ ಕಾರಣವಾಗಿದೆ. ಬೆಂಗಳೂರು ಮಾತ್ರವಲ್ಲದೇ ಉತ್ತರಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಮೈಸೂರು, ಶಿವಮೊಗ್ಗ ಸೇರಿದಂತೆ ಹಲವು ಕಡೆಗಳಲ್ಲಿ ಟೊಮೇಟೊ ಬೆಲೆಯಲ್ಲಿ ಏರಿಕೆಯಾಗಿದೆ.

**ಆಲೂಗಡ್ಡೆ ಬೆಲೆ ಏರಿಕೆ:** ಅತೀಹೆಚ್ಚು ಆಲೂ ಬೆಳೆಯುವ ರಾಜ್ಯವಾದ ಉತ್ತರಪ್ರದೇಶದಲ್ಲಿ ಪಶ್ಚಿಮ ಬಂಗಾಳ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.40 ರಷ್ಟು ಬೆಳೆ ಕಡಿಮೆಯಾಗಿದೆ. ಬೇಡಿಕೆತಕ್ಕಷ್ಟು ಪೂರೈಕೆ ಇಲ್ಲದೆ ಹಿನ್ನೆಲೆಯಲ್ಲಿ ಆಲೂಗಡ್ಡೆಯ ಬೆಲೆ ಗಣನೀಯವಾಗಿ ಹೆಚ್ಚಳವಾಗಿದೆ. ಕಳೆದ ಸಾಲಿನಲ್ಲಿ ಎಪಿಎಂಸಿ ಆಲೂಗಡ್ಡೆ ಸಗಟು ದರ ಕೆಜಿಗೆ ಉತ್ತಮ ದಪ್ಪ 18-22 ಇದ್ದ ಬೆಳೆ ಈ ವರ್ಷ 32-38 ರು. ಮಧ್ಯಮ ಗಾತ್ರ 12-14 ರು. ಇದ್ದ ಬೆಲೆ 26-28 ರು. ಗೆ ಮಾರಾಟವಾಗಿದೆ. ಚಿಲ್ಲರೆ ದರದಲ್ಲಿ ಗುಣಮಟ್ಟ ಅನುಸಾರ 35-55 ರು. ಗೆ ಮಾರಾಟವಾಗುತ್ತಿದೆ.

**ಈ ವಾರವೂ ತರಕಾರಿಗಳ ಬೆಲೆ ಏರಿಕೆ:** ಮೆಣಸಿನಕಾಯಿ, ಬೀನ್ಸ್ ದರ ಗಗನಕ್ಕೇರಿದೆ. ಬರಗಾಲದಿಂದ ಸಾಕಷ್ಟು ಅವಾಂತರಗಳಾಗಿವೆ. ನೀರಿಲ್ಲದೆ ತರಕಾರಿ ಬೆಳೆ ಬಬಣಗಿಹೋಗಿದ್ದರೆ ಇದೀಗ ಮಳೆಯಿಂದ ತರಕಾರಿಗಳ ಬೆಳೆ ನಾಶವಾಗುತ್ತಿದೆ. ದರ ಏರುತ್ತಲೇ ಇದೆ. ಕಳೆದ ವಾರಕ್ಕೆ ಹೋಲಿಕೆ ಮಾಡಿದರೆ ಈ ವಾರ ತರಕಾರಿ ಬೆಲೆ ಕೆಜಿಗೆ 20-30 ರು. ದುಬಾರಿಯಾಗಿದೆ. ಬೀನ್ಸ್ 170-180 ರು. ಬಟಾಣಿಕಾಯಿ 240-250 ರು. ಕ್ಯಾಪ್ಸಿಕಮ್ 90-95 ರು. ಕ್ಯಾರೆಟ್ 80-90 ರು. ಹಸಿ ಮೆಣಸಿನಕಾಯಿ 100 ರು. ಹೀಗೆ ಮಾರಾಟ ವಾಗಿದ್ದರೆ ಇನ್ನು ಗುಂಡು ಬದನೇಕಾಯಿ 50-60 ರು. ಬಿಟ್ರೋಟ್ 50-60 ರೂ. ನವಿಲು ಕೋಸ್ 80-90 ರು. ಮೂಲಂಗಿ 60-70 ರು. ಸೌತೆಕಾಯಿ 40-45 ಮಾರಾಟವಾಗುತ್ತಿದೆ.

## 100 ದಾಟಿದ ಟೊಮೇಟೊ; ಗ್ರಾಹಕರಿಗೆ ಬೆಲೆ ಏರಿಕೆ ಬರೆ

**ಬೆಂಗಳೂರು:** ತೈಲ ಬೆಲೆ ಹೆಚ್ಚಳದ ಬೆನ್ನಲ್ಲೇ ನಗರದಲ್ಲಿ ಈಗ ತರಕಾರಿಗಳ ಬೆಲೆ ಹೆಚ್ಚಳವಾಗಿದ್ದು, ಗ್ರಾಹಕರು ಖರೀದಿಸುವ ಮುನ್ನ ಯೋಚಿಸು ವಂತಹ ಸ್ಥಿತಿ ನಿರ್ಮಾಣವಾಗಿದೆ.

ಮಾರುಕಟ್ಟೆಯಲ್ಲಿ ದಿನದಿಂದ ದಿನಕ್ಕೆ ಟೊಮೇಟೊ ಸೇರಿದಂತೆ ಇತರೆ ತರಕಾರಿಗಳ ದರಗಳು ಹೆಚ್ಚಳವಾಗುತ್ತಿದ್ದು, ಕೊಂಡುಕೊಳ್ಳುವ ಮುನ್ನ ಎರಡು ಮೂರು ಬಾರಿ ಯೋಚಿಸಬೇಕಾದ ಸ್ಥಿತಿ ಗ್ರಾಹಕರದ್ದಾಗಿದೆ. ಕಳೆದ ವಾರವಷ್ಟೆ ಕೆಜಿಗೆ 50 ರು.ಗೆ

ದೊರೆಯುತ್ತಿದ್ದ ಟೊಮೇಟೊ, ಈಗ ಏಕಾಏಕಿ 100 ರು. ಗಡಿ ದಾಟಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬಿದಿದ್ದೆ. ಇವೆಲ್ಲ ದರ ನಡುವೆ ಶನಿವಾ ರದಿಂದ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯೂ ಹೆಚ್ಚಳ ಕಂಡಿದ್ದು, ಇದು ಕೂಡ ತರಕಾರಿಗಳ, ದಿನಸಿ ವಸ್ತುಗಳ ಬೆಲೆಯಲ್ಲಿನ ಹೆಚ್ಚಳಕ್ಕೆ ಕಾರಣವಾಗಬಹುದು ಎನ್ನಲಾಗಿದೆ.

ಟೊಮೇಟೊ ಒಂದು ಕೆಜಿಗೆ ಬರೋಬ್ಬರಿ 100 ರು, ಈರುಳ್ಳಿ ಬೆಲೆ ಬರೋಬ್ಬರಿ 60 ರು ಏರಿಕೆ ಆಗಿದ್ದು, ಗ್ರಾಹಕರಿಗೆ ಮತ್ತಷ್ಟು ಹೊರೆ ಆಗಿದೆ. ಮಳೆ ಬರುತ್ತಿರುವ ಪರಿಣಾಮ ಟೊಮೇಟೊ ಸರಿಯಾಗಿ ಬೆಳೆ ಬಂದಿಲ್ಲ. ಹೀಗಾಗಿ ಟೊಮೇಟೊ ಬೆಲೆ ಕೆಜಿಗೆ 100 ರು ಏರಿಕೆ ಆಗಿದೆ. ಇದು ಮುಂದಿನ ದಿನಗಳಲ್ಲಿ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ವ್ಯಾಪಾರಿಗಳು ಹೇಳಿದರು. ಶನಿವಾರ ಪೆಟ್ರೋಲ್, ಡೀಸೆಲ್ ಬೆಲೆ ಯೇರಿಕೆ ಮಾಡಲಾಗಿದೆ. ಈಗ ತರಕಾರಿಗಳ ಬೆಲೆ ಹೆಚ್ಚಾಗಿದೆ. ಹೀಗಾದರೆ ಜೀವನ ನಿರ್ವಹಣೆ ಹೇಗೆ? ಕಳೆದ ವರ್ಷ ಟೊಮೇಟೊ ಬೆಲೆ 200 ರು. ಗಡಿ ದಾಟಿತ್ತು. ಈಗ ಮತ್ತೆ ಟೊಮೇಟೊ ಬೆಲೆ ಜಾಸ್ತಿಯಾಗುತ್ತಿದೆ. ಹುರುಳಿಕಾಯಿ, ಕ್ಯಾರೆಟ್, ಬಟಾಣಿ ಎಲ್ಲವೂ 100 ರು. ಗಡಿದಾಟಿದೆ. ಉಚಿತ ಯೋಜನೆ ತೆಗೆದು ಮೊದಲು ತರಕಾರಿ ಬೆಲೆ ಕಡಿಮೆ ಮಾಡಿ ಎಂದು ಗೃಹಿಣಿಯರು ಆಗ್ರಹಿಸಿದ್ದಾರೆ.

---

# ಮನುಷ್ಯತ್ವ, ಸಹಿಷ್ಣುತೆ, ಪ್ರೀತಿ ಬೆಳೆಯಲಿ

**ಬೆಂಗಳೂರು:** ಎಲ್ಲರಲ್ಲೂ ಮನುಷ್ಯತ್ವ ಬೆಳೆಯಲಿ. ಸಹಿಷ್ಣುತೆ, ಪ್ರೀತಿ ವಿಶ್ವಾಸ ಬೆಳೆಯಲಿ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಬಕ್ರೀದ್ ಹಬ್ಬದ ಅಂಗವಾಗಿ ಚಾಮರಾಜ ಪೇಟೆಯಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಎಲ್ಲರೂ ಭಕ್ತಿಯಿಂದ ಪ್ರಾರ್ಥನೆಯಲ್ಲಿ ಭಾಗವಹಿಸಿ ಮನುಕುಲಕ್ಕೆ ಒಳಿತಾಗಲಿ ಎಂದು ಪ್ರಾರ್ಥಿಸಿ, ಎಲ್ಲರೂ ಸಾಮೂಹಿಕ ಪ್ರಾರ್ಥನೆ ಮಾಡಿ ಸಮಾಜದಲ್ಲಿ ಎಲ್ಲರೂ ಅಣ್ಣತಮ್ಮಂದಿರ ಹಾಗೆ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳಬೇಕು ಎಂದರು.

ಧರ್ಮವನ್ನು ಪ್ರೀತಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಭಾರತ ಬಹುತ್ವದ ದೇಶ. ಎಲ್ಲಾ ಧರ್ಮ, ಜಾತಿ, ಭಾಷೆ, ಪ್ರಾಂತ್ರ್ಯದವರು ಒಟ್ಟಾಗಿ ಬಾಳಬೇಕು. ಮನುಷ್ಯತ್ವ ಬಹಳ ದೊಡ್ಡದು. ಎಲ್ಲರೂ ಪರಸ್ಪರ ಪ್ರೀತಿಸಬೇಕು. ಪ್ರತಿಯೊಬ್ಬರೂ

ಸಹಿಷ್ಣುತೆಯನ್ನು ಪಾಲಿಸಬೇಕು. ಇನ್ನೊಂದು ಧರ್ಮವನ್ನು ಪ್ರೀತಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಹಾಗೆ ಬೆಳೆದಾಗ ಮಾತ್ರ ರಾಷ್ಟ್ರ ಸಮಾಜ ಹಾಗೂ ಎಲ್ಲಾ ಧರ್ಮಗಳೂ ಏಳಿಗೆಯಾಗುತ್ತದೆ ಎಂದರು.

**ಸರ್ವಧರ್ಮ ಸಮನ್ವಯದಲ್ಲಿ, ಸಂವಿಧಾನದಲ್ಲಿ ನಂಬಿಕೆ:** ಸರ್ವಧರ್ಮ ಸಮನ್ವಯದಲ್ಲಿ, ಸಂವಿಧಾನದಲ್ಲಿ ನಂಬಿಕೆ ಇಟ್ಟಿರುವ ಸರ್ಕಾರ. ಸಂವಿಧಾನ ಹೇಳುವಂತೆ ನಡೆದುಕೊಳ್ಳುತ್ತೇವೆ. ಯಾವುದೇ ತಾರತಮ್ಯ ಮಾಡುವುದಿಲ್ಲ. ಕರ್ನಾಟಕದ ಏಳು ಕೋಟಿ ಜನರನ್ನು ರಕ್ಷಿಸುವ ಜವಾಬ್ದಾರಿ ನಮ್ಮದು. ಈ ಕೆಲಸವನ್ನು ತಾರತಮ್ಯವಿಲ್ಲದೆ ಮಾಡುತ್ತೇವೆ ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

**ಅಲ್ಪಸಂಖ್ಯಾತರು, ಬಹುಸಂಖ್ಯಾತರಿಗೆ ಒಂದೇ ರೀತಿಯ ರಕ್ಷಣೆ :** ಅಲ್ಪಸಂಖ್ಯಾತರು ಕೂಡ ಯಾವುದೇ ಕಾರಣಕ್ಕೂ ಭಯ ಆತಂಕ ಪಡಬೇಕಾದ ಅಗತ್ಯವಿಲ್ಲ. ಅಲ್ಪಸಂಖ್ಯಾತರು, ಬಹುಸಂಖ್ಯಾತರನ್ನು ಒಂದೇ ರೀತಿಯಲ್ಲಿ ರಕ್ಷಣೆ ಕೊಡುವ ಕೆಲಸ ಮಾಡುತ್ತೇವೆ. ಎಲ್ಲಕ್ಕಿಂತ ಮುಖ್ಯವಾಗಿ ನಾಡಿನ ಅಭಿವೃದ್ಧಿಗೆ ಒಳ್ಳೆ ಮಳೆ -ಬೆಳೆಯಾಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದರು. ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಮೊದಲಾದವರು ಉಪಸ್ಥಿತರಿದ್ದರು

# ಮುಂಗಾರು; 3 ಜಿಲ್ಲೆಗಳಿಗೆ ಕಟ್ಟೆಚ್ಚರ

**ಬೆಂಗಳೂರು:** ಕೆಲ ದಿನಗಳಿಂದ ಹಲವು ಜಿಲ್ಲೆಗಳಲ್ಲಿ ಕ್ಷೀಣಿಸಿದ್ದ ಮುಂಗಾರು ಮಳೆ ಮತ್ತೆ ಚುರುಕುಗೊಂಡಿದ್ದು, ಮೂರು ಕರಾವಳಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಿಗೆ ಮುಂ ದಿನ 24 ಗಂಟೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಜನವರಿ 21, 22, 23 ರಂದು ಕೂಡ ಅಲರ್ಟ್ ಘೋಷಿಸಲಾಗಿ ದ್ದು, ಇಂದು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ಬಿರುಗಾಳಿ 40 ರಿಂದ 50 ಕಿ.ಮೀ ಗಂಟೆಯ ವೇಗದಲ್ಲಿ ಮತ್ತು ಉತ್ತರ ಒಳನಾಡಿನ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ 30 ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ. ಅಲ್ಲಿನ ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾ ಗುವ ಬಹಳಷ್ಟು ಸಾಧ್ಯತೆಯಿದೆ ಎಂದು ಮಾಹಿತಿ ನೀಡಿದೆ. ಭಾನುವಾರ ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ 9 ಸೆಂ.ಮೀ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪದಲ್ಲಿ, ಗೋಕರ್ಣ ಮತ್ತು ಅಂಕೋಲಾದಲ್ಲಿ ಮತ್ತು ಗದಗದಲ್ಲಿ ತಲಾ 5 ಸೆಂ.ಮೀ ಮಳೆ ಬಂದಿದೆ. ಉತ್ತರ ಕನ್ನಡ ಜಿಲ್ಲೆಯ ಮಂಕಿ, ಹಳಿಯಾಳ, ಶಿರಾಲಿ, ಬೆಳಗಾವಿ ಜಿಲ್ಲೆಯ ಸಂಕೇಶ್ವರ, ಕೊಡಗು ಜಿಲ್ಲೆಯ ಕುಶಾಲ ನಗರದಲ್ಲಿ ತಲಾ 4 ಸೆಂ.ಮೀ ಮಳೆ ಬಿದ್ದಿದೆ. ನೈರುತ್ಯ ಮುಂಗಾರು ಕರಾವಳಿ ಹಾಗೂ ಉತ್ತರ ಒಳನಾಡಿನಲ್ಲಿ ಸಾಧಾರಣವಾಗಿದ್ದು ಮತ್ತು ದಕ್ಷಿಣ ಒಳನಾಡಿನಲ್ಲಿ ದುರ್ಬಲವಾಗಿತ್ತು. ಭಾನು ವಾರ ಕರಾವಳಿಯ ಹಲವು ಕಡೆಗಳಲ್ಲಿ ಮತ್ತು ಒಳನಾಡಿನ ಒಂದೆರಡು ಕಡೆಗಳಲ್ಲಿ ಮಳೆಯಾಗಿದೆ ಎಂದು ಬೆಂಗಳೂರು ಹವಾಮಾನ ಕೇಂದ್ರ ಮಾಹಿತಿ ನೀಡಿದೆ.

#### ಮೋಡ ಕವಿದ ವಾತವರಣ

**ಬೆಂಗಳೂರು ನಗರ ಮತ್ತು ಸುತ್ತಮುತ್ತ ಸ್ಥಳೀಯ ಭಾಗದಲ್ಲಿ ಮುಂದಿನ 24 ಗಂಟೆ ಗಳ ಕಾಲ ಸಾಮಾನ್ಯವಾಗಿ ಮೋಡಕವಿದ ಆಕಾಶ ಇರಲಿದೆ. ಹಗುರ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 31 ಡಿಗ್ರಿ ಮತ್ತು 21 ಡಿಗ್ರಿ ಇರಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.**

---

ಜೂ.20ರಂದು ಸಾರ್ವಜನಿಕ ಸೇವೆಗೆ ಮುಕ್ತ

# ಪಾರ್ಕಿಂಗ್ ಸಂಕೀರ್ಣ ಸಿದ್ಧ

**ಬೆಂಗಳೂರು:** ನಗರದ ಪಾರ್ಕಿಂಗ್ ಸಮಸ್ಯೆಗೆ ಪರಿಹಾರವಾಗಿ ಆರಂಭಿಸಲಾದ ಫ್ರೀಡಂ ಪಾರ್ಕ್ ಬಳಿಯ ಬಹುಮಹಡಿ ಪಾರ್ಕಿಂಗ್ ಸಂಕೀರ್ಣವು ಜೂ.20ರಂದು

ಉದ್ಘಾಟನೆಯಾಗಲಿದೆ.

ಕಳೆದ ನಾಲ್ಕು ವರ್ಷಗಳಿಂದ ಈ ಬಹುಮಹಡಿ ಪಾರ್ಕಿಂಗ್ ಸಂಕೀರ್ಣವು ಖಾಲಿ ಬಿದ್ದಿತ್ತು. ಜೂ.20 ರಂದು ಈ ಸಂಕೀರ್ಣವು ಲೋಕಾರ್ಪಣೆಯಾಗುವುದರಿಂದ ಜನಬಿಡ ಪ್ರದೇಶಗಳಾದ ಮೆಜೆಸ್ಟಿಕ್, ವಿಧಾನಸೌಧ ಅಕ್ಕ-ಪಕ್ಕ ವಾಹನ ಪಾರ್ಕಿಂಗ್ ಸಮಸ್ಯೆಗೆ ಶೀಘ್ರ ಮುಕ್ತಿ ದೊರೆಯಲಿದೆ. ಈ ಪಾರ್ಕಿಂಗ್ ಸಂಕೀರ್ಣ ಅತ್ಯಂತ ಸುಧಾರಿತ ಪಾರ್ಕಿಂಗ್ ತಂತ್ರಜ್ಞಾನವನ್ನು ಒಳಗೊಂಡಿದ್ದು, ಇಲ್ಲಿ ವಾಹನ ನಿಲುಗಡೆ ಮಾಡುವವರಿಗೆ ಉಚಿತ ಪಿಕ್ ಅಪ್ ಮತ್ತು ಡ್ರಾಪ್ ಸೌಲಭ್ಯ ನೀಡಲಾಗಿದೆ. ಬಿಬಿಎಂಪಿಯು 80 ಕೋಟಿ ರು. ವೆಚ್ಚದಲ್ಲಿ 2021ರಲ್ಲೇ ಪಾರ್ಕಿಂಗ್ ಸಂಕೀರ್ಣವನ್ನು ನಿರ್ಮಿಸಿತ್ತಾದರೂ ಇದರ ನಿರ್ವಹಣೆಗೆ ಬಿಬಿಎಂಪಿ ಏಳು ಸಲ ಟೆಂಡರ್ ಕರೆದರೂ, ಯಾರೊಬ್ಬರು ಆಸಕ್ತಿ ತೋರದ ಹಿನ್ನಲೆ ಪಾರ್ಕಿಂಗ್ ಸಂಕೀರ್ಣ ಖಾಲಿಬಿದ್ದಿತ್ತು. ಇದೀಗ, ಬಿಬಿಎಂಪಿ 8ನೇ ಬಾರಿಗೆ ಟೆಂಡರ್ ಕರೆದಿದ್ದು, ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸಲ್ಯೂಷನ್ ಬಿಸಿನೆಸ್ ಪ್ರೈ.ಲಿ ಮತ್ತು ಒಮ್ನಿಟೆಕ್ ಎಂಬ ಸಂಸ್ಥೆಗಳು ಜಂಟಿಯಾಗಿ ಗುತ್ತಿಗೆ ಪಡೆದಿವೆ. 10 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದು, ಪಾಲಿಕೆಗೆ ವಾರ್ಷಿಕ 1.50 ಕೋಟಿ ರು. ಪಾವತಿಸಲಿವೆ. ಈ ಪಾರ್ಕಿಂಗ್ ಸಂಕೀರ್ಣದಲ್ಲಿ 600 ಕಾರುಗಳನ್ನು ಮತ್ತು 750 ಬೈಕ್‌ಗಳನ್ನು ನಿಲುಗಡೆ ಮಾಡಬಹುದು ಎಂದು ಬಿಬಿಎಂಪಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ವಿಧಾನಸೌಧ, ವಿಕಾಸಸೌಧ, ಲೋಕಾಯುಕ್ತ, ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್, ನಗರ ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್ ವೃತ್ತ, ಕಂದಾಯ ಭವನ, ಚಿಕ್ಕಪೇಟೆ, ಕಬ್ಬನ್‌ಪಾರ್ಕ್‌ಗೆ ತೆರಳುವವರು ಇಲ್ಲಿ ವಾಹನ ನಿಲುಗಡೆ ಮಾಡಬಹುದಾಗಿದ್ದು, ಇದರಿಂದ, ಗಾಂಧಿನಗರ, ಮೆಜೆಸ್ಟಿಕ್ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಪಾರ್ಕಿಂಗ್ ಸಮಸ್ಯೆ ನಿವಾರಣೆಯಾಗಲಿದೆ.

#### ಉಚಿತ ಪಿಕ್ ಅಪ್, ಡ್ರಾಪ್

**ಸಿಟಿ ಸಿವಿಲ್ ಕೋರ್ಟ್, ಕೆಆರ್ ಸರ್ಕಲ್, ವಿಧಾಸೌಧ, ಎಂಎಸ್ ಬಿಲ್ಡಿಂಗ್, ಹೈಕೋರ್ಟ್, ಪೋತೀಸ್ ಸರ್ಕಲ್, ಚಿಕ್ಕಪೇಟೆ ಮೆಟ್ರೋ ನಿಲ್ದಾಣ, ಬಿವಿಕೆ ಅಯ್ಯಂಗಾರ್ ರಸ್ತೆ, ರಾಯನ್ ಸರ್ಕಲ್, ಉಪ್ಪಾರಪೇಟೆ ಪೊಲೀಸ್ ಠಾಣೆ, ಮೆಜೆಸ್ಟಿಕ್ ಬಸ್ ನಿಲ್ದಾಣ, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಮಾರ್ಗಗಳಲ್ಲಿ ಉಚಿತ ಪಿಕ್ ಅಪ್, ಡ್ರಾಪ್ ಸೌಲಭ್ಯದ ವಾಹನಗಳು ಕಾರ್ಯನಿರ್ವಹಿಸುತ್ತವೆ. ಉಚಿತ ವೈಫೈ, ಕಾರ್ ಸ್ಪಾ, ಶೌಚಾಲಯ, ಕುಡಿಯುವ ನೀರು, ಇವಿ ಚಾರ್ಜಿಂಗ್, ಕಾಫಿ ಶಾಪ್, ವೀಲ್ ಚೇರ್, ಎಸ್ ಒಎಸ್, ಆ್ಯಂಬುಲೆನ್ಸ್ ಸೇವೆ ಲಭ್ಯವಿದೆ.**

ರೈಲ್ವೇ ಅಧಿಕಾರಿಗಳೊಂದಿಗೆ ಕೇಂದ್ರ ಸಚಿವ ಸೋಮಣ್ಣ ಸಭೆ

# ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸಿ

**ಬೆಂಗಳೂರು:** ಪ್ರಸಕ್ತ ಸಾಲಿನ ಹೊಸ 9 ಯೋಜನೆಗಳು ಮತ್ತು ಐದು ದ್ವಿಪಥೀಕರಣಗೊಳಿಸುವ ಯೋಜನೆಗಳು ಸೇರಿದಂತೆ 14 ಮಹತ್ವದ ಯೋಜನೆಗಳನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕು ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದ್ದಾರೆ.

ರಾಜ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಚರ್ಚಿಸಲು ಬೆಂಗಳೂರಿನಲ್ಲಿ ರೈಲ್ವೆ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಮಾತನಾಡಿ, ಈ ಯೋಜನೆಗಳು ಒಟ್ಟು 1264 ಕಿ.ಮೀ ಹೊಸ ಮಾರ್ಗ ಮತ್ತು 707 ಕಿ.ಮೀ ದ್ವಿಪಥೀಕರಣ ಒಳಗೊಂಡಿದೆ. ಸದ್ಯ 289 ಕಿ.ಮೀ ಹೊಸ ಮಾರ್ಗ ಮತ್ತು 502 ಕಿ.ಮೀ ಡಬ್ಲಿಂಗ್ ಲೈನ್ ಈಗಾಗಲೇ ಯಶಸ್ವಿಯಾಗಿ ಕಾರ್ಯಾರಂಭಗೊಂಡಿದೆ ಎಂದರು.ಹೊಟ್ಗಿ- ಕುಡ್ಗಿ - ಗದಗ, ಯಶವಂತಪುರ - ಚನ್ನಸಂದ್ರ, ಬೈಯ್ಯಪನಹಳ್ಳಿ - ಹೊಸೂರು, ಬೆಂಗಳೂರು - ವೈಟ್‌ಫೀಲ್ಡ್, ಹೊಸಪೇಟೆ - ಹುಬ್ಬಳ್ಳಿ - ಲೋಂಡಾ - ತಿನೈಘಾಟ್ - ವಾಸ್ಕೋ ಡ ಗಾಮಾ ಸೇರಿಂದಂತೆ 9 ಒಂಬತ್ತು ಹೊಸ ಸಾಲಿನ ಯೋಜನೆಗಳಿವೆ. ಇನ್ನು ತುಮಕೂರು - ಕಲ್ಯಾಣದುರ್ಗ ಮೂಲಕ ರಾಯದುರ್ಗ, ತುಮಕೂರು - ಚಿತ್ರದುರ್ಗ - ದಾವಣಗೆರೆ, ಗಿಣಿಗೇರಾ - ರಾಯಚೂರು, ಬಾಗಲಕೋಟೆ-ಕುಡಚಿ, ಗದಗ - ವಾಡಿ, ಕಡೂರು - ಚಿಕ್ಕಮಗಳೂರು, ಶಿವಮೊಗ್ಗ ಶಿಕಾರಿಪುರ - ರಾಣೆಬೆನ್ನೂರು, ಬೆಳಗಾವಿ - ಕಿತ್ತೂರು ಮಾರ್ಗವಾಗಿ ಧಾರವಾಡ, ಹಾಸನ - ಬೇಲೂರು ರೈಲ್ವೆ ಅಭಿವೃದ್ಧಿ ಯೋಜನೆಗಳನ್ನು ತ್ವರಿತಗೊಳಿಸಲು ರೈಲ್ವೆ ಅಧಿಕಾರಿಗಳು ಮತ್ತು ಜಿಲ್ಲಾಡಳಿತ ಮತ್ತು ಕೆ- ರೈಡ್ ಸೇರಿದಂತೆ ವಿವಿಧ ಮಧ್ಯಸ್ಥಗಾರರ ನಡುವಿನ ಸಹಯೋಗದ ಅಗತ್ಯವಿದೆ ಎಂದರು. ಸಭೆಯಲ್ಲಿ ಪ್ರಧಾನ ವ್ಯವಸ್ಥಾಪಕ ಅರವಿಂದ ಶ್ರೀವಾಸ್ತವ, ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್, ಮುಖ್ಯ ಆಡಳಿತಾಧಿಕಾರಿ ರಾಮಗೋಪಾಲ್, ರೈಲ್ವೆ ಅಧಿಕಾರಿಗಳು ಇದ್ದರು.

ರೈಲ್ವೆ ಅಧಿಕಾರಿಗಳೊಂದಿಗೆ ಕೇಂದ್ರ ಸಚಿವ ವಿ. ಸೋಮಣ್ಣ ಸಭೆ

#### ಭೂಸ್ವಾಧೀನಕ್ಕೆ ವೇಗಗೊಳಿಸಿ

**ಬಾಕಿ ಉಳಿದಿರುವ ಕಾಮಗಾರಿಗೆ ಭೂಸ್ವಾಧೀನಕ್ಕೆ ವೇಗ ನೀಡಬೇಕು. ಮುಂಬರುವ ವರ್ಷಗಳಲ್ಲಿ ಎಲ್ಲಾ ಬಾಕಿ ಯೋಜನೆಗಳನ್ನು ವ್ಯವಸ್ಥಿತವಾಗಿ ಪೂರ್ಣ ಗೊಳಿಸಬೇಕು. ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ರೈಲುಗಳ ವೇಗವನ್ನು ಹೆಚ್ಚಿಸಲು ಎಲ್ಲಾ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದು ಹಾಕುವ ಸರಕಾರದ ಯೋಜನೆಯನ್ನು ತ್ವರಿತವಾಗಿದೆ ಕೈಗೊಳ್ಳಬೇಕು. ಬೆಂಗಳೂ ರು ಸುತ್ತಮುತ್ತಲಿನ ಲೆವೆಲ್ ಕ್ರಾಸಿಂಗ್ ಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊ ಳ್ಳಬೇಕು ಎಂದು ಸಚಿವ ಸೋಮಣ್ಣ ಅಧಿಕಾರಿಗಳಿಗೆ ಸೂಚಿಸಿದರು.**

---

# ಜೂ.23ಕ್ಕೆ ನೀಟ್ ಪಿಜಿ ಪರೀಕ್ಷೆ ಪ್ರವೇಶಪತ್ರ ಬಿಡುಗಡೆ ಇಂದು

**ಬೆಂಗಳೂರು:** ದೇಶಾದ್ಯಂತ ಸುಮಾರು 259 ಕೇಂದ್ರದಲ್ಲಿ ಜೂನ್ 23ಕ್ಕೆ ನೀಟ್ ಪಿಜಿ 2024 ಪ್ರವೇಶಕ್ಕಾಗಿ ಪರೀಕ್ಷೆ ನಡೆಯಲಿದೆ. ಈಗಾಗಲೇ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ್ದಾರೆ.

ಜೂನ್ 18ಕ್ಕೆ ಪ್ರವೇಶ ಪತ್ರವನ್ನು ಬಿಡುಗಡೆ ಮಾಡಲಾಗು ತ್ತಿದ್ದು, ಅರ್ಹ ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಪರೀಕ್ಷೆಗೆ ನೋಂದಾಯಿಸಿ ಕೊಂಡಿರುವ ಅಭ್ಯರ್ಥಿಗಳು ತಮ್ಮ ಪ್ರವೇಶಪತ್ರ ವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಬಹುದು. ಅಭ್ಯರ್ಥಿಗಳು ತಮ್ಮ ಲಾಗಿನ್ ಐಡಿ ಮೂಲಕ ನೀಟ್ ಪಿಜಿ ಹಾಲ್ ಟಿಕೆಟ್ 2024 ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಪ್ರವೇಶಪತ್ರ ಡೌನ್‌ಲೋಡ್ ಮಾಡಲು ಅಭ್ಯರ್ಥಿಗಳು ಯೂಸರ್ ಐಡಿ ಮತ್ತು ಪಾಸ್‌ವರ್ಡ್ ನಮೂದಿಸಬೇಕು.

**ಪರೀಕ್ಷಾ ಕೇಂದ್ರದಲ್ಲಿ ಇದೆಲ್ಲವೂ ನಿರ್ಬಂಧ:** ಪಠ್ಯಸಾಮಗ್ರಿ, (ಮುದ್ರಿತ ಅಥವಾ ಲಿಖಿತ), ಟಿಪ್ಪಣಿಗಳು, ಪ್ಲಾಸ್ಟಿಕ್ ಪೌಚ್, ಕ್ಯಾಲ್ಕುಲೇಟರ್, ರೈಟಿಂಗ್ ಪ್ಯಾಡ್ ಹಾಗೂ ಮೊಬೈಲ್ ಫೋನ್, ಬ್ಲೂಟೂತ್, ಇಯರ್ ಫೋನ್‌ಗಳು, ಮೈಕ್ರೊಫೋನ್, ಹೆಲ್ತ್ ಬ್ಯಾಂಡ್, ಎಲೆಕ್ಟ್ರಾನಿಕ್ ಪೆನ್, ಸ್ಕ್ಯಾನರ್ ಪರೀಕ್ಷಾ ಕೇಂದ್ರಕ್ಕೆ ತರುವಂತಿಲ್ಲ. ಇನ್ನೂ ಹುಡುಗಿಯರು ಬ್ರೇಸ್‌ಲೆಟ್ ಗಳು, ಉಂಗುರ, ಕಿವಿಯೋಲೆಗಳು, ನೋಸ್-ಪಿನ್, ಚೈನ್/ ನಂತಹ ಎಲ್ಲಾ ಆಭರಣಗಳು/ ಪೆಂಡೆಂಟ್, ಬ್ಯಾಡ್ಜ್, ಬ್ರೂಚ್ ಎಲ್ಲವನ್ನೂ ನಿಷೇಧಿಸಲಾಗಿದೆ. ಜತೆಗೆ ವ್ಯಾಲೆಟ್, ಕ್ಯಾಪ್ , ನೀರಿನ ಬಾಟಲ್ ಕೂಡ ಕೊಂಡೊಯ್ಯುವಂತಿಲ್ಲ.

ನೀಟ್ ಪಿಜಿ ಫಲಿತಾಂಶವನ್ನು ಜುಲೈ 15ರೊಳಗಾಗಿ ಪ್ರಕಟಿಸಲಾಗುವುದು ಎಂದು ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್ ಮೆಡಿಕಲ್ ಸೈನ್ಸ್ ತಿಳಿಸಿದೆ.

ಉಪನಗರ ರೈಲುಯೋಜನೆ ಅನುಷ್ಠಾನಕ್ಕೆ ಟೆಂಡರ್ | 8 ಸಬ್‌ಅರ್ಬನ್ ರೈಲುನಿಲ್ದಾಣಗಳ ನಿರ್ಮಾಣ

# 2 ವರ್ಷದಲ್ಲಿ ಯೋಜನೆ ಮುಗಿಸಿ; ಸರಕಾರದ ಷರತ್ತು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ನಗರದ ಸಂಚಾರ ದಟ್ಟಣೆ ಕಡಿಮೆ ಮಾಡುವ ಮಹತ್ವದ ಯೋಜನೆ ಇದಾಗಿದೆ.

ಒಟ್ಟು 4 ಮಾರ್ಗವಾಗಿ ಬೆಂಗಳೂರು ಉಪನಗರ ರೈಲುಯೋಜನೆ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಬೈಯಪ್ಪನಹಳ್ಳಿ-ಯಶವಂತಪುರ-ಚಿಕ್ಕಬಾಣಾವರ ನಡುವೆ ಸಂಪರ್ಕ ಕಲ್ಪಿಸುವ 25.01 ಕಿ. ಮೀ. ಮಾರ್ಗಕ್ಕೆ 'ಮಲ್ಲಿಗೆ' ಎಂದು ಹೆಸರಿಡಲಾಗಿದೆ. ಕೆ-ರೈಡ್ ಜೂನ್ 15ರಂದು 'ಮಲ್ಲಿಗೆ' ಮಾರ್ಗದಲ್ಲಿ 8 ಸಬ್‌ಅರ್ಬನ್ ರೈಲು ನಿಲ್ದಾಣಗಳ ನಿರ್ಮಾಣಕ್ಕೆ ಟೆಂಡರ್ ಕರೆದಿದ್ದು, ಆಗಸ್ಟ್‌ನಲ್ಲಿ ಟೆಂಡರ್ ಅಂತಿಮಗೊಳ್ಳುವ ನಿರೀಕ್ಷೆ ಇದೆ. 24 ತಿಂಗಳಿನಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಷರತ್ತು ಹಾಕಲಾಗಿದೆ. ರಾಜ್ಯ ಸರಕಾರ 2028ರ ಅಂತ್ಯಕ್ಕೆ ಸಬ್ ಸರ್ಬನ್ ರೈಲುಯೋಜನೆ 4 ಕಾರಿಡಾರ್‌ಗಳು ಸಿದ್ಧವಾಗಬೇಕು ಎಂದು ಗಡುವು ನೀಡಿದ ಹಿನ್ನೆಲೆ ಕಾಮಗಾರಿಗೆ ಚುರುಕು ನೀಡಲಾಗಿದೆ. ಎರಡು ಮಾರ್ಗದ ಟೆಂಡರ್‌ನ್ನು ಪ್ರತಿಷ್ಠಿತ ಎಲ್ ಟಿ ಪಡೆದುಕೊಂಡಿದ್ದು, ಈಗಾಗಲೇ ಕಾಮಗಾರಿ ಆರಂಭಿಸಿದೆ. ಬೈಯಪ್ಪನಹಳ್ಳಿ- ಚಿಕ್ಕಬಣಾವರ ನಡುವಿನ 'ಮಲ್ಲಿಗೆ' ಮಾರ್ಗ ದ ಕಾಮಗಾರಿಗಾಗಿ ನೈರುತ್ಯ ರೈಲ್ವೆ ಈಗಾಗಲೇ 157 ಎಕರೆ ಭೂಮಿಯನ್ನು ಕೆ-ರೈಡ್‌ಗೆ ಹಸ್ತಾಂತರಿಸಿದ್ದು, ಈ ಭೂಮಿಯನ್ನು ಕಾಮಗಾರಿ ನಡೆಸುತ್ತಿರುವ ಎಲ್.ಟಿ ಕಂಪನಿಗೆ ಹಸ್ತಾಂತರ ಮಾಡಲಾಗುತ್ತದೆ. ಸಬ್‌ಅರ್ಬನ್ ರೈಲು ಯೋಜನೆ ಕಾರಿಡಾರ್-2 'ಮಲ್ಲಿಗೆ' ಬೈಯಪ್ಪನಹಳ್ಳಿ, ಬಾಣಸವಾಡಿ, ನಾಗವಾರ, ಹೆಬ್ಬಾಳ, ಯಶವಂತಪುರ, ಜಾಲಹಳ್ಳಿ, ಶೆಟ್ಟಿಹಳ್ಳಿ ಮೂಲಕ ಚಿಕ್ಕಬಣಾವರ ತಲುಪಲಿ ದೆ. ಮಾರ್ಗದಲ್ಲಿ 12 ನಿಲ್ದಾಣಗಳ ವಿನ್ಯಾಸ ಗಳನ್ನು ಅಂತಿಮಗೊಳಿಸಲಾಗಿದೆ. ಈ ಮಾರ್ಗದಲ್ಲಿ ಬೆನ್ನಿಗಾನಹಳ್ಳಿ, ಕಸ್ತೂರಿ ನಗರ, ಮಾರುತಿ ಸೇವಾನಗರ, ಬಾಣಸ ವಾಡಿ, ನಾಗವಾರ, ಕನಕನಗರ, ಹೆಬ್ಬಾ ಳ, ಮತ್ತಿಕೆರೆ, ಯಶವಂತರಪುರ, ಶೆಟ್ಟಿಹಳ್ಳಿ ನಿಲ್ದಾಣಗಳ ವಿನ್ಯಾಸ ಅಂತಿಮಗೊಂಡಿದ್ದು, 2 ಎತ್ತರಿಸಿದ ನಿಲ್ದಾಣ, ಎರಡು ಇಂಟರ್‌ಚೇಂಜ್ ನಿಲ್ದಾಣ, 8 ನೆಲಸ್ತರದ ನಿಲ್ದಾಣ ನಿರ್ಮಾಣವಾಗುತ್ತಿದೆ. 2022ರಲ್ಲಿ 'ಮಲ್ಲಿಗೆ' ಕಾರಿಡಾರ್ ಸಿವಿಲ್ ಕಾಮಗಾರಿಗೆ ಎಲ್ ಟಿ ಕಂಪನಿಗೆ ಕೆ-ರೈಡ್ ಟೆಂಡರ್ ನೀಡಿದೆ. 27 ತಿಂಗಳಿನಲ್ಲಿ ಯೋಜನೆ ಪೂರ್ಣಗೊಳಿಸಬೇಕು ಎಂದು ಷರತ್ತು ಹಾಕಲಾಗಿತ್ತು. ಆದರೆ ನೈರುತ್ಯ ರೈಲ್ವೆ ಜತೆಗೆ ಭೂಮಿ ಹಸ್ತಾಂತರ ಮಾಡುವ ಪ್ರಕ್ರಿಯೆ ವಿಳಂಬವಾದ ಕಾರಣ ತಡವಾಗಿ ಕಾಮಗಾರಿ ಆರಂಭವಾಗಿದೆ. ಸಬ್‌ಅರ್ಬನ್ ರೈಲು ಯೋಜನೆಯಲ್ಲಿನ ನಿಲ್ದಾಣಗಳು ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಫ್ಲಾಟ್ ಫಾರ್ಮ್ ಸ್ಕ್ರೀನ್‌ಗಳನ್ನು ಒಳಗೊಂಡಿರಲಿವೆ. ಮಾರ್ಗದ ಸಿಗ್ನಲಿಂಗ್ ವ್ಯವಸ್ಥೆ, ಫ್ಲಾಟ್ ಫಾರ್ಮ್ ಸ್ಕ್ರೀನ್ ಅಳವಡಿಕೆ ಮಾಡಲು ಶೀಘ್ರದಲ್ಲೇ ಕೆ-ರೈಡ್ ಟೆಂಡರ್ ಕರೆಯಲಿದೆ.

#### ನಿಲ್ದಾಣದ ವಿವರಗಳು

**ಬೈಯಪ್ಪನಹಳ್ಳಿ-ಯಶವಂತಪುರ-ಚಿಕ್ಕಬಣಾವರ ನಡುವಣ ಮಾರ್ಗದಲ್ಲಿ ಒಟ್ಟು 8 ನಿಲ್ದಾಣಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದ್ದು, ಸುಮಾರು 455.8 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ ಎಂದು ಅಂದಾಜಿಸಲಾಗಿದೆ. ಟೆಂಡರ್‌ನ ಮಾಹಿತಿಯಂತೆ ಕಸ್ತೂರಿ ನಗರ, ಸೇವಾ ನಗರ, ಬಾಣಸವಾಡಿ, ನಾಗವಾರ, ಕನಕ ನಗರ, ಹೆಬ್ಬಾಳ ಮತ್ತು ಮತ್ತಿಕೆರೆಯಲ್ಲಿ ನಿಲ್ದಾಣಗಳನ್ನು ನಿರ್ಮಾಣ ಮಾಡಬೇಕಿದೆ. ಯೋಜನೆಗೆ ವೇಗ ನೀಡಲು ನಿಲ್ದಾಣ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. ಉಳಿದ ನಿಲ್ದಾಣ ನಿರ್ಮಾಣಕ್ಕೂ ಶೀಘ್ರ ಟೆಂಡರ್ ಕರೆಯಲಾಗುತ್ತದೆ ಎಂದು ಕೆ-ರೈಡ್ ಅಧಿಕಾರಿಗಳು ಹೇಳಿದ್ದಾರೆ.**

## ಸಮಾಚಾರ ಸಣ್ಣದಲ್ಲ

### ಅಪಘಾತ: ಬಾಲಕ ಸಾವು

**ಬೆಳಗಾವಿ:** ಅಪಘಾತದಲ್ಲಿ ಎಂಟು ವರ್ಷದ ಬಾಲಕ ಸಾವನ್ನಪ್ಪಿದ್ದು, ಆತನ ಸಾವಿಗೆ ಕಾರಣನಾಗಿದ್ದ ಕಾರು ಚಾಲಕ ಪೊಲೀಸ್ ಠಾಣೆಗೆ ಬಂದು ಶರಣಾಗಿರುವ ಘಟನೆ ಮೂಡಲಗಿ ತಾಲೂಕಿನ ನಾಗನೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ವಿನಯ್ ಲಕ್ಷ್ಮಣ ಕೆಂಚನ್ನವರ (8) ಮೃತ ಬಾಲಕ. ನಾಗನೂರು ಗ್ರಾಮದ ಮೊರಾರ್ಜಿ ವಸತಿ ಶಾಲೆ ಬಳಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಾಲಕನಿಗೆ ಕಾರು ಡಿಕ್ಕಿಯಾಗಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಬಾಲಕನನ್ನು ತನ್ನದೇ ವಾಹನದಲ್ಲಿ ಖಾಸಗಿ ಆಸ್ಪತ್ರೆಗೆ ಚಾಲಕ ಕರೆತಂದಿದ್ದ. ಬಾಲಕನನ್ನು ಪರೀಕ್ಷಿಸಿದ್ದ ಖಾಸಗಿ ಆಸ್ಪತ್ರೆಯ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಮೂಡಲಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಬಿ.ಪಿ. ಹರೀಶ್ ವಿರುದ್ಧ ರೇಣುಕಾಚಾರ್ಯ ಕಿಡಿ

**ದಾವಣಗೆರೆ:** ಹರಿಹರ ಬಿಜೆಪಿ ಶಾಸಕ ಬಿ.ಪಿ. ಹರೀಶ್ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಬಗ್ಗೆ

ಮಾತಾಡಿದರೆ ಸರಿ ಇರಲ್ಲ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಎಚ್ಚರಿಕೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಲೋಕಸಭೆ ಚುನಾವಣೆಯಲ್ಲಿ ನಾವು ಬಿಜೆಪಿಗೆ ಮನಃಪೂರ್ವಕವಾಗಿ ಕೆಲಸ ಮಾಡಿದ್ದೇವೆ. ಹರಿಹರ ಕ್ಷೇತ್ರದಲ್ಲಿ ಬಿಜೆಪಿಗಿಂತಲೂ ಕಾಂಗ್ರೆಸ್ ಹೆಚ್ಚು ಮತ ತೆಗೆದುಕೊಂಡಿದೆ. ಹರೀಶ್ ಅವರೊಂದಿಗೆ ಜೆಡಿಎಸ್‌ನ ಮಾಜಿ ಶಾಸಕ ಎಚ್.ಎಸ್. ಶಿವಶಂಕರ ಇದ್ದರು. ಅವರಿಬ್ಬರು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮತ ಪಡೆದಿದ್ದರು. ಲೋಕಸಭೆ ಚುನಾವಣೆಯಲ್ಲಿ ಕೇವಲ 70 ಸಾವಿರ ಮತಗಳು ಮಾತ್ರ ಬಂದಿವೆ. ತನ್ನದೇ ಕ್ಷೇತ್ರದಲ್ಲಿಯೇ ಬಿಜೆಪಿಗೆ ಲೀಡ್ ಕೊಡದ ಶಾಸಕ ಹರೀಶ್ ನಮ್ಮ ಮೇಲೆ ಆರೋಪ ಮಾಡಿದರೆ ಸುಮ್ಮನಿರುವುದಿಲ್ಲ ಎಂದು ಗುಡುಗಿದರು.

### ಸಾಲಬಾಧೆ ರೈತನ ಆತ್ಮಹತ್ಯೆ

**ಕಮಲನಗರ:** ರೈತರೊಬ್ಬರು ಸಾಲ ಬಾಧೆ ತಾಳಲಾರದೆ ಸ್ವಂತ ಮನೆಯಲ್ಲಿ ನೇಣಿಗೆ ಶರಣಾಗಿರುವ ಘಟನೆ ನಡೆದಿದೆ. ರೈತ ಮಡಿವಾಳಪ್ಪ ಶಿವರಾಜ ಪಾಟೀಲ್ (48) ಮೃತ ವ್ಯಕ್ತಿಯಾಗಿದ್ದು, ಎಸ್ ಬಿ.ಐ ಬ್ಯಾಂಕ್ ನಲ್ಲಿ 2 ಲಕ್ಷ ರು. ಹಾಗೂ ಕಮಲನಗರ ಪಿಕೆಪಿಎಸ್ ಬ್ಯಾಂಕ್ ನಲ್ಲಿ 2 ಲಕ್ಷ ರೂ. ಸಾಲ ಮಾಡಲಾಗಿದೆ ಎಂದು ರೈತನ ಪತ್ನಿ ಶಿಲ್ಪಾವತಿ ಅವರು ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಕುರಿತು ಕಮಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೃಷಿ ಚಟುವಟಿಕೆಗೆ ಸಾಕಷ್ಟು ಹಣ ಖರ್ಚು ಮಾಡಲಾಗಿತ್ತು. ಸಾಲ ತೀರಿಸಲಾಗದೆ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

### ಜನರ ಮೇಲೆ ಹೊರೆ: ಸುನೀಲ್‌ಕುಮಾರ್ ಟೀಕೆ

**ಉಡುಪಿ:** ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಏಕಾಏಕಿ ಏರಿಕೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರ ಮೇಲೆ ಹೊರೆ ಹೊರಿಸಿದ್ದಾರೆ ಎಂದು ಶಾಸಕ ವಿ. ಸುನೀಲ್ ಕುಮಾರ್ ಆರೋಪಿಸಿದರು.ಬಿಜೆಪಿ ಉಡುಪಿ ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದರೆ, ಉಳಿದೆಲ್ಲಾ ವಸ್ತುಗಳ ಬೆಲೆ ಏರಿಕೆಯಾಗುತ್ತದೆ ಎಂದು ಈ ಹಿಂದೆ ಸಿದ್ದರಾಮಯ್ಯ ಅವರು ಹೇಳಿದ್ದರು. ಈಗ ಅವರೇ ಅದನ್ನು ಮರೆತಿದ್ದಾರೆ. ಉಳಿದ ರಾಜ್ಯಗಳಿಗೆ ಸರಿ ಸಮಾನವಾಗಿ ಬೆಲೆ ಏರಿಕೆ ಮಾಡಿದ್ದೇವೆ ಎಂದು ಅವರು ಸಮರ್ಥಿಸಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿ ಕಾರಿದರು.

### ಎರಡು ಬೈಕ್ ಡಿಕ್ಕಿ: ಮೂವರ ಸಾವು

**ರಾಯಬಾಗ:** 2 ಬೈಕ್‌ಗಳ ಡಿಕ್ಕಿಯಲ್ಲಿ ಮೂವರು ಮತಪಟ್ಟು, ಮಗುವೊಂದು ಗಂಭೀರವಾಗಿ ಗಾಯ

ಗೊಂಡಿರುವ ಘಟನೆ ಮುಧೋಳ- ನಿಪ್ಪಾಣಿ ರಾಜ್ಯ ಹೆದ್ದಾರಿಯ ಕಂಕಣವಾಡಿ ಬಳಿ ಭಾನುವಾರ ತಡರಾತ್ರಿ ನಡೆದಿದೆ. ಘಟನೆಯಲ್ಲಿ ಕಂಕಣವಾಡಿ ಗ್ರಾಮದ ಸುಕದೇವ ರಾಯಪ್ಪ ಪೂಜಾರಿ (60), ಚಿಮ್ಮಡ ಗ್ರಾಮದ ನಿವಾಸಿಗಳಾದ ಸದಾಶಿವ ಹಣಮಂತ ದೊಡಮನಿ (45), ಕಿರಣ ಸದಾಶಿವ ದೊಡಮನಿ(20) ಮೃತಪಟ್ಟಿದ್ದಾರೆ. ರಾಯಬಾಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಪ.ಬಂಗಾಳ: ರೈಲು ದುರಂತ; 15 ಸಾವು

← ಮೊದಲಪುಟದಿಂದ ಅಪಘಾತದ ಸುದ್ದಿ ತಿಳಿದು ಆಂಬ್ಯುಲೆನ್ಸ್, ವೈದ್ಯರ ತಂಡ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯದಲ್ಲಿ ನಿರತರಾದರು. ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗಳಿಗೆ ಕಳುಹಿಸಿಕೊಟ್ಟರು. ರೈಲು ಅಪಘಾತದಿಂದ ನಿಲ್ದಾಣದಲ್ಲೇ ಉಳಿದಿದ್ದ ಪ್ರಯಾಣಿಕರನ್ನು ಕರೆದೊಯ್ಯಲು 10 ವಿಶೇಷ ಬಸ್ ವ್ಯವಸ್ಥೆ ಮಾಡಲಾಯಿತು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಘಟನಾ ಸ್ಥಳಕ್ಕೆ ತೆರಳಿ ಪರಿಸ್ಥಿತಿಯ ಅವಲೋಕನ ನಡೆಸಿದರು. ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರೂ ಅಪಘಾತ ಸ್ಥಳಕ್ಕೆ ಭೇಟಿ ನೀಡಿದ್ದರು.

ಕೇಂದ್ರದಿಂದ ಬರಬೇಕಾದ ಅನುದಾನ ಸಿಕ್ಕಿಲ್ಲ | ಮೋದಿ ಸರಕಾರ ಅನ್ಯಾಯ ಮಾಡದಿದ್ದರೆ ದರ ಏರಿಸುವ ಅಗತ್ಯವಿರಲಿಲ್ಲ

# ರಾಜ್ಯದ ಅಭಿವೃದ್ಧಿ ತೆರಿಗೆ ಹೆಚ್ಚಳ: ಸಿಎಂ ಸಮರ್ಥನೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕೇಂದ್ರ ಸರಕಾರದಿಂದ ರಾಜ್ಯಕ್ಕೆ ಬರಬೇಕಿರುವ ನ್ಯಾಯೋಚಿತ ಅನುದಾನವನ್ನು ಬಿಡುಗಡೆ ಮಾಡಿದ್ದರೆ, ಪೆಟ್ರೋಲ್-ಡೀಸೆಲ್ ದರ ಏರಿಸುವ ಪ್ರಮೇಯ ಬರುತ್ತಿರಲಿಲ್ಲ. ಆದರೀಗ ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ತೈಲ ದರ ಏರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಗೃಹಕಚೇರಿ ಕೃಷ್ಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರಕಾರ ನಿರಂತರವಾಗಿ ಪೆಟ್ರೋಲ್, ಡೀಸೆಲ್ ದರ ಏರಿಕೆ ಮಾಡುತ್ತಿದ್ದರೂ ಬಾಯಿ ಬಿಡದ ಬಿಜೆಪಿಯವರು, ಈಗ ರಾಜ್ಯ ಸರಕಾರ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಮಾರಾಟ ತೆರಿಗೆಯನ್ನು ಹೆಚ್ಚಿಸಿದ ಕೂಡಲೇ ಪ್ರತಿಭಟನೆ ಮಾಡುತ್ತಿದ್ದಾರೆ. ಬಿಜೆಪಿಯವರು ಬಡವರ ಯೋಜನೆಗಳಿಗೆ ವಿರುದ್ಧವಾಗಿದ್ದಾರೆ ಎಂದು ಟೀಕಿಸಿದ್ದಾರೆ.

ದೇಶದಲ್ಲಿ ಜಿಎಸ್‌ಟಿ ಜಾರಿ ಬಳಿಕ ರಾಜ್ಯಕ್ಕೆ ತೆರಿಗೆ ಹೆಚ್ಚು ಮಾಡುವ ಸ್ವಾತಂತ್ರ್ಯ ಕಡಿಮೆಯಾಗಿದೆ. ಅಬಕಾರಿ, ಮೋಟಾರು ಟ್ಯಾಕ್ಸ್, ಸ್ಟಾಂಪ್ ಡ್ಯೂಟಿ, ಪೆಟ್ರೋಲ್, ಡಿಸೇಲ್ ಮೇಲೆ ಮಾತ್ರ ತೆರಿಗೆ ಪರಿಷ್ಕರಣೆಗೆ ಅವಕಾಶ ಉಳಿದಿದೆ. ಉಳಿದ ಎಲ್ಲವನ್ನು ಜಿಎಸ್‌ಟಿ ವ್ಯಾಪ್ತಿಯಲ್ಲಿ ಕೇಂದ್ರ ಸರಕಾರ ಸಂಗ್ರಹಿಸುತ್ತಿದೆ. ಈ ರೀತಿ ಸಂಗ್ರಹಿಸಿದ್ದರಲ್ಲಿಯೂ ರಾಜ್ಯಕ್ಕೆ ಸೂಕ್ತ ಪಾಲು ಕೊಡದಿರುವುದೇ ರಾಜ್ಯಗಳಿಗೆ ಸಮಸ್ಯೆಯಾಗಿದೆ ಎಂದರು.

#### ಅಭಿವೃದ್ಧಿಯೇ ನಮ್ಮ ಉದ್ದೇಶ

ಸಂಪನ್ಮೂಲ ಸಂಗ್ರಹಿಸಿ, ರಾಜ್ಯವನ್ನು ಅಭಿವೃದ್ಧಿ ಮಾಡುವುದೇ ನಮ ಉದ್ದೇಶ. ಕೇಂದ್ರ ಸರಕಾರ ದೊಡ್ಡ ಅನ್ಯಾಯ ಮಾಡುತ್ತಿದೆ. ಬಿಜೆಪಿಯವರು ಒಂದು ದಿನವೂ ಚಕಾರ ಎತ್ತಲಿಲ್ಲ. ಆರು ತಿಂಗಳು ಬರಗಾಲಕ್ಕೆ ಹಣ ನೀಡದಿದ್ದರೂ ಮಾತನಾಡಲಿಲ್ಲ. ಈಗ ಬಿಜೆಪಿಗೆ ಬೇರೆ ವಿಚಾರಗಳಿಲ್ಲ. ಅದಕ್ಕಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಆಶೋಕ್‌ಗೆ ದೇಶದ ಆರ್ಥಿಕತೆ ಗೊತ್ತಿಲ್ಲ. ಕುಮಾರಸ್ವಾಮಿ ಜನರಿಗೆ ದಂಗೆ ಏಳಿ ಎಂದು ಕರೆ ನೀಡಿದ್ದಾರೆ. ರಾಜ್ಯಕ್ಕೆ ಅನ್ಯಾಯವಾದಾಗ ಒಂದು ದಿನವೂ ಮಾತನಾಡಲಿಲ್ಲ. ಬಿಜೆಪಿ ಜತೆ ಮೈತ್ರಿ ಬಳಿಕವೂ ಮೌನಕ್ಕೆ ಶರಣಾಗಿದ್ದರು ಎಂದು ಟೀಕಿಸಿದರು. ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿದೆ ಎಂಬುದು ಸುಳ್ಳು. ಹಾಗೆಂದ ಮಾತ್ರಕ್ಕೆ ಹಣ ಕಾಸು ತುಂಬಿ ತುಳುಕುತ್ತಿಲ್ಲ, ಪೆಟ್ರೋಲ್ ಡೀಸೆಲ್‌ನಿಂದ ಮೂರು ಸಾವಿರ ಕೋಟಿ ಬರಬಹುದು. ಗ್ಯಾರಂಟಿಗಳಿಗೆ 60 ಸಾವಿರ ಕೋಟಿ ಖರ್ಚಾಗುತ್ತಿದೆ. ನಾವು ಆ ಹಣವನ್ನು ಶ್ರೀಮಂತರಿಗೆ ಕೊಡುತ್ತಿಲ್ಲ. ನರೇಂದ್ರ ಮೋದಿ ರೀತಿ ಅಂಬಾನಿ ಅದಾನಿಯಂತಹ ಶ್ರೀಮಂತರ ಸಾಲ ಮನ್ನಾ ಮಾಡುತ್ತಿಲ್ಲ ಎಂದು ತಿರುಗೇಟು ನೀಡಿದರು.

#### ಬಸ್ ಟಿಕೆಟ್ ದರ ಸದ್ಯಕ್ಕೆ ಏರಿಕೆಯಿಲ್ಲ

ಪೆಟ್ರೋಲ್ ಡೀಸೆಲ್ ದರ ಏರಿಕೆಯ ಬೆನ್ನಲ್ಲೇ ಸಾರಿಗೆ ಸಂಸ್ಥೆಗಳ ಬಸ್ ದರ ಏರಿಕೆಯಾಗುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬಂದಿತ್ತು. ಆದರೆ ಇದಕ್ಕೆ ಸ್ಪಷ್ಟನೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಜನಸಾಮಾನ್ಯರಿಗೆ ತೊಂದರೆಯಾಗದಂತೆ ಸಂಪನ್ಮೂಲ ಸಂಗ್ರಹಿಸುವ ಪ್ರಯತ್ನ ಮಾಡಿದ್ದೇವೆ. ಜನರಿಗೆ ಹೊರೆಯಾಗುವಂತಹ ತೆರಿಗೆಗಳನ್ನು ವಿಧಿಸುವುದಿಲ್ಲ. ಹಲವು ವರ್ಷಗಳಿಂದ ಬಸ್ ದರ ಏರಿಕೆಯ ಬೇಡಿಕೆಯಿದೆ. ಆದರೆ ಸದ್ಯಕ್ಕೆ ಈ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಆದರೆ ಮುಂದಿನ ದಿನದಲ್ಲಿ ಈ ಬಗ್ಗೆ ಚರ್ಚೆ ನಡೆಸುತ್ತೇವೆ ಎನ್ನುವ ಮೂಲಕ ಪರೋಕ್ಷವಾಗಿ, ಬಸ್ ದರ ಏರಿಕೆ ಸದ್ಯಕ್ಕಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

14 ಮತ್ತು 15ನೇ ಹಣಕಾಸು ಆಯೋಗದಿಂದ ರಾಜ್ಯಕ್ಕೆ 1.87 ಲಕ್ಷ ಕೋಟಿ ನಷ್ಟವಾಗಿದೆ. ತೆರಿಗೆ ಪಾಲು ಹಾಗೂ ಕೇಂದ್ರದಿಂದ ಬರುವ ಅನುದಾನವೂ ಕಡಿಮೆಯಾಗಿದೆ. ಜಿಎಸ್‌ಟಿಯಲ್ಲಿ 5495 ಕೋಟಿ ಪಾಲು ಕಡಿಮೆಯಾಗಿದೆ, ಅದನ್ನು ಸರಿತೂಗಿಸಲು ವಿಶೇಷ ಅನುದಾನ ಕೊಡುತ್ತೇವೆ ಎಂದು 15ನೇ ಹಣಕಾಸು ಆಯೋಗ ಹೇಳಿತ್ತು. ಅದರ ಬಗ್ಗೆ ಮಾತನಾಡಲಿಲ್ಲ. ಬೆಂಗಳೂರಿನ ಕೆರೆಗಳು, ಫೆರಿಫರಲ್ ರಿಂಗ್ ರಸ್ತೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಣೆ ಮಾಡಲಾಗಿದ್ದ ಹಣ ಬಿಡುಗಡೆಯಾಗದಿದ್ದಾಗ ಬಿಜೆಪಿಯವರು ಏಕೆ ಮಾತನಾಡಲಿಲ್ಲ ? ಎಂದು ಪ್ರಶ್ನಿಸಿದರು.

**ಪಾಪರ್ ಎಂದರೇನು ಗೊತ್ತಾ?:** ಕರ್ನಾಟಕ ಸರಕಾರ ಪಾಪರ್ ಆಗಿದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಪಾಪರ್ ಅಂದರೇನು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್‌ಗೆ ಗೊತ್ತಾ? ಯಾವುದಾದರೂ ವೇತನ ಅಥವಾ ಬಜೆಟ್‌ನಲ್ಲಿ ಹೇಳಿದ ಯೋಜನೆಗಳಿಗೆ ಹಣ ನಿಲ್ಲಿಸಿದ್ದೇವಾ? ಎಂದು ಪ್ರಶ್ನಿಸಿದರು.

ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರಕ್ಕೆ ಬಂದಾಗ ಪೆಟ್ರೋಲ್ ಮೇಲೆ ಕೇಂದ್ರ ಅಬಕಾರಿ ಸುಂಕ 9.48 ರು.ತಿತ್ತು. 2020 ಮೇ ವೇಳೆಗೆ 32.98 ರು. ಆಗಿದೆ. ಡಿಸೇಲ್ ಮೇಲೆ ಕೇಂದ್ರ ಅಬಕಾರಿ ತೆರಿಗೆ 31.81 ರುಗಳಾಗಿದೆ. ಆಗ ಬಿಜೆಪಿಯವರು ಪ್ರತಿಭಟನೆ ಮಾಡಲಿಲ್ಲ. ಕೇಂದ್ರ ತೆರಿಗೆ ಹೆಚ್ಚಳದಿಂದ ಜನಸಾಮಾನ್ಯರಿಗೆ ಹೊರೆಯಾಗಲಿಲ್ಲವೇ?, ಬಡವರು, ರೈತರು ಹಾಗೂ ಸಾಮಾನ್ಯ ಜನರ ಪರವಾಗಿರುವ ಬಿಜೆಪಿಯವರು ಹಾಗೂ ಇತರರು ಕೇಂದ್ರ ತೆರಿಗೆಯನ್ನು ಏಕೆ ವಿರೋಧಿಸಲಿಲ್ಲ? ಎಂದು ಪ್ರಶ್ನಿಸಿದರು.

2014ರಲ್ಲಿ ಅಂತಾರಾಷ್ಟ್ರಿಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ಬೆಲೆ 113 ಡಾಲರ್ ಇತ್ತು. 2015ರಲ್ಲಿ 50 ಡಾಲರ್‌ಗೆ ಇಳಿಯಿತು. 2016ರಲ್ಲಿ ಅದಕ್ಕಿಂತ ಕಡಿಮೆಯಾಯಿತು. ಈಗ 82.35 ಡಾಲರ್ ಇದೆ. ಅಂತಾರಾಷ್ಟ್ರಿಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾಯಿತು. ಆದರೆ ದೇಶಿಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚಾಗಿದೆ. 410 ರು.ಯಿದ್ದ ಅಡುಗೆ ಸಿಲಿಂಡರ್ ಬೆಲೆ 200 ರು. ಇಳಿಸಿದರೂ 805.50 ರುಪಾಯಿ ಆಗಿದೆ ಎಂದರು.

**ಬಿಜೆಪಿ ಪ್ರತಿಭಟನೆ ಯಾರ ವಿರುದ್ಧ:** ಬಡವರು ಮತ್ತು ಶ್ರೀಸಾಮಾನ್ಯರ ಬಗ್ಗೆ ಕಾಳಜಿಯಿದ್ದರೆ ಬಿಜೆಪಿಯವರು ಯಾರ ವಿರುದ್ಧ ಪ್ರತಿಭಟನೆ ಮಾಡಬೇಕು? ಬಿಜೆಪಿಯವರು ನಮಗೆ ಪಾಠ ಹೇಳುತ್ತಾರಾ ? ಬರ ಪರಿಹಾರ ತೆಗೆದುಕೊಳ್ಳಲು ಕೋರ್ಟ್‌ಗೆ ಹೋದ ಮೇಲೆ ನ್ಯಾಯಾಲಯದ ನಿರ್ದೇಶನದ ಮೇರೆಗೆ 3453 ಕೋಟಿ ರು. ನೀಡಲಾಗಿದೆ. ರಾಜ್ಯಕ್ಕೆ ಇಷ್ಟೆಲ್ಲಾ ಅನ್ಯಾಯವಾಗುತ್ತಿದ್ದರೂ ಒಂದು ದಿನ ಬಾಯಿ ಬಿಡಲಿಲ್ಲ. ಇವರಿಗೆ ನಮ ಸರ್ಕಾರವನ್ನು ಟೀಕಿಸಲು ಯಾವ ನೈತಿಕತೆ ಇದೆ ಎಂದ ಅವರು, ಬಡವರ ಕೆಲಸಗಳಿಗೆ ಕಲ್ಲು, ಹಾಕಿ ಬಡವರ ಹೊಟ್ಟೆಯ ಮೇಲೆ ಹೊಡೆಯುವುದೇ ಬಿಜೆಪಿಯವರ ಕೆಲಸ ಎಂದು ಟೀಕಿಸಿದರು.

ವಿಜಯಪುರದ ದಖನಿ ಈದ್ಗಾ ಮೈದಾನದಲ್ಲಿ ಸೋಮವಾರ ಬಕ್ರೀದ್ ಅಂಗವಾಗಿ ಮುಸ್ಲಿಮರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಜನರ ಕುಂದುಕೊರತೆ ಪರಿಶೀಲನೆ | ಸಂಸದೆ ಪ್ರಿಯಾಂಕಾ ಭರವಸೆ

## ಚಿಕ್ಕೋಡಿ ಸಮಸ್ಯೆ ಬಗೆಹರಿಸಲು ಪ್ರಯತ್ನ

**ಚಿಕ್ಕೋಡಿ:** ಚಿಕ್ಕೋಡಿ ಲೋಕಸಭೆ ಕ್ಷೇತ್ರದ ಜನರ ಸಮಸ್ಯೆಗಳನ್ನು ಹಂತ, ಹಂತವಾಗಿ ಈಡೇರಿಸಲಾಗುವುದು ಎಂದು ಸಂಸದೆ

ಪ್ರಿಯಾಂಕಾ ಜಾರಕಿಹೊಳಿ ಭರವಸೆ ನೀಡಿದರು.

ಇಲ್ಲಿನ ಇಂದಿರಾ ನಗರದಲ್ಲಿ ಇರುವ ಸಂಸದರ ಕಚೇರಿಗೆ ಭೇಟಿ ನೀಡಿದ ಬಳಿಕ ಜನರ ಸಮಸ್ಯೆ ಆಲಿಸಿ ಮನವಿ ಸ್ವೀಕರಿಸಿ ಅವರು ಮಾತನಾಡಿ, ಚಿಕ್ಕೋಡಿಯಲ್ಲಿರುವ ಸಂಸದರ ಕಚೇರಿಗೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಕಚೇರಿಗೆ ಸಂಬಂಧಿಸಿದಂತೆ ಕೆಲ ಸಣ್ಣ ಪುಟ್ಟ ಕೆಲಸಗಳು ಇವೆ. 3-4ದಿನಗಳಲ್ಲಿ ಕಚೇರಿ ಪೂರ್ಣಗೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಅಲ್ಲಿಯೇ ಸಭೆಗಳನ್ನು ನಡೆಸಲಾಗುವುದು ಎಂದರು.

> ಚಿಕ್ಕೋಡಿ ಭಾಗದ ಸೈನಿಕರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುತ್ತೇನೆ. ಅದೇ ರೀತಿ ಈ ಭಾಗದ ಗಂಭೀರ ಸಮಸ್ಯೆಗಳಾದ ಕುಡಿಯುವ ನೀರಿನ ಸಮಸ್ಯೆ, ನೀರಾವರಿ ಯೋಜನೆಗಳ ಜಾರಿಗೆ ಆದ್ಯತೆ ನೀಡಲಾಗುವುದು, ಪ್ರವಾಹ ಬಂದಾಗ ಆಗುವ ಸಮಸ್ಯೆಗಳ ಬಗ್ಗೆ ಗಮನಹರಿಸಲಾಗುವುದು.
>
> -ಪ್ರಿಯಾಂಕಾ ಜಾರಕಿಹೊಳಿ, ಸಂಸದೆ

**ಚಿಕ್ಕೋಡಿ ಜಿಲ್ಲಾ ಕೇಂದ್ರ- ಮುಖಂಡರೊಂದಿಗೆ ಚರ್ಚೆ:** ಚಿಕ್ಕೋಡಿ ಕ್ಷೇತ್ರದ ವಿವಿಧೆಡೆಯಿಂದ ಜನರು ತಮ್ಮ ಸಮಸ್ಯೆಗಳನ್ನು ನಿವಾರಿಸಲು ಮನವಿಗಳನ್ನು ಸಲ್ಲಿಸಿದ್ದಾರೆ. ಚಿಕ್ಕೋಡಿ ಜಿಲ್ಲಾ ಕೇಂದ್ರವನ್ನಾಗಿ ಘೋಷಿಸಬೇಕೆಂದು ಈ ಭಾಗದ ಜನತೆಯ ಬೇಡಿಕೆ ಇದೆ. ಈ ಕುರಿತು ಎಲ್ಲಾ ಮುಖಂಡರೊಂದಿಗೆ ಚರ್ಚೆ ನಡೆಸುತ್ತೇವೆ. ಚಿಕ್ಕೋಡಿ ಜಿಲ್ಲಾ ಕೇಂದ್ರವನ್ನಾಗಿ ಘೋಷಿಸುವಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ನಿರ್ಧರಿಸುತ್ತಾರೆ ಎಂದರು. ಈ ಸಂದರ್ಭದಲ್ಲಿ ಯುವ ನಾಯಕ ರಾಹುಲ್ ಜಾರಕಿಹೊಳಿ, ರಾಯಭಾಗ ಕ್ಷೇತ್ರದ ಮುಖಂಡ ಮಹಾವೀರ ಮೋಹಿತೆ, ಪುರಸಭೆ ಮಾಜಿ ಅಧ್ಯಕ್ಷ ಪಿ.ಐ.ಕೋರೆ, ರಾಜು ವಂಟಮುತ್ತೆ, ಅನಿಲ ಸದಲಗೆ, ವಿಶ್ವನಾಥ ವತನದಾರ, ಪಿರೋಜ ಕಲಾವಂತ, ಮೋಶಿನ ಬಾಡ್ಕರ ಸೇರಿದಂತೆ ಹಲವು ಮುಖಂಡರಿದ್ದರು.

## ಕೇಂದ್ರದ ವಿರುದ್ಧ ಪ್ರತಿಭಟಿಸಲಿ

← ಮೊದಲಪುಟದಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿಕೆಯಾದರೂ, ದೇಶದಲ್ಲಿ ಪೆಟ್ರೋಲ್ ದರವನ್ನು ಕೇಂದ್ರ ಸರಕಾರ ಇಳಿಸಿರಲಿಲ್ಲ. ಆ ಸಮಯದಲ್ಲಿ ಮೌನವಾಗಿದ್ದ ಬಿಜೆಪಿಗರು ಇಂದೇಕೆ ಪ್ರತಿಭಟನೆ ನಡೆಸುತ್ತಿದ್ದಾರೆ? ದೇಶದಲ್ಲಿ ಜಿಎಸ್‌ಟಿ ಜಾರಿಗೊಳಿಸಿದ ಬಳಿಕ, ರಾಜ್ಯಗಳ ಸಂಪನ್ಮೂಲ ಕ್ರೋಡೀಕರಣಕ್ಕೆ ಹೆಚ್ಚಿನ ಅವಕಾಶವಿಲ್ಲ. ತೈಲ, ಅಬಕಾರಿ ಹಾಗೂ ಸ್ಟ್ಯಾಂಪ್ ಡ್ಯೂಟಿ ತೆರಿಗೆ ಹೊರತುಪಡಿಸಿ ಇನ್ಯಾವುದೇ ತೆರಿಗೆ ವಿಧಿಸಲು ರಾಜ್ಯಗಳಿಗೆ ಅವಕಾಶವಿಲ್ಲ. ಈಗ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಹೊಂದಿಸಲು ಸ್ವಲ್ಪ ಮಟ್ಟಿಗೆ ತೈಲದ ಮೇಲಿನ ದರ ಏರಿಕೆ ಮಾಡಿದ್ದೇವೆ. ಆದರೆ ಈಗಲೂ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಈಗಲೂ ಪೆಟ್ರೋಲ್, ಡೀಸೆಲ್ ದರ ಕಡಿಮೆಯಿದೆ ಎಂದು ಸಮರ್ಥಿಸಿಕೊಂಡಿದ್ದಾರೆ. ಈ ಹಿಂದೆ ಯುಪಿಎ ಸರಕಾರದ ಅವಧಿಯಲ್ಲಿ ಪೆಟ್ರೋಲ್ ಬೆಲೆ 72 ರುಪಾಯಿ ಇತ್ತು. ಆದರೆ ಮೋದಿ ಪ್ರಧಾನಿಯಾದ ಮೇಲೆ 100 ರುಪಾಯಿ ದಾಟಿದೆ. ಹೀಗಿರುವಾಗ ಬಿಜೆಪಿಯವರು ರಾಜ್ಯ ಸರಕಾರದ ವಿರುದ್ಧ ಪ್ರತಿಭಟನೆ ಮಾಡುವ ಬದಲು ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸಲಿ ಎಂದು ಅವರು ವ್ಯಂಗ್ಯವಾಡಿದರು.

## ಬೆಲೆ ಏರಿಕೆ ಖಂಡಿಸಿ ಬೀದಿಗಿಳಿದ ಬಿಜೆಪಿ

← ಮೊದಲಪುಟದಿಂದ ಬೆಂಗಳೂರು ಮಾತ್ರವಲ್ಲದೇ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದ್ದಾರೆ. ದರ ಏರಿಕೆಗೆ ಬಿಜೆಪಿ, ಜೆಡಿಎಸ್ ಸೇರಿದಂತೆ ಹಲವು ಸಂಘಟನೆಗಳು ವಿರೋಧ ವ್ಯಕ್ತಪಡಿಸಿ ದರ ಏರಿಕೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿದರು. ಬಿಜೆಪಿ ಶಾಸಕರು, ಸಂಸದರು, ಮುಖಂಡರು ಹಾಗೂ ನೂರಾರು ಕಾರ್ಯಕರ್ತರು ಭಾಗಿಯಾಗಿ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಪೆಟ್ರೋಲ್-ಡೀಸೆಲ್ ದರ ಇಳಿಕೆಗೆ ಆಗ್ರಹಿಸಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

## ದರ್ಶನ್ ತಪ್ಪೊಪ್ಪಿಗೆ

← ಮೊದಲಪುಟದಿಂದ ವಿಚಾರಣೆಗೆ ಹಾಜರಾಗುವಂತೆ ಚಿಕ್ಕಣ್ಣ ಅವರಿಗೆ ಪೊಲೀಸರು ನೋಟಿಸ್ ನೀಡಿದ್ದರು. ದರ್ಶನ್ ಸಹಿತ ಆರೋಪಿಗಳೊಂದಿಗೆ ಚಿಕ್ಕಣ್ಣ ಅವರನ್ನೂ ಸ್ಟೋನಿಬ್ರೂಕ್ ಪಬ್‌ಗೆ ಕರೆದೊಯ್ದ ಪೊಲೀಸರು ಮಾಹಿತಿ ಕಲೆ ಹಾಕಿದರು. ಸ್ಥಳ ಮಹಜರು ವೇಳೆ ಪೊಲೀಸರು ಚಿಕ್ಕಣ್ಣಗೆ ಹಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡರು. ಕೊಲೆ ವಿಷಯ ನಿಮಗೆ ಗೊತ್ತಿತ್ತೇ?. ಪಾರ್ಟಿಯಲ್ಲಿ ಏನೆಲ್ಲಾ ನಡೆಯಿತು?. ಪಾರ್ಟಿ ಆದ ಮೇಲೆ ನೀವು ಎಲ್ಲಿಗೆ ಹೋದಿರಿ? ಎನ್ನುವ ಪ್ರಶ್ನೆಗಳನ್ನು ಕೇಳಿದ್ದು, ಅದಕ್ಕೆ ಅವರು ಉತ್ತರಿಸಿದ್ದಾರೆ. ಇದೀಗ ಅವರನ್ನು ಪ್ರಕರಣದ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

**ಧನರಾಜ್ ಬಳಿಯಿತ್ತು ಮೆಗ್ಗರ್:** ರೇಣುಕಾಸ್ವಾಮಿಯ ಮರ್ಮಾಂಗ ಸೇರಿದಂತೆ ದೇಹದ ಸೂಕ್ಷ್ಮ ಭಾಗಗಳಿಗೆ ವಿದ್ಯುತ್ ಶಾಕ್ ಕೊಟ್ಟಿದ್ದರಿಂದ ಸಾವು ಸಂಭವಿಸಿದೆ ಎನ್ನಲಾಗಿದೆ. ಈ ಕೃತ್ಯವನ್ನು ದರ್ಶನ್ ಆಪ್ತ ಧನರಾಜ್ ಮಾಡಿದ್ದಾನೆ ಎನ್ನಲಾಗಿದ್ದು, ಈತ ನನ್ನು ಬಂಧಿಸಿರುವ ಪೊಲೀಸರು, ಕೃತ್ಯಕ್ಕೆ ಬಳಸಿದ್ದ ಮೆಗ್ಗರ್ ಅನ್ನು ವಶಕ್ಕೆ ಪಡೆದಿದ್ದಾರೆ.

**ವಿಜಯಲಕ್ಷ್ಮೀ ಮನೆಯಲ್ಲಿ ಬಟ್ಟೆ ಪತ್ತೆ:** ರೇಣುಕಾಸ್ವಾಮಿ ಹತ್ಯೆ ನಡೆಸಿದ ದಿನ ದರ್ಶನ್ ಧರಿಸಿದ್ದ ಬಟ್ಟೆಗಳನ್ನು ಪತ್ನಿ ವಿಜಯಲಕ್ಷ್ಮೀ ಅವರ ಫ್ಲ್ಯಾಟ್‌ನಿಂದ ವಶಕ್ಕೆ ಪಡೆಯಲಾಗಿದೆ. ಕೃತ್ಯ ನಡೆದ ಬಳಿಕ ದರ್ಶನ್ ತನ್ನ ಮನೆಯಲ್ಲಿ ಬಟ್ಟೆ ಬಿಚ್ಚಿಟ್ಟಿದ್ದರು. ಈ ಬಟ್ಟೆಗಳನ್ನು ದರ್ಶನ್ ಕಾಸ್ಟ್ಯೂಮ್ ಡಿಸೈನರ್ ವಿಜಯಲಕ್ಷ್ಮಿ ಮನೆಗೆ ತೆಗೆದುಕೊಂಡು ಹೋಗಿದ್ದ. ಪೊಲೀಸರ ವಿಚಾರಣೆ ವೇಳೆ ದರ್ಶನ್ ಬಟ್ಟೆ ಮನೆಯಲ್ಲಿದೆ ಎಂದಿದ್ದರು. ಆದರೆ ಮಹಜರು ವೇಳೆ ಮನೆಯಲ್ಲಿ ಬಟ್ಟೆ ಸಿಕ್ಕಿರಲಿಲ್ಲ. ಈ ಬಗ್ಗೆ ವಿಚಾರಣೆ ನಡೆಸಿದಾಗ, ಬಟ್ಟೆ ವಿಜಯಲಕ್ಷ್ಮಿ ಮನೆಯಲ್ಲಿರುವುದು ತಿಳಿದುಬಂದಿತ್ತು.

### ಬಿಎಸ್‌ವೈ ಪ್ರಕರಣ?

← ಮೊದಲಪುಟದಿಂದ ಸಿಐಡಿ ಅಧಿಕಾರಿಗಳು ವಿಚಾರಣೆಗೆ ಹಾಜರಾಗುವಂತೆ ಯಡಿಯೂರಪ್ಪ ಅವರಿಗೆ ಎರಡು ಬಾರಿ ನೋಟಿಸ್ ನೀಡಿದರೂ, ವಿಚಾರಣೆಗೆ ಹಾಜರಾಗಿರಲಿಲ್ಲ. ಇದರಿಂದಾಗಿ ಸಿಐಡಿ ಅಧಿಕಾರಿಗಳು ಯಡಿಯೂರಪ್ಪ ವಿರುದ್ಧ ಬಂಧನ ವಾರಂಟ್ ಹೊರಡಿಸುವಂತೆ ಕೋರಿ ನಗರದ 1ನೇ ತ್ವರಿತಗತಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅದನ್ನು ಪರಿಗಣಿಸಿರುವ ನ್ಯಾಯಪೀಠ ಬಿಎಸ್‌ವೈ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಹೊರಡಿಸಿತ್ತು. ಈ ನಡುವೆ ತಮ್ಮ ವಿರುದ್ಧ ದಾಖಲಾಗಿರುವ ದೂರು ಮತ್ತು ಪೋಕ್ಸೋ ವಿಶೇಷ ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆ ರದ್ದುಪಡಿಸಬೇಕು ಎಂದು ಕೋರಿ ಯಡಿಯೂರಪ್ಪ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಮಾಜಿ ಸಿಎಂ ಯಡಿಯೂರಪ್ಪರನ್ನು ಬಂಧಿಸದಂತೆ ನಿರ್ದೇಶನ ನೀಡಿತ್ತು.

ರೇಣುಕಾಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿ

## ಕಾನೂನಿನ ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ: ಬಿ.ಸಿ.ಪಾಟೀಲ್

**ಹಾವೇರಿ:** ಚಿತ್ರನಟ ದರ್ಶನ ನಾನು ಕೃಷಿ ರಾಯಭಾರಿಯಾಗಿ ಮಾಡಿದ ವೇಳೆ ದರ್ಶನ ಈ ರೀತಿಯ ಕೃತ್ಯಗಳಲ್ಲಿ ಭಾಗಿಯಾಗಿರಲಿಲ್ಲ

ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನಪ್ರಿಯ ನಟನನ್ನು ರಾಯಭಾರಿ ಮಾಡಿದರೆ ರೈತರಿಗೆ ಅನುಕೂಲ ಆಗುತ್ತದೆ ಎಂದು ಮಾಡಿದ್ದೆವು ಎಂದು ತಿಳಿಸಿದರು. ರೇಣುಕಾಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಬೇಕು. ಕಾನೂನಿನ ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ತನಿಖೆ ಆಗಬೇಕು, ಆರೋಪಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಹಿಡಿದು ಹಾಕಬೇಕು. ಈಗ ಬ್ಯಾನ್ ಮಾಡುವುದರಿಂದ ಪ್ರಯೋಜನವಿಲ್ಲ ಎಂದು ಪಾಟೀಲ್ ತಿಳಿಸಿದರು. ದರ್ಶನ ಈಗ ಆರೋಪಿ, ಅಪರಾಧಿಯಲ್ಲ. ಈ ಕೇಸ್‌ನಲ್ಲಿ ಯಾರ ಯಾರ ಕೈವಾಡವಿದೆ ಎಂಬುದು ಬೆಳಕಿಗೆ ಬರುತ್ತದೆ. ಎಫ್‌ಐಆರ್ ಪ್ರಕಾರ ತನಿಖೆ ನಡೆಯುತ್ತದೆ. ದರ್ಶನ ಕಲಾವಿದ, ಸ್ನೇಹಿತನಾಗಿ ಪರಿಚಯ. ಅವರ ಬಳಿ ಯಾರ್ಯಾರು ಇದ್ದರು, ಏನು ಎಂಬುದು ನನಗೆ ಗೊತ್ತಿಲ್ಲ ಎಂದು ಬಿ.ಸಿ. ಪಾಟೀಲ್ ಸ್ಪಷ್ಟಪಡಿಸಿದರು.

> ಸರಕಾರ ಬೀಳುವುದು ಈಗಿಂದ ಆಟ ಶುರುವಾಗುತ್ತದೆ. ಎಲ್ಲದರ ದರ ಹೆಚ್ಚಿಸಿದ್ದಾರೆ. ಜನರು ತಿರಸ್ಕಾರ ಮಾಡಿದ್ದಾರೆ. ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಅವರೇ ಗೌರವಾನ್ವಿತವಾಗಿ ರಾಜೀನಾಮೆ ಕೊಟ್ಟು ಹೋಗಬೇಕು. ಈ ಸರಕಾರ ಬಂದರೆ ಬರಗಾಲ ಗ್ಯಾರಂಟಿ. ಕೊಲೆ, ಸುಲಿಗೆ ಪ್ರಕರಣಗಳು ಗ್ಯಾರಂಟಿ.
>
> -ಬಿ.ಸಿ.ಪಾಟೀಲ್ ಮಾಜಿ ಸಚಿವ

#### ತೈಲಬೆಲೆ ಏರಿಕೆಯಿಂದ ಎಲ್ಲವೂ ದುಬಾರಿ

ದಿಢೀರ್ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದ್ದು ದೊಡ್ಡ ಆಘಾತ ತಂದಿದೆ. ಒಂದೇ ಬಾರಿ ಇಷ್ಟೊಂದು ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಿದ್ದು ಇದೇ ಮೊದಲು. ಇದೊಂದು ರಾಬರಿ. ಸರಕಾರದ ಹೆಸರಿನಲ್ಲಿ ಸಾರ್ವಜನಿಕರ ಸುಲಿಗೆ. ಸಾರ್ವಜನಿಕರು ಇದರ ವಿರುದ್ಧ ಪ್ರತಿಭಟನೆ ಮಾಡಬೇಕು. ಬೆಲೆ ಏರಿಕೆ ಮಾಡಿದ್ದು ಎಲ್ಲದರ ಮೇಲೆ ಪರಿಣಾಮ ಬೀರುತ್ತದೆ ಎಂದು ಬಿ.ಸಿ. ಪಾಟೀಲ್ ಅಭಿಪ್ರಾಯಪಟ್ಟರು.

## ಕಾಫಿನಾಡಲ್ಲಿ ನಿಲ್ಲದ ಮಳೆ: ಮೈದುಂಬಿದ ಜಲಪಾತಗಳು

ಉಕ್ಕಿ ಹರಿದ ಹಳ್ಳಗಳು, ರಸ್ತೆ ಸಂಚಾರ ಬಂದ್

**ಚಿಕ್ಕಮಗಳೂರು:** ಕೆಲ ದಿನಗಳಿಂದ ಚಿಕ್ಕಮಗಳೂರು ಜಿಲ್ಲೆ ಸೇರಿದಂತೆ ಮಲೆನಾಡು ಭಾಗದಲ್ಲಿ ಬಿಡುವು ನೀಡಿದ್ದ ವರುಣದೇವ ಮತ್ತೆ ಕಾಫಿನಾಡಿನ ಮಲೆನಾಡು ಭಾಗದಲ್ಲಿ ಅಬ್ಬರಿಸಿದ್ದಾನೆ. ಜಿಲ್ಲೆಯ ಕಳಸ ತಾಲೂಕಿನ ಬಾಳೆಹೊಳೆ, ಕಗ್ಗನಳ್ಳ, ಮಹಲ್ಗೋಡು ಸುತ್ತಮುತ್ತ ಮಳೆ ಅಬ್ಬರಿಸುತ್ತಿದ್ದು, ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಮಹಲ್ಗೋಡ್ ಸಮೀಪ ಹಳ್ಳ ಉಕ್ಕಿ ಹರಿಯುತ್ತಿದೆ. ಹಳ್ಳ ತುಂಬಿದ್ದರಿಂದ ನೀರಿನ ರಭಸ ಕೂಡ ಹೆಚ್ಚಾಗಿದ್ದು, ಬಾಳೆಹೊನ್ನೂರು- ಕಳಸ ರಸ್ತೆ ಸಂಚಾರ ಅಸ್ತವ್ಯಸ್ತವಾಗಿದೆ. ನಿರಂತರ ಮಳೆಯ ಕಾರಣ ಪಂಚವಟಿ ಎಸ್ಟೇಟ್‌ನ ಕೆಲ ಮನೆಗಳಿಗೆ ನೀರು ನುಗ್ಗಿದೆ. ಸತತ ಒಂದೂವರೆ ಗಂಟೆ ಸುರಿದ ಭಾರಿ ಮಳೆಗೆ ಜನ ತತ್ತರಿಸಿದ್ದಾರೆ. ಇನ್ನು, ಕಳಸ ಹಾಗೂ ಎನ್.ಆರ್ ಪುರ ತಾಲೂಕಿನ ಗ್ರಾಮಗಳಲ್ಲಿ ನಿರಂತರವಾಗಿ ಮಳೆ ಆರ್ಭಟಿಸುತ್ತಿದೆ. ಈ ಭಾಗದಲ್ಲಿ ಕಳೆದ ಮೂರು ನಾಲ್ಕು ದಿನಗಳಿಂದ ಮಳೆರಾಯ ಬಿಡುವು ನೀಡಿದ್ದರಿಂದ ಬಿಸಿಲಿನ ವಾತಾವರಣ ನಿರ್ಮಾಣವಾಗಿತ್ತು. ಮಳೆ ಬಂದು ಹೋಗಿರುವ ಕಾರಣ ಈ ಭಾಗದ ನೈಸರ್ಗಿಕ ಪ್ರವಾಸಿ ತಾಣಗಳು ಹಸಿರಿನಿಂದ ಕಂಗೊಳಿಸಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ. ಈಗ ಮತ್ತೆ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಜಲಪಾತಗಳು ಮೈದುಂಬಿ ಹರಿಯುತ್ತಿವೆ.

ಜಯದೇವ ಹೃದ್ರೋಗ ಆಸ್ಪತ್ರೆಗೆ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಭೇಟಿ, ಕಾಮಗಾರಿ ವೀಕ್ಷಣೆ

## 371 ಹಾಸಿಗೆಯ ಆಸ್ಪತ್ರೆ ಸೆಪ್ಟೆಂಬರ್‌ನಲ್ಲಿ ಲೋಕಾರ್ಪಣೆ

**ಕಲಬುರಗಿ:** ಕೆಕೆಆರ್‌ಡಿಬಿ ಅನುದಾನದಡಿ ನಿರ್ಮಿಸಲಾಗುತ್ತಿರುವ ಜಯದೇವ ಹೃದ್ರೋಗ ಆಸ್ಪತ್ರೆಯ ಕಟ್ಟಡದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಕೆಲವೊಂದು ಸಣ್ಣ ಪುಟ್ಟ ಕಾಮಗಾರಿಗಳು ಪೂರ್ಣಗೊಳ್ಳಬೇಕಿದೆ. ಆಗಸ್ಟ್ ಕೊನೆಯ ವಾರ ಅಥವಾ ಸೆಪ್ಟೆಂಬರ್ ಮೊದಲ ವಾರದಲ್ಲಿ ಉದ್ಘಾಟನೆಗೆ ಮುಹೂರ್ತ ನಿಗದಿಪಡಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದರು.

ನಗರದಲ್ಲಿ ಸೋಮವಾರ ನಿರ್ಮಾಣ ಹಂತದ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ಕಟ್ಟಡ ವೀಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಸಂವಿಧಾನದ 371 ಜೆ ಕಲಂ ಜಾರಿಗೊಂಡು ದಶಮಾನೋತ್ಸವ ಆಚರಣೆಯ ಸವಿನೆನಪಿಗಾಗಿ 371 ಹಾಸಿಗೆ ಸಾಮರ್ಥ್ಯವುಳ್ಳ ಆಸ್ಪತ್ರೆಯನ್ನು ಜನರಿಗೆ ಕಾಣಿಕೆಯಾಗಿ ನೀಡಲಾಗಿದೆ ಎಂದು ಹೇಳಿದರು. ಈಗಾಗಲೇ ಜಿಮ್ಸ್ ಆಸ್ಪತ್ರೆಯಲ್ಲಿ ಜಯದೇವ ಆಸ್ಪತ್ರೆ ಚಿಕಿತ್ಸಾ ಸೇವೆಗಳು ದೊರೆಕುತ್ತಿದ್ದು, ಶೀಘ್ರದಲ್ಲಿ ಅಲ್ಲಿನ ವೈದ್ಯರು, ಸಿಬ್ಬಂದಿ, ಪೀಠೋಪಕರಣಗಳೆಲ್ಲ ಸ್ಥಳಾಂತರವಾಗಲಿವೆ. ಹಣಕಾಸು ಇಲಾಖೆಯಲ್ಲಿ ವೈದ್ಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳ ನೇಮಕಾತಿ ಕಡತ ಬಳಿ ಇದೆ. ಇನ್ನು ಆ ಕಡತಕ್ಕೆ ಅನುಮೋದನೆ ಸಿಕ್ಕಿಲ್ಲ, ಅಗತ್ಯ ಅನುಸಾರ ಹುದ್ದೆಗಳ ಭರ್ತಿ ಮಾಡಿಕೊಳ್ಳುವುದು ಎಂದು ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಸೇರಿ ಅನೇಕರು ಉದ್ಘಾಟನಾ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು ಎಂದರು.

ನಗರದಲ್ಲಿ ನಿರ್ಮಾಣವಾಗುತ್ತಿರುವ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ಕಟ್ಟಡವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ವೀಕ್ಷಿಸಿದರು.

ಎರಡು ತಿಂಗಳಯೊಳಗೆ ಹೊಸ ಆಸ್ಪತ್ರೆ ಲೋಕಾರ್ಪಣೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, 200 ಹಾಸಿಗೆ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಸುಟ್ಟು ಗಾಯ ವಿಭಾಗ, 50 ಹಾಸಿಗೆಯ ತುರ್ತು ಚಿಕಿತ್ಸಾ ಘಟಕ (ಕ್ರಿಟಿಕಲ್ ಕೇರ್) ಎರಡು ತಿಂಗಳಯೊಳಗಾಗಿ ಜನಾರ್ಪಣೆ ಮಾಡಲಾಗುವುದು. ಈ ಹಿಂದೆ ತಾವು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದಾಗ ಅಡಿಗಲ್ಲು ಹಾಕಿದ ಕಾಮಗಾರಿಗಳನ್ನು ಈಗ ಉದ್ಘಾಟನೆಗೆ ಸಜ್ಜಾಗುತ್ತಿವೆ. ಆದರೆ ಹಿಂದಿನ ಬಿಜೆಪಿ ಸರಕಾರದಲ್ಲಿ ಯಾವುದೇ ಪ್ರಗತಿ ಕಾಣಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

#### 12 ಐಟಿಐ ಕಾಲೇಜುಗಳಿಗೆ ಹೊಸ ಕಟ್ಟಡ

ಕಲಬುರಗಿ ಸೇರಿ ರಾಜ್ಯದ ಆಯ್ದ 12 ಸರಕಾರಿ ಐಟಿಐ ಕಾಲೇಜುಗಳ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, ಈಗ ಇರುವ ಜಾಗದಲ್ಲೇ ತಲಾ ಸುಮಾರು 12 ಕೋಟಿ ರು. ವೆಚ್ಚದಲ್ಲಿ ಹೊಸ ಕಟ್ಟಡಗಳು ಮಂಜೂರಾಗಿವೆ. ಎರಡು ಹಂತದಲ್ಲಿ ತಲಾ 6 ಹೊಸ ಐಟಿಐ ಕಾಲೇಜುಗಳ ಹೊಸ ಕಟ್ಟಡ ನಿರ್ಮಿಸಲಾಗುವುದು ಎಂದು ಮಾಹಿತಿ ನೀಡಿದರು.

> ಜಿಮ್ಸ್ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಬಡ ಮಹಿಳೆ ಸಾವನ್ನಪ್ಪಿರುವ ಬಗ್ಗೆ ಗಮನಕ್ಕೆ ಬಂದಿದೆ. ಈ ಬಗ್ಗೆ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿ ವಿಚಾರಣೆಗೆ ಸೂಚಿಸಲಾಗಿದ್ದು, ವೈದ್ಯರು ತಪ್ಪುವೆಸಗಿದ್ದು ಕಂಡುಬಂದರೆ ಶಿಸ್ತು ಕ್ರಮ ಜರುಗಿಸುತ್ತೇನೆ.
>
> - ಡಾ. ಶರಣಪ್ರಕಾಶ ಪಾಟೀಲ್, ಸಚಿವ

## ಸಮಾಚಾರ ಸಣ್ಣದಲ್ಲ

### ತಲೆ ಮೇಲೆ ಕಲ್ಲು ಹಾಕಿ ಕೊಲೆ

**ಚಿಕ್ಕೋಡಿ:** ತಲೆ ಮೇಲೆ ಕಲ್ಲು ಎತ್ತಿ ಹಾಕಿ ವ್ಯಕ್ತಿಯೋರ್ವನನ್ನು ಕೊಲೆ ಮಾಡಿರುವ ಘಟನೆ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಸೋಮವಾರ ನಡೆದಿದೆ. ಯಕ್ಸಂಬಾ ಪಟ್ಟಣದ ನಿವಾಸಿ ಮಹಾಂತೇಶ

ಕುರಣಿ (48) ಕೊಲೆಯಾದ ವ್ಯಕ್ತಿ. ಸೋಮವಾರ ಮುಂಜಾನೆ 3 ಗಂಟೆ ಸುಮಾರಿಗೆ ಈ ಕೊಲೆ ನಡೆದಿದೆ ಎಂದು ಶಂಕಿಸಲಾಗಿದ್ದು, ಪಟ್ಟಣದ ಬಿರೇಶ್ವರ ಕಾಲೋನಿ ಬಳಿ ಈ ಘಟನೆ ನಡೆದಿದೆ. ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಸ್ಥಳಕ್ಕೆ ಸದಲಗಾ ಪೊಲೀಸರು ಭೇಟಿ ನೀಡಿ ಪರಶೀಲನೆ ನಡೆಸಿದ್ದಾರೆ. ಕಳೆದ 4 ದಿನಗಳಿಂದ ಯಕ್ಸಂಬಾ ಪಟ್ಟಣದಲ್ಲಿ ಶ್ರೀ ಲಕ್ಷ್ಮೀದೇವಿ ಜಾತ್ರೆ ಅದ್ದೂರಿಯಾಗಿ ನಡೆದಿತ್ತು. ರವಿವಾರ ರಾತ್ರಿ ಸರಿಗಮಪ ಹೆಸರುವಾಸಿ ಹಣಮಂತ ಲಮಾಣಿ ತಂಡದವರಿಂದ ಹಾಸ್ಯ ಸಂಜೆ ಕಾರ್ಯಕ್ರಮ ನಡೆದಿತ್ತು. ಕಾರ್ಯಕ್ರಮ ದಲ್ಲಿ ಪಟ್ಟಣ ಸೇರಿ ಸುತ್ತಮುತ್ತಲಿನ ಹಳ್ಳಿಯ ಜನರು ಪಾಲ್ಗೊಂಡಿದ್ದರು. ಬೆಳಿಗ್ಗೆ ಕೊಲೆಯಾದ ವಿಷಯ ಜನರನ್ನು ಬೆಚ್ಚಿಬೀಳಿಸಿದೆ.

### ಈಜಲು ಹೋಗಿದ್ದ ಇಬ್ಬರು ಯುವಕರ ಸಾವು

**ಧಾರವಾಡ:** ಕಲ್ಲಿನ ಕ್ವಾರಿಯಲ್ಲಿ ಈಜಲು ಹೋಗಿದ್ದ ಇಬ್ಬರು ಯುವಕರು ನೀರುಪಾಲಾಗಿರುವ ಘಟನೆ ತಾಲೂಕಿನ ಮನಸೂರ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಧಾರವಾಡದ ಮಾಳಮಡ್ಡಿಯ ಶ್ರೇಯಸ್ ಸೇರಿ ಇಬ್ಬರು ಮೃತರು. ಶ್ರೇಯಸ್ ಮೃತದೇಹ ಸಿಕ್ಕಿದ್ದು, ಮತ್ತೊಬ್ಬನ ದೇಹಕ್ಕೆ ಹುಡುಕಾಟ ನಡೆಸಲಾಗುತ್ತಿದೆ. ಸ್ಥಳಕ್ಕೆ ಗ್ರಾಮೀಣ ಠಾಣೆಯ ಪೊಲೀಸರು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ ಆಗಮಿಸಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.

### ಸಿಎಂ, ಡಿಸಿಎಂ ರಾಜೀನಾಮೆ ನೀಡಲಿ

**ಶಿರಸಿ:** ರಾಜ್ಯದಲ್ಲಿ ಅಸಮರ್ಥ ಆಡಳಿತ ನೀಡುತ್ತಿರುವ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಜಿ.ಪರಮೇಶ್ವರ

ಅವರ ನೇತೃತ್ವ ಒಪ್ಪಿಕೊಳ್ಳಬೇಕು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬೆಲೆ ಏರಿಕೆ, ಅಲ್ಪಸಂಖ್ಯಾತರ ತುಷ್ಟೀಕರಣ, ಅಪರಾಧ ಕೃತ್ಯಗಳ ಹೆಚ್ಚಳ, ಮಿತಿಮೀರಿದ ಭ್ರಷ್ಟಾಚಾರ ಸೇರಿ ಹಲವು ವಿಷಯಗಳ ನಿರ್ವಹಣೆಯಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್ ಸೇರಿ ಮುಂಬರುವ ಚುನಾವಣೆ ಖರ್ಚು ವೆಚ್ಚ ನಿರ್ವಹಿಸಲು ಕಾಂಗ್ರೆಸ್ ರಾಜ್ಯವನ್ನು ಎಟಿಎಂ ಆಗಿ ಮಾರ್ಪಡಿಸಿಕೊಳ್ಳಲಾಗಿದೆ ಎಂದರು. ಇದರ ಭಾಗವಾಗಿ ಸಿಎಂ ಸಿದ್ದರಾಮಯ್ಯ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಸಿದ್ದಾರೆ. ಕೇವಲ ಗ್ಯಾರಂಟಿ ಹೆಸರು ಮುಂದಿಟ್ಟುಕೊಂಡು ಸಿಎಂ ಹುದ್ದೆಯಲ್ಲಿ ಸಿದ್ದರಾಮಯ್ಯ ಮುಂದುವರಿಯಬಾರದು. ತಕ್ಷಣ ರಾಜೀನಾಮೆ ನೀಡಿ ಜಿ.ಪರಮೇಶ್ವರ ಅವರಂಥ ನಾಯಕತ್ವ ಒಪ್ಪಿಕೊಳ್ಳಬೇಕು ಎಂದರು.

### ಕೇಂದ್ರದ ವಿರುದ್ಧ ಬಿಜೆಪಿ ಪ್ರತಿಭಟಿಸಲಿ

**ಕಲಬುರಗಿ:** ರಾಜ್ಯ ಸರಕಾರ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಲು ಕೇಂದ್ರ ಸರಕಾರದ ನೀತಿಯೇ ಕಾರಣ. ಹೀಗಾಗಿ ಬಿಜೆಪಿಯವರು ಕೇಂದ್ರದ

ನರೇಂದ್ರ ಮೋದಿ ಸರಕಾರದ ವಿರುದ್ಧ ಪ್ರತಿಭಟನೆ ಮಾಡಲಿ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ ಸವಾಲು ಹಾಕಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾತೈಲದ ಬೆಲೆ ಕಡಿಮೆಯಾದರೂ ಕೇಂದ್ರ ಅದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಿಲ್ಲ. ಬದಲಾಗಿ ಸಾಕಷ್ಟು ಹಣ ಲೂಟಿ ಮಾಡಿದೆ. ಕಚ್ಚಾತೈಲದ ಬೆಲೆ ಹೆಚ್ಚಾದಾಗ ಇಲ್ಲಿಯೂ ತೈಲಬೆಲೆ ಹೆಚ್ಚಿಸಿದ್ದಾರೆ. ಹೀಗಾಗಿ ಬೆಲೆ ಹೆಚ್ಚಾಗಿಯೇ ಇದೆ. ನಾವು ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದ ಬಳಿಕವೂ ದಕ್ಷಿಣ ಭಾರತದಲ್ಲೇ ಕರ್ನಾಟಕದಲ್ಲಿ ತೈಲಬೆಲೆ ಕಡಿಮೆ ಇದೆ ಎಂದು ತಿರುಗೇಟು ನೀಡಿದರು.

ವಿರಾಮ
ಪ್ರತಿ ಭಾನುವಾರ

{ಬಸವರಾಜ ಬೊಮ್ಮಾಯಿ} ಸಂಸದ

ರಾಜ್ಯ ಸರಕಾರದ ಯೋಜನೆಗಳು ಗ್ರಾಮೀಣ ಮಹಿಳೆಯರಿಗೆ ತಲುಪುತ್ತಿಲ್ಲ, ಇದನ್ನು ಪರಿಶೀಲಿಸಬೇಕು. ರಾಜ್ಯ ಸರಕಾರದಿಂದ ಹಣದ ಗ್ಯಾರಂಟಿ ಇಲ್ಲದಿರುವುದರಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಪೊಲೀಸ್ ಅಧಿಕಾರಿಗಳು ನಾಗರಿಕರ ಸಮಸ್ಯೆ ಬಗೆಹರಿಸಲು ವಿಫಲರಾದರೆ ಕ್ರಮ ಕೈಗೊಳ್ಳಲಾಗುವುದು.

---

ರಾಜ್ಯ ಸರಕಾರದ ವಿರುದ್ಧ ಬಿಜೆಪಿ ನಾಯಕರ ಕಿಡಿ | ಪ್ರತಿಭಟನಾ ನಿರತರನ್ನು ವಶಕ್ಕೆ ಪಡೆದು ಬಿಡುಗಡೆ

# ಬೆಲೆ ಏರಿಕೆ ಹಿಂಪಡೆಯುವವರೆಗೆ ಬಿಜೆಪಿ ಹೋರಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪೆಟ್ರೋಲ್-ಡೀಸೆಲ್ ದರ ಏರಿಕೆ ಖಂಡಿಸಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಬಿಜೆಪಿ ಸೋಮವಾರ ಪ್ರತಿಭಟನೆ ನಡೆಸಿ, ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿತು.

ಬೆಂಗಳೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್. ಅಶೋಕ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ, ರಾಜ್ಯ ಸರಕಾರದ ವಿರುದ್ಧ ನಾಯಕರು ವಾಗ್ದಾಳಿ ನಡೆಸಿದರು. ಸ್ವಾತಂತ್ರ್ಯ ಉದ್ಯಾನವನದಲ್ಲಿ ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಬಳಿಕ ಪ್ರತಿಭಟನಾ ನಿರತರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆಗೊಳಿಸಿದ್ದಾರೆ.

ಇದಕ್ಕೂ ಮೊದಲು ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸರಕಾರ ತೈಲ ಬೆಲೆ ಏರಿಕೆ ಮಾಡುವ ಮೂಲಕ ಅವಿವೇಕದ ಮತ್ತು ಜನವಿರೋಧಿ ನಿರ್ಧಾರವನ್ನು ಹಿಂಪಡೆಯುವವರೆಗೆ ಬಿಜೆಪಿ ಹೋರಾಟ ಮಾಡಲಿದೆ. ರೈತರು, ಬಡವರು, ಜನಸಾಮಾನ್ಯರಿಗೆ ನ್ಯಾಯ ಕೊಡಿಸುವ ದೃಷ್ಟಿಯಿಂದ ವಿಪಕ್ಷವಾಗಿ ಜನರ ಪರವಾಗಿ ಧ್ವನಿ ಎತ್ತಬೇಕಿದ್ದು, ಜನವಿರೋಧಿ ಸರಕಾರ ಮತ್ತು ಜನವಿರೋಧಿ ಮುಖ್ಯಮಂತ್ರಿಗಳ ವಿರುದ್ಧ ರಾಜ್ಯಾದ್ಯಂತ ಬಿಜೆಪಿ ಹೋರಾಟ ಕೈಗೆತ್ತಿಕೊಂಡಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಸರಕಾರಕ್ಕೆ ಕಳೆದ ಒಂದು ವರ್ಷದ ಅಧಿಕಾರದಲ್ಲಿ ಒಂದೇ ಒಂದು ರುಪಾಯಿಯನ್ನೂ ಅಭಿವೃದ್ಧಿಗೆ ಕೊಡಲು ಸಾಧ್ಯವಾಗಿಲ್ಲ. ಶಾಸಕ ನಾಡಗೌಡರು ಅಭಿವೃದ್ಧಿ ಕಾರ್ಯ ಸ್ಥಗಿತವಾದ ಕುರಿತು ಹೇಳಿಕೆ ಕೊಟ್ಟಿದ್ದಾರೆ. ತಾವು ಕ್ಷೇತ್ರದಲ್ಲಿ ತಲೆ ಎತ್ತಿ ಓಡಾಡಲೂ ಆಗದ ಸ್ಥಿತಿ ಎಂದು ಗಮನ ಸೆಳೆದಿದ್ದಾರೆ; ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಲೂ ಸಿದ್ಧ ಎಂದು ಹೇಳಿರುವುದಾಗಿ ಗಮನ ಸೆಳೆದರು. ರಸ್ತೆ, ಶಾಲೆಗಳ ಅಭಿವೃದ್ಧಿ, ಆಸ್ಪತ್ರೆಗಳ ವಿಚಾರದಲ್ಲೂ ಅಭಿವೃದ್ಧಿ ಎಂಬುದು ಕನಸಾಗಿ ಉಳಿದಿದೆ ಎಂದು ಟೀಕಿಸಿದರು.

**ಸರಕಾರವನ್ನು ಜನರೇ ಕಿತ್ತುಹಾಕಬೇಕಿದೆ : ಅಶೋಕ್**

ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ಬಿಜೆಪಿ ಸರಕಾರದ ಅವಧಿಯಲ್ಲಿ ಪೆಟ್ರೋಲ್ ದರ ಏರಿಸಿದ್ದಕ್ಕೆ ಮಾನ ಮರ್ಯಾದೆ ಇದೆಯೇ ಎಂದು ಪ್ರಶ್ನೆ ಮಾಡಿ, ಈಗ ಅವರೇ ಮೂರು ರುಪಾಯಿ ಹೆಚ್ಚಳ ಮಾಡಿದ್ದಾರೆ. ತೈಲ ಬೆಲೆ ಏರಿಕೆಯಾದರೆ ಸಿಮೆಂಟ್, ತರಕಾರಿ ಎಲ್ಲ ಬೆಲೆಯೂ ಏರಲಿದೆ ಎಂದು ಸಿಎಂ ಸಿದ್ದರಾಮಯ್ಯನವರೇ ಹೇಳಿದ್ದರು. ಈಗ ಯಾವ ಬೆಲೆಗಳು ಹೆಚ್ಚಲಿದೆ. ಗ್ಯಾರಂಟಿ ಯೋಜನೆಗಳೆಂದು ಹೇಳಿ ಎಲ್ಲರಿಗೂ ಒಂದು ಲಕ್ಷ, ಎರಡು ಸಾವಿರ ಕೊಡುತ್ತೇವೆ ಅಲ್ಲದೇ ರಾಹುಲ್ ಗಾಂಧಿ ಇನ್ನೂ ಮುಂದೆ ಹೋಗಿ ಟಕಾಟಕ್ ಹಾಕುತ್ತೇನೆ ಎಂದಿದ್ದು, ಆದರೆ ಜೇಬಿಗೆ ಕತ್ತರಿ ಹಾಕಿದ್ದಾರೆ ಎಂದು ತಿಳಿಸಿದ್ದಾರೆ.

ಗ್ಯಾರಂಟಿಗೆ 55,000 ಕೋಟಿ ರು. ಮೀಸಲಿಟ್ಟಿರುವುದಾಗಿ ತಿಳಿಸಿದ್ದು, ನಮ್ಮದೇ ಹಣವನ್ನು ದರೋಡೆ ಮಾಡಿ ಮರಳಿ ನೀಡುತ್ತಿದ್ದಾರೆ. ಒಂದು ವರ್ಷ ಕಳೆದರೂ ಅಭಿವೃದ್ಧಿ ಕಾರ್ಯ ನಡೆದಿಲ್ಲ, ಶಿಕ್ಷಕರಿಗೆ ಸಂಬಳ ನೀಡಿಲ್ಲ, ಬೆಂಗಳೂರಿನಲ್ಲಿ ರಸ್ತೆ ಗುಂಡಿ ಮುಚ್ಚಿಲ್ಲ. ಬೆಂಗಳೂರನ್ನು ಬ್ರ್ಯಾಂಡ್ ಮಾಡುತ್ತೇನೆಂದು ಹೇಳಿ ಭಾಗ ಮಾಡಲು ಮುಂದಾಗಿದ್ದು, ಬೆಂಗಳೂರನ್ನು ಭಾಗ ಮಾಡಿದರೆ ಕಾಂಗ್ರೆಸ್ ಕಚೇರಿಯನ್ನು ಜನರು ಭಾಗ ಮಾಡುತ್ತಾರೆ. ಈಗ ಚುನಾವಣೆ ನಡೆದರೆ ಕಾಂಗ್ರೆಸ್ ಠೇವಣಿ ಕಳೆದುಕೊಳ್ಳಲಿದೆ. ಲೋಕಸಣೆ ಚುನಾವಣೆಯಲ್ಲಿ 143 ಕ್ಷೇತ್ರ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲೂ ಹೆಚ್ಚು ಮತಗಳು ಬಿಜೆಪಿಗೆ ಬಂದಿದೆ ಎಂದು ಟೀಕಿಸಿದರು.

ಈ ವೇಳೆ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಮಾಜಿ ಸಚಿವ ಬೈರತಿ ಬಸವರಾಜ್, ವಿಧಾನಪರಿಷತ್ ಮುಖ್ಯ ಸಚೇತಕ ಎನ್.ರವಿಕುಮಾರ್, ಎಂಎಲ್‌ಸಿ ಛಲವಾದಿ ನಾರಾಯಣಸ್ವಾಮಿ, ಗೋಪಿನಾಥ ರೆಡ್ಡಿ, ಶಾಸಕರಾದ ರವಿ ಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ರಘು, ಎ.ಎಸ್.ಪಾಟೀಲ ನಡಹಳ್ಳಿ, ಧೀರಜ್ ಮುನಿರಾಜು ಸೇರಿದಂತೆ ಅನೇಕರಿದ್ದರು.

ಬೆಂಗಳೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್. ಅಶೋಕ್ ನೇತೃತ್ವದಲ್ಲಿ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದರು.

### ಜನ ಸಾಮಾನ್ಯರ ಜೇಬಿಗೆ ಕತ್ತರಿ

ರಾಯಚೂರು: ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಖಂಡಿಸಿ ಸರಕಾರಕ್ಕೆ ಚಿಪ್ಪು ತೋರಿಸುವ ಮೂಲಕ ಜಿಲ್ಲಾ ಬಿಜೆಪಿ ವತಿಯಿಂದ ನಗರದ ಅಂಬೇಡ್ಕರ್ ವೃತ್ತದಲ್ಲಿ ವಿನೂತನ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ದಿಢೀರನೆ ಬೆಲೆ ಹೆಚ್ಚಳ ಮಾಡಿ, ಜನ ಸಾಮಾನ್ಯರ ಜೇಬಿಗೆ ಕತ್ತರಿ ಹಾಕಿದೆ ಎಂದು ಸರಕಾರದ ವಿರುದ್ಧ ಘೋಷಣೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

### ಬೆಲೆ ಏರಿಕೆಗೆ ಸಂಸದ ಯದುವೀರ್ ಖಂಡನೆ

ಮೈಸೂರು: ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚಿಸಿರುವ ರಾಜ್ಯ ಸರಕಾರದ ಕ್ರಮವನ್ನು ಸಂಸದ ಯದುವೀರ್ ಒಡೆಯರ್ ಖಂಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪೆಟ್ರೋಲ್, ಡೀಸೆಲ್ ಬೆಲೆಯನ್ನು ಹೆಚ್ಚಿಸಿರುವ ರಾಜ್ಯ ಸರಕಾರದ ನಿರ್ಧಾರವನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿದೆ. ರಾಜ್ಯ ಸರಕಾರದ ಈ ನಿರ್ಧಾರದಿಂದ ಜನಸಾಮಾನ್ಯರಿಗೆ ಕಷ್ಟವಾಗಲಿದ್ದು, ಸಾರ್ವಜನಿಕರ ಆರ್ಥಿಕ ಪರಿಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಕಿಡಿ ಕಾರಿದರು.

ರಾಜ್ಯದ ಜನತೆ ಕಾಂಗ್ರೆಸ್‌ಗೆ ಮತ ಹಾಕದ ಕಾರಣಕ್ಕೆ ಇಂಧನ ಬೆಲೆಯನ್ನು ಹೆಚ್ಚಿಸಿ ಸೇಡು ತೀರಿಸಿಕೊಳ್ಳುವ ಕೆಲಸ ಮಾಡಲಾಗುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ ಹಣವಿಲ್ಲದಂತಾಗಿ ಜನರ ಮೇಲೆ ಗದಾ ಪ್ರಹಾರ ಮಾಡುತ್ತಿದೆ.

-ಯದುವೀರ್ ಒಡೆಯರ್, ಸಂಸದ

ಚುನಾವಣೆ ಬಳಿಕ ಬೆಲೆ ಏರಿಕೆ ಕೈಗೊಂಡು ರಾಜ್ಯ ಸರಕಾರ ಜನರ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ. ರಾಜ್ಯ ಸರಕಾರದ ವಿರುದ್ಧ ಬೆಲೆ ಏರಿಕೆ ನೀತಿ ಖಂಡಿಸಿ ರಾಜ್ಯಾದ್ಯಂತ ಉಗ್ರ ಹೋರಾಟ ಕೈಗೊಳ್ಳುತ್ತೇವೆ.

-ಗೋವಿಂದ ಕಾರಜೋಳ, ಸಂಸದ

### ಕಾರಿಗೆ ಹಗ್ಗ ಕಟ್ಟಿ : ಪ್ರತಿಭಟನೆ

ಬಾಗಲಕೋಟೆ: ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಳ ಖಂಡಿಸಿ ಸೋಮವಾರ ಬಿಜೆಪಿ ಮುಖಂಡರು ಕಾರಿಗೆ ಹಗ್ಗ ಕಟ್ಟಿ ಎಳೆದುಕೊಂಡು ಹೋಗುವ ಮೂಲಕ ಪ್ರತಿಭಟನೆ ಮಾಡಿದರು. ಎತ್ತಿನ ಬಂಡಿ, ಸೈಕಲ್ ಹೊಡೆಯುವ ಮೂಲಕ ಸಾರ್ವಜನಿಕರಿಗೆ ಹೊರೆಯಾಗುವ ಬೆಲೆ ಹೆಚ್ಚಳ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಗ್ಯಾರಂಟಿ ಹೆಸರಿನಲ್ಲಿ ಸೌಲಭ್ಯ ನೀಡಿದಂತೆ ಮಾಡಿ, ಇನ್ನೊಂದೆಡೆ ಬೆಲೆ ಹೆಚ್ಚಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಕಿತ್ತುಕೊಳ್ಳುತ್ತಿದೆ ಎಂದು ಆರೋಪಿಸಿದರು. ರಾಜ್ಯಸಭೆ ಸದಸ್ಯ ನಾರಾಯಣ ಭಾಂಡಗೆ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಶಾಂತಗೌಡ ಪಾಟೀಲ, ಬಸವರಾಜ ಯಂಕಂಚಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ರಾಜ್ಯದ ಕಾಂಗ್ರೆಸ್ ಸರಕಾರವು ಕಳೆದೊಂದು ವರ್ಷದಲ್ಲಿ ನಿರಂತರವಾಗಿ ಬೆಲೆ ಏರಿಕೆ, ದರ ಏರಿಕೆಯನ್ನು ಮಾಡುತ್ತಲೇ ಬಂದಿದೆ. ಗ್ಯಾರಂಟಿ ನೆಪದಲ್ಲಿ ಜನರನ್ನು ಓಲೈಸುತ್ತಿರುವ ಕಾಂಗ್ರೆಸ್ ಇದೀಗ ಪೆಟ್ರೋಲ್, ಡೀಸೆಲ್ ದರ ಏರಿಸಿರುವುದನ್ನು ಹಿಂಪಡೆಯಬೇಕು.

-ಡಾ.ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಡಿಸಿಎಂ

ಕರ್ನಾಟಕ ಸೇರಿ 3 ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವು ಜನರಿಗೆ ಮೂರು ನಾಮ ಹಾಕುತ್ತಿದೆ. ಸಿದ್ದರಾಮಯ್ಯನವರು ತಾವು ಮಾತ್ರ ಟೋಪಿ ಹಾಕುವುದಲ್ಲ. ಜನರಿಗೆಲ್ಲ ಟೋಪಿ ಹಾಕುತ್ತಿದ್ದಾರೆ ಎಂದು ಟೀಕಿಸಿದರು. ಟೋಪಿ ಹಾಕಿ ನಾಮ ಹಾಕಿ ಜನರಿಗೆ ಚೊಂಬು ಕೊಡುತ್ತಿದ್ದಾರೆ.

-ಸಿ.ಟಿ. ರವಿ, ವಿಧಾನಪರಿಷತ್ ಸದಸ್ಯ

### ತಳ್ಳುಗಾಡಿ ಮೇಲೆ ಸ್ಕೂಟರ್ ಇಟ್ಟು ಪ್ರತಿಭಟನೆ

ಚಾಮರಾಜನಗರ: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಸೋಮವಾರ ಪ್ರತಿಭಟನೆ ನಡೆಸಿತು. ಇಲ್ಲಿನ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಿಂದ ಭುವನೇಶ್ವರಿ ವೃತ್ತದವರೆಗೂ ತಳ್ಳು ಗಾಡಿಯ ಮೇಲೆ ಸ್ಕೂಟರ್ ಇರಿಸಿ ಮೆರವಣಿಗೆ ನಡೆಸಿದ ಕಾರ್ಯಕರ್ತರು ಕಾಂಗ್ರೆಸ್ ಸರಕಾರದ ವಿರುದ್ಧ ಘೋಷಣೆ ಕೂಗಿದರು. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ತೈಲ ಬೆಲೆ ಹೆಚ್ಚಿಸುವ ಮೂಲಕ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹಾಕಿದೆ ಎಂದು ಮಾಜಿ ಶಾಸಕ ಎನ್.ಮಹೇಶ್ ವಾಗ್ದಾಳಿ ನಡೆಸಿದರು.

### ರಾಜ್ಯ ಸರಕಾರದ ವಿರುದ್ಧ ಆಕ್ರೋಶ

ಕಲಬುರಗಿ: ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ರಾಜ್ಯ ಕಾಂಗ್ರೆಸ್ ಸರಕಾರದ ಜನ ವಿರೋಧಿ ನೀತಿಯ ವಿರುದ್ಧ ಸೋಮವಾರ ಕಲಬುರಗಿಯಲ್ಲಿ ಭಾರತೀಯ ಜನತಾ ಪಕ್ಷ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿತ್ತು. ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ ಭಾಗವಹಿಸಿ, ಈಗಾಗಲೇ ಜನಸಾಮಾನ್ಯರು ಉಪಯೋಗಿಸುವ ಹಾಲು, ವಿದ್ಯುತ್ ಬಿಲ್ , ಸ್ಟಾಂಪ್ ಡ್ಯೂಟಿ, ವಾಹನ ನೋಂದಣಿ ಸೇರಿದಂತೆ ರೈತರಿಗೆ ಅನುಕೂಲವಾಗುವ ಬಿತ್ತನೆಬೀಜ, ಪಹಣಿ, ಇವಿ ವಾಹನಗಳ ಮೇಲೆ ತೆರಿಗೆ ಸೇರಿ ಹತ್ತಾರು ಬೆಲೆ ಹೆಚ್ಚಳ ಮಾಡಿ ಜನಸಾಮಾನ್ಯರ ಮೇಲೆ ಹೊರೆಹೇರಲಾಗಿದೆ ಎಂದು ವಾಗ್ದಾಳಿ ನಡೆಸಿದರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಬೆಳಗಾವಿಯಲ್ಲಿ ಎತ್ತುಗಳಿಗೆ ದ್ವಿಚಕ್ರ ವಾಹನ ಕಟ್ಟಿ ಬಿಜೆಪಿ ಕಾರ್ಯಕರ್ತರು ವಿಭಿನ್ನವಾಗಿ ಪ್ರತಿಭಟನೆ ನಡೆಸಿ, ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

### ಸರಕಾರದ ಬೆಲೆ ಏರಿಕೆ ನಿರ್ಧಾರ ಹಿಂಪಡೆಯಲಿ

ಯಾದಗಿರಿ: ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಸಿದ ಸರಕಾರ ತನ್ನ ನಿರ್ಧಾರವನ್ನು ಹಿಂಪಡೆಯುವರೆಗೂ ಬಿಜೆಪಿ ಹೋರಾಟ ನಿಲ್ಲುವುದಿಲ್ಲ ಎಂದು ಮಾಜಿ ಶಾಸಕ ವೆಂಕಟರೆಡ್ಡಿ ಮುದ್ನಾಳ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಇಂಧನಗಳ ಬೆಲೆ ಹೆಚ್ಚಳ ಖಂಡಿಸಿ ಬಿಜೆಪಿ ವತಿಯಿಂದ ಸುಭಾಷ್ ವೃತ್ತ ಬಳಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ನಾವು ಪ್ರತಿಪಕ್ಷವಾಗಿ ಜನರ ಪರವಾಗಿ ಧ್ವನಿ ಎತ್ತಬೇಕಿದೆ. ರಾಜ್ಯದ ರೈತರು, ಬಡವರು, ಜನಸಾಮಾನ್ಯರಿಗೆ ನ್ಯಾಯ ಕೊಡಿಸುವ ಕೆಲಸವನ್ನು ನಾವು- ನೀವೆಲ್ಲರೂ ಸೇರಿ ಮಾಡುವುದು ಅವಶ್ಯವಾಗಿದೆ ಎಂದರು.

---

ಜನ ವಿರೋಧಿ ನೀತಿ ಪ್ರಬಲವಾಗಿ ಖಂಡಿಸುತ್ತೇವೆ: ನೀರಲಕೇರಿ

## ತೈಲ ದರ ತಡೆಗೆ ರಾಜ್ಯಪಾಲರಿಗೆ ಮನವಿ

**ಹುಬ್ಬಳ್ಳಿ:** ರಾಜ್ಯ ಸರಕಾರ ಏಕಾಏಕಿ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿರುವುದನ್ನು ತಡೆಹಿಡಿಯುವಂತೆ ಕರ್ನಾಟಕ ಥಿಂಕರ್ಸ್ ಫೋರಂ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಪಿ.ಎಚ್. ನೀರಲಕೇರಿ ಅವರು ರಾಜಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರಿಗೆ ಇದೀಗ ಕರ್ನಾಟಕ ರಾಜ್ಯ ಸರಕಾರ ಮತ್ತೊಂದು ಆಘಾತ ನೀಡಿದೆ. ಪೆಟ್ರೋಲ್ ಮೂರು ರೂಪಾಯಿ ಡೀಸೆಲ್ ಮೂರೂವರೆ ರೂಪಾಯಿ ಗಮನಾರ್ಹ ಏರಿಕೆ ಮಾಡಿರುವುದು ತೀವ್ರ ಖಂಡನೀಯ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೇರುವ ಒಂದೇ ಕಾರಣಕ್ಕಾಗಿ ಪಂಚ ಭಾಗ್ಯದ ಮೋಡಿ ಮಾಡಿ ರಾಜ್ಯದ ಮತದಾರರನ್ನು ದಿಕ್ಕು ತಪ್ಪಿಸಿದ್ದು ನಾಡಿನ ದೌರ್ಭಾಗ್ಯವಲ್ಲದೇ ಬೇರೇನೂ ಅಲ್ಲ. ದಿನ ಬಳಕೆ ಹಾಗೂ ಅಗತ್ಯ ವಸ್ತುಗಳ ಬೆಲೆಗಳನ್ನು ಸರಣೀ ರೂಪದಲ್ಲಿ ಏರಿಸಲಾಗುತ್ತಿದೆ, ಇದೀಗ ಪೆಟ್ರೋಲ್ ಹಾಗೂ ಡೀಸೆಲ್ ದರಗಳನ್ನು ಏರಿಸಿ ಜನಸಾಮಾನ್ಯರ ಕೈ ಸುಡಲಾಗುತ್ತಿದೆ. ಈ ಬೆಲೆ ಏರಿಕೆಯ ಪ್ರತಿಕೂಲ ಪರಿಣಾಮ ಸಹಜವಾಗಿಯೇ ಸರಕು ಸಾಗಾಣಿಕೆ, ಹಾಗೂ ಸಾರಿಗೆ ದರಗಳೂ ವಿಪರೀತ ಹೆಚ್ಚಳ ಕಂಡು ದಿನಬಳಕೆಯ ಅಗತ್ಯ ವಸ್ತುಗಳ ಬೆಲೆಯೂ ಏರಲಿದೆ ಎಂದಿದ್ದಾರೆ.

ಬರಿದಾಗಿರುವ ರಾಜ್ಯ ಸರಕಾರದ ಖಜಾನೆ ತುಂಬಿಸಲು ಜನಸಾಮಾನ್ಯರು ಹಾಗೂ ಕಡು ಬಡವರ ಜೇಬು ಖಾಲಿ ಮಾಡಲು ಹೊರಟಿರುವ ಕಾಂಗ್ರೆಸ್ ಸರಕಾರದ ಜನ ವಿರೋಧಿ ನೀತಿ ನಿರ್ಧಾರಗಳನ್ನು ನಾವು ಪ್ರಬಲವಾಗಿ ಖಂಡಿಸುತ್ತೇವೆ ಎಂದಿದ್ದಾರೆ.

ಬಿಜೆಪಿ ಮುಖಂಡ ಪಿ.ಎಚ್. ನೀರಲಕೇರಿ ಅವರು ರಾಜಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ ತೈಲ ದರ ಏರಿಕೆ ಮಾಡಿರುವುದನ್ನು ತಡೆಹಿಡಿಯುವಂತೆ ಮನವಿ ಸಲ್ಲಿಸಿದರು.

### ರಾಜ್ಯದಲ್ಲಿ ಅಭಿವೃದ್ಧಿ ಇಲ್ಲ

ಕಾಂಗ್ರೆಸ್ ಸರಕಾರ ಭ್ರಷ್ಟಾಚಾರ, ದುರಾಡಳಿತ, ರೈತರ ಆತ್ಮಹತ್ಯೆ, ಹಗರಣಗಳ ಭಾಗ್ಯವನ್ನು ರಾಜ್ಯಕ್ಕೆ ನೀಡಿದ್ದು, ಅಧಿಕಾರ ವಹಿಸಿಕೊಂಡ ಕಳೆದ 1.5 ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿಯಂತೂ ಇಲ್ಲವೇ ಇಲ್ಲ. ಈಗ ನೇರವಾಗಿ ಜನರ ಜೇಬಿಗೆ ಕತ್ತರಿ ಹಾಕುವ ಕೆಲಸಕ್ಕೆ ಕೈ ಹಾಕಿದೆ. ಕನ್ನಡಿಗರಿಗೆ ಪದೇ ಪದೇ ಬೆಲೆ ಏರಿಕೆಯ ಬರೆ ಹಾಕುವುದೇ ಕಾಂಗ್ರೆಸ್ ಸರಕಾರದ ಅಸಲಿ ಕರ್ನಾಟಕ ಮಾಡೆಲ್ ಎಂಬಂತಾಗಿದೆ.

---

ತೈಲಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ವೇಳೆ ನಡೆದ ಘಟನೆ

## ಭಾನುಪ್ರಕಾಶ್ ಹೃದಯಾಘಾತದಿಂದ ಸಾವು

**ಶಿವಮೊಗ್ಗ:** ಮಾಜಿ ವಿಧಾನ ಪರಿಷತ್ ಸದಸ್ಯ ಭಾನುಪ್ರಕಾಶ್ ಸೋಮವಾರ ಮಧ್ಯಾಹ್ನ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಸೋಮವಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರುದ್ಧ ಶಿವಮೊಗ್ಗದ ಗೋಪಿ ವೃತ್ತದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿಧಾನಪರಿಷತ್ತಿನ ಮಾಜಿ ಸದಸ್ಯ ಎಂ.ಬಿ.ಭಾನುಪ್ರಕಾಶ್ ಸಭೆಯ ಬಳಿಕ ಸ್ಥಳದಲ್ಲೇ ತೀವ್ರ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆಗೆ ದಾಖಲಾಗುವ ಹೊತ್ತಿಗೆ ಕೊನೆಯುಸಿರೆಳೆದಿದ್ದಾರೆ.

ಪ್ರತಿಭಟನೆಯಲ್ಲಿ ಪಾಲ್ಗೊಂಡ ಅವರು ವಂದನಾರ್ಪಣೆ ಮುಗಿದ ನಂತರ ಸುಸ್ತಾಗುತ್ತಿದೆ ಎಂದು ಹೇಳಿ ಕಾರಿನಲ್ಲಿ ಕುಳಿತು ಬಿಜೆಪಿ ಜಿಲ್ಲಾ ಕಾರ್ಯಾಲಯಕ್ಕೆ ಹೋಗುವಂತೆ ಹೇಳಿದ್ದರು. ಆದರೆ, ಆಗಲೇ ತೀವ್ರ ಹೃದಯಾಘಾತದಿಂದ ಕಾರಲ್ಲೇ ಕುಸಿದುಬಿದ್ದ ಅವರನ್ನು ಕೂಡಲೇ ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಭಾನುಪ್ರಕಾಶ್ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು.

ಈ ವಿಷಯ ಕಾಡ್ಗಿಚ್ಚಿನಂತೆ ಹರಡಿ ಆಸ್ಪತ್ರೆಯ ಎದುರು ನೂರಾರು ಜನರು ಜಮಾಯಿಸಿದ್ದರು. ಬಿಜೆಪಿ ಕಾರ್ಯಕರ್ತರ ದುಃಖ ಮುಗಿಲುಮುಟ್ಟಿತ್ತು. ಭಾನುಪ್ರಕಾಶ್ ಸ್ವಗ್ರಾಮ ಮತ್ತೂರಿಗೆ ಅವರ ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋಗಲಾಗಿದೆ.

ಶಿವಮೊಗ್ಗದ ಗೋಪಿ ವೃತ್ತದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾನುಪ್ರಕಾಶ್ ಕೊನೆಯ ಭಾಷಣ ಮಾಡಿದ ಸಂದರ್ಭ.

### ಬಿಜೆಪಿ ಗಣ್ಯರಿಂದ ಸಂತಾಪ

ಬಿಜೆಪಿಯಲ್ಲಿ 35 ವರ್ಷಗಳಿಗೂ ಹೆಚ್ಚು ವಿವಿಧ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಅವರು ರಾಜ್ಯ ಉಪಾಧ್ಯಕ್ಷರಾಗಿ, ವಿಧಾನಪರಿಷತ್ ಸದಸ್ಯರಾಗಿ, ರಾಜ್ಯ ಪ್ರಕೋಷ್ಠಗಳ ಸಂಚಾಲಕರಾಗಿ, ವಿವಿಧ ಚುನಾವಣೆಗಳ ಉಸ್ತುವಾರಿಯಾಗಿ ಕಾರ್ಯನಿರ್ವಹಿಸಿದ್ದರು. ಆರ್‌ಎಸ್‌ಎಸ್ ಕಟ್ಟಾಳು ಆಗಿದ್ದ ಅವರು ಅನೇಕ ಕ್ಲಿಷ್ಟ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಪಕ್ಷದ ಮುಂದಾಳತ್ವ ವಹಿಸಿ ಮಾರ್ಗದರ್ಶಕರಾಗಿದ್ದರು. ಲೋಕಸಭಾ ಚುನಾವಣೆಗೂ ಒಂದು ಬಾರಿ ಸ್ಪರ್ಧಿಸಿದ್ದರು. ಅವರ ನಿಧನಕ್ಕೆ ಬಿಜೆಪಿಯ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

---

187 ಕೋಟಿ ಮೊತ್ತದ ವಾಲ್ಮೀಕಿ ನಿಗಮದ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇರ ಭಾಗಿ

## ಸಿಎಂ ರಾಜೀನಾಮೆಗೆ ಜನಾರ್ದನ ರೆಡ್ಡಿ ಆಗ್ರಹ

**ಗಂಗಾವತಿ:** ಎಸ್‌ಟಿ ನಿಗಮದಲ್ಲಿ ನಡೆದ 187 ಕೋಟಿ ರು. ಬೃಹತ್ ಹಗರಣದ ನೈತಿಕಹೊಣೆ ಹೊತ್ತು ಸಿಎಂ ಸಿದ್ದರಾಮಯ್ಯ ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಶಾಸಕ ಜಿ. ಜನಾರ್ದನರೆಡ್ಡಿ ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಅವರ ಬಳಿಯೇ ಹಣಕಾಸು ಖಾತೆ ಇದೆ. ಸಿಎಂ ಅನುಮತಿ ಇಲ್ಲದೇ ಒಂದು ನಯಾಪೈಸೆ ಕೂಡ ನಿಗಮಕ್ಕೆ ಬಿಡುಗಡೆ ಆಗುವುದಿಲ್ಲ. ಹೀಗಾಗಿ ಈ 187 ಕೋಟಿ ಮೊತ್ತದ ಹಗರಣದಲ್ಲಿ ಸಿದ್ದರಾಮಯ್ಯ ನೇರವಾಗ ಭಾಗಿಯಾಗಿದ್ದಾರೆ.

ಕೇವಲ ಮಂತ್ರಿ ನಾಗೇಂದ್ರ ರಾಜೀನಾಮೆ ನೀಡಿದರೆ ಸಾಲದು. ಈ ಬೃಹತ್ ಹಗರಣದ ನೈತಿಕಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು ಎಂದು ರೆಡ್ಡಿ ಒತ್ತಾಯಿಸಿದರು. ಖಾಸಗಿ ಹಣಕಾಸು ಸಂಸ್ಥೆಗಳ ಖಾತೆಗೆ ಹಣ ಸಂದಾಯ ಮಾಡಿ ಅಲ್ಲಿಂದ ಕ್ಯಾಶ್ ವಿತ್ ಡ್ರಾ ಮಾಡಲಾಗಿದೆ. ಬಳಿಕ ಆ ಎಲ್ಲ ಸಂಸ್ಥೆ ಮುಚ್ಚಲಾಗಿದೆ. ಈ ಹಣ ಬಳ್ಳಾರಿ, ತೆಲಂಗಾಣದ ಬಂಗಾರದ ಅಂಗಡಿಗಳಿಗೆ ಹಾಕಿ ಅಲ್ಲಿಂದ ನಗದು ಪಡೆಯಲಾಗಿದೆ ಎಂದು ರೆಡ್ಡಿ ಆರೋಪಿಸಿದರು.

**ಚುನಾವಣೆಗೆ ಹಣ ಬಳಕೆ:** ಎಲ್ಲ ಹಣ ಗ್ಯಾರಂಟಿ ಯೋಜನೆಗಳಿಗೆ ಸುರಿದ ಹಿನ್ನೆಲೆ ಕ್ಷೇತ್ರಗಳ ಅಭಿವೃದ್ಧಿಗೆ ನಯಾಪೈಸೆ ಸಿಗುತ್ತಿಲ್ಲ. ಎಸ್‌ಸಿ-ಎಸ್‌ಟಿ, ವಿದ್ಯಾರ್ಥಿ ವೇತನ ಸೇರಿ ಪ್ರತಿಯೊಂದು ಅನುದಾನವೂ ಕಡಿತವಾಗಿದೆ. ಈ ಹಿನ್ನೆಲೆ ವಾಲ್ಮೀಕಿ ನಿಗಮದಿಂದ ಹಣ ಲೂಟಿಗೆ ಕಾಂಗ್ರೆಸ್ ಸರಕಾರ ಸಂಚು ರೂಪಿಸಿತ್ತು. ನಿಗಮಕ್ಕೆ ಬಿಡುಗಡೆಯಾದ ಹಣ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಮತ್ತು ಗೋವಾ ರಾಜ್ಯಗಳ ಚುನಾವಣೆಗೆ ಬಳಕೆಯಾಗಿದೆ. ರಾಜ್ಯದಲ್ಲಿ ಅಭಿವೃದ್ಧಿಗೆ ಬಳಕೆಯಾಗಬೇಕಿದ್ದ ಹಣ ಕಾಂಗ್ರೆಸ್ ಪಕ್ಷದ ಅಭಿವೃದ್ಧಿಗೆ, ಅದರ ಚುನಾವಣೆಗೆ ಬಳಕೆಯಾಗಿದೆ. ಈ ಪ್ರಕರಣದಲ್ಲಿ ನಾಗೇಂದ್ರ ನೇರ ಪ್ರಾತಧಾರಿ. ಆದರೆ, ಹಲವು ಅಧಿಕಾರಿಗಳು, ರಾಜಕಾರಣಿಗಳು ಭಾಗಿಯಾಗಿದ್ದಾರೆ. ಮುಖ್ಯಮಂತ್ರಿ ಹಸ್ತಕ್ಷೇಪವಿಲ್ಲದೇ ಇಷ್ಟು ದೊಡ್ಡ ಹಗರಣ ಆಗಲು ಸಾಧ್ಯವಿಲ್ಲ, ಸ್ವತಃ ಸಿಎಂ ನಿರ್ದೇಶನದ ಮೇರೆಗೆ ಈ ಪ್ರಕರಣ ನಡೆದಿರುವ ಸಾಧ್ಯತೆ ಇದೆ ಎಂದು ಜನಾರ್ದನರೆಡ್ಡಿ ಸಂಶಯ ವ್ಯಕ್ತಪಡಿಸಿದರು.



ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಮುಂದುವರೆಯುವ ಸಾಧ್ಯತೆ ಇಲ್ಲ. ಈ ಯೋಜನೆಗಳಿಂದ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಸಿಗುತ್ತಿಲ್ಲ. ಜನರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎಂದು ಅಸಮಾಧಾನಗೊಂಡಿರುವ ಸ್ವತಃ ಕಾಂಗ್ರೆಸ್ ಪಕ್ಷದ ಸಾಕಷ್ಟು ಶಾಸಕರು ಸಿಎಂ ಮೇಲೆ ತಿರುಗಿ ಬೀಳುತ್ತಿದ್ದಾರೆ. ಎಸ್‌ಸಿ-ಎಸ್‌ಟಿ, ಅಲ್ಪಸಂಖ್ಯಾತರು ಸೇರಿದಂತೆ ರಾಜ್ಯದ ಎಲ್ಲಾ ವರ್ಗಗಳ ಹಣವನ್ನು ಈ ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಲಾಗಿದೆ. ಅಲ್ಲದೇ ಅವರ ವೈಯಕ್ತಿಕ ಮತ್ತು ಪಕ್ಷದ ಬೆಳವಣಿಗೆಗೆ ರಾಜ್ಯದ ಹಣ ಬಳಕೆಯಾಗುತ್ತಿದೆ.

-ಜಿ. ಜನಾರ್ದನರೆಡ್ಡಿ, ಶಾಸಕ

---

ಸಿದ್ದೇಶ್ವರ್‌ಗೆ ಮಾಜಿ ಸಚಿವ ರವೀಂದ್ರನಾಥ್ ಟಾಂಗ್

## ಶಾಂತವಾಗಿ ಕುಳಿತುಕೊಳ್ಳಿ

**ದಾವಣಗೆರೆ:** ಲೋಕಸಭಾ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ

ಮಲ್ಲಿಕಾರ್ಜುನ್ ಎಲ್ಲರಂತೆ ನಮ್ಮ ಮನೆಗೂ ಬಂದು ಪ್ರಚಾರ ಮಾಡಿದ್ದಾರೆ. ಅಷ್ಟಕ್ಕೆ ಒಳ ಒಪ್ಪಂದ ಮಾಡಿಕೊಂಡಿದ್ದಾರೆ ಅಂದರೆ ಏನು ಅರ್ಥ ಎಂದು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಖಾರವಾಗಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದೇಶ್ವರ್ ಅವರು ಲೋಕಸಭಾ ಚುನಾವಣೆಯಲ್ಲಿ ನಾಲ್ಕು ಸಲ ಗೆದ್ದು, ಒಂದು ಸಲ ಸೋತಿದ್ದಕ್ಕೆ ಆತಂಕ ಪಡುವ ಅಗತ್ಯ ಇಲ್ಲ. ಒಂದಷ್ಟು ದಿನ ಯಾವುದಾದರೂ ಆಲದಮರ ಕೆಳಗೆ ಶಾಂತವಾಗಿ ಕುಳಿತುಕೊಳ್ಳಲಿ ಎನ್ನುವ ಮೂಲಕ ಟಾಂಗ್ ನೀಡಿದರು.

ನಾನು ಸಹ ಐದು ಸಲ ಗೆದ್ದು, ಐದು ಸಲ ಸೋತಿದ್ದೇನೆ. ನಾನೂ ಸೋತಾಗ ಸಿಕ್ಕ ಸಿಕ್ಕವರ ಮೇಲೆ ಆರೋಪ ಮಾಡುತ್ತಾ ಸುತ್ತಾಡಲಿಲ್ಲ. ಹಿಂದೆ ಬಿಜೆಪಿಯವರು ಚುನಾವಣಾ ಪ್ರಚಾರಕ್ಕೆ ಹೋದಾಗ ಕಲ್ಲು, ಕಣಗ ತೆಗೆದುಕೊಂಡು ಜನ ಹೊಡೆಯಲು ಬರುತ್ತಿದ್ದರು. ಈಗ ಆ ವಾತಾವರಣ ಇಲ್ಲ. ನೀವು ಸೋತಿದ್ದೀರಿ. ಮತ್ತೆ ಕಾರ್ಯಕರ್ತರ ಬಳಿ ಹೋಗಿ ನಿಮ್ಮನ್ನಲ್ಲದಿದ್ದರೂ ನಿಮ್ಮ ಮಕ್ಕಳನ್ನಾದರು ಜನರು ಗೆಲ್ಲಿಸುತ್ತಾರೆ. ಸ್ವಲ್ಪ ದಿನ ಶಾಂತವಾಗಿ ಇರುವಂತೆ ಸಂಸದ ಸಿದ್ದೇಶ್ವರ ಅವರಿಗೆ ಸಲಹೆ ನೀಡಿದರು.

### ಸೋಲು-ಗೆಲುವು ಸಮಾನವಾಗಿ ಸ್ವೀಕರಿಸಿ

ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರನ್ನು ಹೊಸದುರ್ಗದಲ್ಲಿ ಸಾಮಾನ್ಯ ಸೊಸೈಟಿ ಅಧ್ಯಕ್ಷ ಸೋಲಿಸಿದ್ದ. ಹರಿಹರ ಹಿರಿಯ ರಾಜಕಾರಣಿ ಸಿದ್ದವೀರಪ್ಪ ಅವರನ್ನ ಅದೇ ತಾನೇ ವಕೀಲಿ ವೃತ್ತಿಗೆ ಕಾಲಿಟ್ಟ ಯುವಕ ಸೋಲಿಸಿದ್ದ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಸೋಲು ಗೆಲುವು ಮಾಮೂಲು. ಸಮಾನವಾಗಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

## ಸಂಪಾದಕೀಯ

# ಇವಿಎಂ ಖಾತರಿ ಆಯೋಗದ ಹೊಣೆ

ಲೋಕಸಭೆ ಚುನಾವಣೆಯ ವೇಳೆ ವಿದ್ಯುನ್ಮಾನ ಮತಯಂತ್ರದ ಬಗ್ಗೆ ಪ್ರತಿಪಕ್ಷಗಳು ಚಕಾರ ಎತ್ತಿದ್ದವು. ಆದರೆ ಚುನಾವಣೆ ನಂತರ ಈ ತಕರಾರುಗಳು ತಣ್ಣಗಾಗಿದ್ದವು. ಈಗ ಎಕ್ಸ್ ಸಾಮಾಜಿಕ ಜಾಲತಾಣ ಮತ್ತು ಟೆಸ್ಲಾ ಕಾರು ಕಂಪನಿ ಮುಖ್ಯಸ್ಥ ಎಲಾನ್ ಮಸ್ಕ್, ''ಇವಿಎಂಗಳನ್ನು ಹ್ಯಾಕ್ ಮಾಡಲು ಸಾಧ್ಯ. ಈ ಹಿಂದೆ ಜಾರಿಯಲ್ಲಿದ್ದ ಬ್ಯಾಲೆಟ್ ಪೇಪರ್ ಸೂಕ್ತ'' ಎಂದು ಹೇಳಿರುವುದು ಈ ಕುರಿತ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ 1998 ರಲ್ಲಿ ಪ್ರಾಯೋಗಿಕವಾಗಿ ಇವಿಎಂಗಳ ಬಳಕೆ ಆರಂಭಿಸಲಾಗಿತ್ತು. ಇವಿಎಂ ಜಾರಿಗೆ ಬಂದ ದಿನದಿಂದಲೂ ಫಲಿತಾಂಶ ಏರುಪೇರು ಸಾಧ್ಯತೆಗಳ ಬಗ್ಗೆ ಸಂದೇಹ ವ್ಯಕ್ತಪಡಿಸಲಾಗಿತ್ತು. ಎರಡೂವರೆ ದಶಕಗಳ ಬಳಿಕವೂ ಈ ಅಪಸ್ವರಗಳು ನಿಂತಿಲ್ಲ. ಅಂದಿನಿಂದ ಇಂದಿನವರೆಗೂ ಇವಿಎಂಗಳ ಕಾರ್ಯಕ್ಷಮತೆ ಮತ್ತು ಸುರಕ್ಷತೆ ಬಗ್ಗೆ ಚುನಾವಣಾ ಆಯೋಗ ಸ್ಪಷ್ಟನೆ ನೀಡುತ್ತಲೇ ಬಂದಿದೆ. ಇವಿಎಂಗಳ ಹ್ಯಾಕಿಂಗ್ ಸಾಧ್ಯವಿಲ್ಲ ಎಂದು ತೋರಿಸಲು ಆಯೋಗವು ಸ್ವತಃ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿತ್ತು. ಹ್ಯಾಕಿಂಗ್ ಮಾಡಿ ತೋರಿಸಿ ಎಂದು ಸವಾಲು ಹಾಕಿತ್ತು. ಇಷ್ಟಾದರೂ ಮತ ಯಂತ್ರದ ಮೇಲಿನ ಸಂದೇಹಗಳು ಬಗೆಹರಿದಿಲ್ಲ. ಮುಂದುವರಿದ ರಾಷ್ಟ್ರವಾದ ಅಮೆರಿಕದಂತಹ ರಾಷ್ಟ್ರದಲ್ಲಿ ಇನ್ನೂ ಪೂರ್ಣ ಪ್ರಮಾಣದಲ್ಲಿ ಇವಿಎಂಗಳನ್ನು ಬಳಸಿಲ್ಲ. 2020ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಇವಿಎಂ ಮೂಲಕ ಚುನಾವಣಾ ಅಕ್ರಮಗಳು ನಡೆದ ದೂರುಗಳು ಕೇಳಿ ಬಂದಿದ್ದವು. ಈ ವರ್ಷ ಮತ್ತೊಮ್ಮೆ ಅಧ್ಯಕ್ಷೀಯ ಚುನಾವಣೆ ನಡೆಯಲಿದ್ದು, ಇವಿಎಂ ಬೇಕು, ಬೇಡ ಎಂಬ ಚರ್ಚೆ ಆರಂಭವಾಗಿದೆ. ಇದಕ್ಕೆ ಪ್ರತಿಕ್ರಿಯಿಸಿದ್ದ ಎಲಾನ್ ಮಸ್ಕ್, ಇವಿಎಂಗಳನ್ನು ಹ್ಯಾಕಿಂಗ್ ಮಾಡಲು ಸಾಧ್ಯವಿದೆ. ಮುಂಬರುವ ಚುನಾವಣೆಯಲ್ಲಿ ಇದನ್ನು ಬಳಸಬಾರದು ಎಂದು ಸಲಹೆ ಮಾಡಿದ್ದರು. ಎಲಾನ್ ಮಸ್ಕ್ ಹೇಳಿಕೆ ಅಮೆರಿಕಕ್ಕಿಂತಲೂ ಭಾರತದಲ್ಲಿ ಹೆಚ್ಚು ಚರ್ಚೆಗಳನ್ನು ಹುಟ್ಟು ಹಾಕಿದೆ. ಈ ಹಿಂದೆ ಇವಿಎಂಗಳ ಬಗ್ಗೆ ತಕರಾರು ಎತ್ತಿದವರಾರೂ ತಂತ್ರಜ್ಞರಾಗಿರಲಿಲ್ಲ. ಇದೀಗ ಎಲಾನ್ ಮಸ್ಕ್ ನಂತಹ ತಾಂತ್ರಿಕ ಕ್ಷೇತ್ರದ ದಿಗ್ಗಜ ವ್ಯಕ್ತಿಯೇ ಇವಿಎಂಗಳ ಹ್ಯಾಕಿಂಗ್ ಸಾಧ್ಯ ಎಂದು ಹೇಳಿರುವುದು ಜನರನ್ನು ಗೊಂದಲಕ್ಕೆ ತಳ್ಳಿದೆ. ಇವಿಎಂ ಬಗ್ಗೆ ಮೊದಲಿನಿಂದಲೂ ಆಕ್ಷೇಪ ವ್ಯಕ್ತಪಡಿಸಿದ್ದ ರಾಹುಲ್ ಗಾಂಧಿ ಮಸ್ಕ್ ಹೇಳಿಕೆಯನ್ನು ಬೆಂಬಲಿಸಿದ್ದಾರೆ. ''ಇವಿಎಂಗಳು ವಿಮಾನಗಳ ಬ್ಲ್ಯಾಕ್ ಬಾಕ್ಸ್ ಇದ್ದಂತೆ, ಇವುಗಳ ಪರಿಶೀಲಿಸಲು ಯಾರಿಗೂ ಬಿಡುವುದಿಲ್ಲ'' ಎಂದು ರಾಹುಲ್ ಪರೋಕ್ಷವಾಗಿ ಚುನಾವಣಾ ಆಯೋಗದ ನಡೆಯನ್ನು ಖಂಡಿಸಿದ್ದಾರೆ. ಆದರೆ ಬಿಜೆಪಿ ನಾಯಕರು ಭಾರತದಲ್ಲಿ ಇವಿಎಂಗಳ ಟ್ಯಾಂಪರಿಂಗ್ ಸಾಧ್ಯವೇ ಇಲ್ಲ ಎಂದು ಹೇಳಿಕೊಂಡಿದ್ದಾರೆ. ಇದೇನೇ ಇರಲಿ ಇವಿಎಂಗಳ ಕುರಿತ ಜನರ ಅಪನಂಬಿಕೆಯನ್ನು ಹೋಗಲಾಡಿಸುವ ಕೆಲಸವನ್ನು ಚುನಾವಣೆ ಆಯೋಗವೇ ಮಾಡಬೇಕಿದೆ.

## ಸೊಂಪಾದಕೀಯ

# ಎಲ್ಲವೂ ನೀಟ್ ಆಗಿಲ್ಲ

ವೈದ್ಯಕೀಯ ಕಾಲೇಜುಗಳಿಗೆ ಸೇರಲು ನಡೆಸುವ ನೀಟ್ ಪರೀಕ್ಷೆ ಈ ಬಾರಿ ಹಲವು ಅಕ್ರಮಗಳಿಗೆ ಸಾಕ್ಷಿ ಆಗಿದೆ. ಇದನ್ನು ಸ್ವತಃ ಸರಕಾರವೇ ಒಪ್ಪಿಕೊಂಡಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಈ ಪರೀಕ್ಷೆಯಲ್ಲಿ ಅಕ್ರಮ ಆಗಿರೋದನ್ನು ಹೇಳಿದ್ದಾರೆ. ಆದರೆ ತೀರಾ ಮುಂದೆ ನಾಡಿನ ವೈದ್ಯರಾಗುವ ವಿದ್ಯಾರ್ಥಿಗಳ ಪರೀಕ್ಷೆಯೇ ನೀಟ್ ಆಗಿ ನಡೆದಿಲ್ಲ ಅಂದ್ರೆ, ಏನರ್ಥ? ಈ ವ್ಯವಸ್ಥೆಗೆ ಚಿಕಿತ್ಸೆ ಕೊಡುವವರು ಯಾರು ಅನ್ನೋ ಪ್ರಶ್ನೆ ಎಲ್ಲರದ್ದು. ಇದನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿರುವ ವಿರೋಧ ಪಕ್ಷಗಳು ಈಗ ಇದರ ಸಂಪೂರ್ಣ ತನಿಖೆಗೆ ಮತ್ತು ಮರುಪರೀಕ್ಷೆಗೆ ಆಗ್ರಹಿಸುತ್ತಿವೆ. ಹಾಗೇನಾದರೂ ಮರು ಪರೀಕ್ಷೆ ಆದರೆ ಪ್ರಾಮಾಣಿಕವಾಗಿ ಪರೀಕ್ಷೆ ಬರೆದಿರೋ ವಿದ್ಯಾರ್ಥಿಗಳಿಗೆ ಈ ಮರು ಪರೀಕ್ಷೆ ಒಂಥರಾ ಮಾಡದ ತಪ್ಪಿಗೆ ಶಿಕ್ಷೆ ಕೊಟ್ಟಂತಾಗೋದಿಲ್ಲವೇ? ಅನ್ನೋದು ಜನರ ಪ್ರಶ್ನೆ. ಈ ರೀತಿಯ ಪರೀಕ್ಷೆ ಅಕ್ರಮಗಳು ಹೊಸದೇನಲ್ಲ. ಕೆಲವೊಮ್ಮೆ ಪ್ರಶ್ನೆ ಪತ್ರಿಕೆ ಸೋರಿಕೆ ಆಗುತ್ತೆ. ಕೆಲವೊಮ್ಮೆ ಫಲಿತಾಂಶದಲ್ಲಿ ಗೋಲ್ ಮಾಲ್ ಆಗುತ್ತೆ. ಆದರೆ ಅದಕ್ಕೆ ಮರು ಪರೀಕ್ಷೆ ಮಾಡಿ ವಿದ್ಯಾರ್ಥಿಗಳಿಗೆ ಮತ್ತೆ ಪ್ರಶ್ನೆ ಕೇಳೋದೇ ಉತ್ತರ ಆದರೆ ಹೇಗೆ? ಈ ಅಕ್ರಮಕ್ಕೆ ಕಾರಣರಾದ ಅಪರಾಧಿಗಳನ್ನು ಬಂಧಿಸಿ ಮಂಪರು ಪರೀಕ್ಷೆಯನ್ನಾದರೂ ಮಾಡಿ ಸತ್ಯ ಹೊರಗೆ ಎಳೆಯಬೇಕೇ ವಿನಃ ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಡೋದು ಸರಿಯಾದ ಕ್ರಮ ಅಲ್ಲ ಅಂತ ಮೇಲ್ನೋಟಕ್ಕೆ ಅನ್ನಿಸುತ್ತದೆ. ಪಾಪ, ಪರೀಕ್ಷೆಗಾಗಿ ನಿದ್ದೆಯ ಮಂಪರಿನಲ್ಲೇ ಓದಿ ಪರೀಕ್ಷೆ ಬರೆದಿರೋ ವಿದ್ಯಾರ್ಥಿಗಳು ಈಗ ಮತ್ತೆ ನಿದ್ದೆಗೆಟ್ಟು ಓದಬೇಕಾಗಿದೆ. ತೂಕಡಿಸಿ ತೂಕಡಿಸಿ ಬಿದ್ದು ಓದಿದವರು ಈಗ ಮತ್ತೆ ಮತ್ತೆ ಓದಿ ಓದಿ ಮರುಳಾಗಬೇಕಿದೆ. ಪರೀಕ್ಷೆ ನಡೆಸುವ ಮುನ್ನ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳನ್ನು ಕಡೆಗಣಿಸಿ ಈಗ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡೋದು ಯಾವ ನ್ಯಾಯ? ಪರೀಕ್ಷೆಗೆ ಸರಿಯಾಗಿ ಓದದೇ, ಅಯ್ಯೋ ಈ ಬಾರಿ ಸರಿಯಾಗಿ ಪರೀಕ್ಷೆ ಬರೆಯೋಕೆ ಆಗ್ಲಿಲ್ಲ ಅನ್ನೋ ವಿದ್ಯಾರ್ಥಿಗಳಿಗೇನೋ ಇದು ಅಪರೂಪದ ಸೆಕೆಂಡ್ ಚಾನ್ಸ್. ಆದರೆ ಇರೋ ಬರೋ ಶ್ರಮ ಹಾಕಿ ಓದಿ ಸದ್ಯ ಎಕ್ಸಾಮ್ ಮುಗಿಸಿದೆವು ಅನ್ನೋ ಸಂಭ್ರಮದಲ್ಲಿದ್ದ ವಿದ್ಯಾರ್ಥಿಗಳಿಗೆ ಮಾತ್ರ ಇದು ಹೊರೆ ಆಗೋದಂತೂ ಸತ್ಯ.

## ಸಂಪಾದಕರ ಸದ್ಯಶೋಧನೆ

# ಕೇಫ: ಕೆಲವು ನೆನಪು

ನಾನು ಬಾಲ್ಯದಲ್ಲಿ, 'ಸುಧಾ' ಮತ್ತು 'ತರಂಗ' ಪತ್ರಿಕೆಯಲ್ಲಿ ಕೇಫ ಅವರ ಹಾಸ್ಯ ಬರಹಗಳನ್ನು ಓದುತ್ತಿದ್ದೆ. ಪ್ರಾಯಶಃ 1990 ರ ನಂತರ ಅವರ ಬರಹಗಳನ್ನು ಓದಲಿಲ್ಲ. ಅವರನ್ನು ಎಂದೂ ಭೇಟಿಯಾದ ನೆನಪಿಲ್ಲ. ವೈಎನ್ಕೆ ಬಾಯಲ್ಲಿ ಆಗಾಗ, ಕೇಫ ಅವರ ಬಗ್ಗೆ ಕೇಳಿದ್ದಿದೆ. ಕೆಲವು ದಿನಗಳ ಹಿಂದೆ, ನನ್ನ ಸಂಗ್ರಹದಲ್ಲಿರುವ 'ಕೊರವಂಜಿ' ಹಳೆ ಸಂಚಿಕೆಗಳನ್ನು ತಿರುವಿ ಹಾಕುವಾಗ, ಕೇಫ ಹಾಸ್ಯ ಲೇಖನಗಳನ್ನು ಮತ್ತೊಮ್ಮೆ ಓದುವ ಅವಕಾಶ ಸಿಕ್ಕಿತ್ತು. ಅದಾದ ಬಳಿಕ, ಅಮೆರಿಕ ಕನ್ನಡ ಸಾಹಿತ್ಯ ರಂಗ ಮತ್ತು ಬೆಂಗಳೂರಿನ ಅಭಿನವ ಪ್ರಕಾಶನ ಸೇರಿ, 'ನಗೆಗನ್ನಡಂ ಗೆಲ್ಗೆ: ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಕೃತಿಯನ್ನು ಓದುವಾಗ, ಎಸ್.ದಿವಾಕರ ಅವರು ಕೇಫರ ಬಗ್ಗೆ ಬರೆದಿದ್ದನ್ನು ಓದಿ, ಅವರನ್ನು (ಕೇಫ) ನೆನಪಿಸಿಕೊಳ್ಳುವಂತಾಯಿತು. ದಿವಾಕರ, ಕೇಫ ಅವರಿಗೆ ದೂರದ ಸಂಬಂಧಿಕರಂತೆ. ಆದರೂ ಅವರು ಭೇಟಿಯಾಗಿದ್ದು 1989 ರಲ್ಲಿ ಮತ್ತು ಆಗ ಕೇಫರಿಗೆ ಎಂಬತ್ತು ವರ್ಷವಾಗಿತ್ತಂತೆ. ಅವರ ಹೆಸರಿನಿಂದಾಗಿ ಮತ್ತು ನಂತರ ಅವರ ನವಿರಾದ ಹಾಸ್ಯಗಳಿಂದ, ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. 'ಕೇಫ' ಎನ್ನುವುದು ಕಾವ್ಯನಾಮ. ತಮ್ಮ ಮೂಲನಾಮಕ್ಕಿಂತ ಕಾವ್ಯನಾಮದಿಂದಲೇ ಪ್ರಸಿದ್ಧರಾದವರಲ್ಲಿ ಇವರೂ ಒಬ್ಬರು. ಬಹಳ ಜನರಿಗೆ ಡಾ.ಎ. ವಿ. ಕೇಶವ ಮೂರ್ತಿಯವರೇ ಕೇಫ ಎಂಬುದು ಗೊತ್ತಿಲ್ಲ. ಒಮ್ಮೆ ಡಾ.ಕೇಶವ ಮೂರ್ತಿಯವರ ಮುಂದೆಯೇ, ಸಾಹಿತಿಯೊಬ್ಬರು, 'ನೀವು ಕೇಫ ಅವರ ಹಾಸ್ಯ ಸಾಹಿತ್ಯವನ್ನು ಓದಿದ್ದೀರಾ? ಎಷ್ಟು ಚೆನ್ನಾಗಿ ಬರೆಯುತ್ತಾರೆ ಗೊತ್ತಾ?' ಎಂದು ಕೇಳಿದ್ದರಂತೆ. 'ಇಲ್ಲ, ಇಲ್ಲ.. ಅವರು ನಿಜಕ್ಕೂ ಅಷ್ಟು ಚೆನ್ನಾಗಿ ಬರೆಯುತ್ತಾರಾ?' ಎಂದು ಕೇಳಿದ್ದಕ್ಕೆ, 'ಚೆನ್ನಾಗಿ ಬರೀತಾರಾ ಇಲ್ಲವೋ ಎಂಬುದನ್ನು ನೀವೇ ಖುದ್ದು ಓದಿ ಅನುಭವಿಸಬೇಕು. ಆದರೆ ಅವರ ಬರಹಗಳನ್ನು ಓದಿದಾಗ ನಗು ಬರೋದು ಮಾತ್ರ ಗ್ಯಾರಂಟಿ' ಎಂದು ಪ್ರತಿಕ್ರಿಯಿಸಿದ್ದರಂತೆ. ಕೇಫ 'ಕೊರವಂಜಿ' ಪತ್ರಿಕೆಯಲ್ಲಿ ಹಾಸ್ಯ ಲೇಖನಗಳನ್ನು ಆಗ ತಾನೇ ಬರೆಯಲಾರಂಭಿಸಿದ್ದ ಕಾಲ. ಒಂದು ದಿನ ಡಾ.ಕೇಶವಮೂರ್ತಿಯವರ ಕೊನೆಯ ತಮ್ಮ ತನ್ನ ತೊದಲು ಮಿಶ್ರಿತ, ಅಸ್ಪಷ್ಟ ನುಡಿಗಳಲ್ಲಿ 'ಕೇಶವಣ್ಣ' ಎಂದು ಕರೆದಿದ್ದು ಅವರಿಗೆ 'ಕೇಫಣ್ಣ' ಎಂದು ಕೇಳಿಸಿತಂತೆ. ಅದನ್ನೇ ತಮ್ಮ ಕಾವ್ಯನಾಮವಾಗಿರಿಸಿಕೊಂಡರೆ ಹೇಗೆ ಎಂದು ಅನಿಸಿತಂತೆ. 'ಕೇಫ' ಎನ್ನುವುದು ವಿನೂತನ ಕಾವ್ಯನಾಮ ಎಂದು ಅನಿಸಿದ್ದರಿಂದ ಅದನ್ನೇ ಕಾಯಂ ಆಗಿ ಇಟ್ಟುಕೊಂಡುಬಿಟ್ಟರು. ಕೇಫ ಅವರು ಹುಟ್ಟಿದ್ದು ತುಮಕೂರಿನಲ್ಲಿ, ಓದಿದ್ದು ಚಿಕ್ಕಮಗಳೂರು ಮತ್ತು ಬೆಂಗಳೂರಿನಲ್ಲಿ, ಕೋಟೆ ಮಿಡ್ಲ್ ಸ್ಕೂಲಿನ ವಿದ್ಯಾರ್ಥಿ. ವೈದ್ಯ ಪದವಿ ಪಡೆದ ಬಳಿಕ, ತೀರ್ಥಹಳ್ಳಿಯಲ್ಲಿ ಸುಮಾರು ಹದಿನೈದು ವರ್ಷ ಸರಕಾರಿ ವೈದ್ಯರಾಗಿ ಸೇವೆ ಸಲ್ಲಿಸಿದರು. ಮುಂದಿನ ಹದಿನೈದು ವರ್ಷ ಶಿವಮೊಗ್ಗದಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಆರಂಭದಲ್ಲಿ 'ಪಂಚ್' ಪತ್ರಿಕೆ ಹಾಸ್ಯ ಲೇಖನಗಳಿಂದ ಪ್ರಭಾವಿತರಾದ ಕೇಫ, ಇಂಗ್ಲಿಷ್ ಹಾಸ್ಯ ಸಾಹಿತ್ಯವನ್ನು ಸಹ ಚೆನ್ನಾಗಿ ಓದಿಕೊಂಡವರು. 'ಕೊರವಂಜಿ' ಪತ್ರಿಕೆಯ ಡಾ.ಎಂ.ಶಿವರಾಂ (ರಾ.ಶಿ.) ಸಂಪರ್ಕಕ್ಕೆ ಬಂದ ಅವರು, ಆ ಪತ್ರಿಕೆಗೆ ನಿಯಮಿತವಾಗಿ ಬರೆಯಲಾರಂಭಿಸಿದರು. ಅವರ ಹಾಸ್ಯದಲ್ಲಿ ಬರುತ್ತಿದ್ದ ಶೌರಿ, ಪಾಂಡು ಮುಂತಾದ ಪಾತ್ರಗಳು ಜನಪ್ರಿಯವಾಗಿದ್ದವು. ಕೇಫ ಅವರನ್ನು ಬಲ್ಲವರು 'ಮೈಗಳ್ಳರ ಸಂಘ' ಮತ್ತು 'ವಿರಾಟ ಭವನ' ವನ್ನು ಎಂದೂ ಮರೆಯಲಾರರು. ಕನ್ನಡದಲ್ಲಿ ಉತ್ತಮ ಅಭಿರುಚಿಯ, ನವಿರಾದ ಹಾಸ್ಯ ಸಾಹಿತ್ಯವನ್ನು ಸೃಷ್ಟಿಸಿದವರ ಸಾಲಿನಲ್ಲಿ ಕೇಫ ಗಟ್ಟಿಯಾಗಿ ನಿಲ್ಲುತ್ತಾರೆ. ಎಂಬತ್ತರ ದಶಕದ ಆರಂಭದಲ್ಲಿ ತಮ್ಮ ವೈದ್ಯ ಮಗ ಮತ್ತು ಸೊಸೆಯೊಂದಿಗೆ ಚೆನ್ನೈಗೆ ಹೋಗಿ ನೆಲೆಸಿದ ಅವರು ತಮ್ಮ ಬದುಕಿನ ಕೊನೆಯ ದಿನಗಳನ್ನು ಅಲ್ಲಿಯೇ ಕಳೆದರು. 'ಮದರಾಸು ಕನ್ನಡ ಕೂಟ' ಅವರ ಜನ್ಮದಿನದಂದು ಪ್ರತಿವರ್ಷ, 'ಅಖಿಲ ಕರ್ನಾಟಕ ಕೇಫ ಹಾಸ್ಯ ಲೇಖನ ಸ್ಪರ್ಧೆ' ಏರ್ಪಡಿಸುತ್ತಿದೆ. ಆದರೆ ಕರ್ನಾಟಕ ಮಾತ್ರ ಅವರನ್ನು ಮರೆತುಬಿಟ್ಟಿದೆ.

# ಬಿಜೆಪಿಗೆ ಬಲ ತುಂಬಿದ ಜೆಡಿಎಸ್

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ದೇಶದಲ್ಲಿ ಲೋಕಸಭಾ ಚುನಾವಣೆ ಪೂರ್ಣಗೊಂಡು, ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಅಧಿಕಾರದ ಗದ್ದುಗೆಯನ್ನು ಏರಿದ್ದಾರೆ. ಮೂರನೇ ಅವಧಿಯ ಸಂಪುಟದಲ್ಲಿ ಕರ್ನಾಟಕದ ಐವರನ್ನು ಸಂಪುಟದೊಳಗೆ ಸೇರಿಸಿಕೊಂಡಿದ್ದಾರೆ. ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಬಿಜೆಪಿಯ ಸಾಧನೆ ಕ್ಷೀಣಿಸಿದ್ದರೂ, ರಾಜ್ಯ ಬಿಜೆಪಿಗರಲ್ಲಿ ಒಂಬತ್ತು ಸ್ಥಾನ ಕಳೆದುಕೊಂಡಿರುವ ಬೇಸರಕ್ಕಿಂತ, ಒಂಬತ್ತೇ ಸ್ಥಾನಕ್ಕೆ ನಿಂತಿದೆಯಲ್ಲ ಎನ್ನುವ ನೆಮ್ಮದಿ ಕಾಣಿಸುತ್ತಿದೆ.

ಈ ರೀತಿ ತಮ್ಮಷ್ಟಕ್ಕೇ ತಾನೇ ಸಮಾಧಾನ ಮಾಡಿಕೊಳ್ಳುವುದನ್ನು ಗಮನಿಸಿದರೆ, ಹೆಚ್ಚು ಸೀಟುಗಳ ಸೋಲಿನ ಆತಂಕದಲ್ಲಿದ್ದವರಿಗೆ, ಮೂರರಿಂದ ನಾಲ್ಕು ಕ್ಷೇತ್ರಗಳಲ್ಲಿ 'ಅಚ್ಚರಿ'ಯ ಗೆಲುವುಗಳು ಹಾಗೂ 'ಕಳಪೆ' ಪ್ರದರ್ಶನದ ಬದಲಿಗೆ ಮರ್ಯಾದೆ ಉಳಿಸಿಕೊಳ್ಳುವಷ್ಟು ಸೀಟುಗಳನ್ನು ಮೋದಿಗೆ ಕೊಡುಗೆಯಾಗಿ ನೀಡಿರುವ ನೆಮ್ಮದಿಯಿದೆ. ಆದರೆ ಈ ರೀತಿ ನಿಟ್ಟುಸಿರು ಬಿಡುವುದಕ್ಕೆ ಬಿಜೆಪಿ ಹಾಗೂ ಜೆಡಿಎಸ್‌ನ ರಾಜ್ಯ ನಾಯಕತ್ವ ಕಾರಣ ಎನ್ನುವುದಕ್ಕಿಂತ, ಬಿಜೆಪಿಯ ರಾಷ್ಟ್ರ ನಾಯಕರು ಬಿಜೆಪಿಗಿಂತ ಹೆಚ್ಚಾಗಿ ಜೆಡಿಎಸ್ ಹಾಗೂ ಕುಮಾರಸ್ವಾಮಿ ಅವರನ್ನು ಬಳಸಿಕೊಂಡು ಹಳೇ ಮೈಸೂರು ಭಾಗದಲ್ಲಿ ಕ್ಲೀನ್ ಸ್ವೀಪ್ ಮಾಡಿದ್ದಾರೆ. ಒಂದು ವೇಳೆ ಹಳೇ ಮೈಸೂರು ಭಾಗದಲ್ಲಿ ಕ್ಲೀನ್ ಸ್ವೀಪ್ ಮಾಡದೇ ಹೋಗಿದ್ದರೆ, ಕಾಂಗ್ರೆಸ್ ಟಾರ್ಗೆಟ್ 15 ರೀಚ್ ಆಗುವುದು ಬಹುದೊಡ್ಡ ವಿಷಯವಾಗಿರಲಿಲ್ಲ.

ಲಿಂಗಾಯತರ ಕೋರ್ ಬೆಲ್ಟ್ ಆಗಿರುವ ಕಲ್ಯಾಣ ಕರ್ನಾಟಕದಲ್ಲಿ ಭರ್ಜರಿ ಗೆಲುವಿನ ನಿರೀಕ್ಷೆಯಲ್ಲಿದ್ದ ಬಿಜೆಪಿ ಶೂನ್ಯ ಸಾಧನೆ ಮಾಡಿತ್ತು. ಈ ಮೂಲಕ 'ಲಿಂಗಾಯತ' ಟ್ರಂಪ್ ಕಾರ್ಡ್ ವರ್ಕ್ ಆಗಲಿಲ್ಲ. ಆದರೆ ಜೆಡಿಎಸ್‌ನ 'ಒಕ್ಕಲಿಗ' ನಾಯಕತ್ವದ ಅಸ್ತ್ರ ಭರ್ಜರಿಯಾಗಿಯೇ ವರ್ಕ್ ಆಗಿದೆ. ಒಕ್ಕಲಿಗ ಅಸ್ತ್ರ ಪೂರ್ಣ ಪ್ರಮಾಣದಲ್ಲಿ ಬಿಜೆಪಿಗೆ ಸಹಾಯವಾಗಲು ಜೆಡಿಎಸ್ ನಾಯಕತ್ವವೇ ಕಾರಣ ಎನ್ನುವುದು ಸ್ಪಷ್ಟವಾಗಿದೆ. ಈ ಮೂಲಕ ಬಿಜೆಪಿ ವರಿಷ್ಠರ ಲೆಕ್ಕಾಚಾರದಂತೆ, ಈ ಬಾರಿಯ ಚುನಾವಣೆಯಲ್ಲಿ ಒಕ್ಕಲಿಗ ಮತದಾರರು ತೆನೆಹೊತ್ತ ಮಹಿಳೆ ಅಥವಾ ಕಮಲದ ಗುರುತನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಹಳೇ ಮೈಸೂರು ಭಾಗದಲ್ಲಿ ಸಂಘಟನೆಯನ್ನು ಬಲಪಡಿಸಿಕೊಳ್ಳಲೇಬೇಕು ಎನ್ನುವ ಕಾರಣಕ್ಕೆ ಮಾಡಿಕೊಂಡಿದ್ದ ಮೈತ್ರಿ ಒಂದು ಹಂತದಲ್ಲಿ ಯಶಸ್ವಿಯಾಗಿದೆ.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಬಹುದೊಡ್ಡ ಖುಷಿ ನೀಡಿರಬಹುದಾದ ವಿಭಾಗವೆಂದರೆ ಅದು ಹಳೇ ಮೈಸೂರು ಪ್ರದೇಶ. ದಶಕಗಳ ಹಿಂದಿನ ಸಂಘಟನೆಯನ್ನು ಗಮನಿಸಿದರೆ, ಹಳೇ ಮೈಸೂರು ಭಾಗದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಿಜೆಪಿಯ ಸಂಘಟನೆ ಗಟ್ಟಿಯಾಗಿದೆ. ಆದರೆ ಅದು 'ಕ್ಷೇತ್ರ'ಗಳಾಗಿ ಪರಿವರ್ತನೆಯಾಗುತ್ತಿರಲಿಲ್ಲ. ಮೈಸೂರು, ಬೆಂಗಳೂರು ನಗರ ಭಾಗವನ್ನು ಹೊರತುಪಡಿಸಿದರೆ, ಇನ್ನುಳಿದ ಭಾಗದಲ್ಲಿ 'ಭದ್ರಕೋಟೆ'ಗಳನ್ನು ಬೇಧಿಸುವಲ್ಲಿ ಬಹುತೇಕ ಚುನಾವಣೆಯಲ್ಲಿ ಬಿಜೆಪಿ ವಿಫಲವಾಗಿತ್ತು. ಆದರೆ ಈ ಬಾರಿ ಹಳೇ ಮೈಸೂರು ಭಾಗದಲ್ಲಿ ಎನ್‌ಡಿಎ ಮೈತ್ರಿಕೂಟ ಕ್ಲೀನ್‌ಸ್ವೀಪ್ ಮಾಡುವಲ್ಲಿ ಯಶಸ್ವಿಯಾಗಿತ್ತು. ಅದರಲ್ಲಿಯೂ ಪ್ರಮುಖವಾಗಿ ಡಿಕೆ ಸಹೋದರರ ಭದ್ರಕೋಟೆ ಎನಿಸಿದ್ದ ಬೆಂಗಳೂರು ಗ್ರಾಮಾಂತರದಲ್ಲಿಯೇ ಡಿ.ಕೆ.ಸುರೇಶ್‌ಗೆ ಸೋಲಿನ ರುಚಿ ತೋರಿಸುವ ಮೂಲಕ ಕಾಂಗ್ರೆಸ್‌ಗೆ ಬಹುದೊಡ್ಡ ಹೊಡೆತವನ್ನು ನೀಡುವಲ್ಲಿ ಬಿಜೆಪಿ ಯಶಸ್ವಿಯಾಗಿತ್ತು.

ಇದರೊಂದಿಗೆ ತುಮಕೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಹಾವೇರಿ ಸೇರಿದಂತೆ ಹಲವು ಭಾಗದಲ್ಲಿ ಕಾಂಗ್ರೆಸ್-ಬಿಜೆಪಿಗೆ ನೆಕ್‌ಟು ನೆಕ್ ಫೈಟ್ ಇತ್ತು. ಈ ಎಲ್ಲ ಕ್ಷೇತ್ರಗಳಲ್ಲಿಯೂ ಬಿಜೆಪಿ ಅಭ್ಯರ್ಥಿಗೆ ಗೆಲುವಿನ ಸಿಹಿ ಉಣಿಸಲು ಜೆಡಿಎಸ್ ಮತಗಳೇ ನಿರ್ಣಾಯಕ ಪಾತ್ರವಹಿಸಿವೆ. ಸಾಂಪ್ರದಾಯಿಕ ಜೆಡಿಎಸ್ ಮತದಾರರು, ಬಿಜೆಪಿಯನ್ನು ಒಪ್ಪಿಕೊಂಡು ಮತ ಹಾಕಿದ್ದರಿಂದಲೇ ರಾಜ್ಯದಲ್ಲಿ 17 ಸೀಟುಗಳನ್ನು ಪಡೆಯುವ ಮೂಲಕ 'ಮರ್ಯಾದೆ' ಉಳಿಸಿಕೊಂಡಿದೆ. ಇನ್ನು ಜೆಡಿಎಸ್ ಸ್ಪರ್ಧಿಸಿದ್ದ ಮೂರು ಕ್ಷೇತ್ರದ ಪೈಕಿ, ಹಾಸನದಲ್ಲಿ ಪ್ರಜ್ವಲ್ ರೇವಣ್ಣ ಸೋಲಿಗೆ ಅವರೇ ಕಾರಣ. ಇನ್ನುಳಿದ ಎರಡೂ ಕ್ಷೇತ್ರದಲ್ಲಿ ಗೆಲ್ಲುವ ಮೂಲಕ ಎನ್‌ಡಿಎ ಮೈತ್ರಿಕೂಟದ ಬಲವನ್ನು 19ಕ್ಕೆ ಏರಿಸಿಕೊಳ್ಳುವುದರಲ್ಲಿ ಜೆಡಿಎಸ್ ಮಾತ್ರ ಮಹತ್ವದ್ದಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸಾಧಿಸಿರುವ ಗೆಲುವನ್ನು ಗಮನಿಸಿದರೆ, ಈ ಬಾರಿ ಕರ್ನಾಟಕದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಗೆ ಬಹುದೊಡ್ಡ ಹಿನ್ನಡೆಯಾಗಲಿದೆ ಎನ್ನುವ ಲೆಕ್ಕಾಚಾರ ರಾಜಕೀಯ ವಲಯದಲ್ಲಿತ್ತು. ಈ ರೀತಿಯ ಆಲೋಚನೆಗೆ ಕಾರಣವೆಂದರೆ, 2019ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿಯಾಗಿ ಚುನಾವಣೆಗೆ ಧುಮುಕಿದ್ದವು. 28 ಕ್ಷೇತ್ರಗಳ ಪೈಕಿ ಎಂಟನ್ನು ಜೆಡಿಎಸ್ ಪಡೆದುಕೊಂಡಿದ್ದರೆ, 20 ಕ್ಷೇತ್ರದಲ್ಲಿ ಕಾಂಗ್ರೆಸ್ ಸ್ಪರ್ಧಿಸಿತ್ತು. ಫಲಿತಾಂಶದ ಸಮಯದಲ್ಲಿ ಜೆಡಿಎಸ್‌ನಿಂದ ಪ್ರಜ್ವಲ್ ರೇವಣ್ಣ, ಕಾಂಗ್ರೆಸ್‌ನಿಂದ ಡಿ.ಕೆ.ಸುರೇಶ್ ಹೊರತುಪಡಿಸಿ, ಇನ್ನುಳಿದ 26 ಅಭ್ಯರ್ಥಿಗಳು ಹೀನಾಯವಾಗಿ ಸೋಲನುಭವಿಸಿದ್ದರು. 2019ರಲ್ಲಿ ಮೈತ್ರಿ ಸರಕಾರವೇ ಅಧಿಕಾರದಲ್ಲಿದ್ದರೂ, ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸೋಲಿಗೆ ಕಾರಣವಾಗಿದ್ದು, ಮೇಲ್ಮಟ್ಟದಲ್ಲಾದ ಮೈತ್ರಿ ತಳಮಟ್ಟದವರೆಗೆ ಹೋಗಲೇ ಇಲ್ಲ ಎನ್ನುವುದಾಗಿತ್ತು. ರಾಜ್ಯ, ರಾಷ್ಟ್ರ ಮಟ್ಟದ ಕಾಂಗ್ರೆಸ್-ಜೆಡಿಎಸ್ ನಾಯಕರು ಒಂದಾಗಿದ್ದರೂ, ಬ್ಲಾಕ್‌ಮಟ್ಟದಲ್ಲಿ ಕಾರ್ಯಕರ್ತರ ನಡುವೆಯಿದ್ದ ಭಿನ್ನಾಭಿಪ್ರಾಯ, ಜಗಳಗಳನ್ನು ಸರಿಪಡಿಸುವುದಕ್ಕೆ ಕೊನೆಯವರೆಗೆ ಆಗಲಿಲ್ಲ. ಆದ್ದರಿಂದಲೇ ಮೈತ್ರಿ ವಿರೋಧಿಸಿದ್ದ ಬಹುತೇಕರು ತಟಸ್ಥರಾದರು. ಇನ್ನು ಕೆಲವರು ಬಿಜೆಪಿ ಪರ ವಾಲಿದ್ದರು. ಇದರಿಂದಾಗಿಯೇ, ಸ್ವತಃ ಮಾಜಿ ಪ್ರಧಾನಿ ದೇವೇಗೌಡರು ತುಮಕೂರಿನಲ್ಲಿ ಸೋಲಿನ ರುಚಿ ಕಾಣಬೇಕಾಯಿತು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್-ಕಾಂಗ್ರೆಸ್ ಕಾರ್ಯಕರ್ತರ ನಡುವೆ 'ಜೆಲ್' ಆಗದಿರುವುದೇ ಅಂದಿನ ಆ ಫಲಿತಾಂಶಕ್ಕೆ ಕಾರಣವಾಗಿತ್ತು. ಆದರೆ ಈ ಬಾರಿ ಜೆಡಿಎಸ್ ಈ ವಿಷಯದಲ್ಲಿ 'ಎಚ್ಚರಿಕೆ'ಯ ಹೆಜ್ಜೆಯನ್ನು ಇಡುವ ಪ್ರಯತ್ನ ಮಾಡಿತ್ತು. ಆರಂಭದಿಂದಲೇ ಎರಡೂ ಪಕ್ಷದ ಕಾರ್ಯಕರ್ತರನ್ನು ಒಗ್ಗೂಡಿಸುವ ಪ್ರಯತ್ನಕ್ಕೆ ಉಭಯ ಪಕ್ಷದ ನಾಯಕರು ಮುಂದಾದರು. ಚುನಾವಣೆಗೆ ಕೆಲ ವಾರದ ಮೊದಲು ಬಿಜೆಪಿ ತೀರ್ಮಾನಗಳ ವಿರುದ್ಧ ಬಿಜೆಪಿಗೆ ಶುರುವಾಗಿದ್ದ ಭಿನ್ನಾಭಿಪ್ರಾಯವನ್ನು, ಬಿಜೆಪಿ ವರಿಷ್ಠರು ಕುಮಾರಸ್ವಾಮಿ, ದೇವೇಗೌಡರೊಂದಿಗೆ ಚರ್ಚಿಸಿ ಸರಿಪಡಿಸಿಕೊಳ್ಳುವ ಕೆಲಸವನ್ನು ಮಾಡಿದ್ದರು. ಈ ಕಾರಣದಿಂದಲೇ, ಬೆಂಗಳೂರು ಗ್ರಾಮಾಂತರದಂತಹ ಕಠಿಣ ಕ್ಷೇತ್ರದಲ್ಲಿಯೂ ಎನ್‌ಡಿಎ ಅಭ್ಯರ್ಥಿ ಸುಲಭವಾಗಿ ಗೆದ್ದುಕೊಂಡು ಬರುವುದಕ್ಕೆ ಸಾಧ್ಯವಾಯಿತು.

ಆರಂಭದಿಂದಲೂ ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ನಡುವೆ ಹೊಂದಾಣಿಕೆ ಸಾಧ್ಯವೇ ಎನ್ನುವ ಪ್ರಶ್ನೆಗಳು ಎದುರಾಗಿತ್ತು. ಭಿನ್ನ ಸೈದ್ಧಾಂತಿಕ ನೆಲಗಟ್ಟಿನಲ್ಲಿರುವ ಎರಡೂ ಪಕ್ಷದ ಕಾರ್ಯಕರ್ತರು ಒಗ್ಗೂಡಲು ಸಾಧ್ಯವೇ ಎನ್ನುವ ಅನುಮಾನ ಸ್ವತಃ ನಾಯಕರಲ್ಲಿಯೇ ಇತ್ತು. ಆದರೆ ಇಂದಿನ 'ಅಧಿಕಾರ'ದ ರಾಜಕೀಯಕ್ಕೆ ಈ ಎಲ್ಲವನ್ನು ನಿಭಾಯಿಸುವಲ್ಲಿ ಬಿಜೆಪಿ ನಾಯಕರು ಯಶಸ್ವಿಯಾದರು.

ಲೋಕಸಭಾ ಚುನಾವಣಾ ಫಲಿತಾಂಶ ಬಿಜೆಪಿ-ಜೆಡಿಎಸ್ ನಾಯಕರಿಗೆ ಖುಷಿ ಕೊಡಲು ಮತ್ತೊಂದು ಕಾರಣವಿದೆ. ಅದೇನೆಂದರೆ, ಈ ಬಾರಿ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಿಗೆ ಬರೋಬ್ಬರಿ 142 ಕ್ಷೇತ್ರಗಳಲ್ಲಿ ಲೀಡ್ ಧಕ್ಕಿದೆ. ಅಂದರೆ, ಈಗ ಚುನಾವಣೆ ನಡೆದರೂ, ಈ 142 ಕ್ಷೇತ್ರಗಳಲ್ಲಿ ಮೈತ್ರಿ ಅಭ್ಯರ್ಥಿಗಳಿಗೆ 'ಲಾಭ'ವಿರುತ್ತದೆ. ಲೀಡ್ ಸಿಕ್ಕಿರುವುದಕ್ಕೆ ಮಾತ್ರವಲ್ಲದೇ, ಯಾವೆಲ್ಲ ಕ್ಷೇತ್ರಗಳಲ್ಲಿ ಲೀಡ್ ಸಿಕ್ಕಿದೆ ಎನ್ನುವುದು ಪ್ರಮುಖವಾಗುತ್ತದೆ. ತುಮಕೂರು, ಮಂಡ್ಯ, ಉತ್ತರ ಕನ್ನಡ, ಉಡುಪಿ-ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ 40ಕ್ಕೆ 40 ಕ್ಷೇತ್ರದಲ್ಲಿಯೂ ಬಿಜೆಪಿ-ಜೆಡಿಎಸ್ ಅಭ್ಯರ್ಥಿಗಳಿಗೆ ಮುನ್ನಡೆ ದೊರೆಕಿದೆ. ಇದೇ ರೀತಿಯಲ್ಲಿ ಮೈತ್ರಿ ಧರ್ಮ ಮುಂದುವರೆಸಿಕೊಂಡು ಹೋದರೆ ಮುಂದಿನ ವಿಧಾನಸಭಾ ಚುನಾವಣೆ ಸಮಯದಲ್ಲಿ ಕಾಂಗ್ರೆಸ್‌ಗೆ ಬಹುದೊಡ್ಡ ಪೆಟ್ಟುಕೊಡಬಹುದು ಎನ್ನುವುದು ಮೈತ್ರಿ ನಾಯಕರ ಲೆಕ್ಕಾಚಾರವಾಗಿದೆ.

ಮುಂದಿನ ಆರು ತಿಂಗಳಲ್ಲಿ ಕರ್ನಾಟಕದಲ್ಲಿ ಎದುರಾಗಬಹುದಾದ ಸ್ಥಳೀಯ ಸಂಸ್ಥೆ ಚುನಾವಣೆಗಳಿಗೆ ಮೊದಲು ಉಭಯ ಪಕ್ಷಗಳ ಕಾರ್ಯಕರ್ತರು ಒಂದಾಗಿರುವುದು ಎನ್‌ಡಿಎಗೆ ಲಾಭವಾಗಲಿದೆ. ಕರ್ನಾಟಕದಲ್ಲಿ 6022 ಗ್ರಾಮ ಪಂಚಾಯಿತಿ, 176 ತಾಲೂಕು ಪಂಚಾಯಿತಿ, 30 ಜಿಲ್ಲಾ ಪಂಚಾಯಿತಿ, 97 ಪಟ್ಟಣ ಪಂಚಾಯಿತಿ ಹಾಗೂ 11 ಮಹಾನಗರ ಪಾಲಿಕೆಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ ಇದೀಗ ರಾಜಧಾನಿ ಬೆಂಗಳೂರಿನ ಬಿಬಿಎಂಪಿಗೆ ಚುನಾವಣೆಯಾಗಬೇಕಿದೆ. ಇದರೊಂದಿಗೆ ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆಯಬೇಕಾಗಿದೆ. ಲೋಕಸಭಾ ಚುನಾವಣೆಯಲ್ಲಿ ಲೀಡ್ ಸಿಕ್ಕಿರುವ ಪ್ರಮಾಣವನ್ನು ನೋಡಿದರೆ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿಯೂ ಬಿಜೆಪಿ-ಜೆಡಿಎಸ್‌ಗೆ ಲಾಭವಾಗಲಿದೆ ಎನ್ನುವ ಲೆಕ್ಕಾಚಾರಗಳಿವೆ. ಲೋಕಸಭಾ ಚುನಾವಣೆ ಹೋಲಿಸಿದರೆ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ 'ಅಜೆಂಡಾ' ವಿಭಿನ್ನವಾಗಿದ್ದರೂ, ರಾಜಕೀಯ ಶಕ್ತಿ ಒಂದೇ ಆಗಿರುತ್ತದೆ. ಆದ್ದರಿಂದ ಈ ಮೈತ್ರಿ ಶಕ್ತಿಯನ್ನು ಬಳಸಿಕೊಂಡು ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಹಿಡಿಯುವ ಲೆಕ್ಕಾಚಾರದಲ್ಲಿ ಮೈತ್ರಿ ನಾಯಕರಿದ್ದಾರೆ.

ರಾಜ್ಯ ಬಿಜೆಪಿಯಲ್ಲಿರುವ ನೂರಾರು ಹುಳುಕುಗಳ ಹೊರತಾಗಿಯೂ ಉತ್ತಮ ಸಂಖ್ಯೆಯಲ್ಲಿ ಸೀಟು ಪಡೆಯಲು ಕುಮಾರಸ್ವಾಮಿ ಆ್ಯಂಡ್ ಟೀಂ ಕಾರಣವಾಗಿದ್ದರಿಂದಲೇ, ಕುಮಾರಸ್ವಾಮಿ ಅವರಿಗೆ ಕೇಂದ್ರದಲ್ಲಿ ಸಂಪುಟ ಸ್ಥಾನಮಾನದೊಂದಿಗೆ ಆಯಕಟ್ಟಿನ ಖಾತೆಗಳನ್ನು ನೀಡಲಾಗಿದೆ. ಭಾರಿ ಕೈಗಾರಿಕೆ, ಉಕ್ಕು ಖಾತೆ ನೀಡುವ ಮೂಲಕ, ಕುಮಾರಸ್ವಾಮಿ ಹಾಗೂ ದೇವೇಗೌಡರನ್ನು ಸಂತೃಪ್ತಿಪಡಿಸುವ ಕೆಲಸವನ್ನು ಮಾಡುವ ಮೂಲಕ, ಕರ್ನಾಟಕದಲ್ಲಿ ದೀರ್ಘಕಾಲದ ಮೈತ್ರಿಯ ಮುನ್ಸೂಚನೆಯನ್ನು ಕೇಂದ್ರದ ಬಿಜೆಪಿ ನಾಯಕ ನೀಡಿದ್ದಾರೆ.

ಬಿಜೆಪಿಯ ಕೇಂದ್ರ ನಾಯಕರು ಕರ್ನಾಟಕದಲ್ಲಿ ಯಡಿಯೂರಪ್ಪ ಕುಟುಂಬದ ಹೊರತಾದ ಗಟ್ಟಿ ನಾಯಕತ್ವದ ಹುಡುಕಾಟದಲ್ಲಿದ್ದರು. ಕಳೆದ ವಿಧಾನಸಭಾ ಚುನಾವಣೆಗೂ ಮೊದಲೇ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿ ಲಿಂಗಾಯತ ಅಸ್ತ್ರದ ಪರೀಕ್ಷೆ ಮಾಡಿದ್ದರು. ಬಳಿಕ ಅಶೋಕ್ ಅವರನ್ನು ಪ್ರತಿಪಕ್ಷ ನಾಯಕನನ್ನಾಗಿ ಮಾಡಿ ಒಕ್ಕಲಿಗರ ಸೆಳೆಯುವ ಪ್ರಯತ್ನ ಮಾಡಿತ್ತು. ಆದರೆ ಇದ್ಯಾವುದು ವರ್ಕ್‌ಔಟ್ ಆಗದಿರುವುದು ಖಚಿತವಾಗುತ್ತಿದ್ದಂತೆ, ಕುಮಾರಸ್ವಾಮಿ ಅವರನ್ನೇ ಸೆಳೆದು, ಪರ್ಯಾಯ ನಾಯಕತ್ವ ಬೆಳೆಸುವ ಲೆಕ್ಕಾಚಾರದಲ್ಲಿದೆ. ಇಂದಲ್ಲದಿದ್ದರೂ ಮುಂದೊಂದು ದಿನ ಪಕ್ಷದೊಂದಿಗೆ ವಿಲೀನವಾದರೂ ಅಥವಾ ಮೈತ್ರಿಕೂಟದ ನೆಪದಲ್ಲಾದರೂ ರೆಡಿಮೆಡ್ ನಾಯಕನನ್ನು ಬಿಜೆಪಿ ಕರ್ನಾಟಕದಲ್ಲಿ ಸ್ಥಾಪಿಸಿದೆ. ಒಳಜಗಳಗಳಿಂದ ತಳಮಟ್ಟದಲ್ಲಿ ನಲುಗಿ ಹೋಗಿರುವ ಬಿಜೆಪಿಗೆ ಇದೀಗ ಜೆಡಿಎಸ್ ಬಲ ತುಂಬುವ ಕೆಲಸವನ್ನು ಮಾಡಿದೆ. ಸದ್ಯದ ಮಟ್ಟಿಗೆ ಎನ್‌ಡಿಎ ಅಂಗಪಕ್ಷವಾಗಿರುವ ಜೆಡಿಎಸ್ ನಾಯಕರು, ಅದರಲ್ಲಿಯೂ ಕೇಂದ್ರ ಸಚಿವ ಕುಮಾರಸ್ವಾಮಿ ಅವರು, ಬಿಜೆಪಿಯ ನೀತಿ-ನಿರೂಪಣೆಯನ್ನು ಸಮರ್ಥಿಸಿಕೊಳ್ಳುವುದರಲ್ಲಿ, ಕಾಂಗ್ರೆಸ್ ನಾಯಕರ ವಿರುದ್ಧ ಮುಗಿಬೀಳುವ, ದಾಖಲೆಗಳನ್ನು ಸಂಗ್ರಹಿಸುವ ವಿಷಯದಲ್ಲಿ ರಾಜ್ಯ ಬಿಜೆಪಿ ನಾಯಕರಿಗಿಂತ ಹಲವು ಪಟ್ಟು ಮುಂದಿದ್ದಾರೆ. ದೀರ್ಘಕಾಲಿಕ ಮೈತ್ರಿಯ ಲೆಕ್ಕಾಚಾರದಲ್ಲಿ ಜೆಡಿಎಸ್ ನಾಯಕರಿದ್ದರೂ, ಬಿಜೆಪಿ ರಾಷ್ಟ್ರೀಯ ನಾಯಕರು ಮಾತ್ರ ಭವಿಷ್ಯದಲ್ಲಿ ಬಿಜೆಪಿಯೊಂ ದಿಗೆ ಜೆಡಿಎಸ್ ಅನ್ನು ವಿಲೀನ ಮಾಡಿಕೊಂಡು ಕರ್ನಾಟಕದಲ್ಲಿ ಮತ್ತಷ್ಟು ಶಕ್ತಿಶಾಲಿ ಯಾಗಬೇಕು ಎನ್ನುವ ಲೆಕ್ಕಾಚಾರದಲ್ಲಿದೆ. ಮಾಜಿ ಪ್ರಧಾನಿ ದೇವೇಗೌಡರು ಇರುವ ತನಕ ಈ ವಿಲೀನ ಪ್ರಕ್ರಿಯೆ ಸಾಧ್ಯವಿಲ್ಲ, ಆದರೆ ಅವರ ನಂತರ ಏನಾಗಲಿದೆ ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

# ವಿಕಸಿತ ಭಾರತದತ್ತ ಅಬಾಧಿತ ಆರ್ಥಿಕತೆ

ವಿಶ್ಲೇಷಣೆ

ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ
vveditoped@gmail.com

ಕೇಂದ್ರದಲ್ಲಿ ಸತತ ಮೂರನೇಯ ಬಾರಿಗೆ ಎನ್‌ಡಿಎ ಅಧಿಕಾರ ಹಿಡಿದ ಈ ಸಮಯದಲ್ಲಿ ಸಿಂಹಾವಲೋಕನದೊಂದಿಗೆ ಆರ್ಥಿಕ ವಿಶ್ಲೇಷಣೆ ಸೂಕ್ತವೆನಿಸದೆ ಇರಲಾರದು. ಇಡೀ ಜಗತ್ತು ಆರ್ಥಿಕತೆಯ ಹಿಂಜರಿಕೆಯನ್ನು ಅನುಭವಿಸುತ್ತಿರುವಾಗ, ಅಭಿವೃದ್ಧಿ ಹೊಂದಿದ ದೇಶಗಳು ಕೂಡಾ ಅತೀ ಕಡಿಮೆ ಆರ್ಥಿಕ ಬೆಳವಣಿಗೆಯನ್ನು ದಾಖಲಿಸುತ್ತಿರುವಾಗ ಭಾರತ ಮಾತ್ರ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯನ್ನು ಸಾಧಿಸುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಆರ್ಥಿಕತೆ ಹಿಂದೆಂದೂ ಕಾಣದ ಔನ್ನತ್ಯಕ್ಕೇರಿತು. ಒಂದು ದೇಶದ ಆರ್ಥಿಕತೆಯಲ್ಲಿ ವಿತ್ತೀಯ ನೀತಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದೇ ಸಂದರ್ಭದಲ್ಲಿ ಆರ್ಥಿಕತೆಯ ಮೈಲುಗಲ್ಲುಗಳು ಎನ್ನಬಹುದಾದ ಗಮನಾರ್ಹ ಸಾಧನೆಗಳಲ್ಲಿ ಆರ್ಥಿಕ ಸುಧಾರಣೆಗಳು ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮಗಳು ಪ್ರಮುಖವಾಗಿವೆ.

ಬಹಳ ಮಹತ್ವದ ಇನ್ನೊಂದು ವಿಚಾರವೆಂದರೆ ದೇಶದ ಅರ್ಥ ವ್ಯವಸ್ಥೆಯ ನಿಯಂತ್ರಕವಾದ ಆರ್‌ಬಿಐ ಜಗತ್ತಿನಲ್ಲೇ ಅತ್ಯುತ್ತಮ ರೆಗ್ಯುಲೇಟರ್ ಬ್ಯಾಂಕ್‌ಗಳಲ್ಲೊಂದಾಗಿದೆ. ಕೋವಿಡ್ ಸಹಿತ ಆರ್ಥಿಕ ಸಮಸ್ಯೆಗಳನ್ನು ಚೆನ್ನಾಗಿ ನಿಭಾಯಿಸಿದ ಹಿರಿಮೆ ಆರ್‌ಬಿಐಗಿದೆ. ಎನ್‌ಡಿಎ ಸರಕಾರ ಹತ್ತು ವರ್ಷದ ಆಡಳಿತದಲ್ಲಿ ಆರ್ಥಿಕ ಸುಧಾರಣೆಗಳ ಮೂಲಕ ಭಾರತವನ್ನು ಜಾಗತಿಕ ಮಟ್ಟದಲ್ಲಿ 5 ನೇ ಸ್ಥಾನಕ್ಕೇರಿಸಿದ ನಂತರ ಕೇಂದ್ರ ಸರಕಾರದ ಕನಸಿನ ಇದೀಗ ವಿಕಸಿತ ಭಾರತ ಪರಿಕಲ್ಪನೆಗೆ ಚಾಲನೆ ದೊರೆತಂತಾಗಿದೆ. ವಿಶ್ವಬ್ಯಾಂಕ್ ಕೂಡಾ ಭಾರತದ ಆರ್ಥಿಕತೆಯ ವೇಗ ಅಭಾದಿತ ಎಂದು ವಿಶ್ಲೇಷಿಸಿದೆ. 2014 ರಲ್ಲಿ ಎನ್‌ಡಿಎ ಅಧಿಕಾರ ಪ್ರಾರಂಭವಾದಾಗ ಭಾರತದ ಆರ್ಥಿಕತೆ ಕ್ಷೀಣವಾಗಿತ್ತು. ಕಳೆದ ದಶಕದಲ್ಲಿ ಭಾರತದ ತಲಾವಾರು ಒಟ್ಟು ದೇಶೀಯ ಉತ್ಪನ್ನ ಗಮನಾರ್ಹ ಹೆಚ್ಚಳ ಕಂಡಿದೆ. 2014 ರಲ್ಲಿ ತಲಾವಾರು ಜಿಡಿಪಿ ಸರಿ ಸುಮಾರು 5000 ಡಾಲರ್ ಆಗಿತ್ತು. 2022 ರ ವೇಳೆಗೆ ಅದು 7000 ಡಾಲರ್‌ಗಿಂತಲೂ ಹೆಚ್ಚಾಗಿದ್ದು ಶೇ.40 ಪ್ರತಿಶತದಷ್ಟು ಏರಿಕೆಯಾಗಿದೆ.

2023-2024 ರ ದೇಶದ ಜಿಡಿಪಿ ದರವು ವಾರ್ಷಿಕ ನೆಲೆಯಲ್ಲಿ ಶೇ.8.2 ರಷ್ಟು ದಾಖಲಾಗಿ ದೇಶದ ಆರ್ಥಿಕತೆ 3.5 ಲಕ್ಷ ಕೋಟಿ ಡಾಲರ್‌ಗೇರಿದೆ. ಮುಂದಿನ ದಿನಗಳಲ್ಲಿ ಇದು 5 ಲಕ್ಷ ಕೋಟಿ ಡಾಲರ್ ಗಳಷ್ಟಾಗಲು ಸಹಕಾರಿಯಾಗಲಿದೆ. ದೇಶದ ರಾಷ್ಟ್ರೀಕೃತ ಹಾಗೂ ಖಾಸಗೀ ಬ್ಯಾಂಕ್‌ಗಳು ನಷ್ಟದ ಬದಲು ಭರ್ಜರಿ ಲಾಭದ ಹಳಿಯಲ್ಲಿ ಸಾಗುತ್ತಿವೆ. 2017-2018 ರಲ್ಲಿ ಭಾರತೀಯ ಬ್ಯಾಂಕ್‌ಗಳು ರೂ. 85390 ನಷ್ಟ ಅನುಭವಿಸಿದ್ದವು. 2023-2024 ನೇ ಸಾಲಿನಲ್ಲಿ 3.10 ಲಕ್ಷ ಕೋಟಿ ರು. ಲಾಭವನ್ನು ದಾಖಲಿಸಿದೆ. ಕೇಂದ್ರ ಸರಕಾರವು ತನ್ನ ಆದಾಯದ ಗುರಿಯನ್ನು ತಲುಪಿದೆ. ತೆರಿಗೆ ಸಂಗ್ರಹದಿಂದ 2023-24 ನೇ ವರ್ಷದಲ್ಲಿ 23.26 ಲಕ್ಷ ಕೋಟಿ ರು. ಆದಾಯ ಬಂದಿದೆ. ದೇಶದ ಒಟ್ಟು ಆಂತರಿಕ ಉತ್ಪಾದನೆಯ 173.82 ಲಕ್ಷ ಕೋಟಿ ರು.ಗಳಷ್ಟಾಗಿದೆ. ಅದರ ಹಿಂದಿನ ವರ್ಷ 160.71 ಲಕ್ಷ ಕೋಟಿ ರು. ಆಗಿತ್ತು.

ಸಂಭ್ರಮಿಸಬೇಕಾದ ಆರ್ಥಿಕತೆಯ ಇನ್ನೊಂದು ಪರಿಣಾಮಕಾರಿ ಸುದ್ದಿಯೆಂದರೆ, ಕೇಂದ್ರ ಸರಕಾರಕ್ಕೆ ಆರ್‌ಬಿಐ ನೀಡಿದ ಬಂಪರ್ ಡಿವಿಡೆಂಡ್. ಆರ್‌ಬಿಐ 2.11 ಲಕ್ಷ ಕೋಟಿ ರು. ಡಿವಿಡೆಂಡ್ ನೀಡುವುದಾಗಿ ಘೋಷಿಸಿರುವುದರ ಪರಿಣಾಮ ದೇಶದ ವಿತ್ತೀಯ ಕೊರತೆಯನ್ನು ಶೇ.0.3 ರಷ್ಟು ತಗ್ಗಿಸಬಹುದು. ಇದರಿಂದಾಗಿ ರುಪಾಯಿ ಮೌಲ್ಯ ಮತ್ತು ಸರಕಾರಿ ಬಾಂಡ್ ಈಲ್ಡ್‌ನ ಸ್ಥಿರತೆ ಸಾಧಿಸುವಲ್ಲಿ ಆರ್‌ಬಿಐ ಮಹತ್ವದ ಪಾತ್ರ ವಹಿಸಿದೆ. ಇದರಿಂದ ದೇಶದ ಆರ್ಥಿಕತೆ ವೃದ್ಧಿಯಾಗಲಿದೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ವಿತ್ತೀಯ ಕೊರತೆಯನ್ನು 0.4% ತಗ್ಗಿಸಿ ನೂತನ ಅಭಿವೃದ್ಧಿ ಕಾಮಗಾರಿ ಅಥವಾ ಹೆಚ್ಚುವರಿ ಖರ್ಚನ್ನು ತೂಗಿಸಲು ಸಾಧ್ಯ. ಈಗ ನೂತನ ಸರಕಾರ ಜುಲೈನಲ್ಲಿ ಮಂಡಿಸಲಿರುವ ಪೂರ್ಣ ಪ್ರಮಾಣದ ಬಜೆಟ್‌ನಲ್ಲಿ ವಿವಿಧ ರೀತಿಯ ಯೋಜನೆಗಳಿಗೆ ಹೆಚ್ಚಿನ ಲಾಭಾಂಶವನ್ನು ಬಳಸಿಕೊಳ್ಳಬಹುದು. ಇದರಿಂದಾಗಿ ಒಂದೇ ದಶಕದಲ್ಲಿ ನೀಡಿದ ಡಿವಿಡೆಂಡ್ ಮೊತ್ತವು ಆರು ಪಟ್ಟು ಹೆಚ್ಚಳವಾಗಿದೆ. ಇದು ದೇಶದ ಆರ್ಥಿಕ ಸುಸ್ಥಿರತೆ ಮತ್ತು ವಿತ್ತ ಆರೋಗ್ಯವನ್ನು ಬಿಂಬಿಸುತ್ತದೆ. ಆರ್‌ಬಿಐಗೆ ಆದಾಯದ ಮೂಲವೆಂದರೆ ವಾಣಿಜ್ಯ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳಿಗೆ ನೀಡಿದ ಬಡ್ಡಿಯ ಆದಾಯ, ಸರಕಾರಿ ಬಾಂಡ್‌ಗಳಿಗೆ ಬಡ್ಡಿ, ವಿದೇಶೀ ಕರೆನ್ಸಿ, ಚಿನ್ನ, ಐಎಂಎಫ್, ಎಡಿಬಿ, ವರ್ಲ್ಡ್ ಬ್ಯಾಂಕಿನಲ್ಲಿ ಮಾಡಿದ ಹೂಡಿಕೆ ಆದಾಯ ಇವುಗಳು ಮೂಲವಾಗಿದೆ. ಆರ್‌ಬಿಐ ಕಡೆಯಿಂದ ಸಿಕ್ಕಿರುವ ಡಿವಿಡೆಂಡ್ ಮೊತ್ತವು ಸರಕಾರಕ್ಕೆ ಹಣಕಾಸಿನ ದೃಷ್ಟಿಯಿಂದ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಡಲಿದೆ.

ಆರ್‌ಬಿಐ ನೀಡಿದ ವಿಪುಲ ಡಿವಿಡೆಂಡ್ ಪರಿಣಾಮವಾಗಿ 2024-25 ನೇ ಸಾಲಿಗೆ ವಿತ್ತೀಯ ಕೊರತೆ ಶೇ.5.1 ಕ್ಕೆ ಇಳಿಸಲು ಅನುಕೂಲವಾಗಿದೆ. ಸಮಗ್ರ ತೆರಿಗೆ ಆದಾಯ ಶೇ.13.5 ರಷ್ಟು ಉದ್ಯಮಗಳಿಂದ ದೊರೆತ ಭರ್ಜರಿ ಡಿವಿಡೆಂಡ್‌ಗಳಿಂದ ತೆರಿಗೆಯೇತರ ಆದಾಯ ಪರಿಷ್ಕೃತ ಅಂದಾಜಿಗಿಂತಲೂ ಜಾಸ್ತಿಯಾಗಿದೆ. ಕಳೆದ 5 ವರ್ಷಗಳಲ್ಲಿ ಅನವಶ್ಯಕ ವೆಚ್ಚಗಳಿಗೆ ಕಡಿವಾಣ ಹಾಕಲಾಗಿದೆ. ವಿವಿಧ ಬಗೆಯ ಸಬ್ಸಿಡಿಗಳನ್ನು ಕಡಿತಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎನ್‌ಡಿಎ ಸರಕಾರದ ಮೂರನೇಯ ಅವಧಿಯ ಪ್ರಥಮ ವರ್ಷದ ಆರ್ಥಿಕ ನಿರ್ವಹಣೆಯ ಆತಂಕಗಳಿಲ್ಲದೆ, ಸರಾಗವಾಗಿ ಸಾಗುವ ಲಕ್ಷಣಗಳಿವೆ.

ಎನ್‌ಡಿಎ ಸರಕಾರದ ಅವಧಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದೇ ಇರಲು ಸಾಧ್ಯವಿಲ್ಲ. ಇದೇ ಸಂದರ್ಭದಲ್ಲಿ ಆರ್ಥಿಕ ಸುಧಾರಣಾ ಕಾರ್ಯಕ್ರಮಗಳು ಮುಂದುವರಿದು ನಿರುದ್ಯೋಗ, ನಿರುದ್ಯೋಗಕ್ಕೆ ಪರ್ಯಾಯ ಕಾರ್ಯಸಾಧ್ಯ ಮಾನದಂಡಗಳು, ಹಣದುಬ್ಬರದ ಸಮಸ್ಯೆಗಳ ನಿವಾರಣೆಯ ಬಗ್ಗೆ ದೇಶದ ಜನತೆ ಬೆಟ್ಟದಷ್ಟು ನಿರೀಕ್ಷೆ ಇಟ್ಟುಕೊಂಡಿದೆ. ಇದನ್ನು ನಿಭಾಯಿಸಬೇಕಾದ ಗುರುತರ ಹೊಣೆಗಾರಿಕೆ ಹೊಸ ಸರಕಾರದ ಮೇಲಿದೆ. ಇದಲ್ಲದೆ ಆರ್ಥಿಕ ಸುಧಾರಣೆಯಾದುದೇನೋ ಮುಚ್ಚುಮರೆಯಿಲ್ಲದ ಸತ್ಯ, ಇದರೊಂದಿಗೆ ಆರ್ಥಿಕ ಸುಧಾರಣೆಗಳಿಗೆ ಮಾನವೀಯ ಸ್ಪರ್ಶ ಇರಬೇಕು.

ಅದಲ್ಲದೆ ಜನಪರ ಆರ್ಥಿಕ ಸುಧಾರಣೆಗಳಿಗೆ ಸಾಕ್ಷಿಯಾಗಿ ನಿಲ್ಲಬೇಕಾಗಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆದಾಯ ಕಡಿಮೆಯಾಗಿರುವುದು, ಬೇಡಿಕೆ ಕುಸಿತವನ್ನು ವೃದ್ಧಿಸಲು ಯೋಜನೆಗಳನ್ನು ನಿರೂಪಿಸಬೇಕಾಗಿದೆ. ದೇಶದ ಆರ್ಥಿಕತೆಯಲ್ಲಿ ಜಿಡಿಪಿ ಏರಿಕೆಯಾಗಿದೆ. ಹಣದುಬ್ಬರ ಇಳಿಯುವ ಎಲ್ಲಾ ಸಾಧ್ಯತೆಗಳಿವೆ. ದೇಶದ ವಿದೇಶೀ ವಿನಿಮಯ ದಾಸ್ತಾನು ಅಧಿಕ ಪ್ರಮಾಣದಲ್ಲಿದೆ. ಬಂಗಾರದ ದಾಸ್ತಾನು ತೃಪ್ತಿಕರವಾಗಿದೆಯಲ್ಲದೆ ಜಾಗತಿಕವಾಗಿ ಆರ್ಥಿಕತೆಯಲ್ಲಿ ಮೂರನೇಯ ಸ್ಥಾನವನ್ನು ಅಲಂಕರಿಸುವ ಸಾಧ್ಯತೆ ಇದೆ.

**ಆರ್‌ಬಿಐ ನಿಲುವುಗಳು:** ಇತ್ತೀಚಿನ ಆರ್‌ಬಿಐನ ದ್ವೈಮಾಸಿಕ ನೀತಿಯಲ್ಲಿ ಸತತ ಎಂಟನೇಯ ಬಾರಿಗೂ ರೆಪೋ ದರವನ್ನು ಶೇ. 6.5 ರ ಯಥಾ ಸ್ಥಿತಿಯಲ್ಲಿಡಲು ನಿರ್ಧರಿಸಿದೆ. ರೆಪೋ ದರವನ್ನು ಬದಲಿಸದೆ 2024-25 ರ ಜಿಡಿಪಿ ಬೆಳವಣಿಗೆಯ ನಿರೀಕ್ಷೆಯನ್ನು ಶೇ.7 ರಿಂದ ಶೇ.7.2 ಕ್ಕೆ ಏರಿಸಿದೆ. ಮುಂದಿನ ಹಣಕಾಸು ನೀತಿ ಸಭೆಯಲ್ಲಿ ರೆಪೋ ದರ ಇಳಿಯುವ ಸಾಧ್ಯತೆ ದಟ್ಟವಾಗಿದೆ. ತನ್ಮೂಲಕ ಗೃಹ, ವಾಹನ, ಸೇರಿದಂತೆ ವಿವಿಧ ರೀತಿಯ ಸಾಲಗಳ ಬಡ್ಡಿದರ ಕಡಿಮೆಯಾಗಲಿದೆ. ದೇಶದ ಆರ್ಥಿಕತೆಯು ಉತ್ತಮ ಸ್ಥಿತಿಯನ್ನು ಕಾಯ್ದುಕೊಂಡಿದೆ. ಈಗ ಹಣದುಬ್ಬರವನ್ನು ಶೇ. 4 ಕ್ಕೆ ತರುವ ಪ್ರಯತ್ನದಿಂದಾಗಿ ಆರ್‌ಬಿಐ ರೆಪೋ ದರವನ್ನು ಬದಲಿಸಿಲ್ಲ. ದೇಶೀಯ ಆರ್ಥಿಕ ಬೆಳವಣಿಗೆ ಮತ್ತು ಹಣದುಬ್ಬರದ ಆಧಾರದ ಮೇಲೆ ಆರ್‌ಬಿಐನ ಹಣಕಾಸು ನೀತಿಗಳನ್ನು ನಿರ್ಧರಿಸಲಾಗುತ್ತದೆ. ಹಣದುಬ್ಬರ ಶೇ. 4 ರ ಮಿತಿ ಅಥವಾ ಅದಕ್ಕಿಂತ ಕೆಳಗೆ ಇಳಿಕೆಯಾದರಷ್ಟೇ ಆರ್‌ಬಿಐನ ಹಣಕಾಸು ನೀತಿಯಲ್ಲಿ ಬದಲಾವಣೆ ಮಾಡಲು ಸಾಧ್ಯ ಎಂದು ಆರ್‌ಬಿಐ ಗವರ್ನರ್ ಸ್ಪಷ್ಟ ಮಾಹಿತಿ ನೀಡಿದ್ದಾರೆ. ಜಾಗತಿಕ ಮಟ್ಟದಲ್ಲಿ ಆಹಾರ ಪದಾರ್ಥಗಳ ಬೆಲೆಯು ನಿಧಾನಗತಿಯಲ್ಲಿ ಏರುತ್ತಿದೆ. ಇದೇ ಸಂದರ್ಭದಲ್ಲಿ ದೇಶದ ಗೋಧಿ ಸಂಗ್ರಹಣೆ ಹಾಗೂ ಗೋಧಿ ಮತ್ತು ಅಕ್ಕಿಯ ಕಾಪು ದಾಸ್ತಾನು ಹೆಚ್ಚಿರುವುದರಿಂದ ಹಣದುಬ್ಬರ ಇಳಿಕೆಯಾಗಬಹುದು. ಆದರೆ ಜಾಗತಿಕ ಬಿಕ್ಕಟ್ಟಿನಿಂದ, ಕಚ್ಚಾ ತೈಲ ಬೆಲೆಯು ಅನಿಶ್ಚತತೆಯಿಂದ ಕೂಡಿರುವುದರಿಂದ ಆರ್‌ಬಿಐ ರೆಪೋ ದರಕ್ಕೆ ಕೈ ಹಾಕದಿರುವುದಕ್ಕೆ ಕಾರಣ.

ಕೃಷಿ ಮತ್ತು ಹೂಡಿಕೆ ವಲಯಗಳಲ್ಲಿನ ಸುಧಾರಣೆಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಹೆಚ್ಚಬೇಕಾಗಿದೆ. ಇದು ಕೃಷಿ, ಕೈಗಾರಿಕೆ, ಸೇವಾ ವಲಯ ಹಾಗೂ ವೈಯಕ್ತಿಕ ಸಾಲದ ಪ್ರಮಾಣವನ್ನು ವಿತರಿಸಲು ಬ್ಯಾಂಕ್‌ಗಳಿಗೆ ನೆರವಾಗಲಿವೆ.

**(ಲೇಖಕರು : ನಿವೃತ್ತ ಮುಖ್ಯ ಪ್ರಬಂಧಕರು ವಿಜಯ ಬ್ಯಾಂಕ್ ಮತ್ತು ಸಂದರ್ಶಕ ಪ್ರಾಧ್ಯಾಪಕರು)**

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ನೀಟ್ ರದ್ದು ಪಡಿಸಿ

ಭಾರತ ದೇಶದಲ್ಲಿ ಒಟ್ಟು 91, 927 ಎಂಬಿಬಿಎಸ್ ಸೀಟುಗಳು ಮತ್ತು 26,949 ಡೆಂಟಲ್ ಸೀಟುಗಳು ಜೊತೆಗೆ 50,720 ಆಯುಷ್ಮಾನ್ ಸೀಟುಗಳು ಹಾಗೂ 525 ಪಶು ವೈದ್ಯಕೀಯ ಸೀಟುಗಳು ಲಭ್ಯವಿದೆ ಒಟ್ಟಾರೆಯಾಗಿ 695 ಮೆಡಿಕಲ್ ಕಾಲೇಜುಗಳು ಸ್ಥಾಪನೆಯಾಗಿದೆ. ಕರ್ನಾಟಕ ರಾಜ್ಯದಲ್ಲಿ ಸರಕಾರ ಮತ್ತು ಖಾಸಗಿ ಮೆಡಿಕಲ್ ಕಾಲೇಜುಗಳ ಸಂಖ್ಯೆ 79 ಆಗಿದ್ದು ಇವುಗಳಿಂದ 9, 845 ಸೀಟುಗಳು ಲಭ್ಯವಿರುತ್ತದೆ. ಕೆಲವು ವರ್ಷಗಳ ತನಕ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ರಾಜ್ಯ ಸರಕಾರ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿಯ ಪ್ರವೇಶವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿ ಕೊಡಲಾಗುತ್ತಿತ್ತು. ಇತ್ತೀಚಿಗೆ ಕೇಂದ್ರ ಸರಕಾರ ವೈದ್ಯಕೀಯ ಪದವಿಯ ಪ್ರವೇಶಕ್ಕೆ ಕೇಂದ್ರೀಕೃತವಾದ ನೀಟ್ ವ್ಯವಸ್ಥೆಯನ್ನು ಜಾರಿಗೊಳಿಸಿರುತ್ತಾರೆ. ಇದರಿಂದಾಗಿ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಸೀಟುಗಳು ಅನ್ಯ ರಾಜ್ಯದವರ ಪಾಲಾಗುತ್ತಿದೆ ನಮ್ಮ ನಾಡಿನ ಮಕ್ಕಳಿಗೆ ಸೀಟುಗಳು ದೊರೆಯುತ್ತಿಲ್ಲ. ಇದು ಒಂದು ಕಡೆಯಲ್ಲಾದರೆ, ಇನ್ನೊಂದೆಡೆ ನೀಟ್ ಪರೀಕ್ಷಾ ಪದ್ಧತಿಯಲ್ಲಿ ವ್ಯಾಪಕವಾದ ಅಂತಹ ಭ್ರಷ್ಟಾಚಾರ ಮತ್ತು ಲೋಪದಿಂದ ತುಂಬಿದೆ ಎಂಬುದನ್ನು ಈಗ ಸಾಬೀತು ಆಗಿದೆ. ನೀಟ್ ಪರೀಕ್ಷೆಯಲ್ಲಿ ಉತ್ತರ ಭಾರತದ ಗುಜರಾತ್ ರಾಜ್ಯದವರು ಅನ್ಯಾಯದ ಮೂಲಕ ಬಹಳಷ್ಟು ರ‍್ಯಾಂಕ್‌ಗಳನ್ನು ತಮ್ಮದಾಗಿಸಿಕೊಂಡು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವನ್ನು ಮಾಡಿದ್ದಾರೆ. ಹಲವಾರು ಕೋಟಿ ರೂಪಾಯಿಗಳ ವ್ಯವಹಾರವು ನಡೆದಿರುವುದು ಬಯಲಾಗುತ್ತಿದೆ. ಸ್ವತಃ ಕೇಂದ್ರದ ಮಾನವ ಸಂಪನ್ಮೂಲ ಸಚಿವರು ಇಲ್ಲಿ ಆಗಿರುವ ಅನ್ಯಾಯಗಳ ಬಗ್ಗೆ ಸಹಮತವನ್ನು ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಎನ್ನುವುದು ರಾಜ್ಯಗಳ ವಿಚಾರವಾಗಿರುತ್ತದೆ ಇದರಲ್ಲಿ ಕೇಂದ್ರ ಸರಕಾರ ಹಸ್ತಕ್ಷೇಪ ಮಾಡುವುದು ಸರಿಯಲ್ಲ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದು ಕೊಳ್ಳುವಂತಹ ಕೆಲಸ ನಿರಂತರವಾಗಿ ತೆರಿಗೆ ಮತ್ತು ಈಗ ಶಿಕ್ಷಣದ ವಿಚಾರದಲ್ಲೂ ಸಹ ಕೇಂದ್ರ ಸರಕಾರ ಸತತವಾಗಿ ಮಾಡುತ್ತ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರಕಾರ ಮುಂದೆ ನಡೆಯುವಂತಹ ವಿಧಾನಸಭೆಯ ಅಧಿವೇಶನದಲ್ಲಿ ನಿರ್ಣಯವನ್ನು ಮಂಡಿಸಿ ನೀಟ್ ಪರೀಕ್ಷೆಯನ್ನ ರದ್ದು ಪಡಿಸಿ ಎಂಬಿಬಿಎಸ್ ಪದವಿಯ ಪ್ರವೇಶವನ್ನು ನೀಡುವ ಅಧಿಕಾರವನ್ನು ರಾಜ್ಯಗಳಿಗೆ ನೀಡಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸರ್ವಾನುಮತದಿಂದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅನುಮೋದನೆಯನ್ನು ಪಡೆದು ಕೇಂದ್ರ ಸರಕಾರಕ್ಕೆ ತಲುಪಿಸಲಿ. ಈ ಮೂಲಕ ಎಲ್ಲ ರಾಜ್ಯದವರು ತಮ್ಮ ಧ್ವನಿಯನ್ನು ತೆಗೆದು ನೀಟ್ ಪರೀಕ್ಷೆಯ ರದ್ದತಿಗೆ ಹೋರಾಟವನ್ನು ನಡೆಸಲಿ. ಆಸ್ಪತ್ರೆಗಳು ನಮ್ಮದು, ಸೌಕರ್ಯ ಸೌಲಭ್ಯ ಗಳು ನಮ್ಮದು ಆದರೆ ಸೀಟುಗಳು ಮಾತ್ರ ಕೇಂದ್ರ ಸರಕಾರದ ಅಧೀನದಲ್ಲಿರಬೇಕು ಎನ್ನುವುದು ಯಾವ ನ್ಯಾಯ? ನೀಟ್ ಪರೀಕ್ಷೆ ರದ್ದಾದರೆ ಎಲ್ಲ ಸ್ಥಾನಗಳು ನಮ್ಮ ರಾಜ್ಯದ ಮಕ್ಕಳಿಗೆ ದೊರೆಯುತ್ತದೆ. ಕನ್ನಡಿಗರು ಹೆಚ್ಚು ಜನ ವೈದ್ಯಕೀಯ ಪರೀಕ್ಷೆಯಲ್ಲಿ ಪ್ರವೇಶವನ್ನು ಪಡೆಯಲು ಅನುಕೂಲವಾಗುತ್ತದೆ.

**-ಕೆ ಎಸ್ ನಾಗರಾಜ್**

### ವಿರೋಧಿಸುವ ಪಕ್ಷವಲ್ಲ

ಆಹಾರ ಸ್ವೀಕಾರ, ಮಲಿನ ವಿಸರ್ಜನೆ ಈ ಎರಡು ದ್ವಾರಗಳು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುವುದು ಮನುಷ್ಯ ದೇಹದ ಆರೋಗ್ಯಕ್ಕೆ ಅವಶ್ಯಕ. ಇವುಗಳಲ್ಲಿ ಒಂದು ರೋಗಗ್ರಸ್ತವಾದರೆ ಏನಾಗುತ್ತದೆ ತಿಳಿದ ವಿಷಯ. ಪ್ರಜಾಪ್ರಭುತ್ವ ವಿಜ್ರಂಭಿಸಲು ಆಡಳಿತ ಪಕ್ಷ ಮತ್ತು ಪ್ರತಿ ಪಕ್ಷ ಇವೆರಡೂ ಒಂದಕ್ಕೆ ಒಂದು ಪೂರಕವಾಗಿ ಕರ್ತವ್ಯ ನಿರ್ವಹಿಸುವುದು ಪ್ರಜಾಪ್ರಭುತ್ವದ ಉಳುವಿಗೆ ಆಗತ್ಯ. ಇವುಗಳಲ್ಲಿನ ಬಿರುಕು ಪರಸ್ಪರ ಹೋರಾಟ ಪ್ರಜಾಪ್ರಭುತ್ವಕ್ಕೆ ಕಂಠಕ. ಈಗ ಪ್ರತಿ ಪಕ್ಷಗಳನ್ನು ವಿರೋಧ ಪಕ್ಷಗಳು ಎಂದು ಕರೆಯುವುದರಲ್ಲೇ ದುರಂತ ಅಡಗಿದೆ. ಹೆಸರಿಗೆ ತಕ್ಕಂತೆ ಆಡಳಿತ ಪಕ್ಷದ ಪ್ರತಿಯೊಂದು ನಡೆಯನ್ನೂ ವಿರೋಧಿಸುತ್ತ ಬಹುಮತದಿಂದ ಆಯ್ಕೆ ಮಸೂದೆಯನ್ನು ಲೇವಡಿ ಮಾಡಿ ಅನುಷ್ಠಾನಕ್ಕೆ ಸಹಕರಿಸದೆ ವಿರೋಧಿಸುವುದು ಪ್ರಜಾಪ್ರಭುತ್ವಕ್ಕೆ ಶೋಭಿಸುವುದಿಲ್ಲ. ಆಡಳಿತ ಪಕ್ಷವೂ ತಾನು ಏನು ಮಾಡಿದರೂ ನಡೆಯುತ್ತದೆ ಎನ್ನುವ ಸರ್ವಾಧಿಕಾರಿ ಧೋರಣೆ ತಾಳುವುದು ಅಪೇಕ್ಷಣೀಯವಲ್ಲ. ಇನ್ನೂ ಪ್ರಜಾಪ್ರಭುತ್ವ ರಕ್ಷಣೆಗೆ ಕಾವಲು ನಾಯಿಯಾಗಿ ಕರ್ತವ್ಯ ನಿರ್ವಹಿಸಬೇಕಾದ ಪತ್ರಿಕಾರಂಗವೂ ನಿಷ್ಪಕ್ಷಪಾತವಾಗಿ ವರ್ತಿಸಿ ಆಗುಹೋಗುಗಳನ್ನು ಕೋಟಿ ಕೋಟಿ ಓದುಗರ ಗಮನಕ್ಕೆ ತರವುದು ಅಗತ್ಯ. ಅವೂ ಪಕ್ಷಗಳ ವಂದಿಮಾಗದಿರಾಗಬಾರದು. ಅವು ಸಂವಿಧಾನದ ಆಶಯ ಮರೆತು ತಮ್ಮದೇ ಪಂಥಗಳ ಅನುವರ್ತಿಗಳಾದರೆ ಪ್ರಜಾಪ್ರಭುತ್ವದ ಅಧೋಗತಿ. ಚಿಂತಕರೂ ಸಾಹಿತಿಗಳು ದೇಶಪ್ರೇಮಿಗಳೂ 'ರಾಜಕೀಯ ಕೊಚ್ಚೆ ಎಂದು ಹೀನಾಯವಾಗಿ ಕಾಣಬಾರದು. ಅದನ್ನೇ ಅವರೂ ಕುಡಿಯುವುದು. ಅವರು ಕಾಲಕಾಲಕ್ಕೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಇದ್ದರೆ ಜನರು ಪ್ರಜ್ಞಾವಂತರಾಗುತ್ತಾರೆ. ಪ್ರಜಾಪ್ರಭುತ್ವಕ್ಕೆ ಕಾಯಕಲ್ಪ ವಾಗುತ್ತದೆ. ಸಾಮಾನ್ಯನ ಅಳಲು ಕೇಳಿಯೂ ಮೌನ ಬೇಡ.

**-ಸತ್ಯಬೋಧ ಬೆಂಗಳೂರು**

### ವರುಣನ ಸಿಂಚನ ಖುಷಿಯ ತಲ್ಲಣ

ಎಲ್ಲೆಡೆ ಮಳೆರಾಯನ ಸಿಂಚನದಿಂದ ಜನರ ಮೊಗದಲಿ ಸಂತಸ ಉಂಟಾಗಿದೆ. ಸೂರ್ಯನ ಶಾಖದಿಂದ ಕಂಗಾಲಾಗಿದ್ದ ಜನರು ಇದೀಗ ಮಳೆರಾಯನಿಂದ ಖುಷಿಯಲ್ಲಿ ತೇಲಾಡುತ್ತಿದ್ದಾರೆ. ಕುಂದಾಪುರ, ಉಡುಪಿ, ಮಂಗಳೂರು, ಹೊನ್ನಾವರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯ ಆರ್ಭಟ ಜೋರಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಮಳೆ ಹೆಚ್ಚಾಗಿದ್ದು, ನದಿ ಸಾಗರಗಳು ತಮ್ಮ ಮಿತಿಯ ಮಟ್ಟವನ್ನು ಮೀರಿ ಹರಿಯುತ್ತಿವೆ. ಒಂದೆಡೆ ಮಳೆಯಿಂದ ರೈತರು ಖುಷಿಯಾಗಿದ್ದರೆ, ಇನ್ನೊಂದೆಡೆ ಪ್ರವಾಸಿಗರಿಗೆ ತೊಂದರೆ ಉಂಟಾಗುತ್ತಿದೆ. ಆದರೆ ವಿಪರ್ಯಾಸ ಏನೆಂದರೆ ಎಷ್ಟೇ ಮಳೆಯಾದರೂ ನೀರಿಗಾಗಿ ಹಾಹಾಕಾರ ಇನ್ನು ತಪ್ಪಿಲ್ಲ. ಆದ್ರೆ ಈ ಹೆಚ್ಚುತ್ತಿರುವ ಮಳೆಯಿಂದ ಜನರು ತಮ್ಮ ಪ್ರಾಣ ಕಳೆದುಕೊಳ್ಳದಿರಲು ಸಮುದ್ರಕ್ಕೆ ಪ್ರವಾಸಿಗರು ಹೋಗುವುದನ್ನು ತಡೆಯುವುದರ ಜೊತೆಗೆ ಮೀನುಗಾರರನ್ನು ಸಮುದ್ರಕ್ಕೆ ಇಳಿಯದಂತೆ ಸರಕಾರ ಆದೇಶ ಹೊರಡಿಸಬೇಕು. ನೀರಿನ ರಭಸಕ್ಕೆ ಜನರು ತಮ್ಮ ಪ್ರಾಣ ಕಳೆದುಕೊಳ್ಳುವ ಸಾಧ್ಯತೆ ಇದೆ. ಹಾಗಾಗಿ ಸಮುದ್ರ ತೀರದಲ್ಲಿ ಎಚ್ಚರಿಕೆ ಬೋರ್ಡ್‌ಗಳ ಜೊತೆಗೆ ಜನರು ನೀರಿಗೆ ಇಳಿಯದಂತೆ ನೋಡಿಕೊಳ್ಳುತ್ತಿದ್ದಾರೆ. ಈ ಮುಂಗಾರು ಮಳೆಯು ರೈತರ ಪಾಲಿಗೆ ವರವಾಗಿ ಬಂದಿದೆ. ರೈತರು ಹೊಸ ಬಿತ್ತನೆಯ ಸಂತಸದಲ್ಲಿ ಇದ್ದಾರೆ.

**-ಶೃತಿ ಬೆಳ್ಳುಂಡಗಿ ವಿಜಯಪುರ (ಕನ್ನೂರ)**

### ಅರ್ಥವಾಗದ ದ್ವಿಮುಖ ನೀತಿ

ಲೋಕಸಭಾ ಚುನಾವಣೆಯ ನಂತರ ಇಂಧನ ದರ ಏರಿಕೆಯಾಗಬಹುದು ಎನ್ನುವ ಜನಸಾಮನ್ಯರ ನೀರೀಕ್ಷೆ ಸುಳ್ಳಾಗಲಿಲ್ಲ. ಅದರೆ, ಈ ಏರಿಕೆಗೆ ಭಾರತೀಯ ಜನತಾ ಪಕ್ಷದ ವಿರೋದ ಮಾತ್ರ ಅರ್ಥವಾಗುತ್ತಿಲ್ಲ. ಕೇಂದ್ರ ಸರಕಾರ ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ಇಂಧನ ದರ ಏರಿಸುತ್ತಿದ್ದರೂ ಚಕಾರ ಎತ್ತದ ಭಾಜಪ ಸರಕಾರ ರಾಜ್ಯ ಸರಕಾರ ನಾಲ್ಕು ವರ್ಷಗಳ ಮೇಲೆ ಇಂಧನ ದರ ಏರಿಸಿದಾಗ ಅಕ್ರೋಶ ವ್ಯಕ್ತ ಮಾಡುವುದು ಏಕೆ? ಕೇಂದ್ರ ಸರಕಾರ ಅಥವಾ ಭಾಜಪ ಏರಿಕೆ ಮಾಡಿದರೆ ಸರಿ, ರಾಜ್ಯಸರಕಾರ ಮಾಡಿದರೆ ತಪ್ಪು? ರಾಜಸ್ತಾನ ಮತ್ತು ಮದ್ಯ ಪ್ರದೇಶ ಸರಕಾರಗಳು ಉಚಿತ ಗ್ಯಾರಂಟಿ ನೀಡಿದರೆ ಸರಿ. ಕರ್ನಾಟಕ ಸರಕಾರ ನೀಡಿದರೆ ಅದು ಬಿಟ್ಟಿ ಭಾಗ್ಯ. ಹಾಗೆ ಮೋದಿ ಗ್ಯಾರಂಟೀನೂ ಓಕೆ. ಈ ದ್ವಿಮುಖ ನೀತಿಗೆ ನಗಬೇಕೋ ಅಳ ಬೇಕೋ ತಿಳಿಯದು.

**-ರಮಾನಂದ ಶರ್ಮಾ ಬೆಂಗಳೂರು**

## ಭಟ್ಟರ್ ಸ್ಕಾಚ್

● ರಘುವೀರ ಸಾಸ್ತಾನ, ಬೆಂಗಳೂರು
ಭಟ್ರೇ, ಬಿಗ್ ಬಾಸ್ ಮನೆಗೆ ನಿಮಗೆ ಆಮಂತ್ರಣ ಬರಲಿಲ್ಲವಾ?
**- ದೋಸ್ತ, ಬೇರೆಯವರ ಮನೆಯಲ್ಲಿ ಉಳಿದು ರೂಢಿ ಇಲ್ಲವಲ್ಲ?!**

● ಸಂಗಮೇಶ ಪಾಟೀಲ, ಧಾರವಾಡ
ಯಕ್ಷಗಾನದಲ್ಲಿ ಹೆಣ್ಣು ವೇಷದಲ್ಲಿ ಗಂಡಸರೇ ಅಭಿನಯಿಸುತ್ತಾರಲ್ಲ?
**- ನಿಜ ಜೀವನದಲ್ಲಿ ಗಂಡಸರು ಹೆಂಗಸರಂತೆ ವರ್ತಿಸುವುದಿಲ್ಲವಾ?**

● ಭಾನು, ಬಸವೇಶ್ವರನಗರ
ಸರ್, ಸದಾನಂದ ಗೌಡ ಅವರು ಎಲ್ಲೂ ಕಾಣಿಸಿಕೊಳ್ಳುತ್ತಿಲ್ಲವಲ್ಲಾ ?
**- ಅವರೊಂಥರಾ ಬಂಡೀಪುರದ ಹುಲಿ ಇದ್ದಂತೆ, ಕಾಣಿಸಿಕೊಂಡರೂ ಕಷ್ಟ, ಕಾಣಿಸಿಕೊಳ್ಳದಿದ್ದರೂ!**

● ನಾಗರತ್ನ ಕೋಗಿಲು, ಸಹಕಾರನಗರ
ನನ್ನ ಪ್ರೀತಿ ಐನೂರಾ ಹನ್ನೆರಡು ಜಿಬಿ ಅಂತಾನಲ್ಲ?
**- ಅಷ್ಟೇನಾ ನನ್ನದು ಟು ಟಿಬಿ ಹಾರ್ಡ್ ಡಿಸ್ಕ್ ಎನ್ನಬಾರದಾ?!**

● ಸುದರ್ಶನ ಅಂಗಡಿ, ಕನಕಗಿರಿ
ಒಂದು ಪ್ರಶಸ್ತಿ ಮೌಲ್ಯ ಹಾಳಾಗುವುದು ಹೇಗೆ ಭಟ್ರೇ?
**- ಜ್ಞಾನಪೀಠ ಪ್ರಶಸ್ತಿಯನ್ನು ಮೊಯಿಲಿಗೆ ಕೊಟ್ಟು ನೋಡಿದರೆ ಗೊತ್ತಾಗುತ್ತೆ!**

● ಸದಾನಂದ ಶೆಣೈ, ಬೈಂದೂರು
ಗಂಡ ಕಿವುಡನಾದರೆ ಹೆಂಡತಿ ಕಥೆ ಏನು ಸ್ವಾಮೀ?
**- ರಾಧಾ ಹಿರೇಗೌಡರ್ ಅವಳಂಥ ಹೆಂಡತಿ ಸಿಕ್ಕರೆ ಗಂಡ ತನ್ನಷ್ಟಕ್ಕೆ ಕಿವುಡನಾಗುತ್ತಾನೆ!**

● ರಾಕೇಶ ಹೆಣಗಾರ, ಮೈಸೂರು
ಉತ್ತಮ ಜೀವನ ಸಾಗಿಸಲು ನಮಗೆ ಏನು ಗೊತ್ತಿರಬೇಕು?
**- ನನಗೆ ಎಲ್ಲವೂ ಗೊತ್ತಿಲ್ಲ ಎಂಬುದು ಮೊದಲು ಗೊತ್ತಿರಬೇಕು!**

● ಶೇಷಾದ್ರಿ, ಹುಳಿಮಾವು, ಬೆಂಗಳೂರು
ಟಿವಿಯಂತೆ ಪತ್ರಿಕೆಯನ್ನೂ ನಿಷೇಧಿಸಿದರೆ ಹೇಗಿರುತ್ತೆ?
**- ಆಗ ಮತದಾರರು ಜನಪ್ರತಿನಿಧಿಗಳನ್ನೂ ನಿಷೇಧಿಸುತ್ತಾರೆ!**

● ಸಯೀದ್ ರಾಜಾ, ಜಯಮಹಲ್ ಬಡಾವಣೆ
ಒಬ್ಬನಿಗೆ ಸಮಯ ಧಾರಾಳವಾಗಿದೆ ಎಂದು ಗೊತ್ತಾಗೋದು ಹೇಗೆ?
**-'ಬಿಗ್ ಬಾಸ್ ' ನೋಡುವವರನ್ನು ನೋಡಿಯೂ ಗೊತ್ತಾಗಲಿಲ್ಲ ಅಂದ್ರೆ, ಹೇಗೆ?**

● ರಾಜೀವ ಸತೀಶ ಜೆ., ಜಯನಗರ
ಮೊಯಿಲಿ ಅವರು ಮತ್ತೊಮ್ಮೆ ಮುಖ್ಯಮಂತ್ರಿ ಆಗಬಹುದಾ ಸಾರ್?
**- ಅವರ ಕಾದಂಬರಿಗಳಲ್ಲಿ ಮಾತ್ರ ಆಗಬಹುದು!**

# ನಾಳಿನ ಗುಟ್ಟು ಬಿಟ್ಟುಕೊಡದ ರಹಸ್ಯದಲ್ಲಿ ಬದುಕಿನ ಮಜಾ!

**ಬದುಕು ಹರಿಯುವ ನೀರಿನಂತೆ ಇರಬೇಕು. ನಿಂತ ನೀರಿನಲ್ಲಿ ಕ್ರಿಮಿಗಳು ಜನಿಸಲು ಶುರುವಾಗುತ್ತವೆ. ವಾಸನೆ ಬೀರಲು ಕೂಡ ಪ್ರಾರಂಭವಾಗುತ್ತದೆ. ಹರಿಯುವ ನೀರಿನಲ್ಲಿ ಈ ಸಮಸ್ಯೆಗಳು ಇರುವುದಿಲ್ಲ. ಬದುಕೆಂದರೆ ಸದಾ ಒಂದೇ ರೀತಿಯಲ್ಲಿ ಇರುತ್ತದೆ ಎಂದು ಹೇಳಲು ಕೂಡ ಬರುವುದಿಲ್ಲ.**

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಪೋರ್ಚುಗೀಸರು ಭಾರತೀಯರಂತೆ ಹಣೆಬರಹ (Destiny) ದ ಮೇಲೆ ಬಹಳ ನಂಬಿಕೆಯುಳ್ಳವರು. ನಮ್ಮಲ್ಲಿ ಅನೇಕ ರಾಗಗಳಿರುವಂತೆ ಪೋರ್ಚುಗೀಸರ ಒಂದು ಹಾಡಿನ ಪ್ರಕಾರಕ್ಕೆ ಫಾದೋ(fado) ಎನ್ನುವ ಹೆಸರಿದೆ. ಇದರರ್ಥ ಯಾರೊಬ್ಬರೂ ತಮ್ಮ ಹಣೆಬರದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ (one's fate or destiny cannot be escaped) ಎನ್ನುವುದೇ ಆಗಿದೆ. ಸ್ಪ್ಯಾನಿಶರು ಕೂಡ ಇದಕ್ಕೆ ಹೊರತಲ್ಲ. ಇವರಿಗೂ ನಾಳೆಯ ಬಗ್ಗೆ ಕುತೂಹಲ, ಹಿಂದಿನ ಜನ್ಮದ ಬಗ್ಗೆ ತಿಳಿದುಕೊಳ್ಳುವ ಹಂಬಲ ಇದ್ದೆ ಇದೆ. ಇದರ ಜೊತೆಗೆ ನಮ್ಮಲ್ಲಿ ನಮ್ಮ ಹಣೆ ಬರಹದಲ್ಲಿ ಏನು ಬರೆದಿದೆಯೋ ಅದು ಆಗುತ್ತೆ, ಅಥವಾ ಏನಾಗಬೇಕು ಅಂತಿದೆ ಅದು ಆಗುತ್ತೆ ಎನ್ನುವ ವಾಕ್ಯಗಳನ್ನ ಬಳಸುವುದು ಕೇಳಿದ್ದೇವೆ ಅಲ್ಲವೇ? ಸ್ಪೇನ್‌ನಲ್ಲಿ ಕೂಡ 'ಕೆ ಸೆರಾ .., ಸೇರ' ಎನ್ನುತ್ತಾರೆ ಎನ್ನುತ್ತಾರೆ. ಇದರರ್ಥ ಅದೇನು ಆಗಬೇಕು ಅಂತಿರುತ್ತೆ ಅದು ಆಗುತ್ತೆ ಎಂದಾಗುತ್ತದೆ. ಮೇಲ್ನೋಟಕ್ಕೆ ತೀರಾ ಸೋಫೆಸ್ಟಿಕೇಟೆಡ್ ಸಮಾಜ ಎನ್ನುವಂತೆ ಕಂಡರೂ ಇಂದಿಗೂ ಇಂತಹ ಹಲವು ಹತ್ತು ನಂಬಿಕೆಗಳು ಇನ್ನೂ ಜನರಲ್ಲಿ ಭದ್ರವಾಗಿವೆ. ಕೊನೆಗೂ ಮೂಲದಲ್ಲಿ ನಮ್ಮ ಭಾವನೆಯೊಂದೇ ಸಾಬೀತು ಪಡಿಸಲು ಇಂತಹ ನೂರಾರು ಘಟನೆಗಳು ಸಿಗುತ್ತವೆ.

ವಿಸ್ತೀರ್ಣದಲ್ಲಿ ಕರ್ನಾಟಕದ ಅರ್ಧ ಇರುವ ಯೂರೋಪಿನ ಅತಿ ಹಳೆಯ ದೇಶ ಎನ್ನುವ ಮಾನ್ಯತೆಗೆ ಭಾಜನವಾಗಿರುವ ಪೋರ್ಚುಗಲ್‌ನ ಜನಸಂಖ್ಯೆ ಒಂದು ಕೋಟಿ ಮೂವತ್ತು ಲಕ್ಷದಷ್ಟು. ಸ್ಪೇನ್ ದೇಶದ ಜೊತೆಗೆ ಉತ್ತರದಲ್ಲಿ 750 ಮೈಲಿಗೂ ಹೆಚ್ಚು ಉದ್ದದ ಗಡಿ ಹಂಚಿಕೊಂಡಿದೆ. ಗಡಿಭಾಗದಲ್ಲಿ ಯಾವುದೇ ತಂಟೆ ತಕರಾರು ಇಲ್ಲದೆ ಶಾಂತಿಯಿಂದ ಕೂಡಿದೆ. ಗಡಿ ಭಾಗದ ಒಂದೆರೆಡು ಹಳ್ಳಿಗಳು ನಮಗೆ ಸೇರಬೇಕು ಎನ್ನುವುದು ಪೋರ್ಚುಗೀಸ್ ವಾದ 19 ನೇ ಶತಮಾನದಿಂದ ಸ್ಪೇನ್ ಆಳ್ವಿಕೆಗೆ ಒಳಪಟ್ಟಿರುವ ಈ ಹಳ್ಳಿಗಳನ್ನು ಪಡೆಯಲೇಬೇಕು ಎಂದು ಪೋರ್ಚುಗೀಸ್ ಎಂದೂ ಯುದ್ಧಕ್ಕೆ ನಿಂತಿಲ್ಲ ಮಾತುಕತೆ ಸಾಗುತ್ತಲೇ ಇದೆ. ಲಿಸ್ಬನ್ ಪೋರ್ಚುಗೀಸ್ ದೇಶದ ರಾಜಧಾನಿ. ಹಾಗೆ ನೋಡಲು ಹೋದರೆ ಇತಿಹಾಸದಲ್ಲಿ ಲಿಸ್ಬನ್ ಅನ್ನು ಎಂದೂ ಪೋರ್ಚುಗೀಸ್‌ನ ರಾಜಧಾನಿ ಎಂದು ಉಲ್ಲೇಖಿಸಿಲ್ಲ. ಕಾರ್ಯತಃ (ಈಛಿ ಊಚ್ಚಿಠಿಟ) ಇದನ್ನು ರಾಜಧಾನಿ ಎಂದು ಎಂದು ಶತಮಾನಗಳಿಂದ ಒಪ್ಪಿಕೊಳ್ಳಲಾಗಿದೆ. ಅದಕ್ಕೆಂದು ಅದ್ದೂರಿ ಸಮಾರಂಭ ನಡೆದಿಲ್ಲ. ಪೋರ್ಚುಗೀಸ್ ಬದುಕಲು ಉತ್ತಮ ದೇಶ ಎನ್ನುವುದು ಆ ದೇಶದಲ್ಲಿ ಅನೇಕ ಗ್ರಾಹಕರನ್ನ ಹೊಂದಿದ್ದ ಮತ್ತು ಕೆಲಸದ ವಿಷಯವಾಗಿ ಹಲವು ಪೋರ್ಚುಗೀಸರೊಡನೆ ಮಾತನಾಡುವ ಅವಕಾಶ ಸಿಕ್ಕ ನನಗೆ ಗೊತ್ತಿತ್ತು. ಆದರೆ ಕುಟುಂಬ ಸಮೇತ ಹೋಗಬೇಕು ಅಲ್ಲಿಗೆ ಹೋಗಬೇಕು ಅನ್ನಿಸಿದ್ದು ಮಾತ್ರ ವಾಸ್ಕೊ ಡ ಗಾಮ ಎನ್ನುವ ನಾವಿಕನಿಂದ!

ಇಂದಿನ ಜಗತ್ತು ಒಂದು ಸಣ್ಣ ಹಳ್ಳಿಯಂತೆ ಮಾರ್ಪಾಡಾಗಲು ವಾಸ್ಕೊ ಡ ಗಾಮ (Vasco da Gama) ಮತ್ತು ಬಾರ್ತಲೋಮಿಯ ದಿಯಾಸ್ (Bartolomeu Dias) ಎನ್ನುವ ಇಬ್ಬರು ಪೋರ್ಚುಗೀಸ್ ನಾವಿಕರು ಕಾರಣ ಎನ್ನುವುದನ್ನು ಎಲ್ಲರು ಒಪ್ಪಲೇಬೇಕಾಗಿರುವ ವಿಷಯ. ವಾಸ್ಕೊ ಡ ಗಾಮ ಭಾರತವನ್ನು ಮತ್ತು ಬ್ರೆಜಿಲ್ ದೇಶವನ್ನು ಕಂಡು ಹಿಡಿದದ್ದು ನಂತರ ಜಗತ್ತಿನಲ್ಲಿ ಆದ ಬದಲಾವಣೆಗೆ ಇತಿಹಾಸ ಸಾಕ್ಷಿ.

ಹೀಗೆ ಜಗತ್ತಿನ ಅತ್ಯಂತ ಮಹತ್ವಪೂರ್ಣ ದೇಶಗಳ ಕಂಡು ಹಿಡಿದ ನಾವಿಕರ ದೇಶ ಹೇಗಿದೆ ಎನ್ನುವ ಸಹಜ ಕುತೂಹಲ ನನ್ನ ಲಿಸ್ಬನ್ ನಗರದಲ್ಲಿ ತಂದು ನಿಲ್ಲಿಸಿತ್ತು.

ಲಿಸ್ಬನ್ ನ ಹೂಂಬೆರ್ತೊ ಡೆಲ್ಗಾದೊ ಏರ್ ಪೋರ್ಟಿನಲ್ಲಿ ಇಳಿದು ನಾನು ಕಾದಿಸಿರಿದ್ದ ಹೋಟೆಲ್‌ಗೆ ಹೋಗಲು ಟ್ಯಾಕ್ಸಿ ಹಿಡಿದೆವು. ಯೂರೋಪಿನ ಯಾವುದೇ ದೇಶಕ್ಕೆ ಹೋಗಲಿ 'ನಿಮಗೆ ಸ್ಪ್ಯಾನಿಷ್ ಬರುತ್ತದೆಯೇ'? ಎಂದು ಕೇಳುವುದು ನನ್ನ ಜಾಯಮಾನ ಅವರಿಗೆ ಸ್ಪ್ಯಾನಿಷ್ ಬಂದರೆ ಅವರೊಂದಿಗೆ ಸಂವಹನ ಸುಲಭ. ಮುಕ್ಕಾಲು ಪಾಲು ಯೂರೋಪಿನ ದೇಶಗಳಿನ ಜನರಿಗೆ ಇಂಗ್ಲಿಷ್ ಎಂದರೆ ಅಲರ್ಜಿ. ಜೊತೆಗೆ ತಾತ್ಸಾರ! ನನ್ನ ಟ್ಯಾಕ್ಸಿ ಡ್ರೈವರ್ ಅನ್ನು ಹಾಗೆಯೇ ನಿನಗೆ ಸ್ಪ್ಯಾನಿಷ್ ಬರುತ್ತದೆಯೇ ಎಂದೇ.. ಆತ ಗತ್ತಿನಿಂದ 'ಸೊಯ್ ಪೋರ್ಚುಗೀಸ್.' (ನಾನು ಪೋರ್ಚುಗೀಸ್) ಎಂದ. ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಕನ್ನಡ ತೆಲುಗು ಇದ್ದಹಾಗೆ. ಮುಕ್ಕಾಲು ಪಾಲು ಪದಗಳು ಹೋಲಿಕೆ ಇದೆ. ನನ್ನ ಸ್ಪ್ಯಾನಿಷ್ ಮಿಶ್ರಿತ ಪೋರ್ಚುಗೀಸ್‌ನಲ್ಲಿ ಹೇಗೂ ಸಂಭಾಳಿಸಿದೆ. ನಾನು ನನ್ನ ದೇಶ ಎನ್ನುವ ಭಾವನೆ ಅದೆಷ್ಟು ಇವರ ರಕ್ತದಲ್ಲಿದೆ ಎನ್ನುವುದಕ್ಕೆ ಈ ವಿಷಯವನ್ನು ಉಲ್ಲೇಖಿಸಬೇಕಾಯಿತು.

ಹೀಗೆ ಪೋರ್ಚುಗಲ್‌ನಲ್ಲಿ ಪ್ರವಾಸ ಮಾಡುತ್ತಿದ್ದಾಗ ಸಿಕ್ಕವನು ಮಾತಾಯಿಸ್. ಜಗತ್ತಿನಲ್ಲಿ 750 ಕೋಟಿ ಜನರಿದ್ದೇವೆ, ಎಲ್ಲರನ್ನೂ ನಾವು ಭೇಟಿ ಮಾಡಲು, ಮಾತನಾಡಿಸಲು ಸಾಧ್ಯವಿಲ್ಲ. ಯಾವುದಾದರೊಂದು ಕಾರಣಕ್ಕೆ ನಾವು ಈ ಸಮಯದಲ್ಲಿ ಇಲ್ಲಿ ಹೀಗೆ ಮಾತನಾಡುತ್ತ ಕುಳಿತಿದ್ದೇವೆ ಎಂದ. ಮುಂದುವರಿದು ಹೀಗೆ ಆಗಬೇಕು ಎನ್ನುವುದು ವಿಧಿಲಿಖಿತ ಅದನ್ನ ತಪ್ಪಿಸುವುದು ಸಾಧ್ಯವಿಲ್ಲ, ಎಂದು ಕೆ ಸೆರಾ, ಸೇರ ಎಂದ. ಮೊದಲೇ ಹೇಳಿದಂತೆ ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಭಾಷೆಗಳಲ್ಲಿ ಬಹಳ ಸಾಮ್ಯತೆಯಿದೆ. ನಾನು ಮಾತಾಯಿಸ್ ಏನಂದೆ ಮತ್ತೆ ಹೇಳು ಎಂದಿದ್ದೆ. ಇದೇನಿದು ನಮ್ಮ ಭಾರತೀಯ ಕರ್ಮ ಸಿದ್ಧಾಂತವನ್ನ ಈತ ಹೇಳುತ್ತಿದ್ದಾನೆ ಎನ್ನುವ ಆಶ್ಚರ್ಯ ಒಂದು ಕಡೆಯಾದರೆ, ನಾನು ಕೇಳಿದ್ದು ನಿಜವೇ ಎನ್ನುವ ಸಂಶಯ ಇನ್ನೊಂದು ಕಡೆ. ಬಾರ್ಸಿಲೋನಾಗೆ ಮರಳಿ ಬಂದ ನಂತರ ಮೊದಲು ಮಾಡಿದ ಕೆಲಸ ಗೆಳೆಯ ಫ್ರಾನ್ಸಿಯ ತಾತ ನನ್ನ ಇದರ ಬಗ್ಗೆ ವಿಚಾರಿಸಿದ್ದು. ಈ ಬಾರಿ ಮೊದಲಿನಷ್ಟು ಆಶ್ಚರ್ಯವಾಗಲಿಲ್ಲ. ಏಕೆಂದರೆ ಇಲ್ಲಿಯೂ ಅಂದರೆ ಸ್ಪ್ಯಾನಿಷ್‌ನಲ್ಲಿ ಕೂಡ ಏನಾಗುತ್ತೆ ಅದು ಅದಾಗುತ್ತೆ ಎನ್ನುವ ತತ್ವವನ್ನ ಜನತೆ ಒಪ್ಪಿಕೊಂಡಿದ್ದಾರೆ. ದಶಕಗಳ ಕಾಲ ಇಲ್ಲಿದ್ದೂ ಇಲ್ಲಿನ ಈ ವಿಷಯ ತಿಳಿದುಕೊಳ್ಳಲು ಪೋರ್ಚುಗಲ್ ದೇಶಕ್ಕೆ ಹೋಗಬೇಕಾಯ್ತು. ಕೊನೆಗೂ ಏನಾಗಬೇಕು ಅದು ಆಗುತ್ತೆ ಎಂದಿರಾ? ಸತ್ಯವಾದ ಮಾತು.

ನಾವೆಷ್ಟೇ ಕತ್ತನ್ನ ಹಿಗ್ಗಿಸಿ ಮುಂದೇನಿದೆ ಎನ್ನುವುದನ್ನ ನೋಡಲು ಹೋದರು ಕೂಡ ಅದು ಏನಿದೆ ಎನ್ನುವ ಗುಟ್ಟನ್ನ ಬಿಟ್ಟು ಕೊಡುವುದಿಲ್ಲ. ಬದುಕಿನ ಮಜಾ ಇರುವುದೇ ಇಂತಹ ಸಸ್ಪೆನ್ಸ್‌ಗಳಿಂದ ಅಲ್ಲವೇ? ನಾಳೆ ಏನಾಗುತ್ತೆ ಎನ್ನುವುದು ನಮಗೆ ಮುಂಗಡ ತಿಳಿದು ಬಿಟ್ಟರೆ ಬದುಕಿನಲ್ಲಿ ಲವಲೇಶವೂ ಸ್ವಾರಸ್ಯ ಉಳಿದುಕೊಳ್ಳುವುದಿಲ್ಲ. ಹೀಗಾಗಿ ನಾವು ಏನಾಗುತ್ತೆ ಅದು ಆಗುತ್ತೆ ಎನ್ನುವ ತತ್ವಜ್ಞಾನವನ್ನ, ಕರ್ಮ ಸಿದ್ಧಾಂತವನ್ನ ನಮ್ಮದಾಗಿಸಿ ನಮ್ಮದಾಗಿಸಿ ಕೊಂಡೆವು ಎನ್ನಿಸುತ್ತದೆ.

ಬದುಕು ಹರಿಯುವ ನೀರಿನಂತೆ ಇರಬೇಕು. ನಿಂತ ನೀರಿನಲ್ಲಿ ಕ್ರಿಮಿಗಳು ಜನಿಸಲು ಶುರುವಾಗುತ್ತವೆ. ವಾಸನೆ ಬೀರಲು ಕೂಡ ಪ್ರಾರಂಭವಾಗುತ್ತದೆ. ಹರಿಯುವ ನೀರಿನಲ್ಲಿ ಈ ಸಮಸ್ಯೆಗಳು ಇರುವುದಿಲ್ಲ. ಬದುಕೆಂದರೆ ಸದಾ ಒಂದೇ ರೀತಿಯಲ್ಲಿ ಇರುತ್ತದೆ ಎಂದು ಹೇಳಲು ಕೂಡ ಬರುವುದಿಲ್ಲ. ಸಹಜವಾಗೇ ಏಳು ಬೀಳುಗಳು ಇದ್ದೇ ಇರುತ್ತವೆ. ಸೋಲು ಮತ್ತು ಗೆಲುವು ಒಂದರ ಹಿಂದೆ ಇನ್ನೊಂದು ಸಜ್ಜಾಗಿ ನಿಂತಿರುತ್ತವೆ. ಗೆದ್ದಾಗ ಬೀಗದೆ ಸೋತಾಗ ಕುಗ್ಗದೆ ನಡೆಯುವುದೇ ನಿಜವಾದ ಜೀವನ. ಆದರೇನು ಜಗತ್ತಿನ 95 ಪ್ರತಿಶತ ಜನ ಸೋತಾಗ ಕುಗ್ಗಿ ಹೋಗುತ್ತಾರೆ. ಮುಂದೇನು? ಎನ್ನುವ ಭೀತಿ ಅವರಲ್ಲಿನ ಶಕ್ತಿಯನ್ನ ಕುಗ್ಗಿಸಿಬಿಡುತ್ತದೆ. ಗೆದ್ದಾಗ ಹಿಂದೆ ಮುಂದೆ ಜೈಕಾರ ಹಾಕುತ್ತಿದ್ದ ಜನರೆಲ್ಲ ಸೋತಾಗ ಮಾಯವಾಗಿ ಬಿಡುತ್ತಾರೆ. ನಿಜಾರ್ಥದಲ್ಲಿ ಸೋಲು ನಿಜವಾಗಿಯೂ ನಮ್ಮೊಂದಿಗೆ ಯಾರು ನಿಂತಿದ್ದಾರೆ ಎನ್ನುವುದನ್ನ ತೋರಿಸುತ್ತದೆ. ಇದೊಂದರ ಜರಡಿ ಹಿಡಿದ ಹಾಗೆ ಟೊಳ್ಳು ಸಂಬಂಧಗಳು ಹಾರಿ ಹೋಗಿ ಗಟ್ಟಿಯಾದವು ಮಾತ್ರ ನಿಲ್ಲುತ್ತವೆ. ಗೆದ್ದಾಗ ಇದ್ದ ಆತ್ಮ ಬಲ ಸೋತಾಗ ಮಂಗಮಾಯವಾಗಿಬಿಡುತ್ತದೆ. ಇದಕ್ಕೆ ಬಹುತೇಕರು ಹೊರತಲ್ಲ! ಬಿದ್ದ ನಂತರ ಮತ್ತೆ ಎದ್ದು ಬದುಕು ಕಟ್ಟಿಕೊಳ್ಳುವುದು ಇದೆಯಲ್ಲ ಅದು ನಿಜಕ್ಕೂ ಕಷ್ಟದ ಕೆಲಸ. ಕೆಲವರಿಗೆ ಮೊದಲ ಯತ್ನದಲ್ಲಿ ಜಯ ಸಿಕ್ಕಿರುತ್ತದೆ ನಂತರ ಸೋಲು ಅವರನ್ನ ಕೆಳಗೆ ಬೀಳಿಸಿರುತ್ತದೆ, ಇನ್ನು ಕೆಲವರಿಗೆ ಹತ್ತಾರು ಬಾರಿ ಪ್ರಯತ್ನ ಪಟ್ಟರೂ ಜಯದ ರುಚಿ ಸಿಕ್ಕಿರುವುದಿಲ್ಲ. ಅವರೆಲ್ಲರಿಗೂ ನಮ್ಮ ಹಿರಿಯರು ಹೇಳುವ ಜಯದ ಮಂತ್ರ 'ಮರಳಿ ಯತ್ನವ ಮಾಡು ನೀ ಮನುಜ ಗುರಿ ಮುಟ್ಟುವ ತನಕ ಇರುವುದೊಂದು ಬದುಕು ಬಿಡಬೇಡ ಗೆಲ್ಲುವ ತವಕ' ಎನ್ನುವುದಾಗಿದೆ.

ಇನ್ನು ನನ್ನಿಂದ ಸಾಧ್ಯವಿಲ್ಲ ಎಂದು ನೀವು ಕೈಚಲ್ಲಿ ಕೂರುವವರೆಗೆ ಸೋಲು ಸೋಲೇ ಅಲ್ಲ! ಸಾಕು ಇನ್ನು ನನ್ನಿಂದ ಸಾಧ್ಯವಿಲ್ಲ ಎಂದು ನೀವು ನಿರ್ಧರಿಸಿದ ಮರುಕ್ಷಣದಿಂದ ಅದು ಸೋಲು. ನಮ್ಮಲ್ಲಿ ಹುರಿಯಾಳುಗಳ ಮನೋಸ್ಥೈರ್ಯ ಹೆಚ್ಚಿಸಲು ಸೋಲೇ ಗೆಲುವಿನ ಸೋಪಾನ ಎನ್ನುವ ನಾಣ್ಣುಡಿಯನ್ನ ಕೂಡ ಬಳಸುತ್ತೇವೆ. ಒಟ್ಟಿನಲ್ಲಿ ಬಿಡದೆ ಮರಳಿ ಪ್ರಯತ್ನವ ಮಾಡಿದರೆ ಗೆಲುವು ಶತಸಿದ್ಧ ಎನ್ನುವುದು ನಮ್ಮಲ್ಲಿರುವ ನಂಬಿಕೆ.

ಸ್ಪಾನಿಷ್ ಜನರಲ್ಲಿ ಕೂಡ ಇದೆ ನಂಬಿಕೆ ಬೇರೂರಿದೆ. ಅವರು ಹೇಳುತ್ತಾರೆ. El que la sigue la consigue. (ಎಲ್ ಕೆ ಲ ಸೀಗೆ ಲ ಕೋನ್ಸಿಗೆ). ಅಂದರೆ ಯಾರು ಬಿಡದೆ ಹಿಂಬಾಲಿಸುತ್ತಾರೆ ಅವರಿಗೆ ಅವರು ಬಯಸಿದ್ದು ಸಿಗುತ್ತದೆ ಎಂದರ್ಥ. ಅದೆಷ್ಟು ನಿಜ ನೋಡಿ ಬಿಡದೆ ಯಾವುದರ ಹಿಂದೆ ತಪಸ್ಸಿನಂತೆ ಏಕ ಚಿತ್ತದಿಂದ ಬೀಳುತ್ತೇವೆ ಅದು ನಮಗೆ ದಕ್ಕಿಯೇ ತಿರುತ್ತದೆ. ಬದುಕಿನಲ್ಲಿ ಮೊದಲ ಹೆಜ್ಜೆ ಏನು ಬೇಕು ಎನ್ನುವುದರ ನಿಖರ ಅರಿವು, ಎರಡನೆಯದು ಬಿಡದೆ ಅದರ ಕಾರ್ಯಸಾಧನೆಯೆಡೆಗೆ ನೆಡೆಯುವುದು. ಇಷ್ಟಾದರೆ ಸಾಕು ಜಯವು ನಮ್ಮದೆ. ಇಂದಿಗೂ ಸ್ಪಾನಿಷ್ ಜನರ ಆಡು ಮಾತಿನಲ್ಲಿ ಜೀವಂತವಾಗಿದೆ. ಎಲ್ ಕೆ ಲ ಸೀಗೆ ಲ ಕೋನ್ಸಿಗೆ ಜೊತೆಗೆ ಕೆ ಸೆರಾ ಸೇರ ಕೂಡ ಸೇರಿಕೊಂಡು ಬಿಟ್ಟರೆ ಅವನನ್ನ ಅದ್ಯಾವ ಶಕ್ತಿ ಸೋಲಿಸಲು ಸಾಧ್ಯ. ಎಲ್ಲವನ್ನೂ ಮೀರಿದ ಮನಸ್ಥಿತಿ, ಕರ್ಮ ಸಿದ್ಧಾಂತಗಳು ಕಾರ್ಯಸಾಧನೆಯ ಹಾದಿಯಲ್ಲಿ ಬಲಿಷ್ಠ ಸಂಗಾತಿಗಳು. ಇಂದು ಎಲ್ಲೆಡೆ ಇದರ ಕೊರತೆಯಿದೆ. ಅಂದಿನ ದಿನದ ಜನರ ಮನಸ್ಥಿತಿ ಹೇಗೆ ಒಂದೇ ಆಗಿತ್ತೂ ಇಂದು ಕೂಡ ಜನರ ಮನಸ್ಥಿತಿ ಒಂದೇ. ಸಂಶಯ, ವಿವೇಚನೆಯ ಕೊರತೆ, ಭಯ, ಅಜ್ಞಾನ ತುಂಬಿದೆ. ಇವೆಲ್ಲವುಗಳ ನಡುವೆ ಇಂದಿಗೂ ಜೀವಂತವಿರುವ ಧ್ವನಿಯನ್ನ ನಾವು ಗುರುತಿಸಬೇಕಾಗಿದೆ.

## ಪ್ರಸ್ತುತ

ಶ್ರೀಧರ್ ಡಿ.ರಾಮಚಂದ್ರಪ್ಪ

# ಮತ್ತೆ ಬಿಕ್ಕಟ್ಟಿನತ್ತ ಕನ್ನಡ ಚಿತ್ರರಂಗ?

ಸದ್ಯ ನಟ ದರ್ಶನ್ ದುರ್ಘಟನೆ ಒಂದರಲ್ಲಿ ಭಾಗಿಯಾಗಿ ಜೈಲು ಸೇರಿದ ನಂತರ ಕನ್ನಡ ಚಿತ್ರರಂಗಕ್ಕೆ ಕಾರ್ಮೋಡ ಕವಿದು, ಬಿಕ್ಕಟ್ಟು ಎದುರಿಸುತ್ತಿದೆ.ಕರುನಾಡಿನ ಜನ ಹೇಗೆ ಶಾಂತಿ-ಸೌಹಾರ್ದತೆಗೆ ಹೆಸರುವಾಸಿಯೋ, ಹಾಗೆಯೇ ಚಂದನವನದ ಕಲಾವಿದರಾದ ನಟ-ನಟಿಯರು ಕೂಡ ಸಭ್ಯತೆ-ಸಂಸ್ಕಾರಕ್ಕೆ ಸಾಕ್ಷಿಯಾದವರು. ಈಗೀರುವಾಗ ಕನ್ನಡ ಚಿತ್ರರಂಗಕ್ಕೆ ಶತಮಾನದ ಇತಿಹಾಸ, ಹಿನ್ನೆಲೆಯಿದೆ. ಹಾಗಾಗಿ, ಇಂತಹ ಭವ್ಯ ಪರಂಪರೆ ಇರುವ ಸ್ಯಾಂಡಲ್ ವುಡ್‌ಗೆ ಅನೇಕ ಮಹನೀಯ ಕಲಾವಿದರು ಲಿಂಗ ಭೇದವಿಲ್ಲದೆ ತಮ್ಮ ಸರಳತೆ-ಸಜ್ಜನಿಕೆಯ ಜತೆ ಪ್ರತಿಭೆ ಮುಖೇನ ನಾಡಿನ ಗಡಿಯನ್ನು ದಾಟಿ ತಮ್ಮನ್ನು ಗುರುತಿಸುವಂತಹ ವ್ಯಕ್ತಿತ್ವ, ಸಾಧನೆಯ ಛಾಪನ್ನು ಮೂಡಿಸಿದ್ದರು. ಅದರಲ್ಲೂ ನಮ್ಮ ಪ್ರಾತಃ ಸ್ಮರಣೀಯ ಕಲಾವಿದರಾದ, ಎಪ್ಪತ್ತರ ದಶಕದಲ್ಲಿ ಕನ್ನಡ ಚಿತ್ರರಂಗವನ್ನು ಮೇಲ್ಮಟ್ಟಕ್ಕೆ ಕೊಂಡೊಯ್ದ ನಟರಾದ ಉದಯ್ ಕುಮಾರ್, ಕಲ್ಯಾಣ ಕುಮಾರ್ ಹಾಗೂ ಡಾ.ರಾಜ್ ಕುಮಾರ್ ಮತ್ತು ನಟಿಯರಾದ ಕಲ್ಪನಾ, ಮಂಜುಳಾ, ಜಯಂತಿ, ಭಾರತಿಯಂತವರು ತಮ್ಮ ಪ್ರತಿಭೆಯ ಮೂಲಕ ನಾಡಿನ ಮನೆ, ಮನೆಗಳಿಗೆ ತಲುಪಿದರು. ಇಂತಹ ಸಂದರ್ಭದಲ್ಲಿ ಕುಮಾರರತ್ನರಿಗಿಂತ ಕಿರಿಯರಾದ ವಿಷ್ಣುವರ್ಧನ್, ಶಂಕರ್ ನಾಗ್, ಅನಂತನಾಗ್ ಕೂಡಾ ತಮ್ಮ ಜನಪ್ರಿಯ ಸಿನಿಮಾಗಳ ಮೂಲಕ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಇಮೇಜ್ ಅನು ಗಳಿಸಿಕೊಂಡವರು, ಉಳಿಸಿಕೊಂಡವರು.

ಹೀಗಾಗಿ, ಆಧುನಿಕತೆ, ತಂತ್ರಜ್ಞಾನ ಹೆಚ್ಚು ಮುಂದುವರೆದ ಕಾಲಘಟ್ಟದಲ್ಲಿ ಇಂದು ನಾವಿದ್ದೇವೆ. ಪ್ರಸ್ತುತ ಭಾರತೀಯ ಚಿತ್ರರಂಗದಲ್ಲಿ ತೆಲುಗು, ತಮಿಳು, ಮಲಯಾಳಂ ಜತೆಗೆ ಹಿಂದಿಯ ಬಾಲಿವುಡ್ ರಂಗಗಳು ತಮ್ಮ ವಿಭಿನ್ನ ಪ್ರಯೋಗ, ಸಿನಿಮಾ ತಯಾರಿಕೆ ಮೂಲಕ ವಿಶೇಷ ಸ್ಥಾನಮಾನಗಳಿಂದ ಗುರುತಿಸಿಕೊಂಡಿವೆ. ಆದ ಕಾರಣ ಹಿಂದಿನ ಕಾಲಕ್ಕೆ ಹೋಲಿಸಿದರೆ ಈಗ ಸದ್ಯ ಮೇಕಿಂಗ್ ಸೇರಿದಂತೆ ಸಿನಿಮಾ ಕಲಾವಿದರ ಸಂಭಾವನೆ, ಗೌರವ-ಮರ್ಯಾದೆ, ಅಭಿಮಾನಿಗಳ ಗಳಿಕೆಯಲ್ಲಿ ಗಮನಾರ್ಹ ಅಂಶಗಳನ್ನು ಗಮನಿಸಬಹುದು. ಕನ್ನಡದ ಮೇರು ನಟ ಡಾ. ರಾಜ್ ಕುಮಾರ್ ಅವರು ಆಗಾಗ್ಗೆ ನೆನಪು ಮಾಡಿಕೊಳ್ಳುವಂತೆ ಸಿನಿಮಾ ನಿರ್ಮಾಪಕರನ್ನು ಅನ್ನ ಹಾಕುವ ಧಣಿಗಳು ಎಂದು ಕರೆದರೆ, ವೀಕ್ಷಿಸುವ ಅಭಿಮಾನಿಗಳನ್ನು ದೇವರೆಂದೇ ಭಾವಿಸಿದ್ದರು. ಇವು ಅವರಲ್ಲಿ ಜೀವಪರ ಕಾಳಜಿ, ಮಾನವೀಯ ಗುಣಗಳು ಇವೆ ಎಂಬುದಕ್ಕೆ ಉದಾಹರಣೆ ಆಗಿದ್ದವು. ಹಾಗೆಯೇ, ಇದು ಸಾಹಸ ಸಿಂಹ ಬಿರುದಾಂಕಿತ ವಿಷ್ಣುವರ್ಧನ್, ಕರಾಟೆ ಕಿಂಗ್ ಶಂಕರ್ ನಾಗ್, ಅನಂತನಾಗ್ ಅವರಿಗೂ ಅನ್ವಯಿಸುತ್ತದೆ. ಇಂತಹ ಸನ್ನಿವೇಶದಲ್ಲಿ ಇಂದಿನ ಸ್ಯಾಂಡಲ್‌ವುಡ್‌ನ ಕಲಾವಿದರಾದ ನಟ-ನಟಿಯರನ್ನು ನೆನೆಸಿಕೊಂಡಾಗ ನಮಗೆ ಬೇಸರ-ಜಿಗುಪ್ಸೆ ಉಂಟಾಗುತ್ತದೆ. ಹಣ, ಖ್ಯಾತಿ, ಅಂಧಾಭಿಮಾನಿಗಳ ಗಳಿಕೆಯಿಂದ ದರ್ಪ, ಅಹಂಕಾರ, ದುರ್ವರ್ತನೆ ಮೇರೆ ಮೀರಿದ್ದು ಮಾನವೀಯತೆ, ಸಾಮಾಜಿಕ ಕಾಳಜಿ-ಕಳಕಳಿ, ಪ್ರಜ್ಞಾವಂತಿಕೆ ಎಂಬ ಗುಣಗಳು ತೆರೆ ಮರೆಗೆ ಸರಿದಿವೆ. ಮದ್ಯ, ದುಶ್ಚಟ, ಪಾರ್ಟಿ, ಮೋಜು-ಮಸ್ತಿ ಎಂದು ದಿನಬೆಳಗಾದರೆ ಸುದ್ದಿಯಾಗುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ. ಸಿನಿಮಾ, ನಿರ್ದೇಶಕ, ನಿರ್ಮಾಪಕ, ಅಭಿಮಾನಿಗಳೆಂದರೆ ವಿಶೇಷ ಗೌರವ-ಮರ್ಯಾದೆ-ಪ್ರೀತಿ ಇಟ್ಟುಕೊಂಡಿದ್ದ ಹಿಂದಿನ ನಟ-ನಟಿಯರ ಮುಂದೆ ಇಂದಿನ ಸಿನಿಮಾ ಕಲಾವಿದರು ಕುಬ್ಜರಾಗುತ್ತಾರೆ. ಸಿನಿಮಾ, ನಟನೆ ಎಂದರೆ ದೈವವೆಂದು ಭಕ್ತಿ ತೋರಿಸುತ್ತಿದ್ದ ಹಿಂದಿನವರೆಲ್ಲಿ, ಸಿನಿಮಾವೆಂದರೆ ಕೇವಲ ಹಣ-ಹೆಸರು ಮಾಡುವ ಕ್ಷೇತ್ರವೆಂದು ನಂಬಿರುವ ಇಂದಿನವರೆಲ್ಲಿ? ನಯ, ವಿನಯ, ಸಭ್ಯತೆ, ಸಂಸ್ಕಾರ ಗುಣಗಳನ್ನು ತಮ್ಮ ನಡವಳಿಕೆಯಲ್ಲಿ ವ್ಯಕ್ತಪಡಿಸುತ್ತಿದ್ದ, ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡಿದ್ದ ಹಿಂದಿನ ಡಾ.ರಾಜ್, ವಿಷ್ಣುವರ್ಧನ್, ಶಂಕರ್ ನಾಗ್, ಅನಂತನಾಗ್ ಅಂತಹ ಮೇರು ನಟರಿಂದ ಈ ಕಾಲಮಾನದ ನಟರು ಕಲಿಯುವುದು ಸಾಕಷ್ಟಿದೆ.

ನನ್ನದೇ ಹವಾ, ನಾನೇ ಚಿತ್ರರಂಗ ಆಳೋದು, ನನಗೇ ಜಾಸ್ತಿ ಅಭಿಮಾನಿಗಳು ಇರುವುದು ಸೇರಿದಂತೆ ಹಣ, ಕಾರು, ಆಸ್ತಿ ನನ್ನದೇ ಹೆಚ್ಚು ಇರುವುದು. ಅದಕ್ಕಾಗಿ ನಾನೇ ಕನ್ನಡ ಚಿತ್ರರಂಗದ ನಂಬರ್ ಒನ್ ನಟಿ ಎಂದು ಠೇಂಕಾರದಿಂದ ಹೇಳಿಕೊಳ್ಳುವ ಇಂದಿನ ನಟರಲ್ಲಿ ಪ್ರಜ್ಞಾವಂತಿಕೆ, ವಿವೇಕ, ಜಾಣ್ಮೆ ಮರೆಯಾಗಿರುವುದು ಮೇಲುನೋಟಕ್ಕೆ ಎದ್ದು ಕಾಣುತ್ತದೆ. ಅಲ್ಲದೇ, ಇದು ಇಂದಿನ ಸಿನಿಮಾ ಕಲಾವಿದರಿಗೆ ಏನೋ ಕೊರತೆ ಇದೆ ಎಂಬುದನ್ನು ತೋರಿಸುತ್ತದೆ. ಸಿನಿಮಾ ತೆರೆಯ ಮೇಲೆ ಹೇಗೆ ಕಾಣುತ್ತಿದ್ದರೋ, ಅದರಂತೆ ಬದುಕಿ-ಬಾಳಿ ಹೋದವರು ಡಾ.ರಾಜ್, ವಿಷ್ಣು, ಶಂಕರ್ ನಾಗ್ ಅವರುಗಳು. ಅವರಲ್ಲಿದ್ದ ಜನಪರ, ಜೀವ ಪರ ಕಾಳಜಿ ಹೀಗಿನವರಿಗೆ ಏಕಿಲ್ಲ? ಎಂಬ ಪ್ರಶ್ನೆ ಸಹಜವಾಗಿಯೇ ನಮ್ಮನ್ನು ಕಾಡುತ್ತಿದೆ. ತೆರೆಯ ಮೇಲೆ ಹೀರೋ ಆಗಿ, ನಿಜ ಜೀವನದಲ್ಲಿ ವಿಲನ್ ಎನಿಸಿಕೊಂಡಿರುವ ಇಂದಿನ ನಟರು ಈ ನಿಟ್ಟಿನಲ್ಲಿ ತಮ್ಮನ್ನೇ ಆತ್ಮ ವಿಮರ್ಶೆಗೆ ಒಡ್ಡಿಕೊಳ್ಳುವ ಅಗತ್ಯವಿದೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ನಮಗೆ ರಾಜ್, ವಿಷ್ಣು, ಬಹುವಾಗಿ ನೆನಪಾಗುತ್ತಾರೆ.

# ಭಾರತದ ರಾಜತಾಂತ್ರಿಕತೆಗೆ ವಿಶ್ವದಲ್ಲಿ ಶಹಬಾಸ್!

ಅಭಿಮತ
ಡಾ. ಜಗದೀಶ ಮಾನೆ
vveditoped@gmail.com

ಅಮೆರಿಕದಲ್ಲೀಗ ವಿಶ್ವಸಂಸ್ಥೆ 77ನೇ ಮಹಾ ಅಧಿವೇಶನ ನಡೆಯುತ್ತಿದೆ. ಹಾಗಾಗಿ ಭಾರತದ ವಿದೇಶಾಂಗ ಸಚಿವರು ಅಮೆರಿಕ ಪ್ರವಾಸದಲ್ಲಿದ್ದಾರೆ. ಆ ಅಧಿವೇಶನದಲ್ಲಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳೆಲ್ಲವೂ ಭಾಗಿಯಾಗಿವೆ. ಪ್ರಮುಖವಾಗಿ ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರು ಆ ಅಧಿವೇಶನದಲ್ಲಿ ಮಾಡಿರುವ ಭಾಷಣವು ಎಲ್ಲರನ್ನೂ ನಿಬ್ಬೆರಗಾಗಿಸುವಂತೆ ಮಾಡಿದೆ. ಅದಕ್ಕೆ ಅಂತಾರಾಷ್ಟ್ರೀಯ ವಿಶ್ಲೇಷಕರು ಬಹಳಷ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಭಾರತದ ನಿರ್ಧಾರಗಳು ಬಹಳಷ್ಟು ಗಟ್ಟಿಯಾಗಿದೆ ಮತ್ತು ಮುಂಬರುವ ದಿನಗಳಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆಯಲಿದೆ ಎನ್ನುವ ಬಗ್ಗೆ ಸುದೀರ್ಘ ಚರ್ಚೆಗಳು ನಡೆದಿವೆ. ಆ ಮೂಲಕ ಭಾರತದ ವಿದೇಶಾಂಗ ನೀತಿಯಲ್ಲಿ ಹೊಸ ಬೆಳಕು ಮೂಡುತ್ತಿದೆ. ಹೀಗಿರುವಾಗ ಜೈಶಂಕರ್ ಅವರು ಮಾತನಾಡಿದ್ದಾದರೂ ಏನು? ಎಂಬ ಕುತೂಹಲ ಎಲ್ಲರಲ್ಲೂ ಇದೆ.

ಸುಮಾರು ಹತ್ತಾರು ವರ್ಷಗಳ ಹಿಂದೆ ಭಾರತ ವಿದೇಶಿ ನೆಲದಲ್ಲಿ ನಿಂತು ಪಾಕಿಸ್ತಾನವನ್ನು ಟೀಕೆ ಮಾಡುತ್ತಿತ್ತು. ಕಾರಣ, ಪಾಕಿಸ್ತಾನದ ಉಗ್ರವಾದದ ಪೋಷಣೆ ಹಾಗೂ ಕ್ರಾಸ್ ಬಾರ್ಡರ್ ಭಯೋತ್ಪಾದನೆಯನ್ನು ಮಾಡುತ್ತಿತ್ತು. ಭಾರತದಲ್ಲಿ ಅಶಾಂತಿ ಮೂಡಿಸಲು ಪಾಕಿಸ್ತಾನ ಅನೇಕ ಹಿಂಸಾತ್ಮಕ ದುಷ್ಕೃತ್ಯಗಳನ್ನು ಮಾಡುತ್ತಲೇ ಇದೆ ಅಂತ ಭಾರತ ಪದೇ ಪದೇ ಹೇಳುತ್ತಲೇ ಇತ್ತು. ಅತ್ತ ಪಾಕಿಸ್ತಾನವು ಕೂಡಾ ಇದೇ ರಾಗ ಎಳೆಯುತ್ತಾ 'ಭಾರತದಲ್ಲಿ ಮೈನಾರಿಟಿಗೆ ತೊಂದರೆಯಾಗುತ್ತಿದೆ, ಅಲ್ಲಿನ ಮುಸ್ಲಿಮರಿಗೆ ಶಾಂತಿಯೇ ಇಲ್ಲ, ಮತ್ತು ಕಾಶ್ಮೀರದ ವಿಚಾರದಲ್ಲಿ ಭಾರತ ಏಕಪಕ್ಷಿಯ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ' ಅನ್ನುವ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಲೇ ಇತ್ತು. ಹೀಗೆ ಎರಡೂ ರಾಷ್ಟ್ರಗಳು ಪರಸ್ಪರ ಆರೋಪ ಪ್ರತ್ಯಾರೋಪಗಳಲ್ಲಿ ಮುಳುಗಿದ್ದವು. ಆದರೆ ಇದೀಗ ಭಾರತ ಬದಲಾದರೂ ಪಾಕಿಸ್ತಾನ ಮಾತ್ರ ನಾಯಿ ಬಾಲದಂತೆ ಇನ್ನೂ ತನ್ನ ಹಳೆಯ ವರಸೆಯನ್ನೆ ಮುಂದುವರೆಸಿರುವುದು ವಾಸ್ತವ. ಇದೀಗ ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಪಾಕ್ ಅಧ್ಯಕ್ಷ ಶಹಬಾದ್ ಶರೀಫ್ ಭಾರತವನ್ನು ನಿಂದಿಸಿದ್ದಾರೆ. 'ಭಾರತದ ಹಿಂದುತ್ವ, ಕಾಶ್ಮೀರ ಹಾಗೂ ಆರ್‌ಎಸ್‌ಎಸ್' ಹೀಗೆ ಅವರ ಇಡೀ ಭಾಷಣದ ಸಾರವೇ ಭಾರತದ ಕೇಂದ್ರಿತ ಆಗಿತ್ತು. ಬಳಿಕ ಅನೇಕರು ಜೈಶಂಕರ್ ಕೂಡಾ ಇದಕ್ಕೆ ಕೌಂಟರ್ ಕೊಡಬಹುದೇನೊ ಅಂತಲೇ ಭಾವಿಸಿದ್ದರು! ಆದರೆ ಜೈಶಂಕರ್ ಎಲ್ಲಿಯೂ ಕೂಡಾ ಪಾಕಿಸ್ತಾನದ ಹೆಸರನ್ನು ಬಳಸಲಿಲ್ಲ. ಅವರ ಈ ಮಾತಿನ ಹಿಂದೆ ಭಾರತದ ದೊಡ್ಡ ರಾಜತಾಂತ್ರಿಕತೆ ಇರುವುದು ಅರ್ಥವಾಗುತ್ತದೆ. ಭಾರತ ಎಲ್ಲಿಯವರೆಗೆ ಪಾಕಿಸ್ತಾನದೊಂದಿಗೆ ಹೋಲಿಕೆ ಮಾಡಿಕೊಳ್ಳುತ್ತಿರುತ್ತದೆಯೊ ಅಲ್ಲಿಯವರೆಗೆ ಇಡೀ ವಿಶ್ವಕೂಡಾ ಭಾರತವನ್ನು ಅದೇ ದೃಷ್ಟಿಯಲ್ಲಿ ನೋಡುತ್ತಿರುತ್ತದೆ. ಈ ಅಂಶವನ್ನು ಭಾರತ ಚೆನ್ನಾಗಿ ಅರಿತಂತಿದೆ.

ಪಾಕಿಸ್ತಾನವಿಂದು ಅತ್ಯಂತ ಕಡುಬಡ ರಾಷ್ಟ್ರ. ಅಲ್ಲಿ ತಿನ್ನೋದಕ್ಕೆ ಅನ್ನ ಇಲ್ಲ. ಧರ್ಮದ ಅಫೀಮನ್ನೇ ಮೈಗೂಡಿಸಿಕೊಂಡು ಕೇವಲ ಭಯೋತ್ಪಾದನೆಯಲ್ಲೇ ಮುಳುಗಿದ ಅವರಿಗೆ ನೂರೆಂಟು ಸಮಸ್ಯೆಗಳು ಕಾಡುತ್ತಿವೆ. ಹೀಗಿರುವಾಗ ಭಾರತಕ್ಕೆ ಪಾಕಿಸ್ತಾನದ ಗೋಜಿಗೆ ಹೋಗುವ ಅವಶ್ಯಕತೆಯಾದರೂ ಏನಿದೆ? ಬದಲಿಗೆ ಭಾರತ ತನ್ನ ವಿದೇಶಾಂಗ ನೀತಿ ನಿಲುವುಗಳನ್ನು ಬದಲಿಸಿಕೊಂಡಿದೆ. ಹಿಗಾಗಿ ಭಾರತಕ್ಕೆ ಪಾಕಿಸ್ತಾನದೊಂದಿಗೆ ಕಂಪೇರ್ ಮಾಡಿಕೊಳ್ಳುವ ಅವಶ್ಯಕತೆಯೇ ಇಲ್ಲ. ಭಾರತಕ್ಕೆ ಪಾಕ್ ಅಂತಹ ದೊಡ್ಡ ತ್ರೆಡ್ ಏನೂ ಅಲ್ಲ. ಭಾರತ ಮನಸ್ಸು ಮಾಡಿದರೆ ಯಾವುದೇ ಕ್ಷಣದಲ್ಲೂ ಪಾಕಿಸ್ತಾನವನ್ನು ಹೊಸಕಿ ಹಾಕಿಬಿಡುಬಹುದು. ಅಂತ ಶಕ್ತಿ ಭಾರತಕ್ಕಿದೆ. ಹೀಗಾಗಿ ಪಾಕಿಸ್ತಾನದ ಬಗ್ಗೆ ಮಾತನಾಡುವುದೇ ವ್ಯರ್ಥ! ಹೀಗೆ ಮಾತನಾ ಡುವುದರಿಂದ ರಾಜತಾಂತ್ರಿಕವಾಗಿ ಭಾರತಕ್ಕೆ ಯಾವುದೇ ಲಾಭ ಆಗುವುದಿಲ್ಲ, ಇದನ್ನು ಭಾರತ ಸ್ಪಷ್ಟವಾಗಿ ಅರಿತಿದೆ. ಆ ಮೂಲಕ ವಿಶ್ವದ ಯಾವುದೇ ವೇದಿಕೆಯ ಮೇಲೂ ಭಾರತ ಪಾಕಿಸ್ತಾನದ ಬಗ್ಗೆ ಚರ್ಚೆಯನ್ನ ಮಾಡುವುದಿಲ್ಲ. ಬದಲಿಗೆ ಭಾರತ ತನ್ನ ಸಮನಾದ ಚೀನಾಗೆ ಕೌಂಟರ್ ಕೊಡುತ್ತಿದೆ. ಚೀನಾದೊಂದಿಗೆ ಕಾಂಪೀಟ್ ಮಾಡುತ್ತಿದೆ. ಕಾರಣ ಚೀನಾ ಇಂದು ಜಾಗತಿಕವಾಗಿ ಬೆಳೆದು ನಿಂತಿದೆ, ಚೀನಾದಿಂದ ಭಾರತಕ್ಕೆ ಆಗುತ್ತಿರುವ ಸಮಸ್ಯೆಯ ಕಡೆ ತನ್ನ ಗಮನವನ್ನು ಹರಿಸುತ್ತಿದೆ ಭಾರತ.

ಜೈಶಂಕರ್ ಅವರು ವಿಶ್ವಸಂಸ್ಥೆಯ ಮಹಾ ಅಧಿವೇಶನದ ತಮ್ಮ ಭಾಷಣದಲ್ಲಿ ಬಹಳ ಸೂಕ್ಷ್ಮವಾಗಿ ಚೀನಾಗೆ ಕೌಂಟರ್ ಕೊಟ್ಟಿದ್ದರು. ಇಂದು ಕೆಲ ರಾಷ್ಟ್ರಗಳು ಭಯೋತ್ಪಾದನೆಯನ್ನು ಪೋಷಿಸುವಂತಹ ರಾಷ್ಟ್ರಗಳಿಗೆ ಬೆಂಬಲ ಕೊಡುತ್ತಿವೆ. ಇದರ ಪರಿಣಾಮವನ್ನು ಮುಂದೆ ಅವರೆ ಎದುರಿಸಬೇಕಾಗುತ್ತದೆ. ಇದಕ್ಕೆ ಇತಿಹಾಸ ಕೂಡಾ ನಮ್ಮ ಕಣ್ಮುಂದೆ ಇದೆ. ಅಫ್ಘಾನಿಸ್ತಾನದಲ್ಲಿದ್ದ ಯುಎಸ್‌ಎಸ್‌ಆರ್ ಹಿಡಿತವನ್ನು ತಪ್ಪಿಸುವ ದೃಷ್ಟಿಯಿಂದ ತಾಲಿಬಾನನ್ನು ಅಮೆರಿಕ ಬೆಳೆಸಿತ್ತು. ಆದರೆ ಒಂದೊಮ್ಮೆ ಅದೇ ತಾಲಿಬಾನ್ ಮುಖ್ಯಸ್ಥ ಅಮೆರಿಕದ ಮೇಲೆ ತಿರುಗಿ ಬಿದ್ದ. ಇದರಿಂದ ಹೈರಾಣಾದ ಅಮೆರಿಕ ಸುಮಾರು 20 ವರ್ಷಗಳ ಕಾಲ ಅಫ್ಘಾನಿಸ್ತಾನದಲ್ಲಿ ತಳ ಊರುವ ಸ್ಥಿತಿ ಎದುರಾಗಿತ್ತು. ಇಂದಿಗೂ ಉಗ್ರರಿಂದ ವಿಶ್ವವು ಬಹಳಷ್ಟು ಸಂಕಷ್ಟ ಎದುರಿಸುತ್ತಿದೆ. ಹೀಗೆ ಜೈಶಂಕರ್ ಸೂಕ್ಷ್ಮವಾಗಿ ಚೀನಾಗೆ ಚಾಟಿ ಬೀಸಿದ್ದರು.

ಜೊತೆಗೆ ಜೈಶಂಕರ್ ಇಂಗ್ಲೆಂಡಿಗೂ ಕೂಡಾ ಮುಟ್ಟಿ ಮುಟ್ಟಿ ನೋಡಿಕೊಳ್ಳುವ ಕೌಂಟರ್ ಕೊಟ್ಟಿದ್ದರು. ಭಾರತ 18ನೇ ಶತಮಾನದಲ್ಲಿ ವಿಶ್ವದ ಅತಿ ದೊಡ್ಡ ಜಿಡಿಪಿಯನ್ನು ಹೊಂದಿತ್ತು. ಆ ಸಂದರ್ಭದಲ್ಲಿ ಭಾರತದ ಆರ್ಥಿಕತೆಗೆ ಯಾವುದೇ ರಾಷ್ಟ್ರವನ್ನು ಹೋಲಿಕೆ ಮಾಡಲು ಸಾಧ್ಯ ಆಗುತ್ತಿರಲಿಲ್ಲ. ಅಷ್ಟೊಂದು ದೊಡ್ಡ ಶಕ್ತಿಯಾಗಿ ಬೆಳೆದಿತ್ತು ಭಾರತ. ಆದರೆ ಬ್ರಿಟಿಷರು ಭಾರತದಲ್ಲಿ 200 ವರ್ಷಗಳ ಕಾಲ ಆಳ್ವಿಕೆ ಮಾಡಿ 1947ರಲ್ಲಿ ಬಿಟ್ಟು ಹೊಗುವ ಸಂದರ್ಭದಲ್ಲಿ ಭಾರತ ವಿಶ್ವದ ಅತಿ ದೊಡ್ಡ ಬಡದೇಶವಾಗಿ ನಿರ್ಮಾಣವಾಗಿತ್ತು. ಆದರೆ ಭಾರತ ಇದನ್ನು ದೂಷಿಸದೆ ಸ್ವತಂತ್ರ ಬಂದ 75 ವರ್ಷಗಳ ಬಳಿಕ ಇಂದು ಇಂಗ್ಲೆಂಡನ್ನೇ ಬೀಟ್ ಮಾಡಿ ವಿಶ್ವದ ಐದನೇ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಭಾರತ ಇಂತಹ ಚಾಲೆಂಜುಗಳನ್ನು ಎದುರಿಸಿ ಜಯಿಸಿದೆ ಅಂತ ಗಟ್ಟಿ ದನಿಯಲ್ಲಿ ಜೈಶಂಕರ್ ಗುಡುಗಿದ್ದರು. ಭಾರತ ಸ್ವತಂತ್ರಗೊಂಡು 1947ಕ್ಕೆ 100 ವರ್ಷ ಆಗುತ್ತದೆ, ಆ ಹೊತ್ತಿಗೆ ಭಾರತ ಮತ್ತಷ್ಟು ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆಯುವ ಗುರಿಯನ್ನು ಮೋದಿ ಹೊಂದಿದ್ದಾರೆ. ನಾವಿಂದು ಡಿಜಿಟಲೈಜೆಷನ್‌ಗೆ ಹೆಚ್ಚಿನ ಒತ್ತು ನೀಡುತ್ತಿದ್ದೇವೆ ಜತೆಗೆ ಬಹಳ ಮುಖ್ಯವಾಗಿ ಬಡತನದ ನಿರ್ಮೂಲನೆಗೆ ಭಾರತ ಸರಕಾರ ನಿರಂತರವಾಗಿ ಶ್ರಮಿಸುತ್ತಲೇ ಇದೆ ಎಂದು ಹೇಳಿದ್ದರು.

ಮತ್ತೊಂದೆಡೆ ಭಾರತ ತನ್ನ ಅಭಿವೃದ್ಧಿಯೊಂದಿಗೆ ಅಕ್ಕಪಕ್ಕದ ಸಣ್ಣಪುಟ್ಟ ರಾಷ್ಟ್ರಗಳಿಗೂ ಹೆಚ್ಚಿನ ಸಹಾಯವನ್ನು ಮಾಡುತ್ತಲಿದೆ. ಕೋವಿಡ್ ಸಂದರ್ಭದಲ್ಲಿ ವ್ಯಾಕ್ಸಿನ್ ಕಂಡು ಹಿಡಿದ ನಂತರ ಅದನ್ನು ಕೇವಲ ಭಾರತದಲ್ಲಿ ಮಾತ್ರ ಉಪಯೋಗಿಸದೆ ಅನೇಕ ರಾಷ್ಟ್ರಗಳಿಗೂ ಉಚಿತವಾಗಿ ಹಂಚಿತ್ತು ಭಾರತ. ಅಫ್ಘಾನಿಸ್ತಾನದಲ್ಲಿ ಆಹಾರ ಸಮಸ್ಯೆ ಅದಾಗಲೂ 50,000 ಟನ್ ಗೋಧಿಯನ್ನು ಅಫ್ಘಾನಿಗಳಿಗೆ ನೀಡಿತ್ತು ಭಾರತ. ಶ್ರೀಲಂಕಾ ಆರ್ಥಿಕ ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ 3.8 ಬಿಲಿಯನ್ ಡಾಲರ್ ಹಣವನ್ನು ಶ್ರೀಲಂಕಾಗೆ ನೆರವಿನ ರೂಪದಲ್ಲಿ ಭಾರತ ನೀಡಿತ್ತು. ಮಯನ್ಮಾರ್ ದೇಶಕ್ಕೂ ಹತ್ತು ಸಾವಿರ ಟನ್ ಆಹಾರವನ್ನು ಒದಗಿಸಿತ್ತು. ಈ ಮೂಲಕ ಭಾರತ ತನ್ನ ಸಾಮಾಜಿಕ ಬದ್ಧತೆಯನ್ನು ಮೆರೆಯುವುದರ ಜೊತೆ ಜೊತೆಗೆ ಸಂಕಷ್ಟದಲ್ಲಿರುವ ಬಡ ದೇಶಗಳನ್ನೂ ಕೂಡಾ ಮೇಲೆತ್ತುವಂತ ಪ್ರಯತ್ನವನ್ನು ಮಾಡುತ್ತಿದೆ. ಹೀಗೆ ವಿದೇಶಾಂಗ ಸಚಿವರು ಬಹಳಷ್ಟು ಪ್ರಬುದ್ಧತೆಯಿಂದ ಮಾತನಾಡಿದರು.

ಹೀಗೆ ಜಯಶಂಕರ್ ಅವರ ಜಾಣ್ಮೆಯಿಂದ ಭಾರತಕ್ಕೆ ಸಾಕಷ್ಟು ಲಾಭಗಳಾಗಿವೆ. ಬಳಿಕ ಆ ಅಧಿವೇಶನದಲ್ಲಿ ರಷ್ಯಾ ಭಾರತದ ಪರವಾಗಿ ಬ್ಯಾಟ್ ಬೀಸಿದ್ದು ಬಹಳ ವಿಶೇಷ, ಭಾರತಕ್ಕೂ ಕೂಡಾ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಸ್ಥಾನವನ್ನು ನೀಡಬೇಕಂತ ರಷ್ಯಾ ಪ್ರತಿಪಾದಿಸಿತ್ತು. ಬಳಿಕ ಅಮೆರಿಕದ ಅಧ್ಯಕ್ಷ ಜೊಬಿಡನ್ ಕೂಡಾ ಆ ಸಭೆಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ಸ್ಥಾನ ಸಿಗಬೇಕು ಅದಕ್ಕೆ ನಮ್ಮ ತೀವ್ರವಾದ ಒತ್ತಾಯವಿದೆ ಅಂತ ಹೇಳಿದ್ದರು. ಅಮೆರಿಕ ಹಾಗೂ ರಷ್ಯಾ ಎರಡೂ ರಾಷ್ಟ್ರಗಳು ಭಾರತವನ್ನು ಬೆಂಬಲಿಸುತ್ತಿವೆ. ಅಚ್ಚರಿಯ ಸಂಗತಿ ಎಂದರೆ ವಿಶ್ವದಲ್ಲಿಂದು ಎರಡು ಬಣಗಳಾಗುತ್ತಿವೆ. ಒಂದು ಅಮೆರಿಕದ ಬಣ ಮತ್ತೊಂದು ರಷ್ಯಾ ಬಣ. ಆದರೆ ಭಾರತ ಈ ಎರಡು ಬಣಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮನ್ವಯ ಸಾಧಿಸಿಕೊಂಡು ಹೋಗುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ಜೈ ಶಂಕರ್ ಮಾತನಾಡುವ ಸಂದರ್ಭದಲ್ಲಿ ಅನೇಕರು ನೀವು ಉಕ್ರೇನ್ ಅಥವಾ ರಷ್ಯಾ ಯಾವ ದೇಶದ ಪರ ಅಂತ ಕೇಳಿದ್ದರು. ಅದಕ್ಕೆ ಜೈಶಂಕರ್ ನಾವು ಎರಡರ ಪರವೂ ಅಲ್ಲ. 'ನಾವು ಶಾಂತಿಯ ಪರ' ಭಾರತ ಯಾವತ್ತೂ ಕೂಡಾ ಶಾಂತಿಯ ಪರವಾಗಿ ನಿಲ್ಲುತ್ತದೆ ಅಂದಿದ್ದರು. ವಿಶ್ವಕ್ಕೆ ಭಾರತದ ಸಂದೇಶ ಬಹಳ ಕ್ಲಿಯರ್ ಆಗಿದೆ. ಅದನ್ನು ವಿಶ್ವವೂ ಒಪ್ಪಿಕೊಂಡಿದೆ. ಮತ್ತೊಂದು ವಿಶೇಷವಾದ ಅಂಶ ಅಂದ್ರೆ, ಕಳೆದ ಸಭೆಯಲ್ಲಿ ಮೆಕ್ಸಿಕೋ ರಾಷ್ಟ್ರದ ಅಧ್ಯಕ್ಷರು 'ವಿಶ್ವಕ್ಕೊಂದು ಶಾಂತಿ ಕೂಟ ಬೇಕಿದೆ' ಅದರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಪೋಪ್ ಹಾಗೂ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಈ ಮೂವರನ್ನು ಒಳಗೊಂಡಂತೆ ಕೂಟ ರಚನೆ ಆಗಬೇಕು, ಇದರಿಂದ ವಿಶ್ವದಲ್ಲಿ ಶಾಂತಿ ನೆಲೆಸುತ್ತದೆ ಅಂತ ಪ್ರತಿಪಾದಿಸಿದ್ದರು. ಆದರೆ ಅವರು ಈ ವರ್ಷ ನಡೆದ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ಬಹಳ ಅಚ್ಚರಿಯ ಮಾತುಗಳನ್ನಾಡಿದ್ದರು. ಪೋಪ್ ಹಾಗೂ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಇಬ್ಬರ ಹೆಸರುಗಳನ್ನೂ ಕೈ ಬಿಟ್ಟು ಕೇವಲ ವಿಶ್ವದ ಶಾಂತಿಗೆ ನರೇಂದ್ರ ಮೋದಿ ಮಾತ್ರ ಇರಬೇಕು ಅಂತ ಪ್ರತಿಪಾದನೆ ಮಾಡಿದ್ದರು. ಇವರ ಮಾತುಗಳನ್ನು ಆಲಿಸಿದ ಇಡೀ ಸಭೆ ಮೌನಕ್ಕೆ ಜಾರಿತು. ಇದರ ಅರ್ಥ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸ್ಥಾನ ಸಿಗಲೇಬೇಕು ಎನ್ನುವುದಾಗಿತ್ತು. ಈ ಸಭೆಯಲ್ಲಿ ಜೈಶಂಕರ್‌ರ ಜಾಣ್ಮೆಯ ಮಾತುಗಳು ಅಲ್ಲಿನ ಎಲ್ಲಾ ದೇಶದ ಪ್ರತಿನಿಧಿಗಳಲ್ಲಿ ತಲ್ಲಣ ಉಂಟಾಗುವಂತೆ ಮಾಡಿತು. ಜೈಶಂಕರ್ ಅವರ ಪ್ರಬುದ್ಧತೆ, ಹಾಗೂ ಅವರ ಸಾಮರ್ಥ್ಯ ಭಾರತವನ್ನು ಮುಂದಿನ ದಿನಮಾನಗಳಲ್ಲಿ ಮತ್ತಷ್ಟು ಉತ್ತುಂಗಕ್ಕೆ ಕೊಂಡೊಯ್ಯುವುದರಲ್ಲಿ ಯಾವುದೇ ಸಂದೇಹವಿಲ್ಲ. ಈ ನಿಟ್ಟಿನಲ್ಲಿ ಭಾರತ ವಿಶ್ವದ ಅತಿ ದೊಡ್ಡ ಶಕ್ತಿಯಾಗಿ ಹೊರಹೊಮ್ಮಲು ಬೇಕಾದ ಎಲ್ಲ ತಯಾರಿಗಳನ್ನೀಗ ಮಾಡಿಕೊಳ್ಳುತ್ತಿದೆ.

**(ಲೇಖಕರು: ರಾಜ್ಯಶಾಸ್ತ್ರ ಅಧ್ಯಾಪಕರು ಹಾಗೂ ಹವ್ಯಾಸಿ ಬರಹಗಾರರು)**



## ನಾರದ ಸಂಚಾರ

ಕಲಹಪ್ರಿಯ
naadigru@gmail.com

### ಅರಗಿಸಿಕೊಳ್ಳಲಾಗದ ಸೋಲು

ಲೋಕಸಭಾ ಚುನಾವಣಾ ಫಲಿತಾಂಶ ಬಂದು ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಮೂರನೇ ಬಾರಿಗೆ ರಚನೆಯಾದರೂ, ಕರ್ನಾಟಕದಲ್ಲಿ ಮಾತ್ರ ಬೆಂಗಳೂರು ಗ್ರಾಮಾಂತರದ ಸೋಲಿನ ಚರ್ಚೆಗಳು ನಿಂತಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರವಹಿಸಿದ್ದ, ಟ್ರಬಲ್ ಶೂಟರ್‌ಯೆಂದೇ ಹೆಸರಾಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಹೋದರ, ಡಿ.ಕೆ.ಸುರೇಶ್, ರಾಜಕೀಯದ ಅ..ಆ..ಇ..ಈ ಕಲಿಯುತ್ತಿರುವ ಡಾಕ್ಟರ್ ಮಂಜುನಾಥ್ ವಿರುದ್ಧ ಸೋಲನುಭವಿಸಿರುವುದು ಈಗಲೂ ಅನೇಕರ ಚರ್ಚೆಗೆ ಕಾರಣವಾಗಿದೆ. ಮಂಜುನಾಥ್ ಕುಟುಂಬಕ್ಕೆ ರಾಜಕೀಯದ ಹಿನ್ನಲೆಯಿದ್ದರೂ, ಅವರೆಂದು ರಾಜಕೀಯ ಮಾಡಿರಲಿಲ್ಲ. ಅಂತಹವರ ವಿರುದ್ಧ ಅದೂ ಡಿ.ಕೆ.ಶಿವಕುಮಾರ್ ಅವರ ಕ್ಷೇತ್ರದಲ್ಲಿಯೂ ಹೆಚ್ಚು ಲೀಡ್ ಪಡೆಯದೇ ಸೋತಿರುವುದು ಸಹೋದರರ ಆಘಾತಕ್ಕೆ ಕಾರಣವಾಗಿದ್ದು, ಇದೀಗ ಸೋಲಿನ ಸೇಡನ್ನು ಯಾವ ರೀತಿ ತೀರಿಸಿಕೊಳ್ಳಬೇಕು ಎನ್ನುವ ವಿಷಯದಲ್ಲಿ ಮಗ್ನರಾಗಿದ್ದಾರಂತೆ.

### ನಿಂಬೆಹಣ್ಣು ಬಳಸಿದರೇ ರೇವಣ್ಣ?

ಲೋಕಸಭಾ ಚುನಾವಣೆ ಸಮಯದಲ್ಲಿ ಪೆನ್‌ಡ್ರೈವ್ ಮೂಲಕ ಇಡೀ ದೇಶದಲ್ಲಿಯೇ ಸದ್ದು ಮಾಡಿದ್ದ ಪ್ರಜ್ವಲ್ ಜೈಲು ಸೇರಿದ್ದಾರೆ. ಪ್ರಧಾನಿ, ರಾಷ್ಟ್ರಪತಿ ಬಂದರೂ ಸಿಗದಷ್ಟು ಕವರೇಜ್ ಪ್ರಜ್ವಲ್ ವಿಮಾನ ನಿಲ್ದಾಣಕ್ಕೆ ಬಂದಾಗ ಸಿಕ್ಕಿತ್ತು. ಆದರೆ ಯಾವಾಗ ರೇಣುಕಸ್ವಾಮಿ ಪ್ರಕರಣದಲ್ಲಿ ದರ್ಶನ್ ಅಂದರ್ ಆದನೋ ಅಲ್ಲಿಗೆ, ಪ್ರಜ್ವಲ್‌ನನ್ನು ಇಡೀ ಸಮುದಾಯವೇ ಮರೆತಿದೆ.

ಈ ರೀತಿ ಪೆನ್‌ಡ್ರೈವ್ ಮೂಲಕ ದೇಶಾದ್ಯಂತ ಸದ್ದು ಮಾಡಿದ್ದ ಪ್ರಜ್ವಲ್ ಸುದ್ದಿಗೆ ಬೇಡಿಕೆ ಕಡಿಮೆಯಾಗಲು ದರ್ಶನ್ ಪ್ರಕರಣ ಕಾರಣ ಎನ್ನುವುದು ಒಂದೆಡೆಯಾದರೆ, ಮಗನನ್ನು ಟಿವಿಯಲ್ಲಿ ಹೆಚ್ಚಾಗಿ ನೋಡೋದು ಬೇಡ ಅಂತಾ ರೇವಣ್ಣ ಏನಾದ್ರೂ ನಿಂಬೆಹಣ್ಣು ಮಂತ್ರಿಸಿಕೊಂಡು ಬಂದಿದ್ರಾ ಅನ್ನೋದು ನಾರದರ ಪ್ರಶ್ನೆಯಾಗಿದೆ.

### ಪ್ರತಿಭಟನೆ ಮಾಡೋದು ಯಾರು?

ಕುಮಾರಣ್ಣ ಮಂಡ್ಯದಲ್ಲಿ ಗೆದ್ದು ಕೇಂದ್ರ ಸಚಿವರಾಗುತ್ತಿದ್ದಂತೆ ಜೆಡಿಎಸ್‌ನಲ್ಲಿ ಹೊಸ ಉತ್ಸಾಹವೇನೋ ಬಂದಿದೆ. ದಿಲ್ಲಿಯಲ್ಲಿ ಎರಡು ದಿನವಿದ್ದ ಕುಮಾರಣ್ಣ ಇದೀಗ ರಾಜ್ಯದಲ್ಲಿ ಟೆಂಪಲ್ ರನ್ ಮಾಡುತ್ತಿದ್ದಾರೆ. ಈ ನಡುವೆ ಪೆಟ್ರೋಲ್ ದರ ಏರಿಸಿರುವ ರಾಜ್ಯ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಲು ಜೆಡಿಎಸ್ ತಯಾರಿ ನಡೆಸಿಕೊಂಡಿದೆ. ಆದರೆ ಈಗ ಎದುರಾಗಿರುವ ಬಹುದೊಡ್ಡ ಪ್ರಶ್ನೆ, ಜೆಡಿಎಸ್ ಪ್ರತಿಭಟನೆಯ ನಾಯಕತ್ವವನ್ನು ಯಾರು ವಹಿಸಲಿದ್ದಾರೆ ಎನ್ನುವುದಾಗಿದೆ.

ಯಾಕಂದ್ರೆ, ಗೌಡ್ರ ಕುಟುಂಬದ ಕುಡಿಯಿಲ್ಲದಿದ್ದರೆ ಜೆಡಿಎಸ್‌ನವರಿಗೆ ಪ್ರತಿಭಟನೆ ವೇಳೆ ಕೂಗಲು ಧ್ವನಿ ಬರೋದಿಲ್ಲ. ಇದೀಗ ರೇಪ್ ಕೇಸ್‌ನಿಂದ ಆಚೆ ಬಂದಿರೋ ರೇವಣ್ಣ ತಾನಾಯಿತು, ತಾನು ನಂಬಿರುವ ದೇವಾಲಯವಾಯಿತು ಎನ್ನುತ್ತಾ ಓಡಾಡಿಕೊಂಡಿದ್ದಾರೆ. ಇತ್ತ ಕುಮಾರಣ್ಣ ಕೇಂದ್ರ ಸಚಿವರಾಗಿ ಪ್ರತಿಭಟನೆಯಲ್ಲಿ ಭಾಗವಹಿಸೋಕೆ ಬರಲ್ಲ. ದೊಡ್ಡಗೌಡ್ರು ಆರೋಗ್ಯ ಅಷ್ಟಾಗಿ ಸರಿಯಿಲ್ಲದಿರುವುದರಿಂದ ಅವರೂ ಬರೋಲ್ಲ. ಹೀಗಿರುವಾಗ ಯಾವ ನಾಯಕತ್ವದಲ್ಲಿ ಪ್ರತಿಭಟನೆ ನಡೆಸಬೇಕು ಅನ್ನೋದು ಜೆಡಿಎಸ್ ಕಾರ್ಯಕರ್ತರ ಪ್ರಶ್ನೆಯಾಗಿದೆ ಅಂತೆ.!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:176

## ಸಮಾಚಾರ ಸಣ್ಣದಲ್ಲ

### ರೈಲು ಅಪಘಾತ: ಭಾರತ ಇತಿಹಾಸ

**ದೆಹಲಿ:** ದೇಶದಲ್ಲಿ ಕಳೆದ 43 ವರ್ಷಗಳಲ್ಲಿ ದಾಖಲಾದ ಭೀಕರ ರೈಲು ಅಪಘಾತಗಳ ಪಟ್ಟಿ ಇಲ್ಲಿದೆ.

**ಬಾಲಸೋರ್ ಅಪಘಾತ:** 2023ರ ಜೂ.2. ತ್ರಿವಳಿ ರೈಲು ಅಪಘಾತ. ಒಡಿಶಾದ ಬಾಲಸೋರ್ ಬಳಿ ನಿಲುಗಡೆಯಾಗಿದ್ದ ಗೂಡ್ಸ್ ರೈಲಿಗೆ ಶಾಲಿಮಾರ್-ಚೆನ್ನೈ-ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ವೇಗವಾಗಿ ಬಂದು ಡಿಕ್ಕಿ. 8 ಬೋಗಿ ಹಳಿತಪ್ಪಿ ಪಕ್ಕದ ಹಳಿಗಳ ಮೇಲೆ ಹರಡಿ ಬಿದ್ದಿದ್ದವು. ಅದೇ ಮಾರ್ಗ ಸಾಗಿಬಂದ ಯಶವಂತಪುರ-ಹೌರಾ ಎಕ್ಸ್‌ಪ್ರೆಸ್ ರೈಲು ಹರಡಿಬಿದ್ದಿದ್ದ ಬೋಗಿಗಳಿಗೆ ಡಿಕ್ಕಿ. 293 ಜನ ಬಲಿ, 1200ಕ್ಕೂ ಹೆಚ್ಚು ಮಂದಿಗೆ ಗಾಯ. ಸಿಗ್ನಲಿಂಗ್ ದೋಷವೇ ಕಾರಣ. ಪಶ್ಚಿಮ ಬಂಗಾಳ, ಬಿಹಾರ ವಲಸೆ ಕಾರ್ಮಿಕರೇ ಹೆಚ್ಚು ಬಲಿ.

**ಅವಧ್ ಎಕ್ಸ್‌ಪ್ರೆಸ್ ದುರಂತ:** 1999ರ ಆ.2. ಅವಧ್-ಅಸ್ಸಾಂ ಎಕ್ಸ್‌ಪ್ರೆಸ್ ಮತ್ತು ಬ್ರಹ್ಮಪುತ್ರ ಎಕ್ಸ್‌ಪ್ರೆಸ್ ರೈಲು ಪಶ್ಚಿಮ ಬಂಗಾಳದಲ್ಲಿ ಡಿಕ್ಕಿ. 290ಪ್ರಯಾಣಿಕರು ಬಲಿ.

**ಫಿರೋಜಾಬಾದ್ ರೈಲು ಡಿಕ್ಕಿ:** 1995ರ ಆ.20. ಉತ್ತರಪ್ರದೇಶದ ಫಿರೋಜಾಬಾದ್ ಬಳಿ ಕಾಳಿಂದಿ-ಪುರುಷೋತ್ತಮ ಎಕ್ಸ್‌ಪ್ರೆಸ್ ರೈಲುಗಳು ಡಿಕ್ಕಿ. 358 ಪ್ರಯಾಣಿಕರ ಸಾವು.

**ಕೇರಳ-ಕೊಲ್ಲಂ ರೈಲು:** 1988ರ ಜು.8. ಬೆಂಗಳೂರಿಂದ ತಿರುವನಂತಪುರಕ್ಕೆ ತೆರಳುತ್ತಿದ್ದ ಐಲ್ಯಾಂಡ್ ಎಕ್ಸ್‌ಪ್ರೆಸ್ ರೈಲಿನ 10 ಬೋಗಿ ಕೊಲ್ಲಂ ಬಳಿ ಹಳಿತಪ್ಪಿ ಅಷ್ಟಮುಡಿ ಸರೋವರಕ್ಕೆ ಬಿದ್ದು 105 ಪ್ರಯಾಣಿಕರು ಬಲಿ.

**ಬಿಹಾರ ರೈಲು ದುರಂತ:** 1981ರ ಜೂ.6. ಬಿಹಾರದ ಮಾನಸಿ-ಸಹರ್ಸಾ ನಡುವೆ ಸ್ಥಳೀಯ ಪ್ಯಾಸೆಂಜರ್ ರೈಲು ಹಳಿತಪ್ಪಿ ಭಾಗಮತಿ ನದಿಗೆ ಬಿದ್ದು 235 ಪ್ರಯಾಣಿಕರ ಸಾವು.

### ಬಂಡಿಪೋರಾ ಬಳಿ ಉಗ್ರನ ಕೊಂದ ಸೇನೆ

**ಶ್ರೀನಗರ:** ಜಮ್ಮು-ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ಭಾರತೀಯ ಸೇನಾಪಡೆ ಸೋಮವಾರ ಬೆಳಗ್ಗೆ ನಡೆಸಿದ ಕಾರ್ಯಾಚರಣೆಯಲ್ಲಿ ಒಬ್ಬ ಉಗ್ರನನ್ನು ಕೊಂದುಹಾಕಿದೆ. ಬಂಡಿಪೋರಾ ಜಿಲ್ಲೆಯ ಅರಗಾಮ್ ಗ್ರಾಮದಲ್ಲಿ ಭಯೋತ್ಪಾದಕರು ಅಡಗಿದ್ದಾರೆಂಬ ಖಚಿತ ಮಾಹಿತಿ ಸಿಕ್ಕ ಬಳಿಕ ಭದ್ರತಾ ಪಡೆಗಳು ಸೋಮವಾರ ಮುಂಜಾನೆ ಸ್ಥಳಕ್ಕೆ ಧಾವಿಸಿ ಉಗ್ರರು ಅಡಗಿದ್ದ ಪ್ರದೇಶವನ್ನು ಸುತ್ತುವರೆದು ಕಾರ್ಯಾಚರಣೆ ಆರಂಭಿಸಿದವು. ಈ ಹಂತದಲ್ಲಿ ಅಡಗಿದ್ದ ಉಗ್ರರ ಕಡೆಯಿಂದ ಗುಂಡಿನ ಚಕಮಕಿ ಶುರುವಾಯಿತು. ಪ್ರತಿಯಾಗಿ ಭದ್ರತಾ ಪಡೆಗಳು ಕಾರ್ಯಾಚರಣೆ ತೀವ್ರಗೊಳಿಸಿದಾಗ ಒಬ್ಬ ಉಗ್ರ ಹತನಾದ. ಇನ್ನೂ ಕೆಲವು ಉಗ್ರರು ಸ್ಥಳದಲ್ಲಿ ಅಡಗಿದ್ದು, ಭದ್ರತಾಪಡೆ ಕಾರ್ಯಾಚರಣೆ ಮುಂದುವರಿಸಿದೆ.

### ಬೈಕ್‌ಗೆ ಲಾರಿ ಡಿಕ್ಕಿ: ವೃದ್ಧ ದಂಪತಿ ಬಲಿ

**ಪೂರ್ನಿಯಾ:** ಬಿಹಾರದ ಪೂರ್ನಿಯದಲ್ಲಿ ಯುವಕನೊಬ್ಬ ವೃದ್ಧ ತಂದೆ-ತಾಯಿ ಯನ್ನು ಬೈಕ್‌ನಲ್ಲಿ ಕರೆದೊಯ್ಯುತ್ತಿದ್ದಾಗ ವೇಗವಾಗಿ ಬಂದ ಟ್ರಕ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಕೆಳಕ್ಕುರುಳಿದ ಬೈಕ್ ಸಮೇತ ಮೂವರೂ ಲಾರಿಯಡಿ ಸಿಲುಕಿಕೊಂಡಿದ್ದಾರೆ. ಹಾಗಿದ್ದೂ ಲಾರಿಯನ್ನು ನಿಲ್ಲಿಸದ ಚಾಲಕ 200 ಮೀ.ವರೆಗೂ ಗಾಯಾಳುಗಳನ್ನು ಎಳೆದೊಯ್ದಿದ್ದಾನೆ. ಪರಿಣಾಮ ವೃದ್ಧ ದಂಪತಿ ಸ್ಥಳದಲ್ಲೇ ಸಾವಿಗೀಡಾದರೆ, ಪುತ್ರ ರಕ್ತದ ಮಡುವಿನಲ್ಲಿ ಬಿದ್ದಿದ್ದ. ಆತನ ಸ್ಥಿತಿ ಗಂಭೀರವಾಗಿದೆ. ಅಪಘಾತದ ಬಳಿಕ ಟ್ರಕ್ ಚಾಲಕ ಪರಾರಿಯಾಗಲು ಯತ್ನಿಸಿದಾಗ ಜನರು ಆತನನ್ನು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಗಂಭೀರವಾಗಿ ಗಾಯಗೊಂಡ ಪುತ್ರ ಸಿಲ್ವೆಸ್ಟರ್(23)ನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸ್ಥಿತಿ ಚಿಂತಾಜನಕವಾಗಿದೆ. ಮೃತರನ್ನು ಲಾಲು ಓರಾನ್(72) ಮತ್ತು ಪಾರ್ವತಿ ದೇವಿ(65) ಎಂದು ಗುರುತಿಸಲಾಗಿದೆ.

### ಜಾರ್ಖಂಡ್‌ನಲ್ಲಿ 4 ನಕಲರು ಹತ

**ರಾಂಚಿ:** ಜಾರ್ಖಂಡ್ ರಾಜ್ಯದ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಚೈಬಾಸಾದಲ್ಲಿ ಸೋಮವಾರ ಭದ್ರತಾ ಪಡೆಗಳು ನಡೆಸಿದ ಮಹತ್ವದ ಕಾರ್ಯಾಚರಣೆಯಲ್ಲಿ ನಾಲ್ವರು ನಕ್ಸಲರನ್ನು ಹೊಡೆದುರುಳಿಸಲಾಗಿದೆ. ನಕ್ಸಲರ ಮೃತದೇಹಗಳ ಬಳಿ ಇದ್ದ ಬಂದೂಕು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೃತರು ಪೀಪಲ್ಸ್ ಲಿಬರೇಶನ್ ಗೊರಿಲ್ಲಾ ಆರ್ಮಿಯ ಮಿಲಿಟರಿ ಕಂಪನಿಗೆ ಸೇರಿದ ವಲಯ ಕಮಾಂಡರ್, ಉಪ ವಲಯ ಕಮಾಂಡರ್ ಹಾಗೂ ಪ್ರದೇಶ ಕಮಾಂಡರ್‌ಗಳಾಗಿದ್ದು, ಪೊಲೀಸ್ ಇಲಾಖೆಗೆ ಮೋಸ್ಟ್ ವಾಂಟೆಡ್‌ಗಳಾಗಿದ್ದರು. ಈ 4 ನಕ್ಸಲರ ಪತ್ತೆಗೆ ಒಟ್ಟು 48 ಲಕ್ಷ ರು. ಬಹುಮಾನ ಕೂಡ ಘೋಷಿಸಲಾಗಿತ್ತು. ಕಾರ್ಯಾಚರಣೆ ವೇಳೆ ಇಬ್ಬರು ನಕ್ಸಲರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

{ ಜೈರಾಮ್ ರಮೇಶ್ } ಕಾಂಗ್ರೆಸ್ ಪ್ರ.ಕಾರ್ಯದರ್ಶಿ

ಪಠ್ಯಪುಸ್ತಕಗಳ ಪರಿಷ್ಕರಣೆ ನಡೆಸಿರುವ ಎನ್‌ಸಿಇಆರ್‌ಟಿ 2014ರಿಂದಲೂ ಆರ್‌ಎಸ್‌ಎಸ್‌ನ ಅಂಗಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿದೆ. ಸಂವಿಧಾನದ ಮೇಲೆಯೂ ದಾಳಿ ನಡೆಸುತ್ತಿದೆ. 2024ರ ನೀಟ್ ಪರೀಕ್ಷೆಯ ಒಟ್ಟಾರೆ ವೈಫಲ್ಯಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ 'ಕೃಪಾಂಕ' ಕಾರಣ. ಅದು ನೀಟ್ ವೈಫಲ್ಯಗಳಿಂದ ಜನರ ಗಮನ ಬೇರೆಡೆ ಸೆಳೆಯುತ್ತಿದೆ. ಹಾಗಿದ್ದೂ ಎನ್‌ಸಿಇಆರ್‌ಟಿ ವೃತ್ತಿಪರ ಸಂಸ್ಥೆಯಾಗಿ ಉಳಿದಿಲ್ಲ ಎಂಬುದು ನಿಜ.

# ಕಾಂಚನಜುಂಗಾ ರೈಲು ಅಪಘಾತಕ್ಕೆ ಸಿಗ್ನಲ್ ದೋಷ ಕಾರಣ

## ರಾಣಿಪತ್ರ ರೈಲ್ವೆ ನಿಲ್ದಾಣ-ಚತ್ತರ್‌ಹಾತ್ ಜಂಕ್ಷನ್ ಮಧ್ಯೆ ಅಳವಡಿಸಿದ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆ

**ಡಾರ್ಜಿಲಿಂಗ್:** ಪಶ್ಚಿಮ ಬಂಗಾಳ ರಾಜ್ಯದ ಜಲ್ಪಾಯ್‌ಗುರಿ ರೈಲು ನಿಲ್ದಾಣದ ಬಳಿ ನಿಲುಗಡೆಯಾಗಿದ್ದ ಕಾಂಚನಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಅದೇ ಹಳಿಯಲ್ಲಿ ವೇಗವಾಗಿ ಸಾಗಿಬಂದ ಗೂಡ್ಸ್ ರೈಲು ಹಿಂಬದಿಯಿಂದ ಡಿಕ್ಕಿ ಹೊಡೆದು, ಪ್ರಯಾಣಿಕ ರೈಲಿನ 3 ಬೋಗಿಗಳು ಹಳಿತಪ್ಪಿ 13 ಪ್ರಯಾಣಿಕರು, ಗೂಡ್ಸ್ ರೈಲಿನ ಚಾಲಕ-ಸಹ ಚಾಲಕ ಸೇರಿ ಒಟ್ಟು 15 ಮಂದಿ ಸಾವಿಗೀಡಾಗಿದ್ದಾರೆ. ಇತರೆ 60ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಈ ಅಪಘಾತಕ್ಕೆ ಸ್ವಯಂ ಚಾಲಿತ ಸಿಗ್ನಲ್ ವ್ಯವಸ್ಥೆಯಲ್ಲಿ ಉಂಟಾಗಿದ್ದ ತಾಂತ್ರಿಕ ದೋಷವೇ ಕಾರಣ ಎಂಬುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

- ಸೋಮವಾರ ನಸುಕಿನ 5.50 ಗಂಟೆಯಿಂದಲೇ ದೋಷಪೂರಿತವಾಗಿದ್ದ ರೈಲ್ವೆಯ ಸ್ವಯಂಚಾಲಿತ ಸಿಗ್ನಲ್
- ಪಶ್ಚಿಮ ಬಂಗಾಳದ ಜಲ್ಪಾಯ್‌ಗುರಿಯ ರಂಗಪಾಣಿ ನಿಲ್ದಾಣ ಬಳಿ ನಿಲಗಡೆಯಾಗಿದ್ದ ಕಾಂಚನಜುಂಗಾ ರೈಲು
- ಸಿಗ್ನಲ್ ಸ್ಪಷ್ಟ ಗೋಚರಿಸದ ಕಾರಣ ನಿಲುಗಡೆಯಾಗಿದ್ದ ರೈಲಿಗೆ ಹಿಂದಿನಿಂದ ಡಿಕ್ಕಿ ಹೊಡೆದ ಗೂಡ್ಸ್ ರೈಲು
- ಡಿಕ್ಕಿ ರಭಸಕ್ಕೆ ಕಾಂಚನ್ ಜುಂಗಾ ಎಕ್ಸ್‌ಪ್ರೆಸ್ 3 ಬೋಗಿ ಹಳಿ ತಪ್ಪಿ 15 ಸಾವು, 60 ಪ್ರಯಾಣಿಕರಿಗೆ ಗಾಯ

ಕಾಂಚನಜುಂಗಾ ಎಕ್ಸ್‌ಪ್ರೆಸ್ ರೈಲು ಮತ್ತು ಗೂಡ್ಸ್ ರೈಲು ಸಂಚರಿಸುತ್ತಿದ್ದ ಮಾರ್ಗದಲ್ಲಿ ರಾಣಿಪತ್ರ ರೈಲ್ವೆ ನಿಲ್ದಾಣ ಹಾಗೂ ಚತ್ತರ್‌ಹಾತ್ ಜಂಕ್ಷನ್ ನಡುವೆ ಅಳವಡಿಕೆಯಾಗಿದ್ದ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆ ಸೋಮವಾರ ನಸುಕಿನ 5.50ರ ವೇಳೆಗಾಗಲೇ ದೋಷಪೂರಿತವಾಗಿತ್ತು. ಇದುವೇ ರೈಲು ಅಪಘಾತಕ್ಕೆ ಕಾರಣ ಎಂದು ತಿಳಿದುಬಂದಿದೆ.

**ಬೋಗಿ ಮೇಲೇರಿದ ಬೋಗಿ:**

ರೈಲು ಸಂಖ್ಯೆ 13174 (ಸೀಲ್ದಾ- ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್) ಬೆಳಿಗ್ಗೆ 8.27ಕ್ಕೆ ರಂಗಪಾಣಿ ನಿಲ್ದಾಣದಿಂದ ಹೊರಟಿದೆ. ಆದರೆ, ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆಯಲ್ಲಿನ ದೋಷದಿಂದಾಗಿ ಸರಿಯಾಗಿ ಸಿಗ್ನಲ್ ದೀಪಗಳು ಬೆಳಗದೇ ಇದ್ದುದರಿಂದ ರಾಣಿಪತ್ರ ರೈಲು ನಿಲ್ದಾಣ ಮತ್ತು ಚತ್ತರ್‌ಹಾತ್ ಜಂಕ್ಷನ್ ನಡುವೆಯೇ ಕಾಂಚನಜುಂಗಾ ಎಕ್ಸ್‌ಪ್ರೆಸ್ ರೈಲುಗಾಡಿ ನಿಲುಗಡೆಯಾಗಿದೆ. ಬಳಿಕ ಕೆಂಪು ದೀಪ ಬೆಳಗುತ್ತಿದ್ದರೂ ಗೂಡ್ಸ್ ರೈಲು ಗಾಡಿಯ ಚಾಲಕ ಸಿಗ್ನಲ್ ಗಮನಿಸದೇ ಅದೇ ಮಾರ್ಗದಲ್ಲಿ ವೇಗವಾಗಿ ಗೂಡ್ಸ್ ರೈಲನ್ನು ಚಲಾಯಿಸುತ್ತಾ ಬಂದಿದ್ದಾರೆ. ನಿಲುಗಡೆಯಾಗಿದ್ದ ಕಾಂಚನಜುಂಗಾ ರೈಲಿನ ಹಿಂಬದಿಗೆ ಬೋಗಿಗಳಿಗೆ ಗೂಡ್ಸ್ ರೈಲು ಗಾಡಿ ವೇಗವಾಗಿ ಡಿಕ್ಕಿ ಹೊಡೆದಿದೆ. ಕಾಂಚನಜುಂಗಾ ರೈಲಿನ 3 ಬೋಗಿ ಹಳಿ ತಪ್ಪಿ ಜಖಂಗೊಂಡಿವೆ. ಒಂದು ಬೋಗಿಯಂತೂ ಮತ್ತೊಂದು ಬೋಗಿಯ ಮೇಲೇರಿ ಕುಳಿತಿದೆ.

**ಟಿಎ 912 ಲಿಖಿತ ಸಂದೇಶ:** ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆ ವಿಫಲವಾದಾಗ, ಸ್ಟೇಷನ್ ಮಾಸ್ಟರ್ ಟಿಎ 912 ಎಂಬ ಲಿಖಿತ ಸಂದೇಶ ನೀಡುತ್ತಾರೆ. ಇದು ದೋಷದ ಕಾರಣ ಆ ಮಾರ್ಗದಲ್ಲಿ ಎಲ್ಲಾ ಕೆಂಪು ಸಿಗ್ನಲ್ ದಾಟಲು ಚಾಲಕನಿಗೆ ಸೂಚನೆ ನೀಡುತ್ತದೆ. ರಾಣಿಪತ್ರದ ಸ್ಟೇಷನ್ ಮಾಸ್ಟರ್ ಟಿಎ 912 ನ್ನು ರೈಲು ಸಂಖ್ಯೆ 1374 (ಸೀಲ್ದಾ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್)ಗೆ ನೀಡಿದ್ದರು ರೈಲ್ವೇ ಅಧಿಕಾರಿಯೊಬ್ಬರು ವಿವರಿಸಿದ್ದಾರೆ. ಆದರೆ, ದೋಷಪೂರಿತ ಸಿಗ್ನಲ್ ದಾಟಲು ಗೂಡ್ಸ್ ರೈಲಿಗೂ ಟಿಎ 912 ನೀಡಲಾಗಿತ್ತೇ? ಅಥವಾ ಲೋಕೊ ಪೈಲಟ್ ದೋಷಯುಕ್ತ ಸಿಗ್ನಲ್ ಮಾನದಂಡವನ್ನು ಉಲ್ಲಂಘಿಸಿ ಗೂಡ್ಸ್ ರೈಲು ಚಲಾಯಿಸಿದರೇ? ಈ ವಿಚಾರ ತನಿಖೆಯಿಂದ ಮಾತ್ರ ತಿಳಿದುಬರಬೇಕಿದೆ ಎಂದು ಅಧಿಕಾರಿ ಹೇಳಿದ್ದಾರೆ.

### ಅಪಘಾತ ಎಲ್ಲಿ-ಹೇಗೆ?

- ಪಶ್ಚಿಮ ಬಂಗಾಳದ ಜಲ್ಪಾಯ್‌ಗುರಿ ಜಿಲ್ಲೆಯ ರಂಗಪಾಣಿ ರೈಲು ನಿಲ್ದಾಣ ಬಳಿ ಸೋಮವಾರ ಬೆಳಿಗ್ಗೆ 9 ಗಂಟೆಗೆ ಅಪಘಾತ
- ಅಗರ್ತಲಾದಿಂದ ಸೀಲ್ದಾ ನಿಲ್ದಾಣಕ್ಕೆ ಸಾಗುತ್ತಿದ್ದ ಕಾಂಚನ್ ಜುಂಗಾ ಎಕ್ಸ್‌ಪ್ರೆಸ್ ರಂಗಪಾಣಿ ನಿಲ್ದಾಣದ ಬಳಿ ನಿಲುಗಡೆ
- ಅದೇ ಹಳಿ ಮೇಲೆ ವೇಗವಾಗಿ ಸಾಗಿ ಬಂದ ಗೂಡ್ಸ್ ರೈಲು, ಕಾಂಚನಜುಂಗಾ ರೈಲಿಗೆ ಹಿಂಬದಿಯಿಂದ ರಭಸದಿಂದ ಡಿಕ್ಕಿ
- ಗೂಡ್ಸ್ ರೈಲು ಡಿಕ್ಕಿ ಹೊಡೆದ ರಭಸಕ್ಕೆ ಪ್ರಯಾಣಿಕ ರೈಲು 3 ಬೋಗಿ ಹಳಿ ತಪ್ಪಿ ಜಖಂ-15 ಸಾವು, 60 ಮಂದಿಗೆ ಗಾಯ

### ಕೇಂದ್ರ ಸರಕಾರ ವಿರುದ್ಧ ಮಲ್ಲಿಕಾರ್ಜುನ್ ಖರ್ಗೆ ಕಿಡಿ

ಕಳೆದ 10 ವರ್ಷಗಳಲ್ಲಿ ಮೋದಿ ಸರಕಾರ ರೈಲ್ವೆ ಇಲಾಖೆಯಲ್ಲಿ ಸಂಪೂರ್ಣ ದುರಾಡಳಿತ ನಡೆಸುತ್ತಿದೆ. ರೈಲ್ವೆ ಇಲಾಖೆಯನ್ನು ಕ್ಯಾಮೆರಾ ಚಾಲಿತ ಸ್ವ ಪ್ರಚಾರಕ್ಕೆ ಬದಲಾಯಿಸಿಕೊಂಡಿದೆ. ಪಶ್ಚಿಮ ಬಂಗಾಳದ ರೈಲು ಅಪಘಾತ ಸರಕಾರದ ಅವ್ಯವಸ್ಥೆಗೆ ಇನ್ನೊಂದು ಉದಾಹರಣೆ ಎಂದು ಟೀಕಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಅಪಘಾತದ ದೃಶ್ಯ ನೋವುಂಟು ಮಾಡಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ.

### 19 ರೈಲುಗಳ ಸಂಚಾರ ರದ್ದು

**ಕೋಲ್ಕತ್ತ:** ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಕನಿಷ್ಠ 15 ಜನರ ಸಾವಿಗೆ ಕಾರಣವಾದ ಕಾಂಚನಜುಂಗಾ ರೈಲು ಅಪಘಾತದ ಹಿನ್ನೆಲೆಯಲ್ಲಿ ಆ ಮಾರ್ಗದಲ್ಲಿ ಸೋಮವಾರ ಸಂಚರಿಸಬೇಕಿದ್ದ 19 ರೈಲುಗಳನ್ನು ಭಾರತೀಯ ರೈಲ್ವೆ ಇಲಾಖೆ ತಾತ್ಕಾಲಿಕವಾಗಿ ರದ್ದುಗೊಳಿಸಿದೆ. ನ್ಯೂ ಜಲ್ಪಾಯ್‌ಗುರಿ, ಸಿಲಿಗುರಿ ಜಂಕ್ಷನ್, ಬಾಗ್‌ಡೋಗ್ರಾ ಮತ್ತು ಅಲುಬಾರಿ ಮಾರ್ಗಗಳಲ್ಲಿ ಸಂಚರಿಸಬೇಕಿದ್ದ 19 ರೈಲುಗಳ ಸೇವೆ ತಾತ್ಕಾಲಿಕ ರದ್ದಾಗಿವೆ ಎಂದು ರೇಲ್ವೆ ಇಲಾಖೆ ತಿಳಿಸಿದೆ. ಮುಂಜಾಗ್ರತಾ ಕ್ರಮವಾಗಿ 19 ರೈಲು ಸಂಚಾರ ಸ್ಥಗಿತಗೊಳಿಸಿದೆ. ಉತ್ತರ ಬಂಗಾಳ ಮತ್ತು ದೇಶದ ಈಶಾನ್ಯ ಭಾಗದಿಂದ ದೂರದ ರೈಲು ಸಂಚಾರದ ಮೇಲೆ ಇದು ಪರಿಣಾಮ ಬೀರಿದೆ.

### ಆರ್‌ಜೆಡಿ ಟೀಕೆ

ಯಾವ ದೇಶದಲ್ಲಿ ರೈಲ್ವೆ ಖಾಸಗೀಕರಣ ಮಾಡಲಾಗುತ್ತದೆಯೋ ಅಲ್ಲಿ ಹೀಗೆ ಅಪಘಾತಗಳು ಸಂಭವಿಸುತ್ತವೆ. ಕಾಂಗ್ರೆಸ್ ಮತ್ತು ಯುಪಿಎ ಸರಕಾರದ ಅವಧಿಯಲ್ಲಿ ರೈಲು ಅಪಘಾತಗಳು ನಡೆದಾಗ ಸಚಿವರು ರಾಜೀನಾಮೆ ನೀಡುತ್ತಿದ್ದರು. ಆದರೆ ಈಗ ಯಾರೂ ರಾಜೀನಾಮೆ ಕೊಡುವುದಿಲ್ಲ. ಈ ಸರಕಾರದ ಮೇಲೆ ನಂಬಿಕೆ ಉಳಿದಿಲ್ಲ. ಈ ಸರಕಾರದ ಗ್ಯಾಂಗ್ ರೈಲ್ವೆ ಅಪಘಾತಗಳಿಗೆ ಕಾರಣ ಎಂದು ಆರ್‌ಜೆಡಿ ನಾಯಕ ಭಾಯಿ ವಿರೇಂದ್ರ ದೂಷಿಸಿದ್ದಾರೆ.

### ಸಚಿವ ಅಶ್ವಿನ್ ವೈಷ್ಣವ್, ಮಮತಾ ಬ್ಯಾನರ್ಜಿ ಸ್ಥಳ ಪರಿಶೀಲನೆ

ಕಾಂಚನಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಗೂಡ್ಸ್ ರೈಲು ಡಿಕ್ಕಿ ಹೊಡೆದ ಸ್ಥಳಕ್ಕೆ ತೆರಳುವ ಮಾರ್ಗ ಕಿರಿದಾಗಿದ್ದುದರಿಂದ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರು ರೈಲ್ವೆ ಸಿಬ್ಬಂದಿಯ ಮೋಟಾರ್ ಬೈಕ್‌ನಲ್ಲಿ ಸಂಚರಿಸಬೇಕಾಯಿತು. ಜಲ್ಪಾಯ್‌ಗುರಿ ರೈಲು ನಿಲ್ದಾಣ ಸಮೀಪದ ರಂಗಪಾಣಿಯಲ್ಲಿ ರೈಲುಗಳ ನಡುವೆ ಅಪಘಾತವಾಗಿದ್ದು, ಸ್ಥಳಕ್ಕೆ ತೆರಳಿದ ಸಚಿವ ಅಶ್ವಿನ್ ವೈಷ್ಣವ್, ಸ್ಥಳ ಪರಿಶೀಲನೆ ನಡೆಸಿ ಅಧಿಕಾರಿಗಳು ಹಾಗೂ ಸ್ಥಳದಲ್ಲಿದ್ದ ಪ್ರಯಾಣಿಕರು, ಸ್ಥಳೀಯರಿಂದ ಮಾಹಿತಿ ಪಡೆದುಕೊಂಡರು.

# ಅಮೆರಿಕ ಭದ್ರತಾ ಸಲಹೆಗಾರ ಜೇಕ್-ಮೋದಿ ಭೇಟಿ

**ದೆಹಲಿ:** ಎರಡು ದಿನಗಳ ಭೇಟಿಗಾಗಿ ಭಾರತಕ್ಕೆ ಸೋಮವಾರ ಆಗಮಿಸಿದ ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವನ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಜೇಕ್ ಭೇಟಿ ಬಳಿಕ 'ಜಾಗತಿಕ ಒಳಿತಾಗಿ ಭಾರತ-ಅಮೆರಿಕ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ ಮುಂದುವರೆಸಲು ಬದ್ಧವಾಗಿವೆ' ಎಂದು ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಇಟಲಿ ಜಿ-7 ಶೃಂಗದಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಭೇಟಿಯಾದ ಪ್ರಧಾನಿ ಮೋದಿ ಮಹತ್ವದ ವಿಚಾರಗಳನ್ನು ಚರ್ಚಿಸಿದ್ದರು. ಮೋದಿ ಪ್ರಧಾನಿಯಾಗಿ 3ನೇ ಬಾರಿಗೆ ಅಧಿಕಾರ ವಹಿಸಿಕೊಂಡ ಕೆಲ ದಿನಗಳಲ್ಲಿ ಅಮೆರಿಕ ಉನ್ನತ ಅಧಿಕಾರಿಯೊಬ್ಬರು ಭಾರತ ಪ್ರವಾಸ ಕೈಗೊಂಡು ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಇದಕ್ಕೂ ಮೊದಲು ದೋವಲ್ ಭೇಟಿ ಮಾಡಿದ ಜೇಕ್, ಭಾರತ-ಅಮೆರಿಕ ಇನಿಶಿಯೇಟಿವ್ ಆನ್ ಕ್ರಿಟಿಕಲ್ ಆ್ಯಂಡ್ ಎಮರ್ಜಿಂಗ್ ಟೆಕ್ನಾಲಜಿ(ಐಸಿಇಟಿ), ದ್ವಿಪಕ್ಷೀಯ ರಕ್ಷಣಾ ಸಂಬಂಧಗಳು ಮತ್ತು ಪ್ರಾದೇಶಿಕ ಭದ್ರತಾ ಪರಿಸ್ಥಿತಿ ಕುರಿತು ಮಹತ್ವದ ಚರ್ಚೆ ನಡೆಸಿದರು. ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಜತೆ ದ್ವಿಪಕ್ಷೀಯ, ಪ್ರಾದೇಶಿಕ ಹಾಗೂ ಜಾಗತಿಕ ವಿಚಾರಗಳ ಬಗ್ಗೆ ಸಮಗ್ರ ಚರ್ಚೆ ನಡೆಸಿದರು.

# ಇವಿಎಂ ಹ್ಯಾಕ್ ಸಾಧ್ಯ: ಸ್ಯಾಮ್

## ಎಲಾನ್ ಮಸ್ಕ್ ಹೇಳಿಕೆಗೆ ಬೆಂಬಲ | 'ಎಕ್ಸ್' ಖಾತೆಯಲ್ಲಿ ಹಂಚಿಕೆ

**ದೆಹಲಿ:** ಲೋಕಸಭಾ ಚುನಾವಣೆ ಬಳಿಕವೂ ದೇಶದಲ್ಲಿ 'ಇವಿಎಂ' ವಿಶ್ವಾಸಾರ್ಹತೆ ಬಗ್ಗೆ ಚರ್ಚೆ ಮುಂದುವರೆದೇ ಇದೆ. ಇವಿಎಂ ಹ್ಯಾಕ್ ಮಾಡಬಹುದು ಎಂಬ ಎಲಾನ್ ಮಸ್ಕ್ ಹೇಳಿಕೆಗೆ ಕಾಂಗ್ರೆಸ್ ಸಾಗರೋತ್ತರ ಘಟಕದ ಮಾಜಿ ಅಧ್ಯಕ್ಷ ಸ್ಯಾಮ್ ಪಿತ್ರೋಡ ದನಿಗೂಡಿಸಿದ್ದಾರೆ. 'ಇವಿಎಂ' ತಿರುಚಲು ಸಾಧ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

'ಟೆಲಿಕಾಂ, ಮಾಹಿತಿ ತಂತ್ರಜ್ಞಾನ, ಸಾಫ್ಟ್‌ವೇರ್ ಕ್ಷೇತ್ರದಲ್ಲಿ 60 ವರ್ಷ ಕೆಲಸ ಮಾಡಿದ್ದೇನೆ. ವಿದ್ಯುನ್ಮಾನ ಮತ ಯಂತ್ರ (ಇವಿಎಂ) ಕಾರ್ಯ ವಿಧಾನ ಅಧ್ಯಯನ ನಡೆಸಿದ್ದೇನೆ. ಈ ಯಂತ್ರವನ್ನು ಹ್ಯಾಕ್ ಮಾಡಲು ಅಥವಾ ತಿರುಚಲು ಸಾಧ್ಯವಿದೆ. ಹಾಗಾಗಿಯೇ 'ಬ್ಯಾಲೆಟ್ ಪೇಪರ್'(ಮತಪತ್ರ) ಮಾತ್ರವೇ ಚುನಾವಣೆಗೆ ಉತ್ತಮ ಆಯ್ಕೆ. ಇವಿಎಂ ಸ್ವತಂತ್ರ ನಿರ್ವಹಣೆಯ ಯಂತ್ರಗಳಲ್ಲ. ಅವು ವಿವಿಪ್ಯಾಟ್ ನಂತಹ ಕ್ಲಿಷ್ಟ ವ್ಯವಸ್ಥೆಗೆ ಜೋಡಣೆಗೊಂಡಿವೆ. ಅದರಲ್ಲಿನ ಲಾಜಿಸ್ಟಿಕ್ ವ್ಯವಸ್ಥೆಯು

ಯಂತ್ರದಲ್ಲಿ ಬೇಕಾದರೆ ನಿರ್ದಿಷ್ಟ ಬದಲಾವಣೆಗಳನ್ನು ಮಾಡಲು ಅನುವು ಮಾಡಿಕೊಡುವಂತಹುದಾಗಿದೆ' ಎಂದು ಸ್ಯಾಮ್ ಪಿತ್ರೋಡ ಅಭಿಪ್ರಾಯಪಟ್ಟಿದ್ದು, 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಇವಿಎಂ ಹ್ಯಾಕ್ ಮಾಡಬಹುದು. ಹಾಗಾಗು ಅವನ್ನು ಅಮೆರಿಕದ ಚುನಾವಣೆಯಲ್ಲಿ ಬಳಸದಿರುವುದೇ ಉತ್ತಮ ಎಂದು ಎಲಾನ್ ಮಸ್ಕ್ ಸಲಹೆ ನೀಡಿದ್ದರು. ಆ ಮಾತಿಗೆ ರಾಹುಲ್ ಗಾಂಧಿ, ಅಖಿಲೇಶ್ ಯಾದವ್ ದನಿಗೂಡಿಸಿ, ಇವಿಎಂ ಬಗ್ಗೆ ಇಷ್ಟೊಂದು ಪ್ರಶ್ನೆಗಳಿರುವಾಗಲೂ ಬಿಜೆಪಿ ಏಕೆ ಇವಿಎಂ ಬೆಂಬಲಿಸುತ್ತಿದೆ ಎಂದು ಪ್ರಶ್ನಿಸಿದ್ದರು. ಈಗ ಚರ್ಚೆಗೆ ಪಿತ್ರೋಡಾ ಕೂಡ ಸೇರಿದಂತಾಗಿದೆ.

# ರಿಯಾಸಿ ದಾಳಿ-ಎನ್‌ಐಎ ತನಿಖೆ: ಸಿಡಿಎಸ್ ಜ.ಅನಿಲ್ ಚೌಹಾಣ್ ಜಮ್ಮು ಭೇಟಿ

**ದೆಹಲಿ:** ಜಮ್ಮು-ಕಾಶ್ಮೀರದ ರಿಯಾಸಿಯಲ್ಲಿ ಯಾತ್ರಾರ್ಥಿಗಳ ಬಸ್ ಮೇಲಿನ ಉಗ್ರ ದಾಳಿಯ ತನಿಖೆ ಹೊಣೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಗೆ ವಹಿಸಲಾಗಿದೆ.

ಜಮ್ಮು-ಕಾಶ್ಮೀರದಲ್ಲಿ ಉಗ್ರರ ದಾಳಿ ಹೆಚ್ಚುತ್ತಿರುವ ಹಿನ್ನೆಲೆ ಗೃಹ ಸಚಿವ ಅಮಿತ್ ಶಾ ಭಾನುವಾರ ಮಹತ್ವದ ಸಭೆ ನಡೆಸಿದ ಬಳಿಕ ರಿಯಾಸಿ ಉಗ್ರ ದಾಳಿ ಪ್ರಕರಣದ ತನಿಖೆಯನ್ನು ಕೇಂದ್ರ ಗೃಹ ಸಚಿವಾಲಯ ಸೋಮವಾರ ಎನ್‌ಐಎಗೆ ವಹಿಸಿದೆ. ರಿಯಾಸಿ ಉಗ್ರ ದಾಳಿ ಘಟನೆಯಲ್ಲಿ 'ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ'(ಯುಎಪಿಎ) ಅಡಿ ಎನ್‌ಐಎ ಪ್ರಕರಣ ದಾಖಲಿಸಿದೆ.



- ಭದ್ರತಾ ವ್ಯವಸ್ಥೆ ಮತ್ತು ಸೇನಾಪಡೆಗಳ ನಿಯೋಜನೆಯನ್ನು ಪರಿಶೀಲನೆ

ಮೂರೂ ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಅವರು ಸೋಮವಾರ ಜಮ್ಮುವಿಗೆ ಭೇಟಿ ನೀಡಿ ಭದ್ರತಾ ವ್ಯವಸ್ಥೆ ಮತ್ತು ಸೇನಾಪಡೆಗಳ ನಿಯೋಜನೆಯನ್ನು ಪರಿಶೀಲಿಸಿದರು. ಜತೆಗೆ ಅಮರನಾಥ ಯಾತ್ರೆ ಆರಂಭವಾಗಲಿರುವ ಹಿನ್ನೆಲೆ ಯಾತ್ರಾರ್ಥಿಗಳ ಸುರಕ್ಷತೆಗೆ ಕೈಗೊಂಡ ಕ್ರಮಗಳ ಬಗೆಗೂ ಚರ್ಚೆ ನಡೆಸಿದ್ದಾರೆ. ನಾಗ್ರೋಟಾದ 16 ಕಾರ್ಪ್ಸ್ ಪ್ರಧಾನ ಶಿಬಿರಕ್ಕೆ ಭೇಟಿ ನೀಡಿದ ಅನಿಲ್ ಚೌಹಾಣ್‌ಗೆ ಉತ್ತರ ಸೇನಾ ಕಮಾಂಡರ್ ಸೇರಿ ಉನ್ನತ ಅಧಿಕಾರಿಗಳು ಜಮ್ಮು ಸುರಕ್ಷತೆ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಹಾಗೂ ಉಗ್ರರ ದಾಳಿ ಹೆಚ್ಚಳ ಬಗ್ಗೆ ಮಾಹಿತಿ ನೀಡಿದರು.

# ರಸ್ತೆಬದಿ ಮಲಗಿದ್ದ ಜನರ ಮೇಲೆರಗಿದ ಕಾರು; ಇಬ್ಬರ ಸಾವು

**ನಾಗಪುರ:** ಮಹಾರಾಷ್ಟ್ರ ರಾಜ್ಯದ ನಾಗಪುರದ ಡಿಗೋರಿ ಪ್ರದೇಶದಲ್ಲಿ ಪಾದಾಚಾರಿ ಮಾರ್ಗದಲ್ಲಿ ಮಲಗಿದ್ದ ರಾಜಸ್ಥಾನದ ಅಲೆಮಾರಿ ಕುಟುಂಬದ 9 ಜನರ ಮೇಲೆ ಸೋಮವಾರ ನಡುಕಿನಲ್ಲಿ ವೇಗವಾಗಿ ಸಾಗಿ ಬಂದ ಕಾರು ಚಲಿಸಿದ್ದು, ಅಪಘಾತದಲ್ಲಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. 7 ಮಂದಿ ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ.

ಗೊಂಬೆಗಳನ್ನು ಮಾರಿಕೊಂಡು ಜೀವನ ನಡೆಸುವ ರಾಜಸ್ಥಾನ ಮೂಲದ ಕುಟುಂಬದ 9 ಜನರು ಪಾದಚಾರಿ ಮಾರ್ಗದ ಮೇಲೆ ಮಲಗಿದ್ದರು. ಹುಟ್ಟುಹಬ್ಬದ ಪಾರ್ಟಿ ಆಚರಿಸಿ ಚೆನ್ನಾಗಿ ಮದ್ಯ ಸೇವಿಸಿದ್ದ 6 ಯುವಕರು ಪ್ರಯಾಣಿಸುತ್ತಿದ್ದ ಕಾರು ಸೋಮವಾರ ನಸುಕಿನ 12.40ರ ವೇಳೆ ಅಲೆಮಾರಿ ಕುಟುಂಬ ಮಲಗಿದ್ದ ಪಾದಚಾರಿ ಮಾರ್ಗದಲ್ಲಿಯೇ ವೇಗವಾಗಿ ಸಾಗಿದೆ. ಮಧ್ಯದ ಅಮಲಿನಲ್ಲಿದ್ದ ಭೂಷಣ್ ಲಂಜೇವರ್ ಕಾರನ್ನು ವೇಗವಾಗಿ ಚಲಾಯಿಸಿ ಗೊಂಬೆ ಮಾರಾಟಗಾರ ಕುಟುಂಬದವರ ಮೇಲೆಯೇ ಹರಿಸಿದ್ದಾನೆ. ಅಪಘಾತದ ಸ್ಥಳದಲ್ಲೇ ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದರೆ, ನಾಲ್ಕು ಮಕ್ಕಳು ಸೇರಿ 7 ಮಂದಿ ಗಂಭೀರ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತದ ಬಳಿಕ ಕಾರಿನಲ್ಲಿದ್ದವರು ಪರಾರಿಯಾಗಿದ್ದಾರೆ. ಸಿಸಿಟಿವಿ ದೃಶ್ಯಾವಳಿ ಆಧರಿಸಿ ಚಾಲಕ ಸೇರಿ ಐವರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

# ಪ್ರೇರಣಾ ಸ್ಥಳದಲ್ಲಿ ರಾಣಿ ಚನ್ನಮ್ಮ, ಬಸವಣ್ಣ

**ದೆಹಲಿ:** ಸಂಸತ್ ಕಟ್ಟಡದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ 'ಪ್ರೇರಣಾ ಸ್ಥಳ'ವನ್ನು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಭಾನುವಾರ ಉದ್ಘಾಟಿಸಿದ್ದಾರೆ. ಈ ಸಂದರ್ಭದಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭಾ ಉಪಾಧ್ಯಕ್ಷ ಹರಿವಂಶ ನಾರಾಯಣ ಸಿಂಗ್, ಕೇಂದ್ರ ಸಚಿವ ಕಿರಣ್ ರಿಜಿಜು, ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ , ಅರ್ಜುನ್ ರಾಮ್ ಮೇಘ್ವಾಲ್ ಸೇರಿ ಹಲವು ನಾಯಕರು ಉಪಸ್ಥಿತರಿದ್ದರು.

ಉದ್ಘಾಟನೆ ಬಳಿಕ ಮಾತನಾಡಿದ ಉಪರಾಷ್ಟ್ರಪತಿ ಜಗದೀಪ್ ಧನಕರ್ ' ಪ್ರೇರಣಾ ಸ್ಥಳ ಯಾವುದೇ ಧಾರ್ಮಿಕ ಕೇಂದ್ರಕ್ಕೂ ಕಮ್ಮಿ ಇಲ್ಲ. ನನಗೆ ಇಲ್ಲೊಂದು ಪ್ರೇರಣೆ ಸಿಕ್ಕಿದೆ. ಮಹಾನ್ ನಾಯಕರ ಸಾನಿಧ್ಯದಲ್ಲಿ ಒಂದು ಶಕ್ತಿ ಇದೆ , ಯಾರೇ ಈ ಜಾಗದಲ್ಲಿ ಸಮಯ ಕಳೆದರೂ ಅವರಿಗೊಂದು ಪ್ರೇರಣೆ ಸಿಗಲಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಲ್ಲಾ ನಾಯಕರ ಪ್ರತಿಮೆಗಳನ್ನು ಗೌರವ ಪೂರ್ವಕವಾಗಿ ಸ್ಥಳಾಂತರಿಸಿ ಪ್ರೇರಣಾ ಸ್ಥಳದಲ್ಲಿ ಒಟ್ಟಾಗಿ ಇರಿಸಲಾಗಿದೆ. ಇಂದಿನ ಹಾಗೂ ಮುಂದಿನ ಪೀಳಿಗೆಯವರು ಮಹಾನ್ ಕ್ರಾಂತಿ, ಸಂಸ್ಕೃತಿ, ಸ್ವಾತಂತ್ರ್ಯ ಹೋರಾಟದ ಬಗ್ಗೆ

ಉತ್ತಮ ಮಾಹಿತಿ ಪಡೆಯಲಿದ್ದಾರೆ. ಪ್ರೇರಣಾ ಸ್ಥಳ ಮುಂದಿನ ಪೀಳಿಗೆಗೆ ಸದಾ ಪ್ರೇರಣೀಯ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

ಈ ಮೊದಲು ಸಂಸತ್ ಆವರಣದಲ್ಲಿ ಇದ್ದ ಮಹಾತ್ಮಾ ಗಾಂಧಿ, ಮೋತಿಲಾಲ್ ನೆಹರು, ಅಂಬೇಡ್ಕರ್, ಶಿವಾಜಿ, ರಾಣಿ ಚನ್ನಮ್ಮ, ಬಸವಣ್ಣ ಸೇರಿ ಅನೇಕ ಗಣ್ಯರ ಪ್ರತಿಮೆಗಳನ್ನು ಸ್ಥಳಾಂತರಿಸಲಾಗಿತ್ತು. ನೂತನವಾಗಿ ಪ್ರೇರಣಾ ಸ್ಥಳ ನಿರ್ಮಿಸಲಾಗಿದ್ದು ಇಲ್ಲಿ ಎಲ್ಲಾ ಗಣ್ಯರ ಪ್ರತಿಮೆಗಳನ್ನು ಒಂದೇ ಸ್ಥಳದಲ್ಲಿ ಈಗ ಕಾಣಬಹುದಾಗಿದೆ.

# ಆರೋಪಿ ನಿಖಿಲ್ ಅಮೆರಿಕಕ್ಕೆ ಹಸ್ತಾಂತರ

**ದೆಹಲಿ:** ಸಿಖ್ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನುನ್ ಹತ್ಯೆಗೆ ಸಂಚು ರೂಪಿಸಿದ ಆರೋಪದಡಿ ಭಾರತ ಮೂಲದ ನಿಖಿಲ್ ಗುಪ್ತಾನನ್ನು ಬಂಧಿಸಿದ್ದ ಜೆಕ್ ರಿಪಬ್ಲಿಕ್ ಪೊಲೀಸರು ಕಡೆಗೂ ಆರೋಪಿಯನ್ನು ಅಮೆರಿಕಕ್ಕೆ ಭಾನುವಾರ ಹಸ್ತಾಂತರಿಸಿದರು.



ಸದ್ಯ ನ್ಯೂಯಾರ್ಕ್‌ನಲ್ಲಿ ಬಂಧನದಲ್ಲಿಡ ಲಾಗಿದೆ. ಬ್ರೂಕ್ಲಿನ್ ಮೆಟ್ರೋ ಪೊಲಿಟನ್ ಬಂಧನ ಕೇಂದ್ರದಲ್ಲಿ ನಿಖಿಲ್ ಗುಪ್ತಾ(52)ನನ್ನು ಇರಿಸಲಾಗಿತ್ತು. ಪನ್ನು ಹತ್ಯೆ ಸಂಚಿನಲ್ಲಿ ಗುಪ್ತಾ ಭಾಗಿಯಾಗಿದ್ದ ಎಂದು ಆರೋಪಿಸಿದ್ದ ಅಮೆರಿಕ ಪೊಲೀಸರು, ಆತನನ್ನ ಬಂಧಿಸಿ ಹಸ್ತಾಂತರಿಸುವಂತೆ ಜೆಕ್ ಗಣರಾಜ್ಯಕ್ಕೆ ಮನವಿ ಕೂಡ ಮಾಡಿತ್ತು. ನಿಖಿಲ್ ಭಾರತದ ಅಧಿಕಾರಿಯೊಬ್ಬರಿಗಾಗಿ ಕೆಲಸ ಮಾಡುತ್ತಿದ್ದ. ಪನ್ನುನ್ ಕೊಲ್ಲಲು ಹಂತಕರಿಗೆ 15 ಸಾವಿರ ಡಾಲರ್ ಮುಂಗಡ ನೀಡಿದ್ದ ಎಂದು ಅಮೆರಿಕ ಫೆಡರಲ್ ಪ್ರಾಸಿಕ್ಯೂಟರ್ ಆರೋಪಿಸಿದ್ದಾರೆ. ನಿಖಿಲ್ ತಮ್ಮ ವಕೀಲೆ ರೋಹಿಣಿ ಮುಸಾ ಮೂಲಕ ನ್ಯಾಯಾಲಯದಲ್ಲಿ ಆರೋಪಗಳನ್ನು ಅಲ್ಲಗಳೆದಿದ್ದಾರೆ. ಇನ್ನೊಂದೆಡೆ ಭಾರತ ಕೂಡಾ ಪನ್ನುನ್ ಹತ್ಯೆ ಸಂಚು ಆರೋಪದ ಬಗ್ಗೆ ಪ್ರತ್ಯೇಕ ತನಿಖೆ ಆರಂಭಿಸಿದೆ.

# ವಿಶ್ವನಾಥ ದರ್ಶನ: ವಾರಾಣಸಿಗೆ ಮೋದಿ

**ವಾರಾಣಸಿ:** ಪ್ರಧಾನಿಯಾಗಿ ಮೂರನೇ ಬಾರಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ನರೇಂದ್ರ ಮೋದಿ ಅವರು ತಮಗೆ 3ನೇ ಬಾರಿಗೆ ಜಯ ತಂದುಕೊಟ್ಟ ವಾರಾಣಸಿ ಲೋಕಸಭಾ ಕ್ಷೇತ್ರಕ್ಕೆ ಮಂಗಳವಾರ ಭೇಟಿ ನೀಡಲಿದ್ದಾರೆ.



ಈ ಭೇಟಿ ಸಂದರ್ಭ ಪ್ರಧಾನಿ ಕಾಶಿ ವಿಶ್ವನಾಥನ ದರ್ಶನ ಪಡೆಯಲಿದ್ದಾರೆ. ಸಂಜೆ ದಶಾಶ್ವಮೇಧ ಘಾಟ್‌ನಲ್ಲಿ ಗಂಗಾ ಆರತಿ ಕಾರ್ಯಕ್ರಮದಲ್ಲಿಯೂ ಭಾಗಿಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದಕ್ಕೂ ಮೊದಲು ಕಿಸಾನ್ ಸಮ್ಮೇಳನದಲ್ಲಿ ಭಾಗವಹಿಸಿ, ಕಿಸಾನ್ ಸಮ್ಮಾನ್ ನಿಧಿಯ 17ನೇ ಕಂತು ಬಿಡುಗಡೆ ಮಾಡಲಿದ್ದಾರೆ. ಜತೆಗೆ 21 ರೈತರನ್ನು ಭೇಟಿ ಮಾಡಿ ಅವರು ಉತ್ಪಾದಿಸುವ ಕೃಷಿ ಉತ್ಪನ್ನಗಳ ಪರಿಶೀಲನೆ ನಡೆಸಿ ಮಾಹಿತಿ ಪಡೆದುಕೊಳ್ಳಲಿದ್ದಾರೆ. ವಾರಾಣಸಿ ಲೋಕಸಭಾ ಕ್ಷೇತ್ರದ ರೈತರನ್ನು ಗೌರವಿಸುವುದು ಮೋದಿ ಅವರ ಈ ಬಾರಿಯ ಭೇಟಿ ಉದ್ದೇಶವಾಗಿದೆ ಎಂದು ಹೇಳಲಾಗಿದೆ.

ವಾರಾಣಸಿ ಲೋಕಸಭೆಯಿಂದ ಸ್ಪರ್ಧಿಸಿದ್ದ ನರೇಂದ್ರ ಮೋದಿ 1.50 ಲಕ್ಷಕ್ಕೂ ಅಧಿಕ ಮತಗಳ ಭರ್ಜರಿ ಗೆಲುವು ಸಾಧಿಸಿದ್ದಾರೆ.

# ಏರ್ ಇಂಡಿಯ ಊಟದಲ್ಲಿ ಬ್ಲೇಡ್!

**ದೆಹಲಿ:** ಏರ್ ಇಂಡಿಯ ವಿಮಾನ ಪ್ರಯಾಣಿಕರೊಬ್ಬರಿಗೆ ವಿತರಿಸಿದ ಊಟದಲ್ಲಿ ಲೋಹದ ಬ್ಲೇಡ್ ಸೇರಿರುವುದು ಜಾಲತಾಣದಲ್ಲಿ ಭಾರೀ ಚರ್ಚೆ ಹುಟ್ಟುಹಾಕಿದೆ. ಏರ್ ಇಂಡಿಯ ಸೇವಾ ಗುಣಮಟ್ಟ ಬಗೆಗೂ ಪ್ರಯಾಣಿಕರು ಅನುಭವ

ಹಂಚಿಕೊಂಡು ಖಂಡಿಸಿದ್ದಾರೆ. ಬೆಂಗಳೂರಿನಿಂದ ಸ್ಯಾನ್‌ಫ್ರಾನ್ಸಿಸ್ಕೊಗೆ ಎಐ-175 ವಿಮಾನದಲ್ಲಿ ಪ್ರಯಾಣಿಸಿದ್ದ ಮಾಥುರ್ಸ್ ಪೌಲ್‌ಗೆ ಫಿಗ್‌ಚಾಟ್‌ನಲ್ಲಿ ಬ್ಲೇಡ್ ದೊರೆತಿದೆ. ಈ ಬಗ್ಗೆ ಜಾಲತಾಣದಲ್ಲಿ ಚಿತ್ರಸಹಿತ ಮಾಹಿತಿ ಹಂಚಿಕೊಂಡ ಪೌಲ್, ಆಹಾರ ಬಾಯಿಗೆ ಹಾಕಿ ಅಗಿದಾಗ ಹಲ್ಲುಗಳಿಗೆ ಲೋಹದ ವಸ್ತು ತಾಗಿದೆ. ತಕ್ಷಣ ಆಹಾರ ಹೊರತೆಗೆದು ಪರಿಶೀಲಿಸಿದರೆ ಬ್ಲೇಡ್ ಪತ್ತೆಯಾಗಿದೆ. ಸದ್ಯ ನಾಲಿಗೆ, ಹಲ್ಲು, ಒಸಡಿಗೆ ಯಾವುದೇ ಅಪಾಯವಾಗಿಲ್ಲ. ಈ ಬಗ್ಗೆ ವಿಮಾನ ಸಿಬ್ಬಂದಿಗೆ ತಿಳಿಸಿದರೆ ಅವರು ಕ್ಷಮೆ ಯಾಚಿಸಿ ಬೇರೆ ಆಹಾರ ಕೊಟ್ಟರು ಅಷ್ಟೆ ಎಂದು ಪೌಲ್ 'ಎಕ್ಸ್'ನಲ್ಲಿ ಬರೆದಿದ್ದಾರೆ. 'ವಿಮಾನದಲ್ಲಿ ಬ್ಲೇಡ್ ಬಳಕೆ ಅಪಾಯಕಾರಿ. ಆಹಾರದಲ್ಲಿ ಸೇರಿದ್ದರಂತೂ ಜೀವಕಂಟಕ' ಎಂದು ಪೌಲ್ ಕಳವಳ ವ್ಯಕ್ತಪಡಿಸಿದ್ದಾರೆ. ಏರ್ ಇಂಡಿಯ ಪ್ರತಿಕ್ರಿಯಿಸಿ, ಆಹಾರದಲ್ಲಿ ಬ್ಲೇಡ್ ಬೆರೆತ ಬಗ್ಗೆ ತಪ್ಪು ಒಪ್ಪಿದೆ. ಸಿಬ್ಬಂದಿ ತರಕಾರಿ ಕತ್ತರಿಸುವ ಮಷಿನ್ ಪರಿಶೀಲಿಸಿದ್ದೇವೆ, ಆಹಾರ ಸುರಕ್ಷತಾ ಕ್ರಮ ಬಲಪಡಿಸುತ್ತೇವೆ ಎಂದು ಏರ್ ಇಂಡಿಯ ಅಧಿಕಾರಿಗಳು ಭರವಸೆ ನೀಡಿದ್ದಾರೆ.

# ಕ್ರೈಸ್ತರ ಕ್ಷಮೆ ಕೇಳಿದ ಕೇರಳ ಕಾಂಗ್ರೆಸ್

**ದೆಹಲಿ:** ಇಟಲಿಯ ಜಿ-7 ಶೃಂಗದಲ್ಲಿ ಪೋಪ್ ಪ್ರಾನ್ಸಿಸ್ ಮತ್ತು ಪ್ರಧಾನಿ ಮೋದಿ ಭೇಟಿಯಾಗಿದ್ದನ್ನು ಅಪಹಾಸ್ಯ ಮಾಡಿದ್ದ ಕಾಂಗ್ರೆಸ್, ಈಗ ಜಾಲತಾಣದ ಪೋಸ್ಟ್ ಡಿಲಿಟ್ ಮಾಡಿದೆ. ಅಷ್ಟೇ ಅಲ್ಲ, ಕ್ರೈಸ್ತ ಸಮುದಾಯಕ್ಕೆ ನೋವುಂಟು

ಮಾಡಿದ್ದಕ್ಕೆ ಕ್ಷಮಿಸಿ ಎಂದು ಸಮುದಾಯದ ಕ್ಷಮೆ ಕೇಳಿದೆ. ಕಾಂಗ್ರೆಸ್ ಕೇರಳ ಘಟಕ ಮೊದಲು ಮೋದಿ-ಪೋಪ್ ಫೋಟೊ ಹಂಚಿಕೊಂಡು 'ಪೋಪ್‌ಗೆ ಕೊನೆಗೂ ದೇವರನ್ನು ಭೇಟಿಯಾ ಗುವ ಅವಕಾಶ ಸಿಕ್ಕಿತು' ಎಂದು ಅಣಕಿಸಿತ್ತು. 'ದೇವರೇ ನನ್ನನ್ನು ಕಳುಹಿಸಿದ್ದಾನೆ' ಎಂಬ ಮೋದಿ ಅವರ ಈ ಹಿಂದಿನ ಹೇಳಿಕೆಯನ್ನು ಟೀಕಿಸಿತ್ತು. ಕಾಂಗ್ರೆಸ್ ನಡೆಯನ್ನು ಕ್ರೈಸ್ತ ಸಮುದಾಯ ಮತ್ತು ಬಿಜೆಪಿ ತೀವ್ರವಾಗಿ ಖಂಡಿಸಿವೆ. ಬಳಿಕ ಎಚ್ಚೆತ್ತ ಕಾಂಗ್ರೆಸ್ ಘಟಕ ಕ್ರೈಸ್ತ ಸಮದಾಯದ ಬೇಷರತ್ ಕ್ಷಮೆ ಕೋರಿದೆ. ಕಾಂಗ್ರೆಸ್ ಕೇರಳ ಘಟಕದ ಎಕ್ಸ್ ಹ್ಯಾಂಡಲರ್, ರಾಷ್ಟ್ರೀಯ ನಾಯಕರ ಅವಹೇಳನಕಾರಿ ವಿಷಯವನ್ನು ಪೋಸ್ಟ್ ಮಾಡುವುದನ್ನು ಮುಂದುವರೆಸಿದೆ. ಪೋಪ್ ಮತ್ತು ಕ್ರಿಶ್ಚಿಯನ್ ಸಮುದಾಯವನ್ನು ಅಪಹಾಸ್ಯ ಮಾಡುತ್ತಿದೆ, ಖರ್ಗೆ, ರಾಹುಲ್ ಇಂತಹ ಅಪಹಾಸ್ಯವನ್ನು ಒಪ್ಪುತ್ತಾರೆಯೇ?' ಎಂದು ಕೆ.ಸುರೇಂದ್ರನ್ ಪ್ರಶ್ನಿಸಿದ್ದಾರೆ.




# ದಾಖಲೆ ಬರೆದ ಸ್ಪಿನ್ನರ್ ಸಂದೀಪ್ ಲಮಿಚಾನೆ

**ಕಿಂಗ್‌ಸ್ಟೌನ್:** ಅತ್ಯಾಚಾರ ಪ್ರಕರಣ ಆರೋಪದಲ್ಲಿ ಜೈಲು ಶಿಕ್ಷೆ ಅನುಭವಿಸಿ ನಿರ್ದೋಷಿ ಎಂದು ಸಾಬೀತಾದ ಬಳಿಕ ಟಿ20 ವಿಶ್ವಕಪ್ ಆಡಲಿಳಿದ ನೇಪಾಳ ತಂಡದ ಪ್ರಮುಖ ಸ್ಪಿನ್ನರ್ ಸಂದೀಪ್ ಲಮಿಚಾನೆ ಅವರು ಟಿ20 ಕ್ರಿಕೆಟ್‌ನಲ್ಲಿ ದಾಖಲೆಯೊಂದನ್ನು ಬರೆದಿದ್ದಾರೆ. ಅತಿ ಕಡಿಮೆ ಪಂದ್ಯಗಳನ್ನಾಡಿ 100 ವಿಕೆಟ್ ಕಿತ್ತ ವಿಶ್ವದ 2ನೇ ಬೌಲರ್ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

ಸೋಮವಾರ ಬಾಂಗ್ಲಾದೇಶ ವಿರುದ್ಧದ ಟಿ20 ವಿಶ್ವಕಪ್ ಲೀಗ್ ಪಂದ್ಯದಲ್ಲಿ 2 ವಿಕೆಟ್ ಪಡೆಯುವ ಮೂಲಕ ವೇಗವಾಗಿ 100 ವಿಕೆಟ್ ಕಿತ್ತ ಮೈಲುಗಲ್ಲು ನಿರ್ಮಿಸಿದರು. ವಿಶ್ವ ದಾಖಲೆ ಅಫಘಾನಿಸ್ತಾನ ತಂಡದ ನಾಯಕ ರಶೀದ್ ಖಾನ್ ಹೆಸರಿನಲ್ಲಿದೆ. ರಶೀದ್ 53 ಪಂದ್ಯಗಳಿಂದ 100 ವಿಕೆಟ್ ಕಿತ್ತಿದ್ದಾರೆ. ಲಮಿಚಾನೆ 54 ಪಂದ್ಯ ಆಡಿ 100 ವಿಕೆಟ್ ಪೂರ್ತಿಗೊಳಿಸಿದರು. ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ ಸಂದೀಪ್ ಲಮಿಚಾನೆಗೆ ಯುಎಸ್ ವೀಸಾ ಲಭಿಸುವುದು ವಿಳಂಬವಾಗಿತ್ತು. ಹೀಗಾಗಿ ಅವರು ಆರಂಭಿಕ ಪಂದ್ಯಗಳಲ್ಲಿ ಆಡುವ ಅವಕಾಶ ಕಳೆದುಕೊಂಡರು.

**ಟಿ20ಯಲ್ಲಿ ವೇಗವಾಗಿ 100 ವಿಕೆಟ್ ಕಿತ್ತ ಬೌಲರ್‌ಗಳು:** ● ರಶೀದ್ ಖಾನ್–53 ಪಂದ್ಯ ● ಸಂದೀಪ್ ಲಮಿಚಾನೆ–54 ಪಂದ್ಯ ● ಹ್ಯಾರಿಸ್ ರೌಫ್– 71 ಪಂದ್ಯ ● ಮಾರ್ಕ್ ಅಡೇರ್–72 ಪಂದ್ಯ ● ಬಿಲಾಲ್ ಖಾನ್–72 ಪಂದ್ಯ ● ಲಸಿತ್ ಮಾಲಿಂಗ–76 ಪಂದ್ಯ

ಪಾಕಿಸ್ತಾನ ಕ್ರಿಕೆಟ್ ತಂಡದಲ್ಲಿ ಒಗ್ಗಟ್ಟು ಇರಲಿಲ್ಲ. ತಮ್ಮ ಸುದೀರ್ಘ ಕೋಚಿಂಗ್ ವೃತ್ತಿಜೀವನದಲ್ಲಿ ಇಂತಹ ಪರಿಸ್ಥಿತಿಯನ್ನು ಹಿಂದೆಂದೂ ನೋಡಿರಲಿಲ್ಲ.

**-ಗ್ಯಾರಿ ಕರ್ಸ್ಟನ್**
ಪಾಕಿಸ್ತಾನ್ ಕ್ರಿಕೆಟ್ ತಂಡದ ಕೋಚ್

## ಅಮಿತ್ ಶಾ ಭೇಟಿ ಮಾಡಿದ ಗೌತಮ್

**ದೆಹಲಿ:** ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮೆಂಟರ್ ಆಗಿರುವ ಗೌತಮ್ ಗಂಭೀರ್ ಅವರು ಸೋಮವಾರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದರು. ಹಿಂದಿನ ಅವಧಿಯಲ್ಲಿ ಪೂರ್ವ ದೆಹಲಿ ಕ್ಷೇತ್ರದ ಬಿಜೆಪಿ ಸಂಸದರಾಗಿದ್ದ ಗಂಭೀರ್ ಅವರು ಈ ಬಾರಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಭಾರತ ತಂಡದ ಮುಖ್ಯ ಕೋಚ್ ಹುದ್ದೆಗೆ ಪ್ರಬಲ ಆಕಾಂಕ್ಷಿಯಾಗಿರುವ ಅವರು ಸಕ್ರಿಯ ರಾಜಕಾರಣದಿಂದ ವಿರಾಮ ಪಡೆದಿದ್ದಾರೆ. ಲೋಕಸಭಾ ಚುನಾವಣಾ ಯಶಸ್ಸಿಗೆ ಅಭಿನಂದನೆ ಸಲ್ಲಿಸಲು ಶಾ ಅವರನ್ನು ಭೇಟಿ ಮಾಡಿದೆ. ಗೃಹ ಸಚಿವರಾಗಿ ಅವರ ನಾಯಕತ್ವವು ನಮ್ಮ ರಾಷ್ಟ್ರದ ಭದ್ರತೆ ಮತ್ತು ಸ್ಥಿರತೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ರಾಹುಲ್ ದ್ರಾವಿಡ್ ಅವರ ಸ್ಥಾನಕ್ಕೆ ಗಂಭೀರ್ ಅವರ ಹೆಸರು ಬಲವಾಗಿ ಕೇಳಿಬರುತ್ತಿದೆ. ಟಿ20 ವಿಶ್ವಕಪ್ ಟೂರ್ನಿಯ ಬಳಿಕ ಮುಖ್ಯ ಕೋಚ್ ಸ್ಥಾನದಿಂದ ಕೆಳಗಿಳಿಯುವುದಾಗಿ ದ್ರಾವಿಡ್ ಈಗಾಗಲೇ ಘೋಷಿಸಿದ್ದಾರೆ. ಹೊಸ ನೇಮಕಾತಿ ಕುರಿತಂತೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಯಾವುದೇ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ. ಅಶೋಕ್ ಮಲ್ಹೋತ್ರ ನೇತೃತ್ವದ ಕ್ರಿಕೆಟ್ ಸಲಹಾ ಸಮಿತಿಯು (ಸಿಎಸಿ) ಆಕಾಂಕ್ಷಿ ಅಭ್ಯರ್ಥಿಗಳ ಸಂದರ್ಶನ ನಡೆಸಲಿದೆ.

## ಮಾಲ್ಡೀವ್ಸ್-ಭಾರತ ಸಂಬಂಧ ವೃದ್ಧಿಗೆ ಯತ್ನ

**ದೆಹಲಿ:** ರಾಜತಾಂತ್ರಿಕ ಸಮಸ್ಯೆಗಳಿದ್ದರೂ ಸ್ನೇಹ ಸಂಬಂಧ ಮರೆಯದ ಭಾರತ, ಮಾಲ್ಡೀವ್ಸ್‌ಗೆ ಈದ್ ಅಲ್-ಅದಾ ಶುಭಾಷಯ ಕೋರಿದೆ. ಪ್ರಧಾನಿ ನರೇಂದ್ರ ಮೋದಿ, ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರಿಗೆ ಈದ್ ಶುಭಾಶಯ ರವಾನಿಸಿದ್ದಾರೆ. ಮಾಲ್ಡೀವ್ಸ್‌ನ ಭಾರತೀಯ ರಾಯಭಾರಿ ಕಚೇರಿ ಪ್ರಧಾನಿಯ ಈ ಶುಭಾಶಯ ಪತ್ರವನ್ನು ಹಂಚಿಕೊಂಡಿದೆ. ಪ್ರಧಾನಿ ಮೋದಿ ತಮ್ಮ ಸಂದೇಶದಲ್ಲಿ ಬಕ್ರೀದ್ ಹಬ್ಬದ ಹಿಂದಿರುವ ತ್ಯಾಗ, ಭ್ರಾತೃತ್ವ, ಸಹಾನುಭೂತಿ ಭಾವ ಉಲ್ಲೇಖಿಸಿದ್ದು, ಶಾಂತಿಯುತ ವಾತಾವರಣ ನಿರ್ಮಾಣಕ್ಕೆ ಈ ತತ್ವಗಳು ಅಗತ್ಯ ಎಂದಿದ್ದಾರೆ. ಜತೆಗೆ ಭಾರತದ ಬಹು ಸಂಸ್ಕೃತಿಯ ಭಾಗವಾಗಿ ಭಾರತದ ಉದ್ದಗಲಕ್ಕೂ ಉತ್ಸಾಹದಿಂದ ಆಚರಣೆ ಮಾಡಲಾಗುತ್ತದೆ ಎಂದು ಉಲ್ಲೇಖಿಸಿದ್ದಾರೆ. ಮಾಲ್ಡೀವ್ಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮುಯಿಜು, ಅರ್ಚಿಪೆಲಾಗೊ ಪ್ರದೇಶದಿಂದ ಭಾರತದ ಸೇನೆಯನ್ನು ಪೂರ್ಣ ಹಿಂಪಡೆಯುವಂತೆ ಆಗ್ರಹಿಸಿದ್ದರು.

## ಎಚ್‌ಎಎಲ್‌ಗೆ ₹50 ಸಾ. ಕೋಟಿ ಟೆಂಡರ್

**ದೆಹಲಿ:** ದೇಶದಲ್ಲೇ ತಯಾರಿಸಲ್ಪಟ್ಟ ನಾಗಾಸ್ತ್ರ ಯುದ್ಧ ಡ್ರೋನ್‌ಗಳು ಭಾರತೀಯ ಸೇನೆ ಸೇರಿದ ಬೆನ್ನಲ್ಲೇ, ಈಗ 156 ಹಗುರ ಯುದ್ಧ ಹೆಲಿಕಾಪ್ಟರ್‌ಗಳನ್ನು ತಯಾರಿಸಿಕೊಡುವಂತೆ ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್) ಕಂಪನಿಗೆ ರಕ್ಷಣಾ ಸಚಿವಾಲಯ ಬೇಡಿಕೆ ಇಟ್ಟಿದೆ. ಎಚ್‌ಎಎಲ್ ಜತೆಗೆ 50 ಸಾವಿರ ಕೋಟಿ ರು. ಟೆಂಡರ್‌ಗೆ ಒಪ್ಪಂದ ಮಾಡಿಕೊಂಡಿರುವ ರಕ್ಷಣಾ ಸಚಿವಾಲಯ 156 'ಪ್ರಚಂಡ ಯುದ್ಧ ಹೆಲಿಕಾಪ್ಟರ್' ತಯಾರಿಸಿ ಕೊಡಲು ಕೋರಿಕೆ ಸಲ್ಲಿಸಿದೆ. ಈ ಬಗ್ಗೆ ಎಚ್‌ಎಎಲ್ ಮಾಹಿತಿ ನೀಡಿದ್ದು, ಬೃಹತ್ ಟೆಂಡರ್ ದೊರೆತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದೆ. 156 ಪ್ರಚಂಡ ಹೆಲಿಕಾಪ್ಟರ್‌ಗಳಲ್ಲಿ 90 ಕಾಪ್ಟರ್‌ಗಳು ಭಾರತೀಯ ಸೇನೆ ಸೇರಲಿದ್ದರೆ, 66 ಕಾಪ್ಟರ್‌ಗಳು ವಾಯು ಸೇನೆಗೆ ಸೇರಲಿವೆ. ಎಲ್‌ಸಿಎಚ್ (ಪ್ರಚಂಡ) ಯುದ್ಧ ಹೆಲಿಕಾಪ್ಟರ್‌ಗಳು ಲೈಟ್ ಹೆಲಿಕಾಪ್ಟರ್ ಧ್ರುವ್‌ಗೆ ಸಾಮ್ಯತೆ ಹೊಂದಿವೆ. ಪತನವಾಗುವ ಸಂದರ್ಭ ಎದುರಾದರೆ ಕಾಪ್ಟರ್‌ಗೆ ಹೆಚ್ಚು ಹಾನಿಯಾಗದಂತೆ ತಡೆಯುವ ಲ್ಯಾಂಡಿಂಗ್ ಗೇರ್ ಹೊಂದಿವೆ.

# ಬೌಲರ್‌ಗಳ ಚಮತ್ಕಾರ ಸೂಪರ್ 8ಕ್ಕೆ ಬಾಂಗ್ಲಾ

### ನೇಪಾಳದ ವಿರುದ್ಧ ಬಾಂಗ್ಲಾದೇಶಕ್ಕೆ 21 ರನ್‌ಗಳ ಜಯಭೇರಿ

**ಕಿಂಗ್‌ಸ್ಟನ್:** ತಂಜಿಮ್ ಹಸನ್ ಸಾಕಿಬ್(7ಕ್ಕೆ 4) ಅವರ ಘಾತಕ ಬೌಲಿಂಗ್ ದಾಳಿಯ ನೆರವಿನಿಂದಾಗಿ ಸೂಪರ್-8 ಪ್ರವೇಶಕ್ಕೆ ಗೆಲ್ಲಲೇ ಬೇಕಿದ್ದ ಪಂದ್ಯದಲ್ಲಿ ಬಾಂಗ್ಲಾದೇಶ ಮೇಲುಗೈ ಸಾಧಿಸಿದೆ. ನೇಪಾಳ ವಿರುದ್ಧ 21 ರನ್ ಅಂತರದಿಂದ ಗೆದ್ದು ಸೂಪರ್-8ಗೆ ಪ್ರವೇಶ ಪಡೆದಿದೆ. ಭಾರತ, ಆಸ್ಟ್ರೇಲಿಯಾ, ಅಫಘಾನಿಸ್ತಾನ ತಂಡದ ಜತೆ 'ಎ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಬಾಂಗ್ಲಾ ಗೆಲುವಿನಿಂದ ನೆದರ್ಲೆಂಡ್ಸ್ ತಂಡ ಟೂರ್ನಿಯಿಂದ ಹೊರಬಿದ್ದಿತು.

ಇಲ್ಲಿನ ಸೇಂಟ್ ವಿನ್ಸೆಂಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಬಾಂಗ್ಲಾದೇಶ 19.3 ಓವರ್‌ಗಳಲ್ಲಿ ಕೇವಲ 106 ರನ್‌ಗೆ ಕುಸಿತ ಕಂಡಿತು. ಈ ಮೊತ್ತವನ್ನು ನೋಡುವಾಗ ಬಾಂಗ್ಲಾ ಸೋಲು ಕಾಣಬಹುದೆಂದು ಊಹಿಸಲಾಯಿತು. ಆದರೆ, ಬಾಂಗ್ಲಾ ಬೌಲರ್‌ಗಳು ಉತ್ಕೃಷ್ಟ ಮಟ್ಟದ ಬೌಲಿಂಗ್ ದಾಳಿ ನಡೆಸಿ ನೇಪಾಳವನ್ನು 85 ರನ್‌ಗೆ ಕಟ್ಟಿಹಾಕಿ ಅಮೋಘ ಗೆಲುವು ಸಾಧಿಸಿದರು.

ಬಾಂಗ್ಲಾದೇಶ ಈ ಪಂದ್ಯದಲ್ಲಿ ಸೋಲು ಕಾಣುತ್ತಿದ್ದರೆ, ನೆದರ್ಲೆಂಡ್ಸ್ ತಂಡಕ್ಕೂ ಸೂಪರ್-8 ಹಂತಕ್ಕೇರುವ ಅವಕಾಶವಿತ್ತು. ಆದರೆ ಬಾಂಗ್ಲಾ ಗೆಲುವಿನಿಂದ ನೆದರ್ಲೆಂಡ್ಸ್ ತಂಡ ಹೊರಬಿದ್ದಿತು. ನೆದರ್ಲೆಂಡ್ಸ್ ತಂಡ ಲಂಕಾ ವಿರುದ್ಧ 83 ರನ್ ಅಂತರದ ಸೋಲು ಕಂಡಿತು. ಈ ಪಂದ್ಯ ಗೆದ್ದಿದ್ದರೂ ಕೂಡ ನೆದರ್ಲೆಂಡ್ಸ್‌ಗೆ ಯಾವುದೇ ಲಾಭವಾಗುತ್ತಿರಲಿಲ್ಲ.

ಸಣ್ಣ ಮೊತ್ತವನ್ನು ಚೇಸಿಂಗ್ ನಡೆಸಿದ ನೇಪಾಳ ಆರಂಭಿಕ ಆಘಾತ ಎದುರಿಸಿದರೂ ಕೂಡ ಮಧ್ಯಮ ಕ್ರಮಾಂಕದಲ್ಲಿ ಕುಶಾಲ್ ಮಲ್ಲ ಮತ್ತು ದೀಪೇಂದ್ರ ಸಿಂಗ್ ಐರಿ ಉತ್ತಮ ಜತೆಯಾಟವೊಂದನ್ನು ಸಂಘಟಿಸಿದ ಕಾರಣ ತಂಡ ಚೇತರಿಕೆಯ ಹಾದಿಗೆ ಮರಳಿ ಗೆಲುವು ಕಾಣುವ ಸ್ಥಿತಿಯಲ್ಲಿತ್ತು. ಆದರೆ, ಮುಸ್ತಫಿಝುರ್ ರೆಹಮಾನ್ ಅವರು ಉಭತ ಆಟಗಾರರ ವಿಕೆಟ್ ಬೇಟೆಯಾಡಿ ಬಾಂಗ್ಲಾಗೆ ಯಶಸ್ಸು ತಂದುಕೊಟ್ಟರು. ಕುಶಾಲ್ ಮಲ್ಲ 27 ರನ್ ಬಾರಿಸಿದರೆ, ದೀಪೇಂದ್ರ ಸಿಂಗ್ 25 ರನ್ ಗಳಿಸಿದರು. ಇವರಿಬ್ಬರ ವಿಕೆಟ್ ಪತನಗೊಳ್ಳುತ್ತಿದ್ದಂತೆ ನೇಪಾಳ ಸೋಲು ಕೂಡ ಖಚಿತಗೊಂಡಿತು.

ಬಾಂಗ್ಲಾದೇಶದ ಪರ ಘಾತಕ ಬೌಲಿಂಗ್ ದಾಳಿ ನಡೆಸಿದ ತಂಜಿಮ್ ಹಸನ್ ಸಾಕಿಬ್ 4 ಓವರ್ ಎಸೆದು 2 ಮೇಡನ್ ಸಹಿತ ಕೇವಲ 7 ರನ್‌ಗೆ 4 ವಿಕೆಟ್ ಕಿತ್ತು. ಜೀವನಶ್ರೇಷ್ಠ ಬೌಲಿಂಗ್ ಪ್ರದರ್ಶನ ತೋರಿದರು. ಮುಸ್ತಫಿಜುರ್ ರೆಹಮಾನ್ 7 ರನ್‌ಗೆ 3 ವಿಕೆಟ್ ಪಡೆದರು. ನಾಯಕ ಶಕೀಬ್ 2 ವಿಕೆಟ್ ಕಿತ್ತು ಮಿಂಚಿದರು. ಮುಂದಿನ ಪಂದ್ಯದಲ್ಲಿ ಶಕೀಬ್ ಮೊದಲ ಎಸೆತದಲ್ಲೇ ವಿಕೆಟ್ ಕಿತ್ತರೆ ಬ್ರೋಕನ್ ಹ್ಯಾಟ್ರಿಕ್ ವಿಕೆಟ್ ಕಿತ್ತ ದಾಖಲೆ ಮಾಡಲಿದ್ದಾರೆ.

ಮೊದಲು ಬ್ಯಾಟಿಂಗ್ ನಡೆಸಿದ ಬಾಂಗ್ಲಾ ತಂಡ ಖಾತೆ ತೆರೆಯುವ ಮುನ್ನವೇ ವಿಕೆಟ್ ಕಳೆದುಕೊಂಡಿತು. ಬಳಿಕ ಬಂದ ಆಟಗಾರರು ಕೂಡ ಸತತವಾಗಿ ವಿಕೆಟ್ ಕಳೆದುಕೊಂಡು ಪೆವಿಲಿಯನ್ ಪರೇಡ್ ನಡೆಸಿದರು. ನಾಯಕ ಶಕೀಬ್ ಅಲ್ ಹಸನ್ 17 ರನ್ ಬಾರಿಸಿದ್ದೇ ತಂಡದ ಪರ ಆಟಗಾರನೊಬ್ಬ ಬಾರಿಸಿದ ಗರಿಷ್ಠ ಸ್ಕೋರ್. ನೇಪಾಳ ಪರ ಸೋಂಪಾಲ್ ಕಾಮಿ(2), ಅತ್ಯಾಚಾರ ಆರೋಪದಲ್ಲಿ ಜೈಲು ಶಿಕ್ಷೆ ಅನುಭವಿಸಿ ಇದೀಗ ನಿರಪರಾಧಿ ಎನಿಸಿಕೊಂಡಿರುವ ಸಂದೀಪ್ ಲಮಿಚಾನೆ(2), ನಾಯಕ ರೋಹಿತ್ ಪೌಡೆಲ್(2) ಮತ್ತು ದೀಪೇಂದ್ರ ಸಿಂಗ್(2) ವಿಕೆಟ್ ಕಿತ್ತರು.

### ಐರ್ಲೆಂಡ್ ವಿರುದ್ಧ ಪಾಕ್‌ಗೆ 3 ವಿಕೆಟ್‌ಗಳ ಗೆಲುವು

# ಗೆದ್ದರೂ ಟೂರ್ನಿಯಿಂದ ಹೊರಬಿದ್ದ ಪಾಕಿಸ್ತಾನ

**ಲಾಡೆರ್‌ಹಿಲ್:** ವೇಗಿ ಶಹೀನ್ ಶಾ ಅಫ್ರಿದಿ, ಸ್ಪಿನ್ನರ್ ಇಮಾದ್ ವಾಸೀಂ ಅವರ ಅಮೋಘ ಬೌಲಿಂಗ್ ಹಾಗೂ ನಾಯಕ ಬಾಬರ್ ಆಜಂ (ಅಜೇಯ 32, 34ಎ) ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಪಾಕಿಸ್ತಾನ ತಂಡ ಭಾನುವಾರ ಐರ್ಲೆಂಡ್ ಎದುರು ಮೂರು ವಿಕೆಟ್‌ಗಳ ಗೆಲುವು ದಾಖಲಿಸಿತು.

ಪಾಕಿಸ್ತಾನ 4 ಪಂದ್ಯಗಳಿಂದ 4 ಅಂಕ ಗಳಿಸಿ ಲೀಗ್ ಹಂತದ ಅಭಿಯಾನ ಪೂರ್ಣಗೊಳಿಸಿತು. ಭಾರತ ಮತ್ತು ಅಮೆರಿಕ ತಂಡಗಳು ಈಗಾಗಲೇ ಗುಂಪಿನಿಂದ ಸೂಪರ್ 8ರ ಹಂತ ಪ್ರವೇಶಿಸಿವೆ.

ಟಿ20 ವಿಶ್ವಕಪ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಫ್ರಿದಿ (22ಕ್ಕೆ3) ಮತ್ತು ವಾಸೀಂ (8ಕ್ಕೆ3) ಅವರ ಪರಿಣಾಮಕಾರಿ ದಾಳಿಯ ಮುಂದೆ ಐರ್ಲೆಂಡ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 106 ರನ್ ಗಳಿಸಿತು.

ಈ ಅಲ್ಪ ಮೊತ್ತದ ಗುರಿ ಬೆನ್ನಟ್ಟಿದ ಪಾಕ್ ತಂಡಕ್ಕೆ ಬ್ಯಾರಿ ಮೆಕಾರ್ಥಿ (15ಕ್ಕೆ3) ಹಾಗೂ ಕರ್ಟಿಸ್ ಕ್ಯಾಂಪರ್ (24ಕ್ಕೆ2) ಆಘಾತ ನೀಡಿದರು. ಆದರೆ ಬಾಬರ್ ಅವರ ಸಂಯಮದ ಆಟದಿಂದ 18.5 ಓವರ್‌ಗಳಲ್ಲಿ 111 ರನ್ ಗಳಿಸಿ ಜಯಭೇರಿ ಬಾರಿಸಿತು.

ಈ ಪಂದ್ಯದಲ್ಲೂ ಪಾಕಿಸ್ತಾನದ ಮಧ್ಯಮ ಕ್ರಮಾಂಕದ ಆಟಗಾರರು ವಿಫಲರಾದರು. ಫಖರ್ ಜಮಾನ್ (5), ಉಸ್ಮಾನ್ ಖಾನ್ (2), ಶದಾಬ್ ಖಾನ್ (0), ಇಮಾದ್ ವಾಸೀಂ (4), ಅಬ್ಬಾಸ್ ಅಫ್ರಿದಿ (17) ಅವರು ನಿರಾಸೆ ಮೂಡಿಸಿದರು. ಒಂದು ಹಂತದಲ್ಲಿ 62 ರನ್‌ಗೆ 6 ವಿಕೆಟ್‌ಗೆ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಒಂದೆಡೆ ವಿಕೆಟ್‌ಗಳು ನಿಯಮಿತವಾಗಿ ಪತನವಾಗುತ್ತಿದ್ದರೆ ಬಾಬರ್ ಅವರು ದಿಟ್ಟತನದಿಂದ ಆಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಶಹೀನ್ ಅಫ್ರಿದಿ ಅವರು ಐದು ಎಸೆತಗಳಲ್ಲಿ 13 ರನ್ ಗಳಿಸಿ ಅಜೇಯರಾದರು. ಎರಡು ಸಿಕ್ಸರ್ ಸಹ ಬಾರಿಸಿದರು. ಇದಕ್ಕೂ ಮುನ್ನ ಗರೆತ್ ಡೆಲನಿ (31; 19ಎ) ಅವರು ಕೊನೆಯ ಹಂತದಲ್ಲಿ ಮಿಂಚಿದ್ದರಿಂದ ಐರ್ಲೆಂಡ್ ತಂಡವು 100ರ ಗಡಿ ದಾಟಿತು. ಗರೆತ್ ಅವರು 3 ಸಿಕ್ಸರ್ ಬಾರಿಸಿದರು.

ಅಫ್ರಿದಿ ಹಾಕಿದ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ಆ್ಯಂಡ್ರ್ಯೂ ಬಲ್ಬಿರ್ನಿ ಮತ್ತು ಲಾರ್ಕನ್ ಟಕ್ಕರ್ ವಿಕೆಟ್‌ಗಳನ್ನು ಪತನವಾದವು.

ಇನ್ನೊಂದೆಡೆಯಿಂದ ಆರ್ಮಿ ಮತ್ತು ಹ್ಯಾರಿಸ್ ರವೂಫ್ ಕೂಡ ಉತ್ತಮ ಬೌಲಿಂಗ್ ಮಾಡಿದರು. ಇಮದ್ ವಾಸೀಂ ಅವರು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವಿಕೆಟ್ ಗಳಿಸಿ ಐರ್ಲೆಂಡ್ ತಂಡವು ಹೆಚ್ಚು ಮೊತ್ತ ಗಳಿಸದಂತೆ ನೋಡಿಕೊಂಡರು.

**ಸಂಕ್ಷಿಪ್ತ ಸ್ಕೋರು**

**ಐರ್ಲೆಂಡ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 106 (ಗೆರೆತ್ ಡೆಲನಿ 31, ಮಾರ್ಕ್ ಅಡೇರ್ 15, ಜೋಶುವಾ ಲಿಟಲ್ ಔಟಾಗದೆ 22, ಶಹೀನ್ ಅಫ್ರಿದಿ 22ಕ್ಕೆ3, ಮೊಹಮ್ಮದ್ ಅರ್ಮಿ 11ಕ್ಕೆ2, ಇಮದ್ ವಾಸೀಂ 8ಕ್ಕೆ3)**
**ಪಾಕಿಸ್ತಾನ: 18.5 ಓವರ್‌ಗಳಲ್ಲಿ 7 ವಿಕೆಟ್‌ಗೆ 111 (ಮೊಹಮದ್ ರಿಜ್ವಾನ್ 17, ಬಾಬರ್ ಆಜಂ ಔಟಾಗದೆ 32, ಶಹೀನ್ ಅಫ್ರಿದಿ ಔಟಾಗದೆ 13, ಬ್ಯಾರಿ ಮೆಕಾರ್ಥಿ 15ಕ್ಕೆ3, ಕರ್ಟಿಸ್ ಕ್ಯಾಂಪರ್ 24ಕ್ಕೆ2. ಪಂದ್ಯ ಶ್ರೇಷ್ಠ: ಶಹೀನ್ ಅಫ್ರಿದಿ**

# ಗೆಲುವಿನೊಂದಿಗೆ ಇಂಗ್ಲೆಂಡ್ ಶುಭಾರಂಭ

**ಮ್ಯೂನಿಚ್:** ಇಂಗ್ಲೆಂಡ್ ತಂಡ ಯುರೋ 2024 ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿದೆ. ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಆಂಗ್ಲರು ಸರ್ಬಿಯಾ ವಿರುದ್ಧ 1-0 ಗೆಲುವು ಸಾಧಿಸಿದರು. ಮತ್ತೊಂದು ನೆದರ್ಲೆಂಡ್ಸ್ ತಂಡ 2-1 ರಿಂದ ಪೋಲೆಂಡ್ ತಂಡವನ್ನು ಸೋಲಿಸಿದರೆ, ಡೆನ್ಮಾರ್ಕ್ ಮತ್ತು ಸ್ಲೋವೇನಿಯಾ ಪಂದ್ಯ 1-1 ಸಮಬಲದೊಂದಿಗೆ ಡ್ರಾಗೊಂಡಿತು.

ಬದಲಿ ಆಟಗಾರನಾಗಿ ಕಣಕ್ಕಿಳಿದ ವೌಟ್ ವೆಗ್ ಹಾರ್ಸ್ಟ್ ಕೊನೆಯ ಕ್ಷಣದಲ್ಲಿ ಸಿಡಿಸಿದ ಗೋಲಿನಿಂದ ನೆದರ್ಲೆಂಡ್ಸ್ ತಂಡ ಪೋಲೆಂಡ್ ವಿರುದ್ಧ ರೋಚಕ ಗೆಲುವು ಸಾಧಿಸಿತು. ನೆದರ್ಲೆಂಡ್ಸ್ ತಂಡದ ಪರ ಗೋಡಿ ಗಪ್ಕೊ (29ನೇ ನಿಮಿಷ) ಮತ್ತು ವೌಟ್ ವೆಗ್ ಹಾರ್ಸ್ಟ್ (83ನೇ ನಿಮಿಷ) ತಲಾ ಒಂದು ಗೋಲು ಬಾರಿಸಿದರೆ, ಪೋಲೆಂಡ್ ಪರ ಆಡಂ ಬುಕ್ಸ (16ನೇ ನಿಮಿಷ) ಏಕೈಕ ಗೋಲು ದಾಖಲಿಸಿದರು.

ಪೋಲೆಂಡ್ ತಂಡ ಪಂದ್ಯ ಆರಂಭಗೊಂಡ 16ನೇ ನಿಮಿಷದಲ್ಲಿ ಗೋಲು ಬಾರಿಸಿ ಮುನ್ನಡೆ ಸಾಧಿಸಿತು. ಆದರೆ 29ನೇ ನಿಮಿಷದಲ್ಲಿ ಎದುರಾಳಿ ತಂಡದ ಗೋಡಿ ಗಪ್ಕೊ ಗೋಲು ಬಾರಿಸಿ ಪಂದ್ಯವನ್ನು ಸಮಬಲಕ್ಕೆ ತಂದರು. ಇಲ್ಲಿಂದ ಮೇಲೆ ಉಭಯ ತಂಡಗಳ ರಕ್ಷಣ ವಿಭಾಗ ಅತ್ಯಂತ ಬಲಿಷ್ಠವಾಗಿ ಗೋಚರಿಸಿತು. ಇನ್ನೇನು ಪಂದ್ಯ ಟೈಗೊಳ್ಳುತ್ತದೆ ಎನ್ನುವಾಗ ನೆದರ್ಲೆಂಡ್ಸ್ ಪರ ಬದಲಿ ಆಟಗಾರನಾಗಿ ಕಣಕ್ಕಿಳಿದ ವೌಟ್ ವೆಗ್ ಹಾರ್ಸ್ಟ್ ಕೊನೆಯ ಕ್ಷಣದಲ್ಲಿ ಗೋಲು ಬಾರಿಸಿ ತಂಡಕ್ಕೆ ರೋಚಕ ಗೆಲುವು ತಂದುಕೊಟ್ಟರು.

ಇಂಗ್ಲೆಂಡ್ ತಂಡ ಜೂಡ್ ಬೆಲ್ಲಿಂಗ್‌ಹ್ಯಾಮ್ ಬಾರಿಸಿದ ಏಕೈಕ ಗೋಲಿನ ನೆರವಿನಿಂದ ಸರ್ಬಿಯಾ ವಿರುದ್ಧ ಗೆದ್ದು ಬೀಗಿತು. ಪಂದ್ಯ ಆರಂಭಗೊಂಡ 13ನೇ ನಿಮಿಷದಲ್ಲೇ ಬೆಲ್ಲಿಂಗ್‌ಹ್ಯಾಮ್ ಗೋಲು ಬಾರಿಸಿ ಮಿಂಚಿದರು. ಈ ಗೋಲು ದಾಖಲಾದ ಬಳಿಕ ಇಂಗ್ಲೆಂಡ್ ಆಟಗಾರರು ಕೇವಲ ರಕ್ಷಣಾತ್ಮಕ ಆಟಕ್ಕೆ ಒತ್ತು ಕೊಟ್ಟು ಕೊನೆಗೂ ಪಂದ್ಯವನ್ನು ಜಯಿಸಿದರು.

# ಸಿಂಹಳಿಯರ ಆರ್ಭಟಕ್ಕೆ ಮಣಿದ ನೆದರ್‌ಲ್ಯಾಂಡ್ಸ್

**ಸೇಂಟ್ ಲೂಸಿಯಾ:** ಟಿ20 ವಿಶ್ವಕಪ್ ಟೂರ್ನಿಯ ಡಿ ಗುಂಪಿನ ಅಂತಿಮ ಲೀಗ್ ಪಂದ್ಯದಲ್ಲಿ ಶ್ರೀಲಂಕಾ ತಂಡ ನೆದರ್‌ಲ್ಯಾಂಡ್ಸ್ ತಂಡವನ್ನು 83 ರನ್‌ಗಳಿಂದ ಮಣಿಸಿದೆ.

ಶ್ರೀಲಂಕಾ ನೀಡಿದ್ದ 202 ರನ್‌ಗಳ ಗುರಿ ಬೆನ್ನತ್ತಿದ ನೆದರ್‌ಲ್ಯಾಂಡ್ಸ್ 118 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಸೋಲೊಪ್ಪಿಕೊಂಡಿತು. ಬೌಲಿಂಗ್, ಬ್ಯಾಟಿಂಗ್ ಮತ್ತು ಫೀಲ್ಡಿಂಗ್‌ಗಳಲ್ಲಿ ಮಿಂಚಿದ ಲಂಕನ್ನರು ಅತ್ಯುತ್ತಮ ಪ್ರದರ್ಶನ ನೀಡಿ ಗೆಲುವು ದಾಖಲಿಸಿದರು. ಆದರೆ, ಈ ಗೆಲುವಿನ ಬಳಿಕವೂ ಲಂಕಾ ಸೂಪರ್-8ಗೆ ಏರುವ ಅವಕಾಶವಿಲ್ಲ.

ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಪರ ಕುಶಲ ಮೆಂಡಿಸ್ 46, ಧನಂಜಯ ಡಿ ಸಿಲ್ವಾ 34, ಚರಿತ್ ಅಸಲಂಕಾ 46, ಆಂಜೆಲೊ ಮ್ಯಾಥ್ಯೂಸ್ 30 ಮತ್ತು ನಾಯಕ ವನಿಂದು ಹಸರಂಗಾ 20 ರನ್ ಸಿಡಿಸಿದರು.

ಬೃಹತ್ ಗುರಿ ಬೆನ್ನತ್ತಿದ ನೆದರ್‌ಲ್ಯಾಂಡ್ಸ್ ಪರ ಮೈಕಲ್ ಲ್ಯಾವಿಟ್ ಮತ್ತು ಸ್ಕಾಟ್ ಎಡ್ವರ್ಡ್ ತಲಾ 31 ರನ್ ಸಿಡಿಸಿದರಾದರೂ ಉಳಿದ ಆಟಗಾರರಿಂದ ಬೆಂಬಲ ಸಿಗಲಿಲ್ಲ. ಹೀಗಾಗಿ, 16.4 ಓವರ್ಗಳಲ್ಲೇ ತಂಡ 118 ರನ್‌ಗೆ ಆಲೌಟ್ ಆಯಿತು.

# 64 ವರ್ಷದ ನಂತರ ಇಟಲಿ ತಂಡದ ಸಾಧನೆ

**ಡಾರ್ಟ್‌ಮಂಡ್, ಜರ್ಮನಿ:** ಇಟಲಿ ತಂಡವು ಯೂರೋ ಕಪ್ ಫುಟ್ಬಾಲ್ ಟೂರ್ನಿಯ ಪಂದ್ಯ ಆರಂಭವಾಗಿ 23 ಸೆಕೆಂಡುಗಳಲ್ಲಿ ಎದುರಾಳಿ ಅಲ್ಬೇನಿಯಾಗೆ ಉಡುಗೊರೆ ಗೋಲು ಕೊಟ್ಟಿತು. ನಂತರದ ಆಟದಲ್ಲಿ ಪುಟಿದೆದ್ದು ಗೆಲುವನ್ನೂ ಸಾಧಿಸಿತು.

ಶನಿವಾರ ತಡ ರಾತ್ರಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಇಟಲಿ ತಂಡವು 2-1ರಿಂದ ಅಲ್ಬೇನಿಯಾ ವಿರುದ್ಧ ಜಯಿಸಿತು. 64 ವರ್ಷಗಳ ನಂತರ ಈ ಸಾಧನೆ ಮಾಡಿತು.

ಪಂದ್ಯ ಆರಂಭವಾದ 23ನೇ ಸೆಕೆಂಡಿನಲ್ಲಿ ಇಟಲಿಯ ನೆದಿಮ್ ಬೆಜ್ರಾಮಿ ಅವರು ಅಲ್ಬೇನಿಯಾಕ್ಕೆ ಗೋಲು ಉಡುಗೊರೆ' ನೀಡಿದರು. ಕ್ರೀಡಾಂಗಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಅಲ್ಬೆನಿಯನ್ ಅಭಿಮಾನಿಗಳು ಸಂಭ್ರಮದಿಂದ ಕುಣಿದು ಕುಪ್ಪಳಿಸಿದರು.

ಈ ತಪ್ಪನ್ನು ಸರಿಪಡಿಸಲು ಇಟಲಿಗೆ ಹತ್ತು ನಿಮಿಷಗಳ ಸಮಯ ಬೇಕಾಯಿತು. 11ನೇ ನಿಮಿಷದಲ್ಲಿ ಅಲೆಕ್ಸಾಂಡ್ರೊ ಬೆಸ್ಟೊನಿ ಗೋಲು ಹೊಡೆದು ತಂಡಕ್ಕೆ ಸಮಬಲದ ಸಮಾಧಾನ ನೀಡಿದರು.

ಇದಾಗಿ ಐದು ನಿಮಿಷ ಕಳೆದಾಗ ಇಟಲಿ 2-1ರ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು. 16ನೇ ನಿಮಿಷದಲ್ಲಿ ಬ್ಯಾಕ್ ಪೋಸ್ಟ್‌ನಿಂದ ಲೊರೆಂಝೊ ಪೆಲೆಗ್ರಿನಿ ಕ್ರಾಸ್ ಮಾಡಿದ ಚೆಂಡನ್ನು ಪಡೆದ ನಿಕೊಲೊ ಬರೆಲಿ ಗೋಲ್ಕೀಪರ್ ವಂಚಿಸುವಲ್ಲಿ ಯಶಸ್ವಿಯಾದರು.

# ಪ್ಯಾರಿಸ್‌ನಲ್ಲಿ ಇಂಕೆಮ್ ಇಂಕೆಮ್ ಪಯಣ

### ತೆಲುಗಿನ ಸಿನಿಮಾ ಹಾಡನ್ನು ಬಳಸಿದ ಪ್ಯಾರಿಸ್ ಒಲಿಂಪಿಕ್ಸ್ | ಖುಷಿ ಹಂಚಿಕೊಂಡ ನಟರು

**ಮುಂಬಯಿ:** ಬಹುನಿರೀಕ್ಷಿತ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟ ಆರಂಭದಕ್ಕೆ ದಿನಗಣನೆ ಶುರುವಾಗಿದೆ. ಜುಲೈ 26ರಂದು ಟೂರ್ನಿಗೆ ವಿದ್ಯುಕ್ತ ಚಾಲನೆ ಸಿಗಲಿದೆ. ಈ ಮಹೋನ್ನತ ಕ್ರೀಡಾಕೂಟವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲು ಇಡೀ ಪ್ಯಾರಿಸ್ ಸರ್ವ ಸನ್ನದ್ಧವಾಗಿದೆ. ಆಯೋಜಕರು ಸಿದ್ಧತೆಯ ಹಲವು ವಿಡಿಯೊವನ್ನು ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಸಿದ್ಧತೆಯ ವಿಡಿಯೊವೊಂದಕ್ಕೆ ನಟ ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ನಟಿಸಿದ ತೆಲುಗಿನ ಗೀತ ಗೋವಿಂದಂ ಚಿತ್ರದ ಹಾಡನ್ನು ಕೂಡ ಬಳಸಲಾಗಿದೆ. ಇದಕ್ಕೆ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಹರ್ಷ ವ್ಯಕ್ತಪಡಿಸಿದ್ದು ಈ ವಿಡಿಯೊ ತುಣುಕನ್ನು ತಮ್ಮ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಶೇರ್ ಮಾಡಿದ್ದಾರೆ.




ಒಲಿಂಪಿಕ್ಸ್ ಉಂಗುರಗಳಿಂದ ಅಲಂಕರಿಸಲ್ಪಟ್ಟ ಐಫೆಲ್ ಟವರ್ ವಿಡಿಯೊಗೆ ಗೀತ ಗೋವಿಂದಂ ಸಿನೆಮಾದ ಇಂಕೆಮ್ ಇಂಕೆಮ್ ಹಾಡನ್ನು ಒಲಿಂಪಿಕ್ಸ್ ಅಧಿಕೃತ ಇನ್‌ಸ್ಟಾಗ್ರಾಮ್ ಬಳಿಸಿಕೊಂಡಿದೆ. ಐಫೆಲ್ ಟವರ್‌ನ ಹೊಸ ನೋಟವನ್ನು ಯಾರು ಇಷ್ಟಪಡುತ್ತಾರೆ? ಪ್ಯಾರಿಸ್ ಮುಂದಿನ ತಿಂಗಳ ಒಲಿಂಪಿಕ್ ಕ್ರೀಡಾಕೂಟಕ್ಕೆ ಸಿದ್ಧವಾಗುತ್ತಿದೆ ಎಂಬ ಶೀರ್ಷಿಕೆಯೊಂದಿಗಿನ ವೀಡಿಯೊಗೆ ಈ ಹಾಡನ್ನು ಬಳಿಸಿಕೊಂಡಿದೆ. ಪ್ಯಾರಿಸ್‌ನಲ್ಲಿಯೂ ಈ ಹಾಡು ಜನಪ್ರಿಯತೆಗಳಿಸಿದ ಖುಷಿಯಲ್ಲಿ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಹರ್ಷ ವ್ಯಕ್ತಪಡಿಸಿದ್ದಾರೆ. ರಶ್ಮಿಕಾ ಅವರು ಕ್ರೇಜಿಸಾಂಗ್ ಎಂದು ಬರೆದುಕೊಂಡರೆ, ದೇವರಕೊಂಡ ಕೆಲವು ಹಾಡುಗಳು ಯಾವಾಗಲೂ ವಿಶೇಷ ಮತ್ತು ಮರೆಯಲು ಅಸಾಧ್ಯ ಎಂದು ಬರೆದುಕೊಂಡಿದ್ದಾರೆ.

### ಸೀನ್ ನದಿಯಲ್ಲಿ ಉದ್ಘಾಟನಾ ಸಮಾರಂಭ

**ಉದ್ಘಾಟನಾ ಸಮಾರಂಭ ಜುಲೈ 26ರಂದು ಸೀನ್ ನದಿಯಲ್ಲಿ ಸಂಜೆ 7.30ಕ್ಕೆ ಅದ್ದೂರಿ ಕಾರ್ಯಕ್ರಮದೊಂದಿಗೆ ನೆರವೇರಲಿದೆ. ಕ್ರೀಡಾಕೂಟ ಜುಲೈ 26ರಿಂದ ಆರಂಭವಾಗಿ, ಆಗಸ್ಟ್ 11ರವರೆಗೆ ನಡೆಯಲಿದೆ. ಪ್ಯಾರಾಲಿಂಪಿಕ್ಸ್ ಆಗಸ್ಟ್ 28 ರಿಂದ ಸೆಪ್ಟೆಂಬರ್ 8ರವರೆಗೆ ನಿಗದಿಯಾಗಿದೆ. ಇದಕ್ಕೆ ಬೇಕಾದ ಎಲ್ಲ ಸಿದ್ಧತೆಯನ್ನು ಈಗಾಗಲೇ ಕ್ರೀಡಾಕೂಟದ ಆಯೋಜಕರು ಮಾಡಿದ್ದಾರೆ. ಗೇಮ್ಸ್‌ಗಾಗಿಯೇ ಇಲ್ಲಿನ ಸೀನ್ ನದಿಯನ್ನು ಸಾರ್ವಜನಿಕ ನಿಧಿಯಿಂದ ಭಾರೀ ಪ್ರಮಾಣದಲ್ಲಿ ಹೂಡಿಕೆ ಮಾಡಿ ಈ ನದಿಯನ್ನು ಸ್ನಾನಮಾಡಲು ಯೋಗ್ಯವೆನಿಸುವ ರೀತಿಯಲ್ಲಿ ಸ್ವಚ್ಛ ಮಾಡಲಾಗಿದೆ.**

### ಬೋಟ್‌ಗಳಲ್ಲೇ ಪರೇಡ್

**ಒಲಿಂಪಿಕ್ಸ್ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಕ್ರೀಡಾಂಗಣದ ಹೊರಗಡೆ ನಡೆಯುವ ಉದ್ಘಾಟನಾ ಸಮಾರಂಭ ಇದಾಗಿದೆ. 10,500ಕ್ಕೂ ಹೆಚ್ಚು ಅಥ್ಲೀಟ್‌ಗಳು ಪ್ಯಾರಿಸ್‌ನಿಂದ ಸುಮಾರು 6 ಕಿಲೋಮೀಟರ್ ವರೆಗೆ ಬೋಟ್‌ಗಳಲ್ಲೇ ಪರೇಡ್ ನಡೆಸಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಕ್ರೀಡಾಕೂಟ ಜುಲೈ 26ರಿಂದ ಆಗಸ್ಟ್ 11ರವರೆಗೆ ನಡೆಯಲಿದೆ. ಪ್ಯಾರಿಸ್ ಆತಿಥ್ಯದಲ್ಲಿ ನಡೆಯುತ್ತಿರುವ ಮೂರನೇ (1900 ಮತ್ತು 1924ರ ನಂತರ) ಟೂರ್ನಿ ಇದಾಗಿದೆ. 32 ಕ್ರೀಡೆಗಳು ಮತ್ತು 329 ಈವೆಂಟ್‌ಗಳನ್ನು ಯೋಜಿಸಲಾಗಿದೆ.**



ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿ

# ಕಾಂಗ್ರೆಸ್ ಆಡಳಿತದಲ್ಲಿ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ

ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ದೇವದಾರಿ ಅರಣ್ಯ ಪ್ರದೇಶದಲ್ಲಿ ಕಬ್ಬಿಣದ ಅದಿರು ತೆಗೆಯಲು ಗಣಿಗಾರಿಕೆಗೆ ಸಂಬಂಧಿಸಿದ ಕಡತಕ್ಕೆ ಸಹಿ ಹಾಕಿರುವ ಬಗ್ಗೆ ಅಪಾರ್ಥ ಕಲ್ಪಿಸುವುದು ಬೇಡ.ಅದಿರು ಸಿಗಲಿದೆಯೇ ಎಂಬು ದನ್ನು ಖಚಿತಪಡಿಸಿ ಕೊಳ್ಳಲಾಗು ತ್ತದೆ. ಈ ಬಗ್ಗೆ ಅಧಿಕಾರಿಗಳೊ ಂದಿಗೆ ನಾನು ಸಾಕಷ್ಟು ಚರ್ಚೆ ನಡೆಸಿ, ಕಡತವನ್ನು ಸಂಪೂರ್ಣ ಅಧ್ಯಯನ ಮಾಡಿಯೇ ಸಹಿ ಮಾಡಿದ್ದೇನೆ.

-ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

## ಕರ್ನಾಟಕದ ಯೋಜನೆಗಳಿಗೆ ಒತ್ತು: ಎಚ್‌ಡಿಕೆ

**ಕೋಲಾರ:** ಬೆಂಗಳೂರಿನಲ್ಲಿ ಉಕ್ಕು ಸಂಶೋಧನಾ ಕೇಂದ್ರ ಸ್ಥಾಪನೆ ಬಗ್ಗೆ ಚಿಂತನೆ ನಡೆಸಲಾಗಿದ್ದು, ಈ ಕುರಿತು ಸಮೀಕ್ಷೆ ನಡೆಸಲು ಉನ್ನತ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಕೋಲಾರದ ದಳಪತಿ ಸಿಎಂಆರ್ ಶ್ರೀನಾಥ್ ತಂಡದವರು ಅಭಿನಂದಿಸಿದ ಸಂದರ್ಭದಲ್ಲಿ ಮಾತನಾಡಿ, ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಇರುವ ಸಾಧ್ಯತೆಗಳ ಕುರಿತು ಚಿಂತನೆ ನಡೆಸುವ ಮೂಲಕ ತವರು ರಾಜ್ಯದ ಋಣ ತೀರಿಸಲು ಮುಂದಾಗಿದ್ದು ಉಕ್ಕು ಸಚಿವಾಲ ಯದ ಉನ್ನತ ಅಧಿಕಾರಿಗಳೊಂದಿಗೆ ಈಗಾಗಲೇ ಸಭೆ ನಡೆಸಲಾಗಿದೆ. ಭದ್ರಾವತಿ ಯ ವಿಐಎಸ್ಎಲ್ ಪುನಶ್ಚೇತನದ ಕುರಿತು ಸಮಾಲೋಚನೆ ನಡೆಸಲಾಗಿದೆ ಎಂದರು.

**ತುಮಕೂರು:** ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರ ಜನರಿಗೆ ನೀಡಿರುವ ಭರವಸೆಯಂತೆ ಗ್ಯಾರಂಟಿ ಯೋಜನೆ ನೀಡಲು ಹಣ ಸಾಲುತ್ತಿಲ್ಲ. ಸರಕಾರ ನಡೆಸಲು ಪರದಾಡುತ್ತಿದ್ದಾರೆ ಎಂದು ವ್ಯಂಗ್ಯ ವಾಡಿದರು. ಯೋಜನೆಗಳನ್ನು ಮುಂದುವರಿಸಲು ಸರಕಾರದ ಬಳಿ ಹಣವಿಲ್ಲದೆ ಪೆಟ್ರೋಲ್-ಡೀಸೆಲ್ ಬೆಲೆ ಏರಿಸಿದ್ದಾರೆ. ತೈಲ ಬೆಲೆ ಏರಿಕೆ ವಿರುದ್ಧ ಬಿಜೆಪಿ-ಜೆಡಿಎಸ್ ಪ್ರತಿಭಟನೆ ಮಾಡುವುದಕ್ಕಿಂತ ಸರಕಾರದ ವಿರುದ್ಧ ಜನರೇ ರೊಚ್ಚಿಗೇಳಬೇಕು. ಜನರು ಸಿಡಿದೆದ್ದಾಗ ಮಾತ್ರ ಸರಕಾರ ಜಾಗೃತಗೊಳ್ಳುತ್ತದೆ. ಜನರು ಸಿಡಿದೇಳುವ ಪರಿಸ್ಥಿತಿ ಖಂಡಿತ ಬರುತ್ತದೆ ಎಂದರು.

ಗ್ಯಾರಂಟಿ ಯೋಜನೆಗಳನ್ನು ನಡೆಸಲಾಗದಿದ್ದ ಮೇಲೆ ನಿಲ್ಲಿಸಲಿ. ಜನರಿಂದಲೇ ಹಣ ವಸೂಲಿ ಮಾಡಿ, ಜನರಿಗೆ ನೀಡುವುದು ಎಷ್ಟರಮಟ್ಟಿಗೆ ಸರಿ. ಹಣಕಾಸು ಖಾತೆ ನಿಭಾಯಿಸಿರುವ ಮುಖ್ಯಮಂತ್ರಿಗಳಿಗೆ ಈಗಿನ ರಾಜ್ಯದ ಆರ್ಥಿಕ ಪರಿಸ್ಥಿತಿಯ ಅರಿವಿಲ್ಲವೇ. ಅರಿವಿದ್ದೂ ಜನರಿಗೆ ಬರೆ ಎಳೆಯುತ್ತಿರುವುದೇಕೆ ಎಂದು ಟೀಕಿಸಿದರು.

ಕೇಂದ್ರ ಸಚಿವ ಸ್ಥಾನದ ಹೊಣೆಗಾರಿಕೆ ಸಿಕ್ಕಿರುವುದರಿಂದ ರಾಜ್ಯಕ್ಕೆ ಉತ್ತಮ ಕೊಡುಗೆ ನೀಡುವ ಅವಕಾಶವೂ ದೊರಕಿದೆ. ಸಿಕ್ಕಿರುವ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡು ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ನೀಡುವ ಭರವಸೆ ನೀಡಿದರು.

# ಸ್ನೇಹಿತರ ದ್ವೇಷಕ್ಕೆ ಬೈಕ್‌ಗೆ ಬೆಂಕಿ

**ಬಂಟ್ವಾಳ:** ಫರಂಗಿಪೇಟೆ ಸಮೀಪದ ಕುಮ್ಡೆಲುವಿನಲ್ಲಿ ಸ್ನೇಹಿತರಿಬ್ಬರ ದ್ವೇಷದ ಹಿನ್ನೆಲೆ ಯಲ್ಲಿ ಆರೋಪಿಯೋರ್ವ ಅಮಾಯಕ ಯುವಕನೋರ್ವನ ಬೈಕನ್ನು ಸುಟ್ಟು ಭಸ್ಮಗೊಳಿಸಿದ್ದಾನೆ.

ಕುಮ್ಡೆಲು ನಿವಾಸಿ ನಿತೇಶ್ ಪ್ರಕರಣದ ಆರೋಪಿಯಾಗಿದ್ದು, ಆತ ತನಗೆ ದ್ವೇಷ ವಿರುವ ಕುಮ್ಡೆಲಿನ ಸುಜಿತ್ ಹಾಗೂ ಸುಮಂತ್ ಸಹೋದರರ ಬೈಕೆಂದು ತಿಳಿದು ಅಮ್ಮುಂಜೆ ಪಾಂಡೀಲು ನಿವಾಸಿ ಚಂದ್ರಹಾಸ ಅವರ ಬೈಕನ್ನು ಸುಟ್ಟು ಹಾಕಿದ್ದಾನೆ. ಚಂದ್ರಹಾಸ ಅವರು ಶಬರಿಮಲೆಗೆ ಹೋಗುವ ಹಿನ್ನೆಲೆಯಲ್ಲಿ ಬೈಕನ್ನು ಸ್ನೇಹಿತ ಸುಮಂತ್ ಅವರ ಮನೆಯಲ್ಲಿ ಇಟ್ಟು ಹೋಗಿದ್ದರು.

ಚಂದ್ರಹಾಸರ ಬೈಕನ್ನು ಸುಜಿತ್ ಸಹೋದರ ಸುಮಂತ್‌ನ ಬೈಕೆಂದು ಭಾವಿಸಿಕೊಂಡು ಸುಜಿತ್‌ನ ಮೇಲಿನ ದ್ವೇಷದಿಂದ ಆತನ ಮನೆಯಿಂದ ಕೊಂಚ ದೂರಕ್ಕೆ ದೂಡಿಕೊಂಡು ಹೋಗಿ ಸುಟ್ಟು ಹಾಕಿದ್ದಾನೆ. ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದಾಖಲೆಗಳಿಲ್ಲದ 37 ಲಕ್ಷರು. ವಶ

**ಗುಂಡ್ಲುಪೇಟೆ:** ಸೂಕ್ತ ದಾಖಲೆಗಳು ಇಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ 37 ಲಕ್ಷ ನಗದನ್ನು ತಾಲೂಕಿನ ಗಡಿ ಭಾಗದ ಮದ್ದೂರು ಚೆಕ್ ಪೋಸ್ಟ್ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.




ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಸೋಮವಾರ ಚೆಕ್ ಪೋಸ್ಟ್‌ನಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದರು. ಈ ವೇಳೆ ಗುಂಡ್ಲುಪೇಟೆ ಕಡೆಯಿಂದ ಬಂದ ಕಾರನ್ನು ತಡೆದು ತಪಾಸಣೆಗೊಳಪಡಿಸಿದಾಗ ಕಾರಿನಲ್ಲಿದ್ದ ಲೆದರ್‌ಬ್ಯಾಗ್‌ನಲ್ಲಿ 20 ಲಕ್ಷ ಪತ್ತೆಯಾಗಿದೆ. ಬಳಿಕ ಅನುಮಾನಗೊಂಡ ಪೊಲೀಸರು ಕಾರನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಹಿಂಬದಿ ಸೀಟಿನಲ್ಲಿಟ್ಟಿದ್ದ ಬ್ಯಾಗಿನಲ್ಲೂ 17 ಲಕ್ಷ ದೊರೆತಿದೆ.ಕೇರಳ ಮೂಲದ ಹೋಟೆಲ್ ಉದ್ಯಮಿಗಳಾದ ಪಿ.ಆರ್.ರಾಹುಲ್ ಹಾಗೂ ಸಿ.ಕೆ.ತಾಲ್ವಿನ್ ಅವರ ಕಾರಿನಲ್ಲಿ ಹಣ ದೊರೆತಿದ್ದು, ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಪರಿಣಾಮ ನಗದು ಹಾಗೂ ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಪಾಸಣೆ ವೇಳೆ ಪಿಎಸ್ಐ ಸಾಹೇಬಗೌಡ, ಸಿಬ್ಬಂದಿಗಳಾದ ಬಂಟಪ್ಪ, ಪ್ರಭು ಬೊಮ್ಮನಹಳ್ಳಿ ಸತೀಶ್ ಪಾರಿಗೊಂಡ ಇದ್ದರು.

# ಜಿಂದಾಲ್ ಅಧಿಕಾರಿಗೆ 17.05 ಲಕ್ಷ ವಂಚನೆ

**ಬಳ್ಳಾರಿ:** ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಅಧಿಕ ಲಾಭ ಪಡೆಯಬಹುದು ಎಂದು ನಂಬಿಸಿ ಜಿಂದಾಲ್ ಕಂಪನಿಯ ಉನ್ನತ ಅಧಿಕಾರಿಯೊಬ್ಬರಿಗೆ ಆನ್‌ಲೈನ್‌ಲ್ಲಿ 17.05 ಲಕ್ಷ ವಂಚನೆ ಮಾಡಲಾಗಿದೆ.

ಯೂಟ್ಯೂಬ್ ನೋಡುತ್ತಿದ್ದಾಗ ಅಧಿಕಾರಿಗೆ ಷೇರು ಮಾರುಕಟ್ಟೆ ಕುರಿತ ಜಾಹಿರಾತೊಂದು ಬಂದಿತ್ತು. ಅದನ್ನು ಕ್ಲಿಕ್ ಮಾಡಿದಾಗ ವಾಟ್ಸಾಪ್ ಗ್ರೂಪ್ ಒಂದಕ್ಕೆ ಅವರು ಪ್ರವೇಶಿಸಿದ್ದರು. ಅದರಲ್ಲಿ ವಾರಗಳ ಕಾಲ ಷೇರು ಮಾರುಕಟ್ಟೆಯ ಕುರಿತು ಮಾಹಿತಿ ವಿನಿಯಮ ಮಾಡಿದ್ದಾರೆ. ಬಳಿಕ, ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಅಧಿಕಾರಿಯನ್ನು ನಂಬಿಸಲಾಗಿದೆ. ವಂಚಕರ ಮಾತು ನಂಬಿದ ಅಧಿಕಾರಿ, ಅವರು ತಿಳಿಸಿದ ಬ್ಯಾಂಕ್ ಖಾತೆಗೆ ಮೇ 22ರಿಂದ ಜೂನ್ 4ರ ವರೆಗೆ ಹಂತ ಹಂತವಾಗಿ 17.05 ಲಕ್ಷ ಹಣ ಹಾಕಿದ್ದಾರೆ. ಬಳಿಕ ಇದು ಮೋಸವೆಂದು ತಿಳಿದು ಪೊಲೀಸರಿಗೆ ದೂರು ದಾಖಲಿಸಿದ್ದಾರೆ. ದೂರು ಆಧರಿಸಿ ಪೊಲೀಸರು ಅಪರಿಚಿತರ ವಿರುದ್ಧ ಎಫ್ಐಆರ್ ದಾಖಲಿಸಿದ್ದಾರೆ.

# ವೈದ್ಯರ ನಿರ್ಲಕ್ಷ್ಯ: ಮೂವರ ವಿರುದ್ಧ ದೂರು

**ಕಲಬುರಗಿ:** ವೈದ್ಯರ ನಿರ್ಲಕ್ಷ್ಯದಿಂದ ರೋಗಿ ಸಾವನ್ನಪ್ಪಿದ್ದಾರೆ ಎಂದು ಆರೋಪಿಸಿ ಮೃತರ ಸಂಬಂಧಿ ವೈದ್ಯರ ವಿರುದ್ಧ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಜಿಮ್ಸ್ ನಿರ್ದೇಶಕ ಡಾ.ಉಮೇಶ ಎಸ್.ಆರ್. ಸೇರಿ ಮೂವರು ವೈದ್ಯರ ವಿರುದ್ಧ ಪ್ರಕರಣ ದಾಖಲಾಗಿದೆ. ಜೂನ್ 15ರ ಬೆಳಿಗ್ಗೆ ಗಂಗೂಬಾಯಿ ತಳವಾರ ಅವರು ಹೊಟ್ಟೆನೋವಿನಿಂದ ಜಿಮ್ಸ್ ಆಸ್ಪತ್ರೆಗೆ ಬಂದಿದ್ದರು. ಆಸ್ಪತ್ರೆಯಲ್ಲಿ ಬೆಡ್ ಖಾಲಿ ಇಲ್ಲವೆಂದು ಡಾ.ಅನುಷಾ ಮತ್ತು ಸಿಬ್ಬಂದಿ ಹೇಳಿದರು. ರೋಗಿಯ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದಂತೆ ಡಾ.ಸ್ವಾತಿ ಅವರು ತಪಾಸಣೆ ಮಾಡಿ, ರಕ್ತದೊತ್ತಡ ಕಡಿಮೆಯಾಗಿದೆ ಎಂದು ಹೇಳಿ ಹೊರಟು ಹೋದರು. ಮಧ್ಯಾಹ್ನ 2.30ಕ್ಕೆ ವಾರ್ಡ್ ಒಳಗಡೆ ಕರೆದೊಯ್ದು ಕೆಲ ಹೊತ್ತಿನ ಬಳಿಕ ಮೃತಪಟ್ಟಿದಾಗಿ ವೈದ್ಯರು ಹೇಳಿದರು. ವೈದ್ಯರ ನಿರ್ಲಕ್ಷ್ಯದಿಂದಾಗಿ ನನ್ನ ತಾಯಿ ಗಂಗೂಬಾಯಿ ಸಾವನ್ನಪ್ಪಿದ್ದಾರೆ ಎಂದು ಆರೋಪಿಸಿ ಮೃತರ ಪುತ್ರ ದೂರು ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

## ಎಕ್ಸಿಸ್ ಬ್ಯಾಂಕ್

ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

### ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

| ಕ್ರ ಸಂ | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ | ನೋಟೀಸ್ ದಿನಾಂಕ | ಬರಬೇಕಾದ ಬಾಕಿ (ರೂ.ಗಳಲ್ಲಿ) |
|---|---|---|---|---|
| 1 | (1) **ಶ್ರೀ.ಮಲ್ಲೇಶ ಎಂ,** ಬಿನ್ ಶ್ರೀ.ಮುನಿರಾಜು, ನಂ 747, ಸರ್ಕಾರಿ ಶಾಲಾ ರಸ್ತೆ, ಕೊಡಿಗೇಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು ಸಹಕಾರನಗರ ಅಂಚೆ, ಬೆಂಗಳೂರು–560092. **ಮತ್ತೊಂದು ವಿಳಾಸ :** ಶ್ರೀ.ಮಲ್ಲೇಶ ಎಂ, ಬಿನ್ ಶ್ರೀ. ಮುನಿರಾಜು, ನಂ. 171, 10ನೇ ಬ್ಲಾಕ್, ಬನಶಂಕರಿ, 6ನೇ ಹಂತ, ಜಟ್ಟಿಗಾನಹಳ್ಳಿ ಕೆಂಗೇರಿ, ಬೆಂಗಳೂರು–560086 (2) **ಶ್ರೀಮತಿ. ಅಶ್ವಿನಿ ಸಿ, ಕೋಂ** ಶ್ರೀ.ಮಲ್ಲೇಶ್ ಎಂ, ನಂ. 747 ಸರ್ಕಾರಿ ಶಾಲೆ ರಸ್ತೆ ಕೊಡಿಗೇಹಳ್ಳಿ ಬೆಂಗಳೂರು ಉತ್ತರ, ಬೆಂಗಳೂರು ಸಹಕಾರನಗರ ಅಂಚೆ, ಬೆಂಗಳೂರು–560092. **ಮತ್ತೊಂದು ವಿಳಾಸ :** ಶ್ರೀಮತಿ.ಅಶ್ವಿನಿ ಸಿ, ಕೋಂ. ಶ್ರೀ.ಮಲ್ಲೇಶ್ ಎಂ, ನಂ. 171, 10ನೇ ಬ್ಲಾಕ್, ಬನಶಂಕರಿ, 6ನೇ ಹಂತ, ಜಟ್ಟಿಗಾನಹಳ್ಳಿ ಕೆಂಗೇರಿ, ಬೆಂಗಳೂರು–560086. | ಸ್ಥಿರಾಸ್ತಿಯು ಶ್ರೀಮತಿ. ಅಶ್ವಿನಿ.ಸಿ. ಕೋಂ ಮಲ್ಲೇಶ್.ಎಂ. ರವರು ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ. 171, ಬಿಡಿಎ ಲೇಔಟ್ ಆಗಿ ರೂಪುಗೊಂಡಿದ್ದು, ಆಸ್ತಿಯು 10ನೇ ಬ್ಲಾಕ್, ಬನಶಂಕರಿ 6ನೇ ಹಂತ, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.00 ಮೀಟರ್‌ಗಳು, ಒಟ್ಟು ವಿಸ್ತೀರ್ಣ 54.00 ಚದರ ಮೀಟರ್‌ಗಳು, ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ. 172, ಪಶ್ಚಿಮಕ್ಕೆ: ನಿವೇಶನ ನಂ. 170, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ. 224. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ : 9036773553 ರವರನ್ನು ಸಂಪರ್ಕಿಸಿ.** | 04.05.2024 ಎನ್‌ಪಿಎ ದಿನಾಂಕ 16.04.2023 | Loan No. LPR022707572061 ASSET POWER BRE Rs.34,64,547/- ಒಟ್ಟು ಮೊತ್ತ ರೂ.36,74,532/– ದಿನಾಂಕ: 27.04.2024 ರಂದು ಇದ್ದಂತೆ |
| 2 | (1) **ಶ್ರೀ. ಕೃಷ್ಣನ್ ಅಖಿಲೇಶ್ ನಾರಾಯಣ್,** ಬಿನ್ ಶ್ರೀ ಕೊನ್ನಿಸೇರಿ ಅನಂತನಾರಾಯಣ ಕೃಷ್ಣನ್, ವಿಲ್ಲಾ 6, ನಂ. 7, ನೆಲ ಮಹಡಿ, ಪ್ರೆಸ್ಟೀಜ್ ಸೀಡರ್ಸ್, ಕಾನ್ವೆಂಟ್ ರಸ್ತೆ, ಬೆಂಗಳೂರು–560025. **ಆಸ್ತಿ ವಿಳಾಸ:–** ಶ್ರೀ ಕೃಷ್ಣನ್ ಅಖಿಲೇಶ್ ನಾರಾಯಣ್, ಬಿನ್ ಶ್ರೀ ಕೊನ್ನಿಸೇರಿ ಅನಂತನಾರಾಯಣ ಕೃಷ್ಣನ್, ಫ್ಲಾಟ್ ನಂ. ಎಸ್‌ಎಫ್ 202, 2ನೇ ಮಹಡಿ, ಎಸ್‌ಎನ್‌ಎಸ್ ಪ್ರೇಮ್ ನಿವಾಸ್ ಅಪಾರ್ಟ್‌ಮೆಂಟ್ಸ್, ಮುನ್ಸಿಪಲ್ ನಂ. ಯೂನಿಯನ್ ಸ್ಟ್ರೀಟ್, ಬೆಂಗಳೂರು–560001. (2) **ಶ್ರೀಮತಿ ಔರೆಲಿಯಾ ನಾರಾಯಣ್,** ಕೋಂ ಶ್ರೀ ಕೃಷ್ಣನ್ ಅಖಿಲೇಶ್ ನಾರಾಯಣ್, ವಿಲ್ಲಾ 6, ನಂ. 7, ನೆಲ ಮಹಡಿ, ಪ್ರೆಸ್ಟೀಜ್ ಸೀಡರ್ಸ್, ಕಾನ್ವೆಂಟ್ ರಸ್ತೆ, ಬೆಂಗಳೂರು–560025. **ಮತ್ತೊಂದು ವಿಳಾಸ :** ಶ್ರೀಮತಿ ಔರೆಲಿಯಾ ನಾರಾಯಣ್, ಕೋಂ ಶ್ರೀ ಕೃಷ್ಣನ್ ಅಖಿಲೇಶ್ ನಾರಾಯಣ್, ಫ್ಲಾಟ್ ಸಂಖ್ಯೆ. ಎಸ್‌ಎಫ್ 202, 2ನೇ ಮಹಡಿ, ಎಸ್‌ಎನ್‌ಎಸ್ ಪ್ರೇಮ್ ನಿವಾಸ್ ಅಪಾರ್ಟ್‌ಮೆಂಟ್, ಮುನ್ಸಿಪಲ್ ನಂ. ಯೂನಿಯನ್ ಸ್ಟ್ರೀಟ್, ಬೆಂಗಳೂರು–560001. | ಸ್ಥಿರಾಸ್ತಿಯು ಶ್ರೀ.ಕೆ.ಎ.ಕೃಷ್ಣನ್ ಬಿನ್ ಡಾ.ಕೆ.ಎ.ನಾರಾಯಣ್ ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಫ್ಲಾಟ್ ನಂ. ಎಸ್‌ಎಫ್–202, 2ನೇ ಮಹಡಿ, ಎಸ್‌ಎನ್‌ಎಸ್ ಪ್ರೇಮ್ ನಿವಾಸ್ ಅಪಾರ್ಟ್‌ಮೆಂಟ್ಸ್, ಮುನಿಸಿಪಲ್ ನಂ. ಯೂನಿಯನ್ ಸ್ಟ್ರೀಟ್, ಶಿವಾಜಿನಗರ, ಬೆಂಗಳೂರು, ಜೊತೆಗೆ ಕಟ್ಟಡದ ಸಾಮಾನ್ಯ ಪ್ರದೇಶಗಳನ್ನು ಬಳಸುವ ಹಕ್ಕು, ನೀರಿನ ಕ್ಲೋಸೆಟ್, ಒಳಚರಂಡಿ, ಶೌಚಾಲಯಗಳು ಮತ್ತು ಇತರ ಅನುಕೂಲಗಳು ಮತ್ತು ಸೌಲಭ್ಯಗಳು, ಫ್ಲಾಟ್/ ಘಟಕ/ ಕಚೇರಿ ಆವರಣದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಅಥವಾ ಸಂಪರ್ಕಿತವಾಗಿರುವ ಸೌಕರ್ಯಗಳು, ಪ್ರಸ್ತುತ ಮತ್ತು ಭವಿಷ್ಯದಲ್ಲಿ ಮತ್ತು ಸುಲಭವಾದ ಹಕ್ಕುಗಳು ಮತ್ತು ಎಲ್ಲಾ ಫಿಕ್ಚರ್‌ಗಳು ಮತ್ತು ಫಿಟ್ಟಿಂಗ್‌ಗಳನ್ನೊಳಗೊಂಡಂತೆ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಹೊಂದಿರುವ ಆಸ್ತಿಯಾಗಿರುತ್ತದೆ. ಆಸ್ತಿಯ ವಿಸ್ತೀರ್ಣ 2200, ಚಕ್ಕುಬಂದಿ : ಉತ್ತರಕ್ಕೆ: ಹಬೀಬ್ ಅನ್ಸರ್ ರವರ ಆಸ್ತಿ, ದಕ್ಷಿಣಕ್ಕೆ: ಯೂನಿಯನ್ ಸ್ಟ್ರೀಟ್, ಪೂರ್ವಕ್ಕೆ: ಹಾಸ್ಪಿಟಲ್ ರಸ್ತೆ ಪಶ್ಚಿಮಕ್ಕೆ: ಹಬೀಬ್ ಅನ್ಸರ್ ರವರ ಆಸ್ತಿ. **ಯಾವುದೇ ಮಾಹಿತಿಗಾಗಿ ಶ್ರೀ.ರಘುನಾಥ ರೆಡ್ಡಿ.ಬಿ.ಆರ್ : 9663965856 ರವರನ್ನು ಸಂಪರ್ಕಿಸಿ.** | 16.05.2024 ಎನ್‌ಪಿಎ ದಿನಾಂಕ 30.09.2021 | Loan No. LPR168804607835 ASSET POWER BRE Rs. 1,59,44,089/- ಒಟ್ಟು ಮೊತ್ತ ರೂ. 1,99,66,679/– ದಿನಾಂಕ: 15.05.2024 ರಂದು ಇದ್ದಂತೆ |
| 3 | (1) **ಶ್ರೀ ಸಂಪತ್ ರಾಜು,** ಬಿನ್ ಶ್ರೀ.ಚಂಗಮ ರಾಜು, ನಂ 342/18, ಶ್ರೀ ಬಾಲಾಜಿ ನಿಲಯಂ, 16ನೇ ಎ ಮೇನ್ 35ನೇ ಕ್ರಾಸ್ 4ನೇ ಟಿ ಬ್ಲಾಕ್, ಜಯ ನಗರ, ಬೆಂಗಳೂರು–560041. **ಮತ್ತೊಂದು ವಿಳಾಸ :** ಶ್ರೀ.ಸಂಪತ್ ರಾಜು, ಬಿನ್ ಶ್ರೀ. ಚಂಗಮ ರಾಜು, ನಂ. 1 21 7 70 ಹೊಸ ಸಂಖ್ಯೆ. 70. 1 32ನೇ ಸಿ ಕ್ರಾಸ್, 10 ಮುಖ್ಯರಸ್ತೆ 4ನೇ ಬ್ಲಾಕ್, ಜಯನಗರ, ಬೆಂಗಳೂರು–560011. (2) **ಶ್ರೀಮತಿ.ಎಸ್.ಎನ್.ಛಾಯಾ,** ಕೋಂ ಶ್ರೀ ಸಂಪತ್ ರಾಜು, ನಂ. 342/18 ಶ್ರೀ ಬಾಲಾಜಿ ನಿಲಯ, 16ನೇ ಎ ಮೇನ್ 35ನೇ ಕ್ರಾಸ್ 4ನೇ ಟಿ ಬ್ಲಾಕ್, ಜಯನಗರ ಬೆಂಗಳೂರು–560041. **ಮತ್ತೊಂದು ವಿಳಾಸ :** ಶ್ರೀಮತಿ.ಎಸ್.ಎನ್ ಛಾಯಾ, ಕೋಂ ಶ್ರೀ.ಸಂಪತ್ ರಾಜು, ನಂ. 1 21 7 70, ಹೊಸ ಸಂಖ್ಯೆ. 70 1, 32ನೇ ಸಿ ಕ್ರಾಸ್, 10 ಮುಖ್ಯ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011. | ಸ್ಥಿರಾಸ್ತಿಯು ಶ್ರೀ.ಸಂಪತ್ ರಾಜು ಬಿನ್ ಶ್ರೀ. ಚಂಗಮ ರಾಜು ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿ ನಂ. 70–1, ಪಿಐಡಿ ನಂ. 60–117–70/1, ಆಸ್ತಿಯು 32ನೇ ಸಿ ಕ್ರಾಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 48.3 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 14.3+14/2 ಅಡಿ, ಒಟ್ಟು ವಿಸ್ತೀರ್ಣ 683.44 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ: 10ನೇ ಮುಖ್ಯರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಮಾರಾಟಗಾರರಿಂದ ಉಳಿಸಿಕೊಂಡಿರುವ ಅದೇ ಆಸ್ತಿಯ ಉಳಿದ ವಾಣಿಜ್ಯ ಭಾಗ, ದಕ್ಷಿಣಕ್ಕೆ: 32ನೇ ಸಿ ಅಡ್ಡರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ.ರಘುನಾಥ್ : 9886960484 ರವರನ್ನು ಸಂಪರ್ಕಿಸಿ.** | 06.05.2024 ಎನ್‌ಪಿಎ ದಿನಾಂಕ 10.12.2020 | Loan No. PCR051403617043 ASSET POWER BRE Rs. 1,24,41,660/- ಒಟ್ಟು ಮೊತ್ತ ರೂ.1,65,15,926/– ದಿನಾಂಕ: 04.05.2024 ರಂದು ಇದ್ದಂತೆ |
| 4 | (1) **ಕುಮಾರಿ.ಅರವಿಂದ ಗುಂಡ,** D/o. ಶ್ರೀ ಸತ್ಯನಾರಾಯಣ ಗುಂಡ, ಆದರ್ಶ್ ರೆಸಿಡೆನ್ಸಿ, ಫ್ಲಾಟ್ ಎ301, 2ನೇ ಮುಖ್ಯರಸ್ತೆ, 47ನೇ ಕ್ರಾಸ್, ಜಯನಗರ 8ನೇ ಬ್ಲಾಕ್, ಬೆಂಗಳೂರು, ಕರ್ನಾಟಕ–560082. **ಮತ್ತೊಂದು ವಿಳಾಸ :** ಕುಮಾರಿ. ಅರವಿಂದ ಗುಂಡ D/o. ಶ್ರೀ ಸತ್ಯನಾರಾಯಣ ಗುಂಡ, ನಂ.1–7–145/4/ಎ, ಶ್ರೀನಿವಾಸ ಸಿಟಿರಿಲ್, ಜಮೀನ್‌ಪುರ ಪೋಸ್ಟ್, ಹೈದರಾಬಾದ್–500020. **ಮತ್ತೊಂದು ವಿಳಾಸ :** ಕುಮಾರಿ. ಅರವಿಂದ ಗುಂಡ D/o. ಶ್ರೀ ಸತ್ಯನಾರಾಯಣ ಗುಂಡ, ಡಿ.607, ಫ್ಲಾಟ್ ನಂ.607, 6ನೇ ಮಹಡಿ, ಎಮರಾಲ್ಡ್ ಹೈಟ್ಸ್, ಬ್ಲಾಕ್–ಡಿ, ಸರ್ವೆ ನಂ.1106, ಘನಾಪುರ ಹ್ಯಾಮ್ಲೆಟ್ ಆಫ್ ಎಡುಲಬೇಡ್ ವಿಲೇಜ್ ಹೈದರಾಬಾದ್, (2) **ಶ್ರೀ ಸತ್ಯನಾರಾಯಣ ಗುಂಡ** ಬಿನ್ ಶ್ರೀ ರಾಮಯ್ಯ, ಆದರ್ಶ ರೆಸಿಡೆನ್ಸಿ, ಫ್ಲಾಟ್ ಎ301, 2ನೇ ಮುಖ್ಯರಸ್ತೆ, 47ನೇ ಕ್ರಾಸ್, ಜಯನಗರ 8ನೇ ಬ್ಲಾಕ್, ಬೆಂಗಳೂರು, ಕರ್ನಾಟಕ–560082. **ಮತ್ತೊಂದು ವಿಳಾಸ :** ಶ್ರೀ ಸತ್ಯನಾರಾಯಣ ಗುಂಡ ಬಿನ್ ಶ್ರೀ. ರಾಮಯ್ಯ, ನಂ.1–7–145/4/ಎ, ಶ್ರೀನಿವಾಸ ಸಿಟಿರಿಲ್, ಜಮೀನ್‌ಪುರ ಪೋಸ್ಟ್, ಹೈದರಾಬಾದ್–500020. **ಮತ್ತೊಂದು ವಿಳಾಸ :** ಶ್ರೀ ಸತ್ಯನಾರಾಯಣ ಗುಂಡ ಬಿನ್ ಶ್ರೀ. ರಾಮಯ್ಯ, ಡಿ.607, ಫ್ಲಾಟ್ ನಂ.607, 6ನೇ ಮಹಡಿ, ಎಮರಾಲ್ಡ್ ಹೈಟ್ಸ್, ಬ್ಲಾಕ್–ಡಿ, ಸರ್ವೆ ನಂ.1106, ಘನಾಪುರ ಹ್ಯಾಮ್ಲೆಟ್ ಆಫ್ ಎಡುಲಬೇಡ್ ವಿಲೇಜ್ ಹೈದರಾಬಾದ್. | ಆಸ್ತಿಯ ಖಾತಾ ಸಂಖ್ಯೆ PH0090100077134 **ಕುಮಾರಿ.ಅರವಿಂದ ಗುಂಡ,** D/o. ಶ್ರೀ ಸತ್ಯನಾರಾಯಣ ಗುಂಡ, ರವರ ಹೆಸರಿನಲ್ಲಿದೆ. ಎ ಸೆಮಿ–ಅಪಾರ್ಟ್‌ಮೆಂಟ್ ನಂ. 607, 6ನೇ ಮಹಡಿ, ಡಿ ಬ್ಲಾಕ್, ವಿಸ್ತೀರ್ಣ 1493 ಚದರ ಅಡಿ, ಬಿಲ್ಟ್ ಅಪ್ ಪ್ರದೇಶ ಮತ್ತು 402 ಚದರ ಅಡಿ ಕಾಮನ್ ಪ್ರದೇಶ ಜೊತೆಗೆ ಜೊತೆಗೆ 62.5 ಚದರ ಅಡಿಗಳಷ್ಟು ಪ್ರಮಾಣದ ಭೂಮಿಯ ಪ್ರಮಾಣಾನುಗುಣವಾದ ಅವಿಭಜಿತ ಪಾಲು ಮತ್ತು ಕಾಯ್ದಿರಿಸಿದ ಕಾರು ನಿಲ್ಲಿಸುವ ಸ್ಥಳದ ಸ್ಲಾಟ್ ಸಂಖ್ಯೆ. ಸಿ2ಡಿ 28,29 ವಿಸ್ತೀರ್ಣ 300 ಚದರ ಅಡಿ ವಾಸಯೋಗ್ಯ ಅಪಾರ್ಟ್‌ಮೆಂಟ್‌ಗಳ ಗುಂಪಿನ ಭಾಗವಾಗಿದ್ದು ಒಟ್ಟಾಗಿ 'ಎಮರಾಲ್ಡ್ ಹೈಟ್ಸ್' ಎಂದು ಹೆಸರಿಸಲಾಗಿದೆ. ಈ ಆಸ್ತಿಯು ಸರ್ವೆ ನಂ. 1106 (ಪಿ), ಘನಪುರ ಹಮ್ಲೆಟ್, ಈದುಲಬಾದ್ ಗ್ರಾಮ, ಘನಪುರ್ ಗ್ರಾಮ ಪಂಚಾಯತ್, ಘಟ್‌ಕೇಸರ್ ಮಂಡಲ್, ರಂಗ ರೆಡ್ಡಿ ಜಿಲ್ಲೆಯಲ್ಲಿದೆ. ಚಕ್ಕುಬಂದಿ : ಉತ್ತರಕ್ಕೆ: ಲಿಫ್ಟ್, ದಕ್ಷಿಣಕ್ಕೆ: ಆಕಾಶಕ್ಕೆ ತೆರೆದ ಜಾಗ, ಪೂರ್ವಕ್ಕೆ: ಆಕಾಶಕ್ಕೆ ತೆರೆದ ಜಾಗ, ಪಶ್ಚಿಮಕ್ಕೆ: ಕಾರಿಡಾರ್. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 03.05.2024 ಎನ್‌ಪಿಎ ದಿನಾಂಕ 04.03.2024 | Loan No. PH0090100077134 POWER HOME Rs.33,10,044/- ಒಟ್ಟು ಮೊತ್ತ ರೂ. 7,22,201.54/– ದಿನಾಂಕ: 27.04.2024 ರಂದು ಇದ್ದಂತೆ |
| 5 | (1) **ಶ್ರೀ.ರಾಜು ಸೊಲೊಮನ್ ವೀರವಳ್ಳಿ,** ಬಿನ್ ಪೂರ್ಣಚನೋರ ರಾವ್ ವೀರವಳ್ಳಿ, ನಂ.4, 6ನೇ ಬಿ ಕ್ರಾಸ್, ಚಿನಪನಹಳ್ಳಿ ಮಾರತಹಳ್ಳಿ, ಕರ್ನಾಟಕ, ಬೆಂಗಳೂರು–560037. **ಮತ್ತೊಂದು ವಿಳಾಸ :** ಶ್ರೀ.ರಾಜು ಸೊಲೊಮನ್ ವೀರವಳ್ಳಿ, ಬಿನ್ ಪೂರ್ಣಚನೋರ ರಾವ್ ವೀರವಳ್ಳಿ, ಜಿಯಾನ್ ಪ್ರೇಯರ್ ಹೌಸ್ ಇಸ್ಟ್ ಲೇನ್ ಡಿಎನ್‌ಡಿ 27–10–15 ಕನ್ನವರಿತೋಟ ಗುಂಟೂರು, ಆಂಧ್ರಪ್ರದೇಶ–522004. **ಮತ್ತೊಂದು ವಿಳಾಸ :** ಶ್ರೀ.ರಾಜು ಸೊಲೊಮನ್ ವೀರವಳ್ಳಿ, ಬಿನ್ ಪೂರ್ಣಚನೋರ ರಾವ್ ವೀರವಳ್ಳಿ, ಫ್ಲಾಟ್ ನಂ–101, 1ನೇ ಮಹಡಿ, ಹೊಸ ಬಿಎಂಪಿ ಸಂಖ್ಯೆ–295/2–1, ಹೊಸ ಪಿಐಡಿ ಸಂಖ್ಯೆ–83–252–295/2–1 ಬಿಎಂಪಿ ವಾರ್ಡ್ #83, ಕಗ್ಗದಾಸಪುರ ಗ್ರಾಮ ಎಕ್ಸ್‌ಟೆನ್ಷನ್, ಕೆ ಆರ್ ಪುರಂ ಹೋಬ್ಲ್ ಬೆಂಗಳೂರು–560093. (2) **ಶ್ರೀ. ಪೂರ್ಣಚಂದ್ರರಾವ್ ವೀರವಳ್ಳಿ** ಬಿನ್ ಶ್ರೀ ಬಸವಯ್ಯ ವೀರವಳ್ಳಿ, ನಂ.4, 6ನೇ ಬಿ ಕ್ರಾಸ್, ಚಿನಪನಹಳ್ಳಿ ಮಾರತಹಳ್ಳಿ, ಕರ್ನಾಟಕ, ಬೆಂಗಳೂರು–560037. **ಮತ್ತೊಂದು ವಿಳಾಸ:** ಶ್ರೀ ಪೂರ್ಣಚಂದ್ರ ರಾವ್ ವೀರವಳ್ಳಿ ಬಿನ್ ಶ್ರೀ. ಬಸವಯ್ಯ ವೀರವಳ್ಳಿ, ಜಿಯಾನ್ ಪ್ರೇಯರ್ ಹೌಸ್ ಇಸ್ಟ್ ಲೇನ್ 27–10–15, ಕನ್ನವರಿತೋಟ ಗುಂಟೂರು, ಆಂಧ್ರಪ್ರದೇಶ–522004. **ಮತ್ತೊಂದು ವಿಳಾಸ :** ಶ್ರೀ ಪೂರ್ಣಚಂದ್ರ ರಾವ್ ವೀರವಳ್ಳಿ, ಬಿನ್ ಶ್ರೀ ಬಸವಯ್ಯ ವೀರವಳ್ಳಿ, ಫ್ಲಾಟ್ ನಂ–101, 1ನೇ ಮಹಡಿ, ಹೊಸ ಬಿಎಂಪಿ ನಂ–295/2–1, ಹೊಸ ಪಿಐಡಿ ಸಂಖ್ಯೆ–83–252–295/2–1 ಬಿಎಂಪಿ ವಾರ್ಡ್ # 83, ಕಗ್ಗದಾಸಪುರ ಗ್ರಾಮ ಎಕ್ಸ್‌ಟೆನ್ಷನ್, ಕೆ ಆರ್ ಪುರಂ ಹೋಬಳಿ, ಬೆಂಗಳೂರು–560093. | ಆಸ್ತಿಯು ಖಾತಾ ಸಂಖ್ಯೆ : PHR056104725400 **ಶ್ರೀ.ರಾಜು ಸೊಲೊಮನ್ ವೀರವಳ್ಳಿ,** ಬಿನ್ ಪೂರ್ಣಚನೋರ ರಾವ್ ವೀರವಳ್ಳಿ ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಫ್ಲಾಟ್ ನಂ. 101, ಮುನಿಸಿಪಲ್ ನಂ. 295/2–1, ಪಿಐಡಿ ನಂ. 63–252–295/2–1, ಮೊದಲನೇ ಮಹಡಿಯಲ್ಲಿರುವ ಮಲ್ಟಿಸ್ಟೋರ್ಡ್, "ಶ್ರೀಕಾರ್ ರೆಸಿಡೆನ್ಸಿ" ಎಂದು ಕರೆಯಲ್ಪಡುವ ಕಟ್ಟಡದ ಪರಿವರ್ತಿತ ನಿವೇಶನದ ನಂ. 18, ಹೆಚ್‌ಎಎಸ್‌ಬಿ ಖಾತಾ ನಂ. 295/2, ಕಗ್ಗದಾಸಪುರ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ. 83, ಬೆಂಗಳೂರು ಜೊತೆಗೆ 1/5ನೇ ಅಥವಾ 480 ಚದರ ಅಡಿ ಅವಿಭಾಜಿತ ಭಾಗದ ಭೂಮಿ ಮತ್ತು 830 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಒಳಗೊಂಡಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ: ಮನೆ ನಿವೇಶನ ನಂ. 19, ಪಶ್ಚಿಮಕ್ಕೆ: ಮನೆ ನಿವೇಶನ ನಂ. 17, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 03.05.2024 ಎನ್‌ಪಿಎ ದಿನಾಂಕ 07.08.2023 | Loan No. PH0090100211033 POWER HOME Rs.13,36,650/- ಒಟ್ಟು ಮೊತ್ತ ರೂ.8,31,845/– ದಿನಾಂಕ : 27.04.2024 ರಂದು ಇದ್ದಂತೆ |
| 6 | (1) **ಶ್ರೀಮತಿ. ಶಿಲ್ಪಶ್ರೀ ಎಸ್,** D/o ಶ್ರೀ ಶ್ರೀನಿವಾಸುಲು ನಾಯ್ಡು, ನಂ.524 ಎಸ್‌ಎಫ್ ನಂ. 1 ಶಂಕರ, ಕೃಷ್ಣಾ ರೆಸಿಡೆನ್ಸಿ 3ನೇ ಮೇನ್, ಓಎಂಬಿಆರ್ ಲೇಔಟ್, ಬೆಂಗಳೂರು – 560043. **ಮತ್ತೊಂದು ವಿಳಾಸ :** **ಶ್ರೀಮತಿ. ಶಿಲ್ಪಶ್ರೀ ಎಸ್,** D/o ಶ್ರೀ ಶ್ರೀನಿವಾಸುಲು ನಾಯ್ಡು, ಪ್ಲಾಟ್ ನಂ. 117, ಪ್ಲಾಟ್ ನಂ 117 ಕಾನ್ಫಿಡೆಂಟ್ ಸಿಗ್ನಸ್ 3 ಸರ್ವೆ ನಂ 29, ದೊಡ್ಡಕನ್ನೆಲ್ಲಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ, ಬೆಂಗಳೂರು. (2) **ಶ್ರೀ ಶ್ರೀನಿವಾಸುಲು ನಾಯ್ಡು** ಬಿನ್ ದುರೈಸ್ವಾಮಿ ವೆಲ್ಲೂರ್, ನಂ.524 ಎಸ್‌ಎಫ್ ನಂ. 1 ಶಂಕರ, ಕೃಷ್ಣಾ ರೆಸಿಡೆನ್ಸಿ 3ನೇ ಮೇನ್, ಓಎಂಬಿಆರ್ ಲೇಔಟ್, ಬೆಂಗಳೂರು–560043. **ಮತ್ತೊಂದು ವಿಳಾಸ:** ಶ್ರೀ ಶ್ರೀನಿವಾಸುಲು ನಾಯ್ಡು, ಬಿನ್ ದುರೈಸ್ವಾಮಿ ವೆಲ್ಲೂರ್, ಪ್ಲಾಟ್ ನಂ. 117, ಪ್ಲಾಟ್ ನಂ 117 ಕಾನ್ಫಿಡೆಂಟ್ ಸಿಗ್ನಸ್ 3 ಸರ್ವೆ ನಂ 29, ದೊಡ್ಡಕನ್ನೆಲ್ಲಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ, ಬೆಂಗಳೂರು. | ಆಸ್ತಿಯು ಖಾತಾ ಸಂಖ್ಯೆ : PHR056104725400 **ಶ್ರೀಮತಿ. ಶಿಲ್ಪಶ್ರೀ ಎಸ್,** D/o ಶ್ರೀ ಶ್ರೀನಿವಾಸುಲು ನಾಯ್ಡು ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಹಂಚಿಕೆಯಾಗಿರುವ ನಿವೇಶನ ನಂ. 117, CONFIDENT CYGNUS-III ವಿಸ್ತೀರ್ಣ 1162 ಚದರ ಅಡಿ, ಷೆಡ್ಯೂಲ್ ಎ ಆಸ್ತಿಯಲ್ಲಿ ರೂಪುಗೊಂಡಿರುವ ಆಸ್ತಿಯು ದಿನಾಂಕ: 18.07.2012 ರಂದು ಹೊಸಕೋಟೆ ಯೋಜನೆಯ ಆರ್ಡರ್ ನಂ. HPA/LAO/06/2012 ರಂತೆ ಅನುಮೋದನೆಗೊಂಡಿದ್ದು, ಖಾತಾ ನಂ. 1074, ಸರ್ವೆ ನಂ. 29/2. ಚಕ್ಕುಬಂದಿ : ಪೂರ್ವಕ್ಕೆ: ನಂ.99ರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ. 116, ದಕ್ಷಿಣಕ್ಕೆ: ಪ್ಲಾಟ್ ನಂ. 118. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 03.05.2024 ಎನ್‌ಪಿಎ ದಿನಾಂಕ 06.08.2023 | ಐಠಚಿಟಿ ಓಠ. ಕಊಖ0009006232 67 ಕಔಘಇಖ ಊಔಒಇ ಖ.10,70,030/– ಒಟ್ಟು ಮೊತ್ತ ರೂ. 4,37,541/– ದಿನಾಂಕ: 27.05.2024 ರಂದು ಇದ್ದಂತೆ |
| 7 | (1) **ಶ್ರೀ ಪಾಪೇಗೌಡ,** ಬಿನ್ ಎಂಆರ್ ರಾಮೇಗೌಡ, ನಂ.08, 6ನೇ ಕ್ರಾಸ್, ಸೀತಾ ಬೈರವೇಶ್ವರ ನಿಲಯ, ತೇಜಸ್ವಿನಿ ಬಾರ್ ಹಿಂಭಾಗ, ಕೆಎಸ್‌ಐಡಿ ಕಾಲೇಜು ಹತ್ತಿರ, ರಾಗ್ಯುವನಹಳ್ಳಿ ಕನಕಪುರ ರಸ್ತೆ, ಬೆಂಗಳೂರು–560061. **ಮತ್ತೊಂದು ವಿಳಾಸ:** ಶ್ರೀ.ಪಾಪೇಗೌಡ, ಬಿನ್ ಶ್ರೀ.ರಾಮೇಗೌಡ, 22/1 ನಾಡನಹಳ್ಳಿ ಸಾಗತಿವಳ್ಳಿ, ಚನ್ನರಾಯ ಪಾತ್ರ ಹಾಸನ–573116. ಮತ್ತೊಂದು ವಿಳಾಸ: ಶ್ರೀ.ಪಾಪೇಗೌಡ, ಬಿನ್ ಶ್ರೀ.ರಾಮೇಗೌಡ, ನಂ.533, ಪ್ಲಾಟ್ ಸಂಖ್ಯೆ 533 ಬಿಎಸ್‌ಕೆ 6ನೇ ಹಂತ, 4ನೇ ಬ್ಲಾಕ್, ವೃಷಭಾವತಿ ಲೈಟ್, ಬೆಂಗಳೂರು–560085. (2) **ಶ್ರೀಮತಿ. ಶೈಲಜಾ,** ಕೆ.ಆರ್. ಕೋಂ ಪಾಪೇಗೌಡ, ನಂ.08, 6ನೇ ಕ್ರಾಸ್, ಸೀತಾ ಬೈರವೇಶ್ವರ ನಿಲಯ, ತೇಜಸ್ವಿನಿ ಬಾರ್ ಹಿಂಭಾಗ, ಕೆಎಸ್‌ಐಡಿ ಕಾಲೇಜು ಹತ್ತಿರ, ರಾಗ್ಯುವನಹಳ್ಳಿ ಕನಕಪುರ ರಸ್ತೆ, ಬೆಂಗಳೂರು–560061. **ಮತ್ತೊಂದು ವಿಳಾಸ :** ಶ್ರೀಮತಿ. ಶೈಲಾಜಾ ಕೆ ಆರ್, ಕೋಂ ಪಾಪೇಗೌಡ, 22/1 ನಾಡನಹಳ್ಳಿ ಸಾಗತಿವಳ್ಳಿ, ಚನ್ನರಾಯ ಪಾತ್ರ ಹಾಸನ–573116. **ಮತ್ತೊಂದು ವಿಳಾಸ :** ಶ್ರೀಮತಿ. ಶೈಲಾಜಾ ಕೆ ಆರ್, ಕೋಂ ಪಾಪೇಗೌಡ, ನಂ.533, ಪ್ಲಾಟ್ ಸಂಖ್ಯೆ 533 ಬಿಎಸ್‌ಕ 6ನೇ ಹಂತ, 4ನೇ ಬ್ಲಾಕ್, ವೃಷಭಾವತಿ ಲೇಔಟ್, ಬೆಂಗಳೂರು–560085. | ಸ್ಥಿರಾಸ್ತಿಯು ಶ್ರೀ. ಪಾಪೇಗೌಡ ಎನ್.ಆರ್. ಬಿನ್ ಶ್ರೀ. ಕಾಮೇಗೌಡ ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ. 533, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೂಪುಗೊಂಡಿದ್ದು, ಈ ಆಸ್ತಿಯು ಬನಶಂಕರಿ 6ನೇ ಹಂತ (ವೃಷಭಾವತಿ ನಗರ) 4ನೇ 'ಹೆಚ್' ಬ್ಲಾಕ್, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.00 ಮೀಟರ್‌ಗಳು, ಒಟ್ಟು ವಿಸ್ತೀರ್ಣ 54.00 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ. 532, ಪಶ್ಚಿಮಕ್ಕೆ: ನಿವೇಶನ ನಂ. 534, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ. 558. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 04.05.2024 ಎನ್‌ಪಿಎ ದಿನಾಂಕ 14.09.2023 | Loan No. PHR000901726280 POWER HOME Rs. 13,00,000/- ಒಟ್ಟು ಮೊತ್ತ ರೂ. 9,42,171/– ದಿನಾಂಕ: 27.04.2024 ರಂದು ಇದ್ದಂತೆ |
| 9 | (1) **ಶ್ರೀಮತಿ.ರೂಪ,** ಕೋಂ ಶ್ರೀ.ಸುದೀಪ್, ನಂ.288/16, 9ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 1ನೇ ಸ್ಟಾಗ್, 2ನೇ ಹಂತ, ಗೋಕುಲ, ಬೆಂಗಳೂರು–560054. **ಮತ್ತೊಂದು ವಿಳಾಸ :** ಶ್ರೀಮತಿ ರೂಪ, ಕೋಂ ಶ್ರೀ ಸುದೀಪ್, ಪ್ಲಾಟ್ ನಂ.88, ಉತ್ತರ, ದೇವನಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ–562110. (2) **ಶ್ರೀ.ಸುದೀಪ್,** ಬಿನ್ ಶ್ರೀ.ಹೊಟ್ಟಪ್ಪ ರಾಮಚಂದ್ರ, ನಂ.288/16, 3ನೇ ಕ್ರಾಸ್, 9ನೇ ಮೇನ್, 1ನೇ ಹಂತ, 2ನೇ ಫೇಸ್, ಗೋಕುಲ, ಎಲ್‌ಐಸಿ ಆಫೀಸ್ ಹತ್ತಿರ, ಬೆಂಗಳೂರು–560054 **ಮತ್ತೊಂದು ವಿಳಾಸ :** ಶ್ರೀ.ಸುದೀಪ್, ಬಿನ್ ಶ್ರೀ ಹೊಟ್ಟಪ್ಪ ರಾಮಚಂದ್ರ, ಪ್ಲಾಟ್ ನಂ.88, ಉತ್ತರ, ದೇವನಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ–562110. (3) **ಶ್ರೀಮತಿ ಪ್ರಮೀಳಾ ದೇವಿ,** ಕೋಂ ಲೇಟ್. ಶ್ರೀ ವಿಷಕಂಠಪ್ಪ, ನಂ.34, ಶ್ರೀ ಲಾಲಕ್ಷ್ಮಿ ನಿವಾಸ, 2ನೇ ಮೇನ್, ನೇತಾಜಿ ವೃತ್ತ, ನತ್ತಿಕೆರೆ, ಬೆಂಗಳೂರು–560054. **ಮತ್ತೊಂದು ವಿಳಾಸ :** ಶ್ರೀಮತಿ ಪ್ರಮೀಳಾ ದೇವಿ, ಕೋಂ ಲೇಟ್. ಶ್ರೀ ವಿಷಕಂಠಪ್ಪ, 41, 3ನೇ ಕ್ರಾಸ್, ಹೆಚ್‌ಎಂಟಿ ಲೇಔಟ್, ಮತ್ತಿಕೆರೆ, ಬೆಂಗಳೂರು–560054. **ಮತ್ತೊಂದು ವಿಳಾಸ :** ಶ್ರೀಮತಿ ಪ್ರಮೀಳಾ ದೇವಿ, ಕೋಂ ಲೇಟ್. ಶ್ರೀ ವಿಷಕಂಠಪ್ಪ, ಪ್ಲಾಟ್ ನಂ.88, ಉತ್ತರ, ದೇವನಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ–562110. | ಸ್ಥಿರಾಸ್ತಿಯು (1) **ಶ್ರೀಮತಿ.ರೂಪ,** ಕೋಂ ಶ್ರೀ.ಸುದೀಪ್, (2) **ಶ್ರೀ.ಸುದೀಪ್,** ಬಿನ್ ಶ್ರೀ.ಹೊಟ್ಟಪ್ಪ ರಾಮಚಂದ್ರ, ಮತ್ತು (3) **(ಜಿಪಿಎ ಹೋಲ್ಡರ್ ಶ್ರೀಮತಿ. ಪ್ರಮೀಳಾ ದೇವಿ ಕೋಂ ಲೇಟ್ ಶ್ರೀ.ವೆಂಕಟಪ್ಪ)** ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಖಾಲಿ ಪ್ಲಾಟ್ ನಂ. 88, ಬೈಯಪ್ಪ ದಿಂದ ಅನುಮೋದಿತಗೊಂಡಿರುವ 'ಬ್ಲೂಜೇ ಉತ್ತರ್', ಎಂದು ಕರೆಯಲ್ಪಡುವ ಸರ್ವೆ ನಂ. 237/4 ಮತ್ತು ಸರ್ವೆ ನಂ. 237/5 ರಲ್ಲಿ ರೂಪುಗೊಂಡಿದ್ದು, ಷೆಡ್ಯೂಲ್ 'ಎ' ಯಲ್ಲಿ ಆಸ್ತಿಯು ದೇವನಹಳ್ಳಿ ಟೌನ್, 4ನೇ ವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.19 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 9.14 ಮೀಟರ್‌ಗಳು, ಒಟ್ಟು ವಿಸ್ತೀರ್ಣ 111.417 ಚದರ ಮೀಟರ್‌ಗಳು. ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 91, ಉತ್ತರಕ್ಕೆ: ಪ್ಲಾಟ್ ನಂ. 87, ದಕ್ಷಿಣಕ್ಕೆ: ಪ್ಲಾಟ್ ನಂ. 89. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 04.05.2024 ಎನ್‌ಪಿಎ ದಿನಾಂಕ 08.09.2023 | Loan No. PHR022707462781 POWER HOME VANILLA BRE Rs.55,84,821/- ಒಟ್ಟು ಮೊತ್ತ ರೂ. 22,44,785/– ದಿನಾಂಕ: 27.04.2024 ರಂದು ಇದ್ದಂತೆ |
| 9 | (1) **ಶ್ರೀಮತಿ.ರೂಪ,** ಕೋಂ ಶ್ರೀ.ಸುದೀಪ್, ನಂ.288/16, 9ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 1ನೇ ಸ್ಟಾಗ್, 2ನೇ ಹಂತ, ಗೋಕುಲ, ಬೆಂಗಳೂರು–560054. **ಮತ್ತೊಂದು ವಿಳಾಸ :** ಶ್ರೀಮತಿ ರೂಪ, ಕೋಂ ಶ್ರೀ ಸುದೀಪ್, ಪ್ಲಾಟ್ ನಂ.87, ಉತ್ತರ, ದೇವನಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ–562110. (2) **ಶ್ರೀ.ಸುದೀಪ್,** ಬಿನ್ ಶ್ರೀ.ಹೊಟ್ಟಪ್ಪ ರಾಮಚಂದ್ರ, ನಂ.288/16, 3ನೇ ಕ್ರಾಸ್, 9ನೇ ಮೇನ್, 1ನೇ ಹಂತ, 2ನೇ ಫೇಸ್, ಗೋಕುಲ, ಎಲ್‌ಐಸಿ ಆಫೀಸ್ ಹತ್ತಿರ, ಬೆಂಗಳೂರು–560054 **ಮತ್ತೊಂದು ವಿಳಾಸ :** ಶ್ರೀ.ಸುದೀಪ್, ಬಿನ್ ಶ್ರೀ ಹೊಟ್ಟಪ್ಪ ರಾಮಚಂದ್ರ, ಪ್ಲಾಟ್ ನಂ.87, ಉತ್ತರ, ದೇವನಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ–562110. (3) **ಶ್ರೀಮತಿ ಪ್ರಮೀಳಾ ದೇವಿ,** ಕೋಂ ಲೇಟ್. ಶ್ರೀ ವಿಷಕಂಠಪ್ಪ, ನಂ.34, ಶ್ರೀ ಲಾಲಕ್ಷ್ಮಿ ನಿವಾಸ, 2ನೇ ಮೇನ್, ನೇತಾಜಿ ವೃತ್ತ, ನತ್ತಿಕೆರೆ, ಬೆಂಗಳೂರು–560054. **ಮತ್ತೊಂದು ವಿಳಾಸ :** ಶ್ರೀಮತಿ ಪ್ರಮೀಳಾ ದೇವಿ, ಕೋಂ ಲೇಟ್. ಶ್ರೀ ವಿಷಕಂಠಪ್ಪ, 41, 3ನೇ ಕ್ರಾಸ್, ಹೆಚ್‌ಎಂಟಿ ಲೇಔಟ್, ಮತ್ತಿಕೆರೆ, ಬೆಂಗಳೂರು–560054. **ಮತ್ತೊಂದು ವಿಳಾಸ :** ಶ್ರೀಮತಿ ಪ್ರಮೀಳಾ ದೇವಿ, ಕೋಂ ಲೇಟ್. ಶ್ರೀ ವಿಷಕಂಠಪ್ಪ, ಪ್ಲಾಟ್ ನಂ.87, ಉತ್ತರ, ದೇವನಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ–562110. | ಸ್ಥಿರಾಸ್ತಿಯು (1) **ಶ್ರೀಮತಿ.ರೂಪ,** ಕೋಂ ಶ್ರೀ.ಸುದೀಪ್, (2) **ಶ್ರೀ.ಸುದೀಪ್,** ಬಿನ್ ಶ್ರೀ.ಹೊಟ್ಟಪ್ಪ ರಾಮಚಂದ್ರ, ಮತ್ತು (3) **(ಜಿಪಿಎ ಹೋಲ್ಡರ್ ಶ್ರೀಮತಿ. ಪ್ರಮೀಳಾ ದೇವಿ ಕೋಂ ಲೇಟ್ ಶ್ರೀ.ವೆಂಕಟಪ್ಪ)** ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಖಾಲಿ ಪ್ಲಾಟ್ ನಂ. 87, ಬೈಯಪ್ಪ ದಿಂದ ಅನುಮೋದಿತಗೊಂಡಿರುವ 'ಬ್ಲೂಜೇ ಉತ್ತರ್', ಎಂದು ಕರೆಯಲ್ಪಡುವ ಸರ್ವೆ ನಂ. 237/4 ಮತ್ತು ಸರ್ವೆ ನಂ. 237/5 ರಲ್ಲಿ ರೂಪುಗೊಂಡಿದ್ದು, ಷೆಡ್ಯೂಲ್ 'ಎ' ಯಲ್ಲಿ ಆಸ್ತಿಯು ದೇವನಹಳ್ಳಿ ಟೌನ್, 4ನೇ ವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.19 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 9.14 ಮೀಟರ್‌ಗಳು, ಒಟ್ಟು ವಿಸ್ತೀರ್ಣ 111.417 ಚದರ ಮೀಟರ್‌ಗಳು. ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 92, ಉತ್ತರಕ್ಕೆ: ಪ್ಲಾಟ್ ನಂ. 86, ದಕ್ಷಿಣಕ್ಕೆ: ಪ್ಲಾಟ್ ನಂ. 88. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 04.05.2024 ಎನ್‌ಪಿಎ ದಿನಾಂಕ 08.09.2023 | Loan No. PHR022707462867 POWER HOME VANILLA BRE Rs.55,84,821/- ಒಟ್ಟು ಮೊತ್ತ ರೂ. 22,44,785/– ದಿನಾಂಕ: 27.04.2024 ರಂದು ಇದ್ದಂತೆ |
| 10 | (1) **ಶ್ರೀ.ನಾಗರಾಜು ಹೆಚ್.ಜಿ.** ಬಿನ್ ಗಂಗಾಧರಪ್ಪ, 20/10, ಎಂಎಫ್ಎ 'ಟಿ' ಬ್ಲಾಕ್, ಎಫ್‌ಸಿಐ ಆಫೀಸರ್ಸ್ ಸ್ಟಾಫ್ ಕ್ವಾರ್ಟರ್ಸ್, ನಂದಿನಿ ಲೇಔಟ್, ನಂದಿನಿ ಲೇಔಟ್ ಪೊಲೀಸ್ ಸ್ಟೇಷನ್ ಹತ್ತಿರ, ಬೆಂಗಳೂರು, ಕರ್ನಾಟಕ–560096. **ಮತ್ತೊಂದು ವಿಳಾಸ :** ಶ್ರೀ.ನಾಗರಾಜು ಹೆಚ್.ಜಿ, ಬಿನ್ ಶ್ರೀ. ಗಂಗಾಧರಪ್ಪ, 06, 1ನೇ ಮೇನ್, 6ನೇ ಎ ಕ್ರಾಸ್, ಹನುಮಂತಪುರ, ಕುವೆಂಪು ನಗರ, ಎಸ್‌ಎಲ್‌ಎನ್ ಚೌಲ್ಟ್ರಿ ಹಿಂಭಾಗ, ತುಮಕೂರು, ಕರ್ನಾಟಕ–572103. **ಮತ್ತೊಂದು ವಿಳಾಸ :** ಶ್ರೀ.ನಾಗರಾಜು ಹೆಚ್.ಜಿ, ಬಿನ್ ಶ್ರೀ. ಗಂಗಾಧರಪ್ಪ, ನಿವೇಶನ ನಂ.76, ಭಾಷ್ಯಶ್ರೀ ಅಪೂರ್ವ, ವೀರಾಪುರ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ, ಕರ್ನಾಟಕ–562103. (2) **ಶ್ರೀಮತಿ.ರೂಪ ಎಂ.ಜಿ.** ಕೋಂ ನಾಗರಾಜಿ ಹೆಚ್.ಜಿ. 20/10, ಎಂಎಫ್ 'ಟಿ' ಬ್ಲಾಕ್, ಎಫ್‌ಸಿಐ ಆಫೀಸರ್ಸ್ ಸ್ಟಾಫ್ ಕ್ವಾರ್ಟರ್ಸ್, ನಂದಿನಿ ಲೇಔಟ್, ನಂದಿನಿ ಲೇಔಟ್ ಪೊಲೀಸ್ ಸ್ಟೇಷನ್ ಹತ್ತಿರ, ಬೆಂಗಳೂರು, ಕರ್ನಾಟಕ–560096. **ಮತ್ತೊಂದು ವಿಳಾಸ :** ಶ್ರೀಮತಿ.ರೂಪ ಎಂ.ಜಿ ಕೋಂ ನಾಗರಾಜಿ. ಹೆಚ್.ಜಿ, ಮಾಧವನಗರ, ಗೌರಿಬಿದನೂರು, ಚಿಕ್ಕಬಳ್ಳಾಪುರ (ಜಿಲ್ಲೆ) ಗೌರಿಬಿದನೂರು, ಕರ್ನಾಟಕ–561208. **ಮತ್ತೊಂದು ವಿಳಾಸ :** ಶ್ರೀಮತಿ.ರೂಪ ಎಂ.ಜಿ ಕೋಂ ನಾಗರಾಜಿ. ಹೆಚ್.ಜಿ, ನಿವೇಶನ ನಂ.76, ಭಾಷ್ಯಶ್ರೀ ಅಪೂರ್ವ, ವೀರಾಪುರ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ, ಕರ್ನಾಟಕ–562103. | ಆಸ್ತಿಯ ಖಾತೆ ಸಂಖ್ಯೆ: PHR056101345688 ಶ್ರೀ.ನಾಗರಾಜು.ಹೆಚ್. ಜಿ. ಬಿನ್ ಗಂಗಾಧರಪ್ಪ ಮತ್ತು ಶ್ರೀಮತಿ. ರೂಪ.ಎಂ.ಜಿ. ಕೋಂ ನಾಗರಾಜು ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಖಾಲಿ ಪ್ಲಾಟ್ ನಂ. 76, ಭಾಗ್ಯಶ್ರೀ ಅಪೂರ್ವ, ಸರ್ವೆ ನಂ. 20 ರಲ್ಲಿ ರೂಪುಗೊಂಡಿದ್ದು ಈ ಆಸ್ತಿಯು ವೀರಾಪುರ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದೆ. ಆಸ್ತಿಯನ್ನು ದಿನಾಂಕ: 25.07.2013 ರಂದು ವಿಡೆ ನಂ. ALN(Do.K)SR/23/2012-13 ರ ಪ್ರಕಾರ ಕೃಷಿಯಿಂದ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದ್ದು, ಪಂಚಾಯತ್ ಆಸ್ತಿ ನಂ. 150300301700520109, ಖಾತಾ ನಂ. 282/18/76 ಮತ್ತು ಬೈಯಪ್ಪ ದಿಂದ ಅನುಮೋದನೆಗೊಂಡಿರುವ BIAAPA/TP01/ LAO/13/2013-14 dated 06.06.2014 ರಂತೆ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ: 30 ಅಡಿ ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ. 83, ಉತ್ತರಕ್ಕೆ: ನಿವೇಶನ ನಂ. 75, ದಕ್ಷಿಣಕ್ಕೆ: ನಿವೇಶನ ನಂ. 77. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 03.05.2024 ಎನ್‌ಪಿಎ ದಿನಾಂಕ 03.02.2024 | Loan No. PHR056101345688 POWER HOME Rs.13,00,000/- ಒಟ್ಟು ಮೊತ್ತ ರೂ. 6,88,349/– ದಿನಾಂಕ: 27.04.2024 ರಂದು ಇದ್ದಂತೆ |
| 11 | (1) ಶ್ರೀಮತಿ. **ಅನಿತಾ ಸುಬ್ರಮಣಿಯನ್,** ಬಿನ್ ಶ್ರೀ ಸುಬ್ರಮಣಿಯನ್, ನಂ. 30, 2ನೇ ಕ್ರಾಸ್, 3ನೇ ಬ್ಲಾಕ್, ಪೆಟ್ರೋ ಹಿಂಭಾಗ, ಪಾರ್ಕ್, ಸಾಸಪ್ಪ ಲೇಔಟ್, ರಾಮಮೂರ್ತಿ ನಗರ, ಬೆಂಗಳೂರು–560016. **ಆಸ್ತಿ ವಿಳಾಸ: ಶ್ರೀಮತಿ ಅನಿತಾ ಸುಬ್ರಮಣಿಯನ್,** ಬಿನ್ ಶ್ರೀ ಸುಬ್ರಮಣಿಯನ್, ಪ್ಲಾಟ್ ನಂ. 24, ಶ್ರೀ ಸತ್ಯಸಾಯಿ ಲೇಔಟ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು–562110. (2) **ಶ್ರೀಮತಿ ಎಸ್ತರ್ ವಂಸಂತ,** ಕೋಂ ಶ್ರೀ ಸುಬ್ರಮಣಿಯನ್, ನಂ. 30, 2ನೇ ಕ್ರಾಸ್, 3ನೇ ಬ್ಲಾಕ್, ಪೆಟ್ರೋ ಹಿಂಭಾಗ, ಪಾರ್ಕ್, ಸಾಸಪ್ಪ ಲೇಔಟ್, ರಾಮಮೂರ್ತಿ ನಗರ, ಬೆಂಗಳೂರು–560016. ಮತ್ತೊಂದು ವಿಳಾಸ : ಶ್ರೀಮತಿ ಎಸ್ತರ್ ವಂಸಂತ, ಕೋಂ ಶ್ರೀ ಸುಬ್ರಮಣಿಯನ್, ಪ್ಲಾಟ್ ನಂ. 24, ಶ್ರೀ ಸತ್ಯಸಾಯಿ ಲೇಔಟ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು–562110. | ಆಸ್ತಿಯು **ಶ್ರೀಮತಿ. ಅನಿತಾ ಸುಬ್ರಮಣಿಯನ್,** ಬಿನ್ ಶ್ರೀ ಸುಬ್ರಮಣಿಯನ್ ಕೆ. ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ. 47, ಮುನಿಸಿಪಲ್ ಖಾತಾ ಖಾನೇಷುಮಾರಿ ನಂ. 513/47, 'ಶ್ರೀ ಸತ್ಯಸಾಯಿ ಬಾಬಾ ಲೇಔಟ್' ಎಂದು ಕರೆಯಲ್ಪಡುವ ಸರ್ವೆ ನಂ. 377/2 ಮತ್ತು 378 ರಲ್ಲಿ ರೂಪುಗೊಂಡಿರುವ ಪರಿವರ್ತಿತ ವಾಸಯೋಗ್ಯ ಭೂಮಿಯು ದೇವನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಉತ್ತರದ ಕಡೆ 28'2", ದಕ್ಷಿಣದ ಕಡೆ 32'4" ಮತ್ತು ಪೂರ್ವದಿಂದ ಪಶ್ಚಿಮದ ಕಡೆ 46'6" ಮತ್ತು ಪಶ್ಚಿಮದ ತ್ರಿಕೋನ ಭಾಗದ ವಿಸ್ತೀರ್ಣ 1/2X6'8"X46'6", ಮತ್ತು ಒಟ್ಟು ನಿವೇಶನದ ವಿಸ್ತೀರ್ಣ 1595 ಚದರ ಅಡಿ ((1) 28'2'+32'4"X46'6"X46'6"/2 (2) 1/2X6'8"X46'6") ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ. 46, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಸರ್ವೆ ನಂ. 379ರ ಖಾಸಗಿ ಆಸ್ತಿ, ದಕ್ಷಿಣಕ್ಕೆ: 30 ಅಡಿ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 16.05.2024 ಎನ್‌ಪಿಎ ದಿನಾಂಕ 11.05.2024 | Loan No. PHR056101724059 POWER HOME Rs. 66,39,187/- ಒಟ್ಟು ಮೊತ್ತ ರೂ. 68,95,602/– ದಿನಾಂಕ: 15.05.2024 ರಂದು ಇದ್ದಂತೆ |
| 12 | (1) **ಶ್ರೀಮತಿ. ಅನಿತಾ ಸುಬ್ರಮಣಿಯನ್,** ಬಿನ್ ಶ್ರೀ ಸುಬ್ರಮಣಿಯನ್, ನಂ. 30, 2ನೇ ಕ್ರಾಸ್, 3ನೇ ಬ್ಲಾಕ್, ಪೆಟ್ರೋ ಹಿಂಭಾಗ, ಪಾರ್ಕ್, ಸಾಸಪ್ಪ ಲೇಔಟ್, ರಾಮಮೂರ್ತಿ ನಗರ, ಬೆಂಗಳೂರು–560016. **ಆಸ್ತಿ ವಿಳಾಸ: ಶ್ರೀಮತಿ ಅನಿತಾ ಸುಬ್ರಮಣಿಯನ್,** ಬಿನ್ ಶ್ರೀ ಸುಬ್ರಮಣಿಯನ್, ಪ್ಲಾಟ್ ನಂ. 24, ಶ್ರೀ ಸತ್ಯಸಾಯಿ ಲೇಔಟ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು–562110. (2) **ಶ್ರೀಮತಿ ಎಸ್ತರ್ ವಂಸಂತ,** ಕೋಂ ಶ್ರೀ ಸುಬ್ರಮಣಿಯನ್, ನಂ. 30, 2ನೇ ಕ್ರಾಸ್, 3ನೇ ಬ್ಲಾಕ್, ಪೆಟ್ರೋ ಹಿಂಭಾಗ, ಪಾರ್ಕ್, ಸಾಸಪ್ಪ ಲೇಔಟ್, ರಾಮಮೂರ್ತಿ ನಗರ, ಬೆಂಗಳೂರು–560016. **ಮತ್ತೊಂದು ವಿಳಾಸ : ಶ್ರೀಮತಿ ಎಸ್ತರ್ ವಂಸಂತ,** ಕೋಂ ಶ್ರೀ ಸುಬ್ರಮಣಿಯನ್, ಪ್ಲಾಟ್ ನಂ. 24, ಶ್ರೀ ಸತ್ಯಸಾಯಿ ಲೇಔಟ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು–562110. | ಆಸ್ತಿಯು **ಶ್ರೀಮತಿ. ಅನಿತಾ ಸುಬ್ರಮಣಿಯನ್,** ಬಿನ್ ಶ್ರೀ ಸುಬ್ರಮಣಿಯನ್ ಕೆ. ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ. 24, ಖಾತಾ ನಂ. 519/490/24, ಮುನಿಸಿಪಲ್ ಖಾತಾ ಖಾನೇಷುಮಾರಿ ನಂ. 490/24, 'ಶ್ರೀ ಸತ್ಯಸಾಯಿ ಬಾಬಾ ಲೇಔಟ್' ಎಂದು ಕರೆಯಲ್ಪಡುವ ಸರ್ವೆ ನಂ. 377/2 ಮತ್ತು 378 ರಲ್ಲಿ ರೂಪುಗೊಂಡಿರುವ ಪರಿವರ್ತಿತ ವಾಸಯೋಗ್ಯ ಭೂಮಿಯು ದೇವನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಉತ್ತರದ ಕಡೆ 71'9", ದಕ್ಷಿಣದ ಕಡೆ 70'4" ಮತ್ತು ಉತ್ತರದಿಂದ ದಕ್ಷಿಣಕ್ಕೆ: ಪೂರ್ವದ ಕಡೆ 30 ಅಡಿ ಮತ್ತು ಪಶ್ಚಿಮದ ಕಡೆ 30 ಅಡಿ, ಒಟ್ಟು ವಿಸ್ತೀರ್ಣ 2134 ಚದರ ಅಡಿ, ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ಸರ್ವೆ ನಂ. 381/3, ಪಶ್ಚಿಮಕ್ಕೆ: 30 ಅಡಿ ರಸ್ತೆ, ಉತ್ತರಕ್ಕೆ: ನಿವೇಶನ ನಂ. 25, ದಕ್ಷಿಣಕ್ಕೆ: ನಿವೇಶನ ನಂ. 23. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ.ಎಸ್ : 9036773553 ರವರನ್ನು ಸಂಪರ್ಕಿಸಿ.** | 16.05.2024 ಎನ್‌ಪಿಎ ದಿನಾಂಕ 11.05.2024 | Loan No. PHR056101781187 POWER HOME Rs. 44,33,275/- ಒಟ್ಟು ಮೊತ್ತ ರೂ. 68,95,602/– ದಿನಾಂಕ: 15.05.2024 ರಂದು ಇದ್ದಂತೆ |
| 13 | (1) **ಶ್ರೀ. ಅಬ್ದುಲ್ ಆಸಿಫ್,** ಬಿನ್ ಶ್ರೀ ಅಬ್ದುಲ್ ಖಾದರ್, ನಂ. 748, ಬೀಡಿ ಕಾಲೋನಿ, ಅಜೀಜ್ ಸೇಟ್ ನಗರ, ಮೈಸೂರು–570019. **ಆಸ್ತಿ ವಿಳಾಸ:–** ಶ್ರೀ ಅಬ್ದುಲ್ ಆಸಿಫ್, ಬಿನ್ ಶ್ರೀ ಅಬ್ದುಲ್ ಖಾದರ್, ನಿವೇಶನ ನಂ. 412 ಎಲ್‌ಐಜಿ, ಅಜೀಜ್ ಸೇಟ್ ನಗರ, ಕ್ಯಾತಮಾರನಹಳ್ಳಿ ಎಕ್ಸ್‌ಟೆನ್ಷನ್, ನಜರ್‌ಬಾದ್ ಮೊಹಲ್ಲಾ, ಮೈಸೂರು–570019. (2) **ಶ್ರೀಮತಿ. ಹುಸ್ನಾ ಬಾನು,** ಕೋಂ ಶ್ರೀ ಅಬ್ದುಲ್ ಆಸಿಫ್, ನಂ. 748, ಬೀಡಿ ಕಾಲೋನಿ, ಅಜೀಜ್ ಸೇಟ್ ನಗರ, ಮೈಸೂರು–570019. **ಮತ್ತೊಂದು ವಿಳಾಸ : ಶ್ರೀಮತಿ. ಹುಸ್ನಾ ಬಾನು,** ಕೋಂ ಶ್ರೀ ಅಬ್ದುಲ್ ಆಸಿಫ್, ನಿವೇಶನ ನಂ. 412 ಎಲ್‌ಐಜಿ, ಅಜೀಜ್ ಸೇಟ್ ನಗರ, ಕ್ಯಾತಮಾರನಹಳ್ಳಿ ಎಕ್ಸ್‌ಟೆನ್ಷನ್, ನಜರ್‌ಬಾದ್ ಮೊಹಲ್ಲಾ, ಮೈಸೂರು–570019. | ಆಸ್ತಿಯು **ಶ್ರೀ. ಅಬ್ದುಲ್ ಆಸಿಫ್,** ಬಿನ್ ಶ್ರೀ ಅಬ್ದುಲ್ ಖಾದರ್ ಮತ್ತು **ಶ್ರೀಮತಿ. ಹುಸ್ನಾ ಬಾನು,** ಕೋಂ ಶ್ರೀ ಅಬ್ದುಲ್ ಆಸಿಫ್ ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಮನೆ 412 ಎಲ್‌ಐಜಿ, ಆಸ್ತಿಯು ಬೀದಿ ವರ್ಕರ್ಸ್ ಕಾಲೋನಿ, ಆಜೀಜ್ ಸೇಟ್ ನಗರ, ಕ್ಯಾತಮಾರನಹಳ್ಳಿ ಎಕ್ಸ್‌ಟೆನ್ಷನ್, ನಜರ್‌ಬಾದ್ ಮೊಹಲ್ಲಾ, ಮೈಸೂರು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6.50 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ : 12.19 ಮೀಟರ್‌ಗಳು. ಚಕ್ಕುಬಂದಿ : ಪೂರ್ವಕ್ಕೆ: ಸ್ವತ್ತಿನ ಮನೆ ನಂ. 413, ಪಶ್ಚಿಮಕ್ಕೆ: ಸ್ವತ್ತಿನ ಮನೆ ನಂ. 411, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸ್ವತ್ತಿನ ಮನೆ ನಂ. 421. **ಯಾವುದೇ ಮಾಹಿತಿಗಾಗಿ ಶ್ರೀ.ಸುದರ್ಶನ್ : +91 9620703099 ರವರನ್ನು ಸಂಪರ್ಕಿಸಿ.** | 16.05.2024 ಎನ್‌ಪಿಎ ದಿನಾಂಕ 10.05.2024 | Loan No. PHR015109093711 POWER HOME BRE Rs. 22,21,641/- ಒಟ್ಟು ಮೊತ್ತ ರೂ. 22,99,764/– ದಿನಾಂಕ: 15.05.2024 ರಂದು ಇದ್ದಂತೆ |
| 14 | (1) **ಶ್ರೀ.ಲಿಂಗಪ್ಪ,** ಬಿನ್ ಶ್ರೀ.ಮರಸಪ್ಪ, 7–7–48175/1 ಸಾವಿತ್ರಿ ಕಾಲೋನಿ, ಜೋಡಿ ಆಂಜನೇಯ ದೇವಸ್ಥಾನದ ಹತ್ತಿರ, ರಾಯಚೂರು, ಕರ್ನಾಟಕ–584101. **ಮತ್ತೊಂದು ವಿಳಾಸ:** ಶ್ರೀ.ಲಿಂಗಪ್ಪ, ಬಿನ್ ಮರಸಪ್ಪ, 70 ಕಕ್ಕರಗಲ್ ಸನ್ ಕೇಶ್ವರಹಾಲ್ ರಾಯಚೂರು, ಕರ್ನಾಟಕ–584126. **ಮತ್ತೊಂದು ವಿಳಾಸ:** ಶ್ರೀ.ಲಿಂಗಪ್ಪ, ಬಿನ್ ಶ್ರೀ.ಮರಸಪ್ಪ, ಪ್ಲಾಟ್ ನಂ.122, ಸರ್ವೆ ನಂ.81212, ಬೋಳಬೈಯನದೊಡ್ಡಿ ರಸ್ತೆ, ರಾಯಚೂರು, ಚಾಣುಕ್ಯಪುರಿ ಲೇಔಟ್, ರಾಯಚೂರು, ಕರ್ನಾಟಕ–584101. (2) **ಶ್ರೀ.ಶಿವರಾಜ್,** ಬಿನ್ ಶ್ರೀ.ಮಲ್ಲಯ್ಯಗೌಡ, C/o ಮಲ್ಲಯ್ಯ ಗೌಡ, 44 ಮುಕ್ಕನಾಳ್, ರೈಕ್ಟಿಯರ್ ಮುಕನ್ನಾಲ್ ರಾಯಚೂರು, ಕರ್ನಾಟಕ–584116. **ಮತ್ತೊಂದು ವಿಳಾಸ:** ಶ್ರೀ.ಶಿವರಾಜ್, ಬಿನ್ ಶ್ರೀ ಮಲ್ಲಯಗೌಡ, ಪ್ಲಾಟ್ ನಂ.122, ಸರ್ವೆ ನಂ. 81212, ಬೋಳಬಿಯಾನದೊಡ್ಡಿ ರಸ್ತೆ, ರಾಯಚೂರು, ಚಾಣುಕ್ಯಪುರಿ ಲೇಔಟ್ ರಾಯಚೂರು, ಕರ್ನಾಟಕ–584101. | ಆಸ್ತಿಯು ಶ್ರೀ. ಲಿಂಗಪ್ಪ ಬಿನ್ ಶ್ರೀ. ಮರಸಪ್ಪ ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ತೆರೆದ ಪ್ಲಾಟ್ ನಂ. 122, ಮುನಿಸಿಪಲ್ ನಂ. 8–13–4/122 ಜೊತೆಗೆ ಪಿಐಡಿ ನಂ. 21–3–608–64 ವಿಸ್ತೀರ್ಣ 9 ಮೀಟರ್‌ಗಳು x 12 ಮೀಟರ್‌ಗಳು=108 ಚದರ ಮೀಟರ್‌ಗಳು. ಅನುಮೋದನೆಗೊಂಡಿರುವ ಆಸ್ತಿಯು ಎನ್.ಎ. ಭೂಮಿಯ ಸರ್ವೆ ನಂ. 812/2, 813/1, 814, 829, 830 & 832, ರಾಯಚೂರು ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ : ರಾಯಚೂರು ರಲ್ಲಿದೆ. ಜೊತೆಗೆ ಸಿಎಂಸಿ ರಾಯಚೂರು ವ್ಯಾಪ್ತಿಯಲ್ಲಿದ್ದು, "ಚಾಣುಕ್ಯಪುರಿ ಲೇಔಟ್" ಎಂದು ಕರೆಯಲ್ಪಡುವ ಬೋಲ್‌ಮಂಡದೊಡ್ಡಿ ರಸ್ತೆ, ರಾಯಚೂರಿನಲ್ಲಿದೆ. ಮತ್ತು ಚಕ್ಕುಬಂದಿ : ಪೂರ್ವಕ್ಕೆ: ಪ್ಲಾಟ್ ನಂ. 121, ಪಶ್ಚಿಮಕ್ಕೆ: ಪ್ಲಾಟ್ ನಂ. 123, ಉತ್ತರಕ್ಕೆ: 9 ಮೀಟರ್ ಅಗಲ ರಸ್ತೆ, ದಕ್ಷಿಣಕ್ಕೆ: ಪ್ಲಾಟ್ ನಂ. 103. **ಯಾವುದೇ ಮಾಹಿತಿಗಾಗಿ ಶ್ರೀ.ಸಂಜಯ್ ಪ್ರಸಾದ್ : 9916566630 ರವರನ್ನು ಸಂಪರ್ಕಿಸಿ.** | 04.05.2024 ಎನ್‌ಪಿಎ ದಿನಾಂಕ 09.04.2024 | Loan No. PHR034207257890 POWER HOME VANILLA BRE Rs.12,25,146/- ಒಟ್ಟು ಮೊತ್ತ ರೂ. 12,35,544/– ದಿನಾಂಕ: 27.04.2024 ರಂದು ಇದ್ದಂತೆ |
| 15 | (1) **ಶ್ರೀ.ರವಿ ಜಿ, ಶ್ರೀ.ಗೋಪಾಲ್,** ಗುರುಗುಂಟಾ ಲಿಂಗಸೂರ್ ರಾಯಚೂರು ಕರ್ನಾಟಕ–584139 (ಸರ್ಕಾರಿ ಪ್ರೌಢಶಾಲೆಯ ಎದುರು) **ಮತ್ತೊಂದು ವಿಳಾಸ: ಶ್ರೀ.ರವಿ ಜಿ, ಶ್ರೀ.ಗೋಪಾಲ್,** ಪ್ಲಾಟ್ ಸಂಖ್ಯೆ 16 ಪಂಚಾಯತ್ ಸಂಖ್ಯೆ 1/26/16, ಸರ್ವೆ ನಂ. 326 /*/4, ಪಿಐಡಿ ನಂ.1523002 02300121073 ಮಾರುತಿ ಲೇಔಟ್, ಗುರುಗುಂಟಾ ಗ್ರಾಮ, ಲಿಂಗಸೂರು ರಾಯಚೂರು–584139 (2) **ಶ್ರೀಮತಿ. ರಾಮಮ್ಮ ಆರ್,** ಕೋಂ ಶ್ರೀ ರವಿ ಜಿ, ಗುರುಗುಂಟಾ ಲಿಂಗಸೂರ್ ರಾಯಚೂರು, ಕರ್ನಾಟಕ–584139 (ಸರ್ಕಾರಿ ಪ್ರೌಢಶಾಲೆ ಎದುರು) **ಮತ್ತೊಂದು ವಿಳಾಸ: ಶ್ರೀಮತಿ ರಾಮಮ್ಮ ಆರ್,** ಕೋಂ ಶ್ರೀ ರವಿ ಜಿ, ಪ್ಲಾಟ್ ಸಂಖ್ಯೆ 16 ಪಂಚಾಯತ್ ಸಂಖ್ಯೆ 1/26/16, ಸರ್ವೆ ನಂ. 326/*/4, ಪಿಐಡಿ ಸಂಖ್ಯೆ 1523002023 00121073 ಮಾರುತಿ ಲೇಔಟ್, ಗುರುಗುಂಟಾ ಗ್ರಾಮ, ಲಿಂಗಸೂರು, ರಾಯಚೂರು–584139. | ಆಸ್ತಿಯು ಶ್ರೀ.ರವಿ ಗೋಪಾಲ್ ಬಿನ್ ಶ್ರೀ.ಸುರೇಶ್ ರವರ ಹೆಸರಿನಲ್ಲಿದೆ. ಪ್ಲಾಟ್ ನಂ. 16, ಪಂಚಾಯತ್ ನಂ. 1/26/16, ಆಸ್ತಿ ನಂ. 152300202300121073, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 7.72+6.88/2 ಮೀಟರ್‌ಗಳು, ಒಟ್ಟು 87.60 ಮೀಟರ್‌ಗಳು, ಈ ಆಸ್ತಿಯು ಸರ್ವೆ ನಂ. 326/4, ಗುರುಗುಂಟಾ, ತಾ: ಲಿಂಗಸುಗೂರು, ಜಿಲ್ಲೆ: ರಾಯಚೂರು. ಚಕ್ಕುಬಂದಿ : ಪೂರ್ವಕ್ಕೆ: ಪ್ಲಾಟ್ ನಂ. 17, ಪಶ್ಚಿಮಕ್ಕೆ: 9 ಮೀಟರ್ ರಸ್ತೆ, ಉತ್ತರಕ್ಕೆ: ಭೂಮಿ ಸರ್ವೆ ನಂ. 326/3, ದಕ್ಷಿಣಕ್ಕೆ: ಪ್ಲಾಟ್ ನಂ. 15. **ಯಾವುದೇ ಮಾಹಿತಿಗಾಗಿ ಶ್ರೀ.ಸುದರ್ಶನ್ : 9611067929 ರವರನ್ನು ಸಂಪರ್ಕಿಸಿ.** | 02.05.2024 ಎನ್‌ಪಿಎ ದಿನಾಂಕ 01.08.2023 | Loan No. PHR034207 276197 POWER HOME IMGC BRE Rs.11,80,140/- ಒಟ್ಟು ಮೊತ್ತ ರೂ. 5,90,470/– ದಿನಾಂಕ: 30.04.2024 ರಂದು ಇದ್ದಂತೆ |
| 16 | (1) **ಶ್ರೀ ಬಿ.ಆರ್. ಮಂಜುನಾಥ** ಬಿನ್ ರಾಮಪ್ಪ, # 138, ಬೆಳಗೂರು, ಹೊಸದುರ್ಗ ತಾಲ್ಲೂಕು, ಚಿರ್ತದುರ್ಗ ಜಿಲ್ಲೆ. ಸರ್ಕಾರಿ ಹತ್ತಿರ ಶಾಲೆ, ತಿಪಟೂರು–577597, (2) **ಶ್ರೀಮತಿ ವಿಶಾಲಾಕ್ಷಮ್ಮ** ಕೋಂ ರಾಮಪ್ಪ, # 137, ಬೆಳಗೂರು ಗ್ರಾಮ, ಹೊಸದುರ್ಗ ತಾಲ್ಲೂಕು–577597. | ಸ್ವತ್ತಿನ ಸರ್ವೆ ನಂ. 41/2, 3, 4, 5, 7, 8, 9, & ಸರ್ವೆ ನಂ. 42/1, 2, 3, 5,6, ನಿವೇಶನ ನಂ. 73, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12 ಮೀಟರ್‌ಗಳು x ಉತ್ತರದಿಂದ ದಕ್ಷಿಣಕ್ಕೆ: 09 ಮೀಟರ್‌ಗಳು, ಆಸ್ತಿಯು ಅನ್ನಾಪುರ, ತಿಪಟೂರು ಟೌನ್, ತುಮಕೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ: 9 ಮೀಟರ್ ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ. 62, ಉತ್ತರಕ್ಕೆ: ನಿವೇಶನ ನಂ. 72, ದಕ್ಷಿಣಕ್ಕೆ: 9 ಮೀಟರ್‌ಗಳ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ.ಧರೇಶ್ ಜುನಾನಲ್ : + 91 9986820606 ರವರನ್ನು ಸಂಪರ್ಕಿಸಿ.** | 30.09.2021 ಎನ್‌ಪಿಎ ದಿನಾಂಕ 16.05.2021 | Loan No. 915030057425971 915030057426013 PRODUCTION CREDIT (Working Capital) Rs. 2,30,000/- OVER DRAFT Rs.11,00,000/- ಒಟ್ಟು ಮೊತ್ತ ರೂ. 14,57,074/– ದಿನಾಂಕ: 28.09.2021 ರಂದು ಇದ್ದಂತೆ |

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ಸ್ಥಳ : ಬೆಂಗಳೂರು
ದಿನಾಂಕ : 17.06.2024

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

## ದಿನ ದರ್ಶಿಕೆ
ಜೇಷ್ಠ ಮಾಸ, ನಕ್ಷತ್ರ ಸ್ವಾತಿ, ಶುಕ್ಲಪಕ್ಷ, ದ್ವಾದಶಿ, ಯೋಗ ಶಿವ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

## ಮನೆಮದ್ದು
ಅತಿಯಾಗಿ ವಾಂತಿಯಾಗುತ್ತಿದ್ದರೆ, ಸೌತೆಕಾಯಿಯನ್ನು ತುರಿದು ರಸವನ್ನು ಹಿಂಡಿಕೊಳ್ಳಿ. ಅದಕ್ಕೆ ಗ್ಲುಕೋಸ್ ಪುಡಿ ಮತ್ತು ನಿಂಬೆರಸ ಬೆರೆಸಿ ಕುಡಿಯಿರಿ. ಇದರಿಂದ ವಾಂತಿ ಕಡಿಮೆಯಾಗುತ್ತದೆ.

## ಸೌಂದರ್ಯ ಸೂತ್ರ
ತಾಂಬೂಲಕ್ಕೆ ಬಳಸುವ ವೀಳ್ಯದೆಲೆಯನ್ನು ಚೆನ್ನಾಗಿ ಅರೆದು ಕೊಬ್ಬರಿ ಎಣ್ಣೆಗೆ ಬೆರೆಸಿ ಸ್ವಲ್ಪ ಕಾಯಿಸಿ. ಉಗುರು ಬೆಚ್ಚಗಿನ ಈ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ಕೂದಲು ಬೆಳ್ಳಗಾಗುವುದನ್ನು ತಡೆಯಬಹುದು.

## ದಿನ ಭವಿಷ್ಯ

**ಮೇಷ:** ಪಾಲುದಾರರ ಬೆಂಬಲವನ್ನು ಪಡೆಯುವಿರಿ ಮತ್ತು ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥಮಾಡಿಕೊಳ್ಳುವಿರಿ. ಮಕ್ಕಳ ಪ್ರಗತಿ ಇರುತ್ತದೆ.

**ವೃಷಭ:** ಕೆಲಸಕ್ಕೆ ಸಂಬಂಧಿಸಿದಂತೆ ನೀವು ಅತ್ಯುತ್ತಮ ಫಲಿತಾಂಶಗಳನ್ನು ಸಹ ಪಡೆಯುತ್ತೀರಿ. ಕೆಲಸದ ಸ್ಥಳದಲ್ಲಿ ನಿರ್ವಹಣೆಯು ನಿಮ್ಮನ್ನು ಗುರುತಿಸುವಂತೆ ಮಾಡುತ್ತದೆ.

**ಮಿಥುನ:** ಪ್ರೀತಿಯಿಂದ ತುಂಬಿದ ಜೀವನವನ್ನು ನಡೆಸುವವರಿಗೆ ಇಂದು ಉತ್ತಮ ಕ್ಷಣಗಳನ್ನು ಕಳೆಯಲು ಅವಕಾಶ ಸಿಗುತ್ತದೆ.

**ಕಟಕ:** ನಿಮ್ಮ ಆರೋಗ್ಯವನ್ನು ನೋಡಿಕೊಳ್ಳಿ. ಕೆಲಸಕ್ಕೆ ಸಂಬಂಧಿಸಿದಂತೆ ಕೆಲವು ಸವಾಲುಗಳು ಇದ್ದರೂ, ಪೂರ್ಣ ಮನಸ್ಸಿನಿಂದ ಎದುರಿಸುವಿರಿ.

**ಸಿಂಹ:** ಬಲವಾದ ಆತ್ಮವಿಶ್ವಾಸವನ್ನು ಹೊಂದಿರುತ್ತೀರಿ ಮತ್ತು ಆದ್ದರಿಂದ ಇಂದು ನಿಮಗೆ ಉತ್ತಮ ದಿನವಾಗಿರುತ್ತದೆ. ಮನೆಯಲ್ಲಿ ಉತ್ಸಾಹದ ವಾತಾವರಣ.

**ಕನ್ಯಾ:** ಆದಾಯದಲ್ಲಿ ಹೆಚ್ಚಳದಿಂದ ಸಂತೋಷ. ಕುಟುಂಬದ ಹಿರಿಯರ ಬೆಂಬಲ ಸಿಗುತ್ತದೆ. ದಾಂಪತ್ಯ ಜೀವನದಲ್ಲಿ ಸಾಮರಸ್ಯ ಇರುತ್ತದೆ.

**ತುಲಾ:** ನಿಮ್ಮ ಮಾತುಗಳಿಂದ ಜನರ ಮನ ಗೆಲ್ಲುವಿರಿ. ಹಿಂದಿನ ಕಠಿಣ ಪರಿಶ್ರಮದ ಫಲಿತಾಂಶವು ಇಂದು ಸಿಗಬಹುದು.

**ವೃಶ್ಚಿಕ:** ವರ್ಷದ ಆರಂಭದಲ್ಲೇ ಧನಯೋಗ. ಇದರಿಂದಾಗಿ ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸುವುದು. ಕೆಲಸದ ವಿಚಾರದಲ್ಲಿ ಒತ್ತಡ.

**ಧನು:** ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ, ಇದು ಸಾಮಾಜಿಕತೆಯನ್ನು ಸುಧಾರಿಸುತ್ತದೆ.

**ಮಕರ:** ವ್ಯಾಪಾರಿಗಳಿಗೆ ಇಂದು ವ್ಯವಹಾರ ಅಂದುಕೊಂಡ ಹಾಗೆ ನಡೆಯದೆ, ಸ್ವಲ್ಪ ಮಟ್ಟಿಗೆ ನಷ್ಟದ ಸಾಧ್ಯತೆ.

**ಕುಂಭ:** ಆಭರಣಗಳಲ್ಲಿ ಹೂಡಿಕೆ ಮಾಡುವುದರಿಂದ ಲಾಭ ಮತ್ತು ಸಮೃದ್ಧಿ ಆಗುವುದು. ಆಫೀಸಿನಲ್ಲಿ ಕೆಲಸದ ನಿಧಾನಗತಿಯಿಂದ ಸ್ವಲ್ಪ ಒತ್ತಡ.

**ಮೀನ:** ನೀವು ಕೊಟ್ಟಿರುವ ಹಣ ಇಂದು ಮರಳಿ ಸಿಗುವ ಸಾಧ್ಯತೆ ಇದೆ. ದೂರದಿಂದ ಬರುವ ಅನಿರೀಕ್ಷಿತ ಸುದ್ದಿಯಿಂದ ಕುಟುಂಬಕ್ಕೆ ಸಂತೋಷ.

• ಕೆ.ಬಿ.ಸಂತೋಷ್ ಗುರೂಜಿ

## ಈ ದಿನ ಇತಿಹಾಸ

- 1828; ಝಾನ್ಸಿ ರಾಣಿ ಲಕ್ಷ್ಮಿ ಬಾಯಿ ನಿಧನ
- 1946: ಗೋವಾ ವಿಮೋಚನಾ ಚಳುವಳಿ ಪ್ರಾರಂಭವಾಯಿತು.
- 1658 ; ಔರಂಗಜೇಬ್ ಆಗ್ರಾದ ಕೋಟೆಯನ್ನು ವಶಪಡಿಸಿಕೊಂಡನು.
- ಅಂತರಾಷ್ಟ್ರೀಯ ಪಿಕ್ನಿಕ್ ದಿನ

## ಚಿತ್ರಸ್ಫೂರ್ತಿ



ಸಿಲಿಕಾನ್ ಸಿಟಿಯಲ್ಲಿ ಕಮಾನು ಕಟ್ಟಿದ ಕಾಮನಬಿಲ್ಲು. ಚಿತ್ರಕೃಪೆ; ಸುಧಾಕರ್ ದೇವರಾಜ್

# ಹಲ್ಲು ಮತ್ತು ನಾಲಿಗೆಯ ಕಥೆ

## ಒಂದೊಳ್ಳೆ ಮಾತು


ರೂಪಾ ಗುರುರಾಜ್
rgururaj628@gmail.com


ಒಮ್ಮೆ ಹಲ್ಲು ಮತ್ತು ನಾಲಿಗೆಗೆ ವಿಪರೀತ ಜಗಳವಾಯಿತಂತೆ. ಹಲ್ಲುಗಳು ನಾಲಿಗೆಗೆ ಹೇಳಿದವು ನಾವು 32 ಜನ ಇದೀವಿ. ನಮ್ಮ ಮಧ್ಯೆ ಒಬ್ಬಂಟಿಯಾಗಿರೋ ನಿನ್ನನ್ನು ಇರೋದಕ್ಕೆ ಬಿಟ್ಟಿರೋದೇ ದೊಡ್ಡ ಮಾತು. ಯಾಕೆಂದ್ರೆ, ನಮ್ಮ ದಾರಿಗೆ ಅಡ್ಡ ಬಂದಾಗ ನಿನ್ನನ್ನು ಕಚಕ್ ಅಂತಾ ಕಚ್ಚಿ ಬಿಸಾಡಿದ್ರೆ, ಬಿಡಿಸ್ಕಳಕ್ಕೆ ಯಾರಿದಾರೆ? ಅಂತ ಹೇಳಿ ಹಲ್ಲುಗಳು ನಾಲಿಗೆಗೆ ಜೋರು ಮಾಡಿದವು. ಒಂದು ಹಲ್ಲು ಪ್ರತಾಪ ಕೊಚ್ಚಿಕೊಂಡಿತು: ಎಷ್ಟೇ ಕಟುಕಲು ರೊಟ್ಟಿ ಚಕ್ಕುಲಿ ಆಗಿರಲಿ, ಕಟಂ ಅಂತಾ ಕಟಾರಿಸಿ ಅಗಿದು ತಿಂತೇವೆ! ನಿನಕೈಲಿ ಏನಾದೀತು! ಹೀಗೆ ಹಲ್ಲುಗಳು ನಾಲಿಗೆಯನ್ನು ಹಂಗಿಸಿ ಹೀಯಾಳಿಸಿದವು. ನಾಲಿಗೆಯು ಎಲ್ಲಾ ಹಲ್ಲುಗಳ ಮಾತುಗಳನ್ನು ಕೇಳಿಸ್ಕೊಂಡು ನಿಧಾನವಾಗಿ ಹೇಳಿತು. 'ತಮ್ಮಗಳಿರಾ.. ನಿಮ್ಮನ್ನು ತಮ್ಮಗಳಿರಾ ಅಂತೀನಿ. ಯಾಕೆ ಅಂದರೆ ನೀವೆಲ್ಲರೂ ನಾನು ಹುಟ್ಟೋದಕ್ಕಿಂತ ಮುಂಚೆ ಏನ್ ಹುಟ್ಟಿದವರಲ್ಲ; ನಾನು ಹುಟ್ಟಿದ ಒಂದೆರಡು ವರ್ಷ ಆದ್ಮೇಲೆ ಹುಟ್ಟಿದ್ದೀರಿ. ಅಷ್ಟೇ ಅಲ್ಲ, ನಾನ್ ಬದುಕಿರುವಷ್ಟು ಕಾಲ ನೀವೇನ್ ಬದುಕಿರಲ್ಲ. ನನ್ ಕಣ್ಮುಂದೆ ಎಲ್ಲರೂ ಬಿದ್ ಹೋಗ್ತೀರಿ. ನಾನೇ ಕೊನೆ ತನಕ ಇರೋನು! ಇನ್ನೊಂದ್ ಮಾತು ನಾನು ಒಳ್ಳೆಯವನಾಗಿದ್ದರೆ ಮಾತ್ರ ನಿಮಗೆ ಆಯಸ್ಸು ಗಟ್ಟಿ. ನಾನೇನಾದ್ರೂ ಕೆಟ್ಟವನಾದರೆ ನಿಮ್ಮ ಆಯಸ್ಸು ಮುಗಿಯಿತು. ನಾನು ಯಾರಿಗಾದ್ರೂ ಕೆಟ್ ಮಾತಾಡ್ದ್ರೆ, ಬೈದ್ರೆ ಅಂದ್ರೆ, ಆ ಕಡೆ ಕೆನ್ನೆಗೆ ನಾಲ್ಕು, ಈ ಕಡೆ ಕೆನ್ನೆಗೆ ನಾಲ್ಕು ಬಿಗೀತಾರೆ. ನೀವೆಲ್ಲರೂ ನನ್ನ ಕಣ್ಮುಂದೆ ಉದುರಿ ನೆಲಕ್ಕೆ ಬೀಳ್ತೀರಿ.. ಹುಷಾರ್! ' ಎಂದಿತು.

ನಿಜವೇ ಅಲ್ಲವೇ ನಮ್ಮ ನಾಲಿಗೆ ಹಿಡಿತದಲ್ಲಿದ್ದರೆ ನಮ್ಮ ಹಲ್ಲುಗಳು ಜತೆಗೆ ನಮ್ಮ ಜೀವನವೂ ಕ್ಷೇಮ, ಸುರಕ್ಷಿತವಾಗಿರುತ್ತದೆ. ನಾವು ಈ ವಿಷಯದಲ್ಲಿ ಒಂದಿಷ್ಟು ಉದಾಸೀನ ಮಾಡಿದರು ಸಹ ನಮ್ಮ ಬದುಕೇ ಮೂರಾಬಟ್ಟೆಯಾಗುವ ಆದ್ದರಿಂದಲೇ ವಿದ್ಯೆ ಹೆಚ್ಚಾದಷ್ಟು ನಾವು ವಿವೇಕವನ್ನು ಗಳಿಸುತ್ತಾ ಆಡುವ ಮಾತಿನಲ್ಲಿ ಸಂಯಮ ಮತ್ತು ತೂಕವಿರಬೇಕು. ತಮಾಷೆಯಾಗಿ ಮಾತನಾಡುವುದು ಎಲ್ಲರಿಗೂ ಇಷ್ಟ. ನಾವು ಮತ್ತೊಬ್ಬರನ್ನು ತಮಾಷೆ ಮಾಡುವಾಗ ಅವರ ಮುಖಭಂಗ ಮಾಡುವಾಗ ಸುತ್ತಲಿರುವ ಎಲ್ಲರೂ ನಕ್ಕು ಚಪ್ಪಾಳೆ ತಟ್ಟಿ ನಮ್ಮನ್ನು ಪ್ರೋತ್ಸಾಹಿಸುತ್ತಿರುತ್ತಾರೆ. ಆದರೆ ಅದನ್ನು ಸ್ವೀಕರಿಸುವ ವ್ಯಕ್ತಿಯ ಮನಸ್ಥಿತಿ ಹೇಗಾಗಿರಬಹುದು ಎಂದು ಒಮ್ಮೆ ಯೋಚಿಸಿದ್ದೀರಾ? ಅಕಸ್ಮಾತ್ ಅವರು ಸಹ ಅದನ್ನು ತಮಾಷೆಯಾಗಿ ಸ್ವೀಕರಿಸದೆ ನಮ್ಮ ತೇಜೋವಧೆಗೆ ಇಳಿದರೆ ಅದನ್ನು ತಡೆದುಕೊಳ್ಳುವ ಶಕ್ತಿ ನಮಗಿದೆಯೆ? ಎಂದು ನಾವು ಮೊದಲು ಯೋಚಿಸಬೇಕು. ಎಂದಾದರೆ ಎಂದೂ ಮತ್ತೊಬ್ಬರ ಬಗ್ಗೆ ಹಗುರವಾಗಿ ಮಾತನಾಡುವ ಕೆಲಸಕ್ಕೆ ಕೈ ಹಾಕಬಾರದು.

ಎಷ್ಟೋ ಜನ ಜೀವನದಲ್ಲಿ ಬಹಳಷ್ಟು ಸಾಧಿಸುವ ಎಲ್ಲ ಗುಣಗಳನ್ನೂ ಹೊಂದಿರುತ್ತಾರೆ. ಅದಕ್ಕಾಗಿ ಪರಿಶ್ರಮ ಕೂಡ ಪಡುತ್ತಾರೆ. ಆದರೆ ಅವರಿಗೆ ಅವರ ನಾಲಿಗೆಯ ಮೇಲೆ ಹಿಡಿತವಿಲ್ಲದಿದ್ದರೆ ಅವರ ಎಲ್ಲ ಪರಿಶ್ರಮ ಅವರ ಬೇರೆಲ್ಲ ಸದ್ಗುಣಗಳು ಹೊಳೆಯ ನೀರಿನಲ್ಲಿ ಹುಣಸೆಹಣ್ಣನ್ನು ಮಾಡಿದ ಎಲ್ಲ ಕೆಲಸವನ್ನು ಒಂದು ಮಾತು ಹಾಳು ಮಾಡಿಬಿಡುವ ಸಾಮರ್ಥ್ಯವನ್ನು ಹೊಂದಿರುತ್ತದೆ.

ಆದ್ದರಿಂದಲೇ ಮೊದಲು ನಮ್ಮ ನಾಲಿಗೆಯ ಮೇಲೆ ಹಿಡಿತವನ್ನು ಸಾಧಿಸುವುದನ್ನು ನಾವು ಕಲಿತಾಗ ಬೇರೆಯ ಗುಣಗಳಲ್ಲಿ ಒಂದೆರಡು ಏರುಪೇರಾದರೂ ನಮಗೆ ಹೆಚ್ಚಿನ ಧಕ್ಕೆಯಾಗುವುದಿಲ್ಲ. ಎಲ್ಲರನ್ನೂ ರಂಜಿಸುವಂತೆ ಮಾತನಾಡಲು ಬರದಿದ್ದರೂ ಸರಿ, ಮತ್ತೊಬ್ಬರಿಗೆ ನೋವಾಗುವಂತೆ ಮುಖಭಂಗವಾಗುವಂತೆ ಮಾತನಾಡುವ ಚಾಳಿ ನಮ್ಮ ಜೀವಕ್ಕೇ ಮುಳುವಾಗಬಹುದು.

ರಸ್ತೆಯಲ್ಲಿ ಹೋಗುವಾಗ ವಾಹನ ಚಾಲನೆ ಮಾಡುವಾಗ ಅನಗತ್ಯವಾಗಿ ಮತ್ತೊಬ್ಬರ ಮೇಲೆ ಹರಿಹಾಯುವುದನ್ನು ಕೋಪಗೊಳ್ಳುವುದನ್ನು ಆದಷ್ಟು ನಮ್ಮ ಸಿಟ್ಟು ನಮ್ಮ ದವಡೆಗೇ ಮೂಲವಾಗಬಹುದು. ಪ್ರಾಣವೂ ಹೋಗಬಹುದು. ನೆನಪಿರಲಿ ನಾಲಿಗೆ ನಮ್ಮ ಅತ್ಯಂತ ಒಳ್ಳೆಯ ಮಿತ್ರ ಆದರೆ ಅಷ್ಟೇ ಕೆಟ್ಟ ಶತ್ರು ಕೂಡ.

## ಪದಬಂಧ



**ಎಡದಿಂದ ಬಲಕ್ಕೆ**
1. ನೀರಿನ ಹಬೆ (2)
3. ಫಳ್ ಫಳ್ ಸದ್ದು ಮಾಡಿದ ಕಾಲಂದುಗೆ (3)
4. ಮುಖದ ಮೇಲಿನ ನಗು (2)
8. ಮೃತ್ಯುದೇವತೆಯಿಂದ ಆರಂಭವಾದ ಜೋಡಿ (3)
10. ಮಜಾ ತಂದ ಘಟ್ಟ (3)
12. ರಾಕ್ಷಸನಿಗೆ ಮತ್ತೊಂದು ಹೆಸರು (3)
14. ನಾನು, ನನ್ನದೆಂಬ ಪ್ರೀತಿ (4)
15. ಆತನ ಕುಲ (4)
16. ಯುದ್ಧ ಮಾಡುವಾಗ ಏಟು ತಪ್ಪಿಸಿಕೊಳ್ಳಲು ಬಳಸಿದ್ದು (3)
18. ಮನಸ್ಸಿನೊಳಗಿನ ಭಯ (3)
20. ರಾಜನ ಆಸ್ಥಾನದಲ್ಲಿದ್ದ ಹೊಗಳು ಭಟ್ಟ (3)
22. ಸತ್ಯವಲ್ಲ, ಭ್ರಮೆ (2)
23. ಹಣವನ್ನು ಕೂಡಿಡುವ ಡಬ್ಬ (3)
24. ಮೀನು ಹಿಡಿಯುವ ಕೊಕ್ಕೆ (2)

**ಮೇಲಿನಿಂದ ಕೆಳಕ್ಕೆ**
1. ಬೇರೆಯವರಿಗೆ ನೀಡಿದ ಆಸರೆ (3)
3. ಚಿಲ್ಲರೆ ಹಣಕ್ಕೆ ಹೀಗೆನ್ನಬಹುದು (4)
5. ಜವಾಬು ನೀಡಿದ್ದು ಈ ಪ್ರಶ್ನೆಗೆ (3)
6. ಸರಿಯುತ್ತರ ಬರೆದು ಗಳಿಸಿದ ಮಾರ್ಕ್ (2)
7. ಹೆಸರೂ ಆಗಬಲ್ಲ ಮೋಸ (2)
9. ಪರಿಣಯದ ದಿನ ಸಿದ್ಧವಾಗಿರುವ ಹುಡುಗಿ (5)
11. ಪಿಂಗಾಣಿ ಬಟ್ಟಲುಗಳಲ್ಲಿ ನೀರು ತುಂಬಿ ಕಡ್ಡಿಗಳಿಂದ ಬಡಿದು ನುಡಿಸುವ ವಾದ್ಯ (5)
12. ಮುದ್ರೆ ಹಾಕಲು ಬಳಸುವ ಲಾಕ್ಷ (3)
13. ಮಣಿಯೊಂದಿಗೆ ಬಂದಿರುವ ಚೆಲುವೆ (3)
17. ರಾಜ್ಯವೊಂದರ ಪ್ರಥಮ ಪ್ರಜೆ (4)
18. ಪಕ್ಷದ ಎಂಟನೆಯ ದಿನ (3)
19. ರಾಮನ ಒಬ್ಬ ಪುತ್ರ (2)
20. ತೋಟದ ಕೆಲಸ ಮಾಡುವವನು (2)
21. ಬಿಳಿಯ ಬಣ್ಣ (3)

### ನಿನ್ನೆಯ ಉತ್ತರ
**ಎಡದಿಂದ ಬಲಕ್ಕೆ:** 2. ಕಾಗೆಬಂಗಾರ 6. ಲಿಲಾವು 7. ವಿನೋದ 8. ಲಿನುಬಾ 11. ಹವುರಿ 12. ನಾಮಕರಣ 13. ದಮಡಿ 14. ತೆರಿಗೆ 16. ಪದಪಾ 19. ಧಾವಂತ 20. ಚಿನಕುರುಳಿ

**ಮೇಲಿನಿಂದ ಕೆಳಕ್ಕೆ:** 1. ಗಲಿಬಿಲಿ 2. ಕಾವು 3. ಬಂಟ 4. ರವಿ 5. ಪಾದಚಾರಿ 9. ಬಾನಾಡಿ 10. ಚಾಕರಿ 11. ಹಣತೆ 13. ದಳಪತಿ 15. ಗೆಳೆತನ 17. ಪಾಚಿ 18. ಮಂಕು 19. ಧಾಳಿ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

## ದಿನಕ್ಕೊಂದು ಮಾಹಿತಿ

### ದಂತವೈದ್ಯಶಾಸ್ತ್ರಕ್ಕೆ ಶತಶತಮಾನಗಳ ಇತಿಹಾಸ

ದಂತವೈದ್ಯಶಾಸ್ತ್ರವು ಪ್ರಪಂಚದ ಅತ್ಯಂತ ಹಳೆಯ ವೃತ್ತಿಯಾಗಿದೆ. ಇದು ಸುಮಾರು 9000 ವರ್ಷಗಳ ಹಿಂದಿನದು. ಇದಕ್ಕೆ ಸಾಕ್ಷಿಯಾಗಿ, ಸಂಶೋಧಕರು 7500 ವರ್ಷ- 9000 ವರ್ಷಗಳ ಹಿಂದಿನ ತಲೆಬುರುಡೆಯಲ್ಲಿ ಕೊರೆದ ಹಲ್ಲು ಕಂಡುಹಿಡಿದಿದ್ದಾರೆ, ಅದು ಹಿಂದಿನದು. ಬಿಬಿಸಿ ಯುನಿವರ್ಸಿಟಿ ಆಫ್ ಬೊಲೊಗ್ನಾ ಪ್ರಕಾರ, ಇಟಲಿಯು 14,000 ವರ್ಷಗಳಷ್ಟು ಹಳೆಯದಾದ ತಲೆಬುರುಡೆಯ ಮೇಲೆ ಸಂಶೋಧನೆ ನಡೆಸಲಾಗಿದೆ. ಈ ಸಂದರ್ಭದಲ್ಲಿ ದವಡೆಯಲ್ಲಿ ಕೊಳೆತಿದ್ದ ಹಲ್ಲುಗಳನ್ನು ಕೆಲವು ಉಪಕರಣಗಳ ಸಹಾಯದಿಂದ ಕಿತ್ತುಹಾಕಿರುವುದು, ಉದ್ದೇಶಪೂರ್ವಕವಾಗಿ ಕೊರೆಯಲಾಗಿರುವುದು ಬೆಳಕಿಗೆ ಬಂದಿದೆ.

## ಪುಸ್ತಕ ಲೋಕ




### ಜೋಡ್ವಾಲ
ಲೇಖಕಿ ಅನುಷಾ ಶೆಟ್ಟಿಯವರು ಬರೆದಿರುವ ಜೋಡ್ವಾಲ ಸಸ್ಪೆನ್ಸ್ ಥ್ರಿಲ್ಲರ್ ಕಾದಂಬರಿ. ಕಥೆಯಲ್ಲಿ ಮೂರು ಭಾಗಗಳಿದ್ದು , ಮೊದಲನೆಯದು ಮಡಿಕೇರಿ - ಜೋಡ್ವಾಲದ ಆಸುಪಾಸಿನಲ್ಲಿ ನಡೆಯುತ್ತದೆ. ಆ ಘಾಟಿಯಲ್ಲಿ ನಡೆಯುವ ವಿಚಿತ್ರ ಘಟನೆಗಳು, ಹಾಗು ಆ ಘಟನೆಗಳಿಗೆ ಹೆಣೆದುಕೊಂಡಿರುವ ರೋಚಕ ತಿರುವುಗಳೇ ಈ ಕಾದಂಬರಿಯ ತಿರುಳು. ಪ್ರತೀ ಅಧ್ಯಾಯವೂ ಮುಂದಿನದಕ್ಕೆ ಓದಲು ಪ್ರೇರೇಪಿಸುತ್ತದೆ. ನೆಮ್ಮದಿಯ ಓದಿಗೆ ಬೇಕಾಗುವ ಎಲ್ಲ ಸಾಮಗ್ರಿ ಇದೆ ಎಂದರೆ ತಪ್ಪಾಗಲಾರದು. ಆರಂಭದಲ್ಲಿ ತೇಜಸ್ವಿಯವರ ಇನ್ನೊಂದು ಆವೃತ್ತಿ ತರಹ ಅನಿಸಿದರೂ ಬಹುಬೇಗ ಅದರಿಂದ ಬಿಡಿಸಿಕೊಂಡು ಒಳಗಿಳಿಯುವಂತೆ ಬರೆಯುತ್ತಾರೆ. ಅದಲ್ಲದೆ ಸ್ಥಳೀಯ ಭಾಷಾ ಬಳಕೆಯೂ ಚೆನ್ನಾಗಿದೆ. ರಪ ರಪ ಓದಿಸಿಕೊಂಡು ಹೋಗುವುದು ಹೆಗ್ಗಳಿಕೆ.

## ಟ್ವೀಟ್‌ಮೆಂಟ್

**ವಸಂತ :** ಸರ್ಕಾರಿ ಶಾಲೆ ಇಲ್ಲವೇ ಅನುದಾನಿತ ಶಾಲೆಗಳಲ್ಲಿ ಓದಿದವರು, ಸರ್ಕಾರದಿಂದ ಭೂಮಿ, ನೀರು, ವಿದ್ಯುತ್ ಅಗ್ಗಕ್ಕೆ ಪಡೆದು ಕಟ್ಟಿದ ಖಾಸಗಿ ಶಾಲೆಗಳಲ್ಲಿ ಓದಿದವರು, ಸರ್ಕಾರದ ಸಿ.ಇ.ಟಿ ವ್ಯವಸ್ಥೆಯಲ್ಲಿ ಸೀಟು ಪಡೆದು ಇಂಜಿನಿಯರಿಂಗ್, ಮೆಡಿಸಿನ್ ಓದಿದವರು ಸರ್ಕಾರ ಹೆಣ್ಣು ಮಕ್ಕಳಿಗೆ ಉಚಿತ ಬಸ್ ಓಡಾಟ ಕಲ್ಪಿಸಿದ್ದರ ಬಗ್ಗೆ ಆಡಿಕೊಳ್ಳುವುದು ತರವಲ್ಲ.

---

**ಅಭಿಷೇಕ್ :** ಸರ್ಕಾರ ತನ್ನ ನೆಲದಲ್ಲಿ ವಿದ್ಯೆ ಕೌಶಲ್ಯಾಭಿವೃದ್ಧಿ ಅಥವಾ skilled labour ಮೇಲೆ ಹೂಡಿಕೆ ಮಾಡುವುದಕ್ಕೂ ಬೊಕ್ಕಸವನ್ನು ಮತಗಳಿಕೆ ಸಲುವಾಗಿ ಬರಿದು ಮಾಡುವುದಕ್ಕೂ ವ್ಯತ್ಯಾಸವಿದೆ ಅಲ್ಲವೇ?

## ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

ಪ್ರ. ತಾಮಿರಪಾಣಿ ನದಿ ಯಾವ ರಾಜ್ಯದಲ್ಲಿ ಕಂಡುಬರುತ್ತದೆ?

ಎ. ಮಧ್ಯ ಪ್ರದೇಶ
ಬಿ. ತಮಿಳುನಾಡು
ಸಿ. ಪಂಜಾಬ್
ಡಿ. ಕೇರಳ



ಉತ್ತರ: ಬಿ. ತಮಿಳುನಾಡು

### ಮಾಹಿತಿ
ತಾಮಿರಪಾಣಿ ನದಿಯು ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಪಶ್ಚಿಮ ಘಟ್ಟಗಳ ಪೊತಿಗೈ ಬೆಟ್ಟಗಳಲ್ಲಿ ಹುಟ್ಟುತ್ತದೆ. ಬೆಂಗಳೂರು ಮೂಲದ ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಅಂಡ್ ದಿ ಎನ್ವಿರಾನ್ಮೆಂಟ್ (ಎ ಟಿ ಆರ್ ಇ ಇ) ಸಂಶೋಧಕರು ತಮಿರಾಸೆಸ್' ಯೋಜನೆಯಡಿ ತಾಮಿರಪಾಣಿ ನದಿಯ ಮರುಸ್ಥಾಪನೆಯನ್ನು ಪ್ರಾರಂಭಿಸಿದರು. ಇದು ಸ್ಥಳೀಯ ಜೀವವೈವಿಧ್ಯದ ಪರಿಸ್ಥಿತಿಗಳನ್ನು ಅಭಿವೃದ್ಧಿಪಡಿಸಲು ಮತ್ತು ಬಹು ಪರಿಸರ ವ್ಯವಸ್ಥೆಯ ಸೇವೆಗಳನ್ನು ಹೆಚ್ಚಿಸಲು ಅನುವುಮಾಡಿಕೊಡುತ್ತದೆ.

## ಆಹಾರವೇ ವೈದ್ಯ


ಬೆಂ. ಮು. ಮಾರುತಿ


# ರೋಗಗಳಿಗೆ ರಾಮಬಾಣ ಸಿರಿಧಾನ್ಯ

ಜನ ಜೀವನಶೈಲಿ ಬದಲಾಗುತ್ತಿದ್ದಂತೆ ಸಾಂಪ್ರದಾಯಿಕ ಹಾಗೂ ಆರೋಗ್ಯಕರ ಅಡುಗೆ ತಿನ್ನಿಸುಗಳು ಮರೆತೇ ಹೋಗಿವೆ. ಇನ್ನು ಸಿರಿಧಾನ್ಯಗಳ ಬಳಕೆಯಂತೂ ತೀರ ಕಡಿಮೆಯಾಗಿದೆ ಆದರೆ ಸಿರಿಧಾನ್ಯಗಳ ಪ್ರಯೋಜನ ಗೊತ್ತಾದರೆ ನೀವು ಪ್ರತಿನಿತ್ಯವು ಸಿರಿಧಾನ್ಯ ಬಳಸೋದನ್ನ ಮಿಸ್ ಮಾಡುವುದೇ ಇಲ್ಲ, ನಮ್ಮ ರಾಜ್ಯದಲ್ಲಿ ರಾಗಿ, ಸಜ್ಜೆ, ನವಣೆ, ಬರಗು ಸಾಮೆ, ಊದಲು, ಆರ್ಕ, ಕೊರಲೆ ಇತರ ಸಿರಿಧಾನ್ಯಗಳನ್ನ ಕಾಣಬಹುದು. ಆದರೆ ಇವುಗಳಲ್ಲಿ ನಾವು ಹೆಚ್ಚಾಗಿ ಬಳಸೋದು ರಾಗಿ ಮತ್ತು ಜೋಳ ಮಾತ್ರ ಇನ್ನುಳಿದ ಧಾನ್ಯಗಳನ್ನ ಉಪಯೋಗಿಸುವುದು ತೀರಾ ಕಡಿಮೆ ಎನ್ನಬಹುದು. ಹಿಂದಿನ ಕಾಲದಲ್ಲಿ ನಮ್ಮ ಹಿರೀಕರು ಹೆಚ್ಚಾಗಿ ತಿನ್ನುತ್ತಿದ್ದ ಊಟವೆಲ್ಲಾ ಸಿರಿಧಾನ್ಯಗಳಿಂದ ಕೂಡಿದ್ದವು. ಹಾಗಾಗಿ

ನಮ್ಮ ಹಿರಿಯರು ಯಾವುದೇ ಖಾಯಿಲೆಗಳಿಲ್ಲದೆ ದೀರ್ಘಾಯುಷಿಗಳಾಗಿದ್ದರು.

ಸಿರಿಧಾನ್ಯ ನಮ್ಮ ದೇಹಕ್ಕೆ ಅಗತ್ಯವಾಗಿ ಬೇಕಾಗಿರುವ ಪೌಷ್ಟಿಕ ಸತ್ವಗಳಾದ ತಾಮ್ರ, ಮೆಗ್ನೀಷಿಯಂ, ಪಾಸ್ಪರಸ್, ಮ್ಯಾಂಗನೀಸ್ ಮತ್ತು ಇತರ ಪೌಷ್ಟಿಕ ಸತ್ವಗಳು ಸಾಕಷ್ಟು ಲಭ್ಯವಿದೆ. ಅಸಮತೋಲನವಾದ ಆಹಾರದ ಪದ್ಧತಿಯಲ್ಲಿ ಸಿರಿಧಾನ್ಯಗಳು ನಿಮಗೆ ಆರೋಗ್ಯಕರವಾದ ಜೀವನವನ್ನು ಒದಗಿಸಲು ಸಹಾಯ ಮಾಡುತ್ತದೆ ಹಾಗು ಕ್ಯಾಲೋರಿಗಳ ಬಗ್ಗೆ ಹೆಚ್ಚು ಗಮನ ಹೊಂದಿರುವ ಜನರಿಗೆ ಹೇಳಿ ಮಾಡಿಸಿದ ಆಹಾರ ಎಂದರೆ ಅದು ಸಿರಿಧಾನ್ಯ ಎಂದು ಹೇಳಬಹುದು.

ಇತ್ತೀಚೆಗೆ ಬದಲಾದ ಜೀವನ ಶೈಲಿಯಿಂದ ಮನುಷ್ಯರಿಗೆ ಕಾಡುತ್ತಿರುವ ಹೃದಯದ ಸಮಸ್ಯೆಗಳು, ಪಾರ್ಶ್ವವಾಯು, ರಕ್ತದೊತ್ತಡ , ಮಧುಮೇಹ ಹೀಗೆ ದೀರ್ಘ ಕಾಲ ಕಾಡುವ ಕಾಯಿಲೆಗಳಿಂದ ಜನರು ನಿಶಕ್ತರಾಗಿದ್ದಾರೆ. ಹಾಗಾಗಿ ಈ ಸಂದರ್ಭದಲ್ಲಿ ಪೌಷ್ಟಿಕಾಂಶಗಳನ್ನು ಒಳಗೊಂಡಿರುವ ಸಿರಿಧಾನ್ಯದ ಅವಶ್ಯಕತೆ ಜನರಿಗಿದೆ. ಇದರಲ್ಲಿ ಕಡಿಮೆ ಕ್ಯಾಲೋರಿಗಳಿರುವುದರಿಂದ ಆರೋಗ್ಯಕ್ಕೆ ಯಾವುದೇ ಹಾನಿ ಉಂಟಾಗದೇ ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ದೇಹದಲ್ಲಿ ವಿಪರೀತ ಬೊಜ್ಜು ಮತ್ತು ಕೊಬ್ಬಿನ ಅಂಶ ಜೊತೆಗೆ ಕೊಲೆಸ್ಟ್ರಾಲ್ ಅಂಶ ತುಂಬಿಕೊಳ್ಳುವುದನ್ನು ತಪ್ಪಿಸುತ್ತದೆ.

ರಾಸಾಯನಿಕಯುಕ್ತ ಆಹಾರ ಮತ್ತು ಜಂಕ್‌ಫುಡ್ ಸೇವನೆಯಿಂದ ಮಧುಮೇಹ, ಕ್ಯಾನ್ಸರ್, ಸ್ಥೂಲಕಾಯ, ಹೃದಯಸಂಬಂಧಿ ಕಾಯಿಲೆಗಳು ಸೇರಿದಂತೆ ಹಲವಾರು ಸಮಸ್ಯೆಗಳು ವಯಸ್ಸಿನ ಬೇಧವಿಲ್ಲದೆ ಎಲ್ಲರನ್ನೂ ಕಾಡುತ್ತಿದೆ. ಇಂತಹ ಸಂದರ್ಭದಲ್ಲಿ ಆರೋಗ್ಯ ಸುಧಾರಣೆಯಾಗಬೇಕಾದರೆ ಸಿರಿಧಾನ್ಯ ಬಳಸಬೇಕು.

# ನಕ್ಷತ್ರಗಳ ಜೀವನ ಯಾತ್ರೆ!

## ವಿಜ್ಞಾನ ವಿಸ್ಮಯ


ಕೆ. ನಟರಾಜ್





ವಿಶ್ವದಲ್ಲಿ ಹೈಡ್ರೋಜನ್ ಅನಿಲ ದುಂಡಗಾಗಿ ಒಂದು ನಕ್ಷತ್ರ ಹುಟ್ಟುತ್ತದೆ. ಇದನ್ನೇ 'ಆದಿ ನಕ್ಷತ್ರ' ಎನ್ನುತ್ತಾರೆ. ಆಗ ತಾನೇ ಹುಟ್ಟಿದ ಮಗು ಎಷ್ಟು ಸೋಜಿಗವೋ ಅಷ್ಟೇ ವಿಸ್ಮಯ ಈ 'ಆದಿ ನಕ್ಷತ್ರ'. ಹುಟ್ಟಿದ ಮಗು ಕೆಲವೇ ತಿಂಗಳಲ್ಲಿ ತನ್ನ ಆಟ ಪಾಠಗಳನ್ನು ಆರಂಭಿಸುವಂತೆ, ಆದಿ ನಕ್ಷತ್ರ ತನ್ನದೇ ಆದ ಗುರುತ್ವದಿಂದ ಕುಸಿಯುತ್ತಾ ಹೋಗುತ್ತದೆ. ಇದರಿಂದ ಕ್ರಮೇಣ ಉಷ್ಣತೆ ಹೆಚ್ಚುತ್ತಾಹೋಗುತ್ತದೆ. ಆದಿ ನಕ್ಷತ್ರದ ಒಳಭಾಗದಲ್ಲಿ ಮಿಲಿಯನ್ ಡಿಗ್ರಿಗಳಷ್ಟು ಉಷ್ಣತೆ ಉಂಟಾದಾಗ ಮತ್ತೊಂದು ವಿಶೇಷ ಕ್ರಿಯೆ ನಡೆಯುತ್ತೆ. ಅದೇ 'ಹೈಡ್ರೋಜನ್ ಮಿಲನ ಕ್ರಿಯೆ'. ಇದರಿಂದ ಮತ್ತೊಂದು ವಿಶೇಷ ಧಾತು 'ಹೀಲಿಯಂ' ರೂಪುಗೊಳ್ಳುತ್ತೆ.

ಮನುಷ್ಯ ತನ್ನ ಹದಿಹರೆಯದ ಸ್ಥಿತಿಯಲ್ಲಿ ಹೇಗೆ ತನ್ನ ಮಾನಸಿಕ ಸ್ಥಿತಿಗಳಿಂದ ಜರ್ಝರಿತಗೊಳ್ಳುತ್ತಾನೆಯೋ ಹಾಗೆಯೇ ಈ ನಕ್ಷತ್ರದ ಸ್ಥಿತಿಯೂ ಕೂಡ! ನಕ್ಷತ್ರದ ಈ ಸ್ಥಿತಿಯಲ್ಲಿ ಎರಡು ಬಹು ಮುಖ್ಯ ಕ್ರಿಯೆಗಳು ಈ ನಕ್ಷತ್ರವನ್ನು ಹಣ್ಣುಗಾಯಿ- ನೀರುಗಾಯಿ ಮಾಡಿಬಿಡುತ್ತವೆ.

### ಉಷ್ಣತೆ ಮತ್ತು ಗುರುತ್ವ - ಬದ್ಧವೈರಿಗಳು
ನಿಮಗೆ ಆಶ್ಚರ್ಯವೆನಿಸಬಹುದು ! ಮೊದಲು ಬಂದ ಗುರುತ್ವ ನಕ್ಷತ್ರವನ್ನು ಕುಗ್ಗಿಸುತ್ತಾ ಹೋದರೆ, ಆನಂತರ ಏರಿದ ಉಷ್ಣತೆ ನಕ್ಷತ್ರವನ್ನು ಹಿಗ್ಗಿಸುತ್ತಾ ಹೋಗುತ್ತದೆ. ಈ ಹಿಗ್ಗುವಿಕೆ ಮತ್ತು ಕುಗ್ಗುವಿಕೆ ಸಮನಾದಾಗ ನಕ್ಷತ್ರ ಸ್ಥಿರ ಸ್ಥಿತಿಯನ್ನು ಪಡೆಯುತ್ತದೆ. ಇದನ್ನೇ 'ಸ್ಥಿರ ನಕ್ಷತ್ರ' ಎನ್ನುತ್ತಾರೆ. ಸ್ಥಿರ ನಕ್ಷತ್ರಕ್ಕೆ ಒಂದು ಉದಾಹರಣೆ ನಮ್ಮ ಸೂರ್ಯ ! ಈಗಾಗಲೇ ಸೂರ್ಯ ಐದು ಬಿಲಿಯನ್ ವರ್ಷಗಳನ್ನು ಪೂರೈಸಿದ್ದಾನೆ. ಸೂರ್ಯನಿಗೆ ಇನ್ನೂ ಐದು ಬಿಲಿಯನ್ ವರ್ಷಗಳ ಆಯುಸ್ಸಿದೆ !

### ನಕ್ಷತ್ರದ ಮಧ್ಯ ವಯಸ್ಕ ಸ್ಥಿತಿ - ಕೆಂಪು ದೈತ್ಯ
ಮನುಷ್ಯ ಮಧ್ಯವಯಸ್ಕ ಸ್ಥಿತಿಗೆ ಬಂದಾಗ ಸಾಮಾನ್ಯವಾಗಿ ಹೊಟ್ಟೆ ಉಬ್ಬಿ ದಪ್ಪನಾಗಿ ಕಾಣುತ್ತಾನೆ. ಅಂತೆಯೇ ನಮ್ಮ 'ಸ್ಥಿರ ನಕ್ಷತ್ರ' ಕೂಡಾ ಹಿಗ್ಗಿ ದೊಡ್ಡವನಾಗಿ ಬಿಡ್ತಾನೆ. ಯಾಕೆ ಗೊತ್ತಾ? ಸ್ಥಿರ ನಕ್ಷತ್ರದ ಮಧ್ಯಭಾಗ ಹೀಲಿಯಂನಿಂದ ತುಂಬಿದ ಮೇಲೆ ಹೊರಕವಚದಲ್ಲಿನ ಹೈಡ್ರೋಜನ್ ಸಮ್ಮಿಲನದಿಂದ ಉಷ್ಣತೆ ಹೆಚ್ಚಿ ಕೆಂಪು ಕೆಂಪಾಗಿ ಉಬ್ಬಿ ದೊಡ್ಡವನಾಗ್ತಾನೆ. ಇದನ್ನೇ ಕೆಂಪು ದೈತ್ಯ ಎನ್ನುತ್ತಾರೆ.

ಒಂದು ನಕ್ಷತ್ರದ ಸಾವಿನ ನಿರ್ಧಾರ ಈ ಹಂತದಿಂದ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ನಕ್ಷತ್ರದ ದ್ರವ್ಯರಾಶಿ ಪ್ರಮುಖ ಪಾತ್ರ ವಹಿಸುತ್ತದೆ. 'ಕೆಂಪು ದೈತ್ಯ' ಸ್ಥಿತಿಯಲ್ಲಿ ಅಪಾರ ಉಷ್ಣತೆಯಿಂದ ಹೊರಕವಚ ಉಬ್ಬಿ ಕಳಚಿಕೊಂಡು ವಸ್ತುರಾಶಿ ಹೊರಕ್ಕೆ ಚಿಮ್ಮುತ್ತದೆ. ಈಗ ಉಳಿಯುವ ನಕ್ಷತ್ರದ ವಸ್ತುರಾಶಿ ಅದರ ಮುಂದಿನ ಹಂತಗಳು ಹಾಗೂ ಸಾವಿನ ಸ್ಥಿತಿಯನ್ನು ನಿರ್ಧರಿಸುತ್ತದೆ.

ಸೂರ್ಯನ ರಾಶಿಗಿಂತ 14 ರಾಶಿ ಕಡಿಮೆ ಇರುವ ನಕ್ಷತ್ರಗಳ ಸಾವು ಒಂದು ಸೋಜಿಗ ! ಈ ಹಂತದಲ್ಲಿ ಸಮ್ಮಿಲನ ಕ್ರಿಯೆ ನಿಂತು ಹೋಗುವುದರಿಂದ ಉಷ್ಣತೆ ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಇದರಿಂದಾಗಿ ನಕ್ಷತ್ರ ಗಾತ್ರದಲ್ಲಿ ಕಡಿಮೆಯಾಗಿ 'ಶ್ವೇತ ಕುಬ್ಜ' ಹಂತವನ್ನು ತಲುಪುತ್ತದೆ.

### ಶ್ವೇತ ಕುಬ್ಜದ ನಂತರದ ಹಂತ ಕೃಷ್ಣ ಕುಬ್ಜ
ವೃದ್ಧಾಪ್ಯದ ಕೊನೆಯ ಹಂತ. ಕಾಲಾನಂತರದಲ್ಲಿ ಶ್ವೇತ ಕುಬ್ಜದ ತಾಪ ಕಡಿಮೆಯಾಗುತ್ತ ಹೋದಂತೆ ಹೆಚ್ಚು ಹೆಚ್ಚು ಮಸುಕಾಗುತ್ತ ಹೋಗುತ್ತದೆ. ಹೀಗೆ ಕ್ರಮೇಣ ಬೆಳಕು ಹೊರಹೊಮ್ಮುವುದು ನಿಲ್ಲುತ್ತದೆ. ಈಗ ಇದು ತಣ್ಣಗಾಗಿರುವ ಕಪ್ಪು ನಕ್ಷತ್ರ. ಈ ಹಂತವನ್ನು 'ಕೃಷ್ಣ ಕುಬ್ಜ' ಎಂದು ಕರೆಯುತ್ತಾರೆ. ಇದೇ ನಕ್ಷತ್ರದ ಕೊನೆಯ ಹಂತದಲ್ಲಿ ವಿಶ್ವದಿಂದ ಮರೆಯಾಗುತ್ತದೆ.

ಸೂರ್ಯನ ಐದು ಪಟ್ಟು ಅಥವಾ ಅದಕ್ಕೂ ಹೆಚ್ಚಿನ ರಾಶಿಯ ನಕ್ಷತ್ರಗಳು ಸಾಯುವ ರೀತಿ ಮಧ್ಯಮ ವರ್ಗದ ಜನ ಸ್ವಲ್ಪ ಆಸ್ತಿಯನ್ನು ಮಾಡಿ ಸಾಯುವಂತೆ ಈ ರಾಶಿಯ ನಕ್ಷತ್ರಗಳು ತಮ್ಮ ಗರ್ಭದಲ್ಲಿ ಹೀಲಿಯಂ ಧಾತುಗಳು ಪುನಃ ಪುನಃ ಸಮ್ಮಿಲನಗೊಂಡು ಕಾರ್ಬನ್, ಆಕ್ಸಿಜನ್, ಮೆಗ್ನಿಷಿಯಂ ಸಿಲಿಕಾನ್, ಕೊನೆಯಲ್ಲಿ ಗರ್ಭ. ಕಬ್ಬಿಣವನ್ನು ಉತ್ಪಾದಿಸುವ ಹೊತ್ತಿಗೆ ನಕ್ಷತ್ರ ಅಪಾರ ಉಷ್ಣತೆಯಿಂದ ಕುದಿಯತೊಡಗುತ್ತದೆ. ಕೊನೆಗೊಮ್ಮೆ ನಕ್ಷತ್ರ ತನ್ನ ಅಪಾರ ಉಷ್ಣತೆಯಿಂದ ಸ್ಫೋಟಗೊಳ್ಳುತ್ತದೆ. ಈ ಸ್ಫೋಟವನ್ನೇ 'ಸೂಪರ್ ನೋವಾ' ಎನ್ನುತ್ತಾರೆ.

## ಬಿ ಪಾಸಿಟಿವ್

### ನಮ್ಮತನ ಬಿಡುವುದು ದಡ್ಡತನ

ನಮ್ಮತನ ಅಥವಾ ಅಸ್ಮಿತೆ ಎಂಬುದು ಪ್ರತಿಯೊಬ್ಬರಲ್ಲೂ ಇರಲೇ ಬೇಕಾದ್ದು. ನಮ್ಮತನವೇ ಇಲ್ಲ ಅಂದರೆ ಇನ್ನೇನು ಉಳಿಯಲು ಸಾಧ್ಯ? ಇಂದು ನಡೆಯುತ್ತಿರುವ ಅದೆಷ್ಟೋ ಶೀತಲ ಸಮರಗಳು ತಮ್ಮತನ ಉಳಿಸಿಕೊಳ್ಳುವುದಕ್ಕೇ ಎಂಬುದೂ ನಿಜ. ಯಾರಲ್ಲಿ ತಮ್ಮತನವನ್ನು ಕಾಪಿಟ್ಟುಕೊಳ್ಳುವ ಶಕ್ತಿ ಇರುವುದಿಲ್ಲವೋ, ಅಂಥವರು ಇನ್ನೇನನ್ನೂ ಮಾಡಲಾರರು. ಇದೊಂದು ಅಭಿಮಾನದ ಸಂಕೇತ.

ಪ್ರತಿಯೊಬ್ಬರಲ್ಲೂ ಈ ಅಭಿಮಾನ ಎಂಬುದು ಸದಾ ಜಾಗೃತವಾಗಿದ್ದರೇನೇ, ಒಂದು ದೇಶ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಶಕ್ಯ. ನಾವೆಷ್ಟೇ ಪ್ರಗತಿಪರರು, ಮುಂದುವರಿದವರು, ಆಧುನಿಕತೆಗೆ ತೆರೆದುಕೊಂಡವರು ಅಂತ ಬಡಾಯಿಕೊಚ್ಚಿಕೊಂಡರೂ, ಒಂದೊಮ್ಮೆ ಅಲ್ಲಿ ನಮ್ಮತನ ಇಲ್ಲ ಎಂತಾದರೆ ಎಲ್ಲವೂ ಪೊಳ್ಳು. ಅಂತಹ ಅಭಿವೃದ್ಧಿ, ಪ್ರಗತಿಗಳಿಗೆ ಅರ್ಥವೇ ಇರದು. ಹೀಗಾಗಿ ಮೊದಲು ನಮ್ಮತನವನ್ನು ಬೆಳೆಸಿಕೊಂಡು, ನಮ್ಮವರಿಗಾಗಿಯೇ, ನಮ್ಮವರ ಅಭ್ಯುದಯ, ಶ್ರೇಯಸ್ಸಿಗಾಗಿಯೇ ಯಾರು ಶ್ರಮಿಸುತ್ತಾರೋ ಅಂಥವರೇ ನಿಜವಾದ ನಾಯಕರಾಗಲೂ ಸಾಧ್ಯ. ತಮ್ಮದೆಂಬುದ ಮರೆತು, ಇತರರ ಮಾತಿಗೇ ಹೆಚ್ಚು ಕಿವಿಗೊಡುತ್ತ ಸಾಗುವವರು ಎಂದೂ ಸಾರ್ಥಕತೆ ಪಡೆಯಲಾರರು. ಇದು ಒಂದು ದೇಶಕ್ಕೂ ಅಷ್ಟೇ ಅನ್ವಯ. ನಮ್ಮತನ ಉಳಿಸಿಕೊಳ್ಳುವುದು ಅಂದರೆ ಇತರರ



ಕೇಡು ಬಯಸುವುದಲ್ಲ. ಬದಲಿಗೆ ಯಾರಾದರೂ ನಮಗೆ ಕೇಡು ಬಯಸಿದರೆ ಅದಕ್ಕೆ ತಕ್ಕ ಶಾಸ್ತಿ ಕೊಡಲು ನಾವೂ ಸಿದ್ಧ ಎಂಬುದನ್ನೇ ಹೇಳುತ್ತದೆ. ನಮ್ಮತನ ಇಟ್ಟುಕೊಳ್ಳುವುದು ಇತ್ರನ್ನು ಕೀಳಾಗಿ ಕಾಣುವುದು ಎಂತಲೂ ಅಲ್ಲ. ಬೇರೆಯವರಿಗೆ ಅಪಚಾರ ಎಸಗದೆ, ಪ್ರತಿಯೊಬ್ಬರೂ ತಮ್ಮತನವನ್ನು ಉಳಿಸಿಕೊಂಡರೆ ಸರ್ವರ ಹಿತ ಕಾಪಾಡಿದಂತೆ. ಹೀಗಾಗಿ ಎಲ್ಲವರೂ ನೆಮ್ಮದಿಯ ಬದುಕು ಸಾಗಿಸಲು ಅನುವು ಮಾಡಿದಂತಾಗುತ್ತದೆ. ಅದಕ್ಕೇ ಅನ್ನುವುದು ನಮ್ಮತನ ಎಂದೆಂದೂ ಬಿಡಬೇಡಿ; ಒಂದೊಮ್ಮೆ ಬಿಟ್ಟರಿ ಅಂತಾದರೆ ಇದರಷ್ಟು ದಡ್ಡತನ ಬೇರೊಂದಿರಲಿಕ್ಕಿಲ್ಲ.

• **ಶಂಕರನಾರಾಯಣ ಭಟ್**

ಜೀವನದಲ್ಲಿ ಎಲ್ಲವೂ ಸರಿಯಾಗಿ ನಡೆಯುತ್ತಿದೆ ಎನ್ನುವಾಗಲೇ ನಮ್ಮ ನಿರೀಕ್ಷೆಗೂ ಮೀರಿದ ಘಟನೆಗಳು ಬದುಕನ್ನೇ ಅಲ್ಲಾಡಿಸಿಬಿಡುತ್ತದೆ. ಬಹುತೇಕರು ಇನ್ನೂ ನಮ್ಮಿಂದ ಏನೂ ಸಾಧ್ಯವಿಲ್ಲ, ಇಲ್ಲಿಗೆ ನಮ್ಮ ಬದುಕು ಮುಗಿಯಿತು ಎಂದು ಭವಿಷ್ಯದ ಬಗೆಗಿನ ಸುಂದರ ಕನಸನ್ನು ಕೈ ಚೆಲ್ಲುತ್ತಾರೆ. ಆದರೆ ಬದುಕಿನಲ್ಲಿ ಧೃಡವಾದ ಸಂಕಲ್ಪ ಹಾಗೂ ಛಲವಿದ್ದರೆ ಎಂತಹ ಘಟನೆಯನ್ನು ಮೀರಿ ಸಾಧಿಸಲು ಸಾಧ್ಯ ಎಂಬುದಕ್ಕೆ ಇಲ್ಲೊಂದು ಸ್ಫೂರ್ತಿಯ ನಿದರ್ಶನವಿದೆ.

# ಛಲಗಾರ್ತಿಯ ಪರ್ವತಾರೋಹಣ

ಪ್ರಪಂಚದ ಅತಿ ಎತ್ತರದ ಪರ್ವತವಾದ ಮೌಂಟ್ ಎವರೆಸ್ಟ್ ಹತ್ತಿದ ಭಾರತದ ಮೊದಲ ಮಹಿಳೆ ಯಾರೆಂದರೆ ಬಚೇಂದ್ರಿ ಪಾಲ್ ಎನ್ನುತ್ತೇವೆ. ಆದರೆ ಅದೇ ಪರ್ವತ ಏರಿದ ವಿಶ್ವದ ಮೊದಲ ಅಂಗವಿಕಲ ಮಹಿಳೆ ಯಾರು ಗೊತ್ತೇ? ಅವರೇ ಭಾರತೀಯ ಛಲಗಾರ್ತಿ ಅರುಣಿಮಾ ಸಿನ್ಹಾ.

1989 ಜುಲೈ 20 ರಂದು ಉತ್ತರ ಪ್ರದೇಶದಲ್ಲಿ ಜನಿಸಿದ ಅರುಣಿಮಾ, ಭಾರತದ ರಾಷ್ಟ್ರೀಯ ವಾಲಿಬಾಲ್ ತಂಡದ ಸದಸ್ಯೆಯಾಗಿದ್ದವಳು. ಜೀವನದಲ್ಲಿ ಶ್ರೇಷ್ಠ ವಾಲಿಬಾಲ್ ಆಟಗಾರ್ತಿ ಆಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ ಸಿನ್ಹಾ ಅರೆಸೇನಾ ಪಡೆಗಳಿಗೆ ಸೇರಲು ಬಯಸಿದ್ದಳು. ಅವಳು ಸಿಐಎಸ್‌ಎಫ್ ಪರೀಕ್ಷೆಯನ್ನು ತೆಗೆದುಕೊಳ್ಳಲು 12 ಏಪ್ರಿಲ್ 2011 ರಂದು ದೆಹಲಿಗೆ ರೈಲಿನ ಮೂಲಕ ಪ್ರಯಾಣ ಬೆಳೆಸುವಾಗ ನಡೆದ ಒಂದು ಘಟನೆ ಜೀವನವನ್ನೇ ಬದಲಾಯಿಸಿತು.

### ಛಿದ್ರಗೊಂಡ ಕನಸು

ರೈಲಿನಲ್ಲಿ ಕೆಲವು ಕಳ್ಳರು ಆಕೆಯ ಬ್ಯಾಗ ಮತ್ತು ಚಿನ್ನದ ಸರವನ್ನು ಕಸಿದುಕೊಂಡಾಗ ಅದನ್ನು ವಿರೋಧಿಸುವ

**ದಿಟ್ಟ ಹೆಜ್ಜೆ**

• **ಸುರೇಂದ್ರ ಪೈ, ಭಟ್ಕಳ**

ಸಮಯದಲ್ಲಿ ದುಷ್ಕರ್ಮಿಗಳು ಆಕೆಯನ್ನು ಚಲಿಸುತ್ತಿರುವ ರೈಲಿನಿಂದ ಹೊರ ಎಸೆದರು. ಹಲ್ಲೆಗೊಳಗಾದ ಆಕೆ ಪಕ್ಕದ ರೈಲ್ವೇ ಹಳಿಯ ಮೇಲೆ ಬಿದ್ದಾಗ ಎದುರಿನಿಂದ ಬಂದ ರೈಲಿನ ಚಕ್ರಕ್ಕೆ ಸಿಲುಕಿ ತನ್ನ ಎಡಗಾಲನ್ನು ಶಾಶ್ವತವಾಗಿ ಕಳೆದುಕೊಂಡಳು. ಪ್ರಜ್ಞೆ ಬಂದಾಗ ಅರುಣಿಮಾ ಮಾನಸಿಕವಾಗಿ ಜರ್ಝರಿತಳಾಗಿದ್ದಳು, ಅಲ್ಲಿಗೆ ಆಕೆಯ ವಾಲಿಬಾಲ್ ಕನಸು ಛಿದ್ರವಾಗಿತ್ತು.

ಇದೆಲ್ಲದರ ಮಧ್ಯೆ ಆಕೆ ಛಲ ಬಿಡಲಿಲ್ಲ. ಜಗತ್ತಿನ ಅತೀ ಎತ್ತರದ ಮೌಂಟ್ ಎವರೆಸ್ಟ್ ಶಿಖರ ಏರುವ ಕನಸನ್ನು ಕಾಣಲಾರಂಭಿಸಿದಳು. ವಿಚಲಿತಗೊಳ್ಳದೇ ಗುರಿ ಸಾಧನೆಯಡೆಗೆ ಗಮನ ಕೇಂದ್ರೀಕರಿಸಿದಳು. ಅದಕ್ಕಾಗಿ ಬಚೆಂದ್ರಿಪಾಲ್ ಅವರನ್ನು ಸಂಪರ್ಕಿಸಿ ತನ್ನ ಕನಸಿನ ಬಗ್ಗೆ ವಿವರಿಸಿ, ಮಾರ್ಗದರ್ಶನ ಮಾಡುವಂತೆ ವಿನಂತಿಸಿಕೊಂಡಾಗ, ನೀನು ಯಾವಾಗ ಎವರೆಸ್ಟ್ ಏರಬೇಕೆಂಬ ಶಪಥ ಮಾಡಿದ್ದಿಯೋ ಆ ಕ್ಷಣದಲ್ಲೇ ನೀನು ತಲುಪಿಬಿಟ್ಟಿದ್ದಿಯಾ, ಈಗ ಕೇವಲ ಭೌತಿಕವಾಗಿ ತಲುಪಬೇಕಷ್ಟೇ ಎಂಬ ಬಚೇಂದ್ರಿಪಾಲ್ ನುಡಿದ ಪ್ರೋತ್ಸಾಹದ ಮಾತುಗಳು ಸಿನ್ಹಾಗೆ ಇನ್ನಷ್ಟು ಚೈತನ್ಯ ನೀಡಿತು.

### ಪರಿಶ್ರಮಕ್ಕೆ ಸಂದ ಪ್ರತಿಫಲ

ನಂತರ ಅರಣಿಮಾ ಉತ್ತರಕಾಶಿಯ ನೆಹರು ಇನ್ಸ್ಟಿಟ್ಯೂಟ್ ಆಫ್ ಮೌಂಟೇನಿಯರಿಂಗ್‌ನಲ್ಲಿ ಕೋರ್ಸ್ ಸೇರಿಕೊಂಡಳು. ಎನ್‌ಐಎಮ್ ಮತ್ತು ಟಾಟಾ ಸ್ಟೀಲ್ ಅಡ್ವೆಂಚರ್

ಫೌಂಡೇಶನ್ ಪ್ರಾಯೋಜಕತ್ವವು ಈ ಮಹಾನ್ ಕಾರ್ಯದಲ್ಲಿ ಯಶಸ್ವಿಯಾಗುವ ಅವಳ ಕನಸಿಗೆ ರೆಕ್ಕೆಗಳನ್ನು ನೀಡಿತು. ಅವರು 18 ತಿಂಗಳುಗಳ ಕಾಲ ಕಠಿಣ ತರಬೇತಿಯನ್ನು ಪಡೆದಳು. ಕೃತಕ ಕಾಲಿನಿಂದ ಮೈನಸ್ ಡಿಗ್ರಿ ಉಷ್ಣಾಂಶ ಇರುವ ಪರ್ವತ ಏರುವುದು ಸುಲಭದ ಕೆಲಸವಾಗಿರಲಿಲ್ಲ. ಅದಕ್ಕಾಗಿ ಆಕೆ ಸಾಕಷ್ಟು ತರಬೇತಿ, ಕಠಿಣ ಪರಿಶ್ರಮ ಹಾಕುತ್ತಿದ್ದಳು. ಅದರ ಫಲವೆಂಬಂತೆ 2013ರ ಮೇ 21ರಂದು ಬೆಳಿಗ್ಗೆ ರೈಲು ಅವಘಡದ 2 ವರ್ಷಗಳ ತರುವಾಯ ಅರುಣಿಮಾ ತನ್ನ 26ನೇ ವಯಸ್ಸಿನಲ್ಲಿ ಎವರೆಸ್ಟ್ ಶಿಖರದ ಶೃಂಗವನ್ನು ತಲುಪಿ, ಶಿಖರದ ಮೇಲೆ ಭಾರತದ ತ್ರಿವರ್ಣ ಧ್ವಜವನ್ನು ನೆಟ್ಟು, ಅದರ ಮುಂದೆ ವಿವೇಕಾನಂದ ವಿಗ್ರಹವನ್ನು ಪ್ರತಿಷ್ಠಾಪಿಸುತ್ತಾಳೆ.

ಅರುಣಿಮಾ 2015ರಲ್ಲಿ ಪದ್ಮಶ್ರೀ ಮತ್ತು ತೆನ್ಸಿಂಗ್ ನಾರ್ಗೆ ನ್ಯಾಷನಲ್ ಅಡ್ವೆಂಚರ್ ಪ್ರಶಸ್ತಿ, 2016ರಲ್ಲಿ ಫಸ್ಟ್ ಲೇಡಿ ಪ್ರಶಸ್ತಿ, ಮಲಾಲಾ ಪ್ರಶಸ್ತಿ, ಮಾತಿ ರತನ್ ಸಮ್ಮಾನ್, ಯಶ್ಭಾರತಿ ಪ್ರಶಸ್ತಿ, ರಾಣಿ ಲಕ್ಷ್ಮೀ ಬಾಯಿ ಪ್ರಶಸ್ತಿ ದೊರೆತಿದೆ. ಈಕೆ 'ಬಾರ್ನ್ ಅಗೇನ್ ಆನ್ ಎ ಮೌಂಟೇನ್' ಎನ್ನುವ ಪುಸ್ತಕ ಕೂಡ ಬರೆದಿದ್ದು, 2014ರಲ್ಲಿ ಪ್ರಧಾನಿ ಮೋದಿ ಇದನ್ನು ಬಿಡುಗಡೆ ಮಾಡಿದ್ದಾರೆ.

ಮನಸ್ಸಿದ್ದಲ್ಲಿ ಮಾರ್ಗ ಎನ್ನುವ ಮಾತಿಗೆ ಜೀವಂತ ಉದಾಹರಣೆ ಅರುಣಿಮಾ ಸಿನ್ಹಾ. ಆಕೆಯ ಜೀವನ ಇಂದಿಗೂ ಕೋಟ್ಯಾಂತರ ಜನರಿಗೆ ಒಂದು ಪ್ರೇರಣೆಯಾಗಿದೆ. ಛಲ ಹಾಗೂ ಅದ್ಯಮ ಇಚ್ಛಾಶಕ್ತಿ ಇದ್ದಾಗ ಎಲ್ಲಾ ಸನ್ನಿವೇಶಗಳನ್ನು ಗೆಲ್ಲಬಹುದು ಎಂದು ತೋರಿಸಕೊಟ್ಟ ಅರಣಿಮಾ ಸಿನ್ಹಾಗೊಂದು ಸೆಲ್ಯೂಟ್.

# ಪಾದ ಪುರಾಣ

• **ಕೆ.ಶ್ರೀನಿವಾಸರಾವ್,** ಹರಪನಹಳ್ಳಿ

ಮಳೆಗಾಲ ಆರಂಭವಾಗಿದೆ. ಎಲ್ಲೆಡೆ ವರುಣರಾಯನ ಆರ್ಭಟ! ಮಳೆಗೆ ಕಾಲುಗಳು ಸದಾ ಒದ್ದೆ. ಜತೆಗೆ ಛಳಿಯ ಕುಳಿರ್ಗಾಳಿ. ಪಾದಗಳು ಸೆಲೆತು ಪರಿಣಾಮವಾಗಿ ಹಿಮ್ಮಡಿಗಳಲ್ಲಿ ಬಿರುಕು ಉಂಟಾಗುತ್ತವೆ. ನೆಲಕ್ಕೆ ಪಾದ ಸೋಂಕಿದೊಡನೆ ಯಮಯಾತನೆ. ಆ ಬಿರುಕು ಮುಚ್ಚಲು ಮೆಡಿಕಲ್ ಶಾಪಿಗೆ ಓಡುತ್ತೇವೆ. ವ್ಯಾಸಲಿನ್, ಕೋಲ್ಡ್ ಕ್ರೀಂ, ಝಂಡೂ ಬಾಮ್, ಅಮೃತ ಮುಲಾಮು ಇತ್ಯಾದಿ ಔಷಧಿಗಳಿಗಾಗಿ ತಡಕಾಡುತ್ತೇವೆ. ಅದರ ಬದಲಾಗಿ ನಮ್ಮ ಸುತ್ತ ಕಾಣುವ ನೈಸರ್ಗಿಕ ವಸ್ತುಗಳಿಂದ ಪರಿಹಾರ ಕಾಣಬಹುದು. ಹೇಗೆ ಗೊತ್ತೇ ?

- ಒಡೆದ ಜಾಗದಲ್ಲಿ ಹಸಿ ಈರುಳ್ಳಿಯನ್ನು ಉಜ್ಜಿ ಅದರ ತುಂಡನ್ನು ಜಜ್ಜಿ ಕಟ್ಟಬೇಕು.
- 1 ಪಾಲು ಇಂಗು, 2 ಪಾಲು ಏಲಕ್ಕಿ ಪುಡಿ ಸೇರಿಸಿ ಮಾಡಿದ ಚೂರ್ಣದಲ್ಲಿ 2 ಗ್ರಾಂನಷ್ಟು ಬಿಸಿ ಹಾಲಿನಲ್ಲಿ ಕರಗಿಸಿ ರಾತ್ರಿ ಮಲಗುವ ಮುನ್ನ ಸೇವಿಸಬೇಕು. ಜೊತೆಗೆ ಅಣಲೆಕಾಯಿಯ ಚೂರ್ಣವನ್ನು ಬೆಣ್ಣೆಯಲ್ಲಿ ಬೆರೆಸಿ ಪಾದಕ್ಕೆ ಪುನರಪಿ ಹಚ್ಚಬೇಕು.
- ಪಾದದಲ್ಲಿ ಆಣಿ ( ಮೊಳೆ )ಯಾಗಿದ್ದರೆ ಆ ಭಾಗವನ್ನು ತೊಳೆದು ಒರೆಸಿ, ಒಣಗಿಸಿ ಗೇರುಬೀಜದ ಸಿಪ್ಪೆಯನ್ನು ಕಾಯಿಸಿ ಅದರ ಎಣ್ಣೆಯನ್ನು ಅದರ ಮೇಲೆ ಹಾಕಬೇಕು.
- ಪಾದಗಳು ಒಡೆದರೆ ಬೆಣ್ಣೆ ಮತ್ತು ಮೇಣದಬತ್ತಿಯನ್ನು ಬಿಸಿಲಿನಲ್ಲಿ ಕಾಯಿಸಿ ಲೇಪಿಸಬೇಕು.
- ಪಾದದ ಅಡಿಯಲ್ಲಿ ಕಲ್ಲೊತ್ತು ಅಗಿದ್ದರೆ ಕಡುಕಾರೆಯ ಬೇರನ್ನು ಉಪ್ಪು ನೀರಿನಲ್ಲಿ ತೇಯ್ದು ಚೆನ್ನಾಗಿ ಕಾಯಿಸಿ ಆರಿಸಿ ಹಚ್ಚಬೇಕು.
- ಹಿಮ್ಮಡಿ ಒಡೆದರೆ ಹರಳೆಣ್ಣೆಯನ್ನು ಅರಸಿನಪುಡಿಯಲ್ಲಿ ಕಲಸಿ ಹಚ್ಚಿ ಅರ್ಧ ಗಂಟೆಯ ನಂತರ ಸ್ನಾನ ಮಾಡಬೇಕು.
- ಹುಣಸೆ ಎಲೆಗಳ ರಸ, ಸಾಸುವೆ, ಅಗ್ರದ ಕಾಯಿ, ಸ್ವಲ್ಪ ರಕ್ತವಾಳ ಎಲ್ಲವನ್ನೂ ಬೆರೆಸಿ ರುಬ್ಬಿ ಅದನ್ನು ಪದೇಪದೇ ಬಿಡದಂತೆ ಹಚ್ಚುತ್ತಿದ್ದರೆ ಕಾಲಲ್ಲಿನ ಆಣಿಯು ಗುಣವಾಗುತ್ತದೆ.
- ಸೀಗೆಕಾಯಿ ಪುಡಿ, ಅರಸಿನ ಪುಡಿ ಸೇರಿಸಿ ನೀರಿನಲ್ಲಿ ಕುದಿಸಿ ಚೂರ್ಣ ಮಾಡಿ ರಾತ್ರಿ ಮಲಗುವಾಗ ಪಾದಕ್ಕೆ ಕಟ್ಟಿಕೊಂಡು ಮಲಗಿದರೆ ಕಲ್ಲೊತ್ತು ಗುಣವಾಗುತ್ತದೆ.
- ಗಂಧದಮರದ ತುಂಡನ್ನು ನೀರಿನಲ್ಲಿ ತೇಯ್ದು ಬೆಣ್ಣೆಯೊಂದಿಗೆ ಬೆರೆಸಿ ಲೇಪಿಸಿದರೆ ಹಿಮ್ಮಡಿ ಒಡೆತ ಮಾಯವಾಗುತ್ತದೆ.
- ಕಾಲಿನಲ್ಲಿ ಆಣೆಯಾಗಿದ್ದರೆ ಓಮದ ಚೂರ್ಣಕ್ಕೆ ಅಷ್ಟೇ ಸಕ್ಕರೆ ಬೆರೆಸಿ ನಿತ್ಯ 5 ಗ್ರಾಂನಷ್ಟು ಸೇವಿಸಬೇಕು.
- ಬೇವಿನ ಎಲೆಗಳನ್ನು ಜಜ್ಜಿ ಮಂದ ಉರಿಯಲ್ಲಿ ತುಪ್ಪದಲ್ಲಿ ಕಪ್ಪಾಗುವಂತೆ ಕರಿಯಬೇಕು. ನಂತರ ಕಪ್ಪಾದ ವಸ್ತು ಬೇರ್ಪಡಿಸಿ ತುಪ್ಪ ಮಾತ್ರ ತೆಗೆದುಕೊಂಡು ಅದಕ್ಕೆ ಸಮಪಾಲು ಮೇಣ ಬೆರೆಸಿ ಒಡೆದ ಹಿಮ್ಮಡಿಗೆ ಲೇಪಿಸಿದರೆ ಬಿರುಕು ಮಾಯವಾಗುತ್ತದೆ.
- ಕಾಲಿನ ಆಣೆ ಗುಣವಾಗಲು ಸಮಾಂಶ ಈರುಳ್ಳಿ ರಸ ಹಾಗೂ ಜೇನುತುಪ್ಪ ಬೆರೆಸಿ ನಿತ್ಯ 2 ಚಮಚ ಸೇವಿಸಬೇಕು.

## ಲವ್ ಎವೆರಿ ಬಾಡಿ

ನಿಶ್ಶಕ್ತಿ, ನಿರ್ಜಲೀಕರಣ ಮುಂತಾದ ಸಮಸ್ಯೆಗಳು ಆರಂಭವಾದೊಡನೆ ವೈದ್ಯರು ನೀಡುವ ಸಲಹೆ, ಹಣ್ಣಿನ ರಸ ಸೇವಿಸಿ ಎಂದು. ಹಣ್ಣಿನ ರಸ ಸೇವಿಸಿ ಎಂದೊಡನೆ ನಾವು ಮಾರುಕಟ್ಟೆಗೆ ಹೋಗಿ ಜ್ಯೂಸ್ ಕೊಂಡು ಕುಡಿಯುತ್ತೇವೆ. ಆದರೆ ಇವೆಲ್ಲ ಆರೋಗ್ಯಕ್ಕೆ ನಿಜಕ್ಕೂ ಒಳ್ಳೆಯದಲ್ಲ. ಕೋಕಾ ಕೋಲಾ, ಪೆಪ್ಸಿಯಂಥ ತಂಪು ಪಾನೀಯದಷ್ಟೇ ಜ್ಯೂಸ್ ಕೂಡ ಆರೋಗ್ಯಕ್ಕೆ ಹಾನಿಕರ. ಇದರಲ್ಲಿ ಸಕ್ಕರೆ ಪ್ರಮಾಣ ಹೆಚ್ಚಾಗಿರುವುದರಿಂದ ದೇಹದ ಶಕ್ತಿ ಕುಂಠಿತವಾಗುವುದಲ್ಲದೆ, ಅಡ್ಡ ಪರಿಣಾಮಗಳು ಹೆಚ್ಚು. ವಿಪರೀತ ಸಕ್ಕರೆಯಿರುವ ಆರು ಕಿತ್ತಳೆ ಹಣ್ಣಿನ ಜ್ಯೂಸ್ ಕುಡಿಯುವುದಕ್ಕಿಂತ ಒಂದೋ, ಎರಡೋ ತಾಜಾ ಹಣ್ಣನ್ನು ತಿಂದರೂ ಸಾಕು.

ಅದು ದೇಹಕಕ್ಕೆ ಸಾಕಷ್ಟು ಶಕ್ತಿ ನೀಡುತ್ತದೆ. ಹಾಗೆಯೇ ತಾಜಾ ಹಣ್ಣಿನ ರಸದಲ್ಲಿ ಕ್ಯಾಲರಿ ಜಾಸ್ತಿ ಇರುತ್ತದೆ. ಇದು ದೇಹಕ್ಕೆ ಅಗತ್ಯ ಪೋಷಕಾಂಶಗಳನ್ನೂ, ಶಕ್ತಿಯನ್ನೂ ನೀಡುತ್ತದೆ.

• **ದೇಹಾಭಿ'ಮಾಣಿ'**

## ನೀವೂ ಬರೆಯಬಹುದು


**ನಮ್ಮ ವಿಳಾಸ:**
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com


# ಪ್ರೀ ವೆಡ್ಡಿಂಗ್ ಶೂಟ್ ಟ್ರೆಂಡ್!

ಇಂದಿನ ದಿನಗಳಲ್ಲಿ ಪ್ರೀ ವೆಡ್ಡಿಂಗ್ ಶೂಟ್‌ಗಳದ್ದೇ ಅಬ್ಬರ! ಜತೆಗೆ ಈಗಿನ ಟ್ರೆಂಡ್ ಅನ್ನಿಸಿಕೊಂಡಿದೆ. ಅದಿಲ್ಲದೆ ಮದುವೆ ಪರಿಪೂರ್ಣ ಆಗೋದೇ ಇಲ್ಲ ಅನ್ನುವ ಮಟ್ಟಕ್ಕೆ ತಲುಪಿದ್ದಾರೆ ಇಂದಿನ ಪೀಳಿಗೆಯ ಜನರು. ಮದುವೆಗಿಂತ ಹೆಚ್ಚಾಗಿ ಪ್ರೀ ವೆಡ್ಡಿಂಗ್ ಶೂಟ್ ಕಡೆ ಗಮನ. ವಿಭಿನ್ನ ರೀತಿಯಲ್ಲಿ ಎಲ್ಲರ ಗಮನ ಸೆಳೆಯುವಂತಿರಬೇಕೆಂದು, ಆಡಂಬರದ ಉಡುಗೆ-ತೊಡುಗೆಗಳು, ವಿಶೇಷವಾದ ಸ್ಥಳಗಳನ್ನು ಆರಿಸಿಕೊಂಡು ತಿಂಗಳುಗಟ್ಟಲೆ ಪ್ರೀ ವೆಡ್ಡಿಂಗ್ ಶೂಟ್ ಮಾಡಿಸುತ್ತಾರೆ.

ಇದಕ್ಕೆ ವ್ಯಯಿಸುವುದೇನು ಕಡಿಮೆ ಖರ್ಚಲ್ಲ. ವಿವಿಧ ಲೊಕೇಶನ್‌ಗಳನ್ನು ಆಯ್ದುಕೊಂಡು, ದುಬಾರಿ ವೆಚ್ಚದ ಫೋಟೋ ಶೂಟ್‌ನ್ನೇ ಮಾಡುತ್ತಾರೆ. ಈ ಪ್ರೀ ವೆಡ್ಡಿಂಗ್ ಶೂಟ್‌ನಲ್ಲಿ ಹಲವಾರು ವೈಖರಿ;

• **ವಾಣಿ ಮೈಸೂರು**

- ಬೆಳದಿಂಗಳ ರಾತ್ರಿ, ಚಂದಿರನ ಬೆಳಕಲ್ಲಿ, ಅಂಬರದಲ್ಲಿ ಹೊಳೆಯುವ ನಕ್ಷತ್ರಗಳ ಸಾಲಿನ ಹಿನ್ನಲೆಯಲ್ಲಿ, ಕೊಡೆಹಿಡಿದ ಜೋಡಿಗಳು ದೇವಲೋಕದ ರತಿ ಮನ್ಮಥರಂತೆ ಕಂಗೊಳಿಸುತ್ತಾರೆ.
- ಸ್ಮೋಕ್ ಬಾಂಬ್ ಫೋಟೋ ಶೂಟ್ ಈಗಾಗಲೇ ಸಾಕಷ್ಟು ಟ್ರೆಂಡ್ ಸೃಷ್ಟಿ ಮಾಡಿದೆ. ಸಾಕಷ್ಟು ಬಣ್ಣಗಳನ್ನು ಬಳಸಿ ಮಾಡುವ ಈ ಸೆಟ್ಟಿಂಗ್ಸ್, ಫೋಟೋ ಶೂಟ್‌ಗೆ ವಿಶೇಷ ಮೆರುಗು ನೀಡುತ್ತದೆ.
- ಮನೆಯಲ್ಲೇ ಇರುವ ಮುದ್ದಿನಿಂದ ಸಾಕಿದ ಪ್ರಾಣಿಗಳ ಜತೆಗೆ ನವಜೋಡಿಗಳು ಫೋಟೋ ಶೂಟ್ ಮಾಡಿ, ತಮ್ಮ ಪ್ರಾಣಿಪ್ರೀತಿಯನ್ನು ತೋರ್ಪಡಿಸುತ್ತಾರೆ.
- ಶಾಸ್ತ್ರ- ಸಂಪ್ರದಾಯ ಬಿಂಬಿಸುವ ಹಾಗೂ ದೇವಾಲಯಗಳ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಉಡುಗೆ ತೊಟ್ಟ ಗಂಡು-ಹೆಣ್ಣು ಮನಮೋಹಕವಾಗಿ ಗಮನ ಸೆಳೆಯುತ್ತಾರೆ.
- ಸೂರ್ಯಾಸ್ತದ ವೇಳೆ, ಸಮುದ್ರ, ಬೆಟ್ಟ ಗುಡ್ಡಗಳ ಹಿನ್ನಲೆಯಲ್ಲಿ, ನೈಸರ್ಗಿಕ ಬೆಳಕಿನಲ್ಲಿ ಮಾಡುವ ಫೋಟೋ ಶೂಟ್ ನ್ಯಾಚುರಲ್ ಆಗಿ ಇರುತ್ತದೆ.
- ಥೀಮ್ ಫೋಟೋ ಶೂಟ್ ಸಹ ಆಕರ್ಷಕವಾಗಿರುತ್ತದೆ. ಹಳ್ಳಿ ಶೈಲಿಯಲ್ಲಿ, ಮಾಡ್ರನ್ ವೆಸ್ಟರ್ನ್ ಲುಕ್ ಇವುಗಳೆಲ್ಲಾ ಈಗಿನ ಯುವಜನತೆಯ ಆಯ್ಕೆ.

ಕೆಲವೊಮ್ಮೆ ಈ ಫೋಟೋ ಶೂಟ್‌ಗಳು ಮುಜುಗರ ಉಂಟು ಮಾಡುವ ಪ್ರಸಂಗಗಳೂ ಇವೆ. ಮದುವೆ ಮನೆ ಹಾಲ್ ಒಳಗೆ ಪ್ರವೇಶಿಸಿದಾಗ ಟಿವಿ ಪರದೆಯಲ್ಲಿ ಅಬ್ಬರಿಸುವ ಪ್ರೇಮ ಗೀತೆ, ವಧು ವರರ ವೈವಿದ್ಯಮಯ ಚಿತ್ರಪಟ, ವಸ್ತ್ರವಿನ್ಯಾಸ ಹಾಗೂ ವಿಡಿಯೋ ತುಣುಕುಗಳು ಕಣ್ಮನ ಸೆಳೆಯುತ್ತದೆ. ಇನ್ನೊಂದೆಡೆ ಹಣೆಗೆ ಮುತ್ತಿಡುವುದು, ಸೊಂಟ ಬಳಸುವ ಹಾಗು ಮುದ್ದಾಡುವ ದೃಶ್ಯಗಳು ವಯಸ್ಸಾದವರು ಹಾಗು ಕೆಲವರಿಗೆ ಮುಜುಗರ ಅನ್ನಿಸಬಹುದು. ಶ್ರೀಮಂತರ ಪಾಲಿಗೆ ಇದೆಲ್ಲಾ ದುಡ್ಡು ಖರ್ಚು ಮಾಡಲು, ಆಡಂಬರ-ಪ್ರತಿಷ್ಟೆ ತೋರಿಸಲು ಒಂದು ದಾರಿ. ಆದರೆ ಮಧ್ಯಮ ವರ್ಗ, ಬಡವರ ಪಾಲಿಗೆ ಇದು ಬಿಸಿತುಪ್ಪ. ಎಷ್ಟೇ ಕಷ್ಟವಾದರೂ ಸರಿ, ಮಕ್ಕಳ ಆಸೆ ಕನಸಿಗೆ ಸಮ್ಮತಿ ತೋರಿಸಲೇ ಬೇಕಾದ ಅನಿವಾರ್ಯತೆ ಅವರಿಗೆ.